GOVERNMENT OF TAMILNADU

ಕನ್ನಡ ಸಿರಿ

KANNADA READER

ಹನ್ನೆರಡನೆಯ ತರಗತಿ

XII STANDARD

Department of School Education

Untouchability is Inhuman and a Crime

12th_Kannada_Reader_Index.indd 1 22-05-2019 14:59:05

Government of Tamil Nadu

First Edition - 2019

Reprint - 2020, 2021, 2022
2023, 2024

(Published under New Syllabus)

Content Creation

State Council of Educational
Research and Training

© SCERT 2019

Printing & Publishing

Tamil NaduTextbook and Educational
Services Corporation

www.textbooksonline.tn.nic.in

12th_Kannada_Reader_Index.indd 2 22-05-2019 14:59:06



ಮುನ್ನುಡಿ

ಮಕ್ಕಳ ಜಗತ್ತು ವರ್ಣಮಯವಾದುದು. ಮಾಯಾಲೋಕವೆಂದರೂ ತಪ್ಪೆನಿಸದು. ಅವರ ಕಲ್ಪನಾ ಸಾಮರ್ಥ್ಯವೋ ನೋಡುಗರನ್ನು ಬೆರಗುಗೊಳಿಸಿ ಆತ್ಮೀಯತೆಯೊಂದಿಗೆ ಬೆಸೆಯುವಂತದ್ದು. ಹೊಸದನ್ನು ಬಯಸುವ ಅವರ ಉತ್ಸಾಹದ ಒಳಮನಸ್ಸು ನಿರ್ಜೀವ ವಸ್ತುಗಳನ್ನು ಕನ್ನಡ ಕಲಿಯುವಂತೆ ಮಾಡಬಲ್ಲ ಮಾಂತ್ರಿಕ ಶಕ್ತಿಯಾಗಿದೆ.

ಆ ಹೊಸ ಜಗತ್ತಿನಲ್ಲಿ ಮಕ್ಕಳೊಂದಿಗೆ ಪಯಣಿಸುವುದು ಒಂದು ರೋಮಾಂಚನ ಅನುಭವವೇ ಸರಿ.

ಕನ್ನಡ ಪುಟಾಣಿಗಳ ಕೈಗಳಲ್ಲಿ ಈ ಹೊಸ ಪಠ್ಯ ಪುಸ್ತಕದೊಂದಿಗೆ ಕೆಳಕಂಡ ಉದ್ದೇಶ ಈಡೇರಿಕೆಗೆ ನಾವು ಕೈಗೊಂಡಿರುವ ಪ್ರಯತ್ನವು ಮಹತ್ವವಾದದ್ದು.

- ಕಲಿಕೆಯನ್ನು ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಚಟುವಟಿಕೆಯ ಹಾದಿಯಲ್ಲಿ ನಡೆಸುವುದು.
- ಕನ್ನಡಿಗರು ತಮ್ಮ ಸಾಂಸ್ಕೃತಿಕ, ಸಾಹಿತ್ಯ ಹಿರಿಮೆ ಗರಿಮೆಯೊಂದಿಗೆ ಇತಿಹಾಸ, ಕಲೆ ಹಾಗೂ ಸಂಪ್ರದಾಯ, ಆಚಾರ ವಿಚಾರಗಳ ಮಹತ್ವವನ್ನು ಅರಿಯುವಂತೆ ಮಾಡುವುದು.
- ಆತ್ಮವಿಶ್ವಾಸದೊಂದಿಗೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೊಸ ಜಗತ್ತಿನಲ್ಲಿ ಧೈರ್ಯದಿಂದ ಮುನ್ನಡೆಯುವುದನ್ನು ದೃಢಪಡಿಸುವುದು.
- ಜ್ಞಾನಾರ್ಜನೆಯು ಕೇವಲ ಪುಸ್ತಕಕ್ಕೆ ಸೀಮಿತವಾಗಿರದೆ ವಿಸ್ತಾರ ಮತ್ತು ಆಳವಾದ ಕಲಿಕೆಗೆ ಪುಸ್ತಕಗಳು ನೆರವಾಗುವಂತೆ ಮಾರ್ಗದರ್ಶನ ನೀಡುವುದು.
- ಪಠ್ಯಪುಸ್ತಕದ ಹೊಸ ವಿನ್ಯಾಸವು ಆಳವಾದ ವಿಷಯ ಹಾಗೂ ಮಕ್ಕಳ ಮನಶಾಸ್ತ್ರೀಯ ರೀತಿಯ ಹಲವು ಹೊಸ ಅಂಶಗಳನ್ನು ಒಳಗೊಂಡಿದ್ದು ನಿಮ್ಮ ಕೈಗಳಲ್ಲಿ ಈ ಪಠ್ಯ ಪುಸ್ತಕ ಸೇರಿದಾಗ ನೀವೊಂದು ಹೊಸ ಜಗತ್ತಿಗೆ ಪಯಣಿಸುತ್ತೀರಿ ಎಂಬ ಮಹತ್ವಾಕಾಂಕ್ಷೆ ನಮಗಿದೆ.



12th_Kannada_Reader_Index.indd 3 22-05-2019 14:59:06

ರಾಷ್ಟ್ರಗೀತೆ

ಜನ ಗಣ ಮನ ಅಧಿನಾಯಕ ಜಯಹೇ!
ಭಾರತ ಭಾಗ್ಯವಿಧಾತ!!
ಪಂಜಾಬ ಸಿಂಧು ಗುಜರಾತ ಮರಾಠಾ!
ದ್ರಾವಿಡ ಉತ್ಕಲ ವಂಗ!!
ವಿಂಧ್ಯ ಹಿಮಾಚಲ ಯಮುನಾ ಗಂಗಾ!
ಉಚ್ಚಲ ಜಲಧಿ ತರಂಗಾ!!
ತವಶುಭ ನಾಮೆ ಜಾಗೇ!
ತವಶುಭ ಆಶಿಷಮಾಗೆ!!
ಗಾಹೇ ತವ ಜಯ ಗಾಥಾ!!
ಜನ ಗಣ ಮಂಗಳ ದಾಯಕ ಜಯಹೇ!
ಭಾರತ ಭಾಗ್ಯ ವಿಧಾತಾ!!
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯ ಹೇ!!

–ಮಹಾಕವಿ ರವೀಂದ್ರನಾಥ್ ಠಾಗೂರ್.

ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮವು ಪಂಜಾಬ್ , ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ (ಒರಿಸ್ಸಾ) ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.

ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.

ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ
ಜಯವಾಗಲಿ! ಜಯವಾಗಲಿ! ಜಯವಾಗಲಿ!



12th_Kannada_Reader_Index.indd 4 22-05-2019 14:59:06

ತಮಿಳ್ ತಾಯ್ ವಾಳ್ತು

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಕಮುಮೇ
ಅತ್ತಿಲಕ ವಾಸನೈಪೋಲ್ ಅನೈತ್ತುಲಗುಂ ಇನ್ಪಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದು ಪೆರುಂ ತಮಿಳಣಂಗೇ
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

– ಮನೋನ್ಮಣೀಯಂ ಪಿ. ಸುಂದರಂ ಪಿಳ್ಳೈ



ತಮಿಳು ತಾಯಿಯ ಪ್ರಾರ್ಥನೆ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿ–
ರುವ ದಕ್ಷನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ
ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮ ಘಮಿಸುತ್ತಿರುವ
ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ
ಮೈಮರೆತು ಹಾಡಿ ಹೊಗಳುತ್ತೇನೆ.

12th_Kannada_Reader_Index.indd 5 22-05-2019 14:59:07



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ ಮತ್ತು ರಾಜಕೀಯ ಹಾಗೂ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಬರುವ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು, ವಿವಾದಗಳನ್ನು ಶಾಂತಿಯುತವಾಗಿಯೂ ಸಂವಿಧಾನಕ್ಕೆ ಅನುಸಾರವಾಗಿಯೂ ಪರಿಹರಿಸಲ್ಪಡಬೇಕೆಂದೂ ದೃಢಪಡಿಸುತ್ತೇನೆ.

ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟ್ಯವನ್ನೂ ಕಂಡು ಹೆಮ್ಮೆ ಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ.

ನನ್ನ ತಂದೆ ತಾಯಿಯರು, ಶಿಕ್ಷಕರು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಕಂಡು ನಾನು ಅತ್ಯಾನಂದ ಪಡುತ್ತೇನೆ.



12th_Kannada_Reader_Index.indd 6 22-05-2019 14:59:07

ನಾಡ ಗೀತೆ

ಜಯ ಹೇ ಕರ್ಣಾಟಕ ಮಾತೆ

ಜಯ್ ಭಾರತ ಜನನಿಯ ತನುಜಾತೆ
ಜಯ ಹೇ ಕರ್ಣಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

ಭೂದೇವಿಯ ಮುಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ,
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ,
ಹಸುರಿನ ಗಿರಿಗಳ ಸಾಲೆ,
ನಿನ್ನಯ ಕೊರಳಿನ ಮಾಲೆ.
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳ ಧಾಮ !
ಕವಿಕೋಗಿಲೆಗಳ ಪುಣ್ಯಾರಾಮ !
ನಾನಕ ರಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ;
ಕೃಷ್ಣಶರಾವತಿ ತುಂಗಾ
ಕಾವೇರಿಯ ವರ ರಂಗ.
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ !

ಕನ್ನಡನುಡಿ ಕುಣಿದಾಡುವ ಗೇಹ !
ಕನ್ನಡ ತಾಯಿಯ ಮಕ್ಕಳ ದೇಹ !
ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ !
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ !

– ರಾಷ್ಟ್ರಕವಿ ಕುವೆಂಪು

12th_Kannada_Reader_Index.indd 7 22-05-2019 14:59:07

ಅಭಿಜಾತ ಭಾಷೆಯಾದ ಕನ್ನಡ ಭಾಷೆಯ ಹಿರಿಮೆ ಗರಿಮೆಗಳನ್ನು ಇಂದಿನ ವಿದ್ಯಾರ್ಥಿಗಳು ಗ್ರಹಿಸುವಂತೆ ಮಾಡುವ ಉದ್ದೇಶದಿಂದ ಈ ಪಠ್ಯ ಪುಸ್ತಕ ವಿನ್ಯಾಸಗೊಳಿಸಲಾಗಿದೆ.



ಪ್ರತಿಯೊಂದು ಘಟಕವನ್ನು ಆಸಕ್ತಿಯಿಂದ ಆಲಿಸಲು ಗದ್ಯಲೋಕ, ಕಾವ್ಯ ಕಣಜ ಮುಂತಾದ ಉಪ ಪಠ್ಯ ಶೀರ್ಷಿಕೆ.



ಕಾಲದ ವೇಗಕ್ಕೆ ಹೊಂದಾಣಿಕೆಯಾಗುವಂತೆ ಅಂತರ್ಜಾಲದ ಮೂಲಕ



ಪಠ್ಯ ವಿಷಯದ ಅರ್ಥವನ್ನು ವಿವರಿಸುವ ಅಮೂಲ್ಯವಾದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಲು ಜ್ಞಾನ ಸಂಪಾದನೆ



ವಿಷಯಕ್ಕೆ ಪೂರಕವಾದ ಘಟಕದ ಪ್ರಾರಂಭದಲ್ಲಿ ಕಲಿಕಾ ಉದ್ದೇಶಗಳು

ಸೃಜನಶೀಲ ಅಧ್ಯಾಪಕರಿಗೂ, ಕ್ರಿಯಾ ಶೀಲ ಮನಸ್ಸಿನ ವಿದ್ಯಾರ್ಥಿಗಳಿಗೂ...



ಕಲಿತ ವಿಷಯಗಳ ಕುರಿತಾದ ಚಿಂತನೆಗಳನ್ನು ಕಲಿಕಾ ಚಟುವಟಿಕೆಗಳ ಮೂಲಕ



ಘಟಕದ ಕೊನೆಯಲ್ಲಿ ಇನ್ನೂ ಹೆಚ್ಚು ಕಲಿಯಬೇಕೆಂಬ ಉತ್ಸಾಹದೊಂದಿಗೆ

ವಿದ್ಯಾರ್ಥಿಗಳು ಸ್ವಯಂ ಮೌಲ್ಯಮಾಪನಕ್ಕೆ ಪೂರಕವಾಗುವಂತೆ ಮೌಲ್ಯೀಕರಿಸುವುದು.



ಚಿಂತನಾ ಸಾಮರ್ಥ್ಯಗಳಿಸಲು, ಚಟುವಟಿಕೆಯ ಮಾರ್ಗದಲ್ಲಿ ಜೀವಿನದಲ್ಲಿ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸಲು, ಓದಿ ಆನಂದಿಸಲು, ಭಾಷಾ ಕ್ರೀಡೆಯಲ್ಲಿ ತೊಡಗಲು



ಸಾಹಿತ್ಯದ ಮೂಲಕ ಭಾಷಾ ಕಲಿಕೆ, ತಾಂತ್ರಿಕವಾಗಿ ಮನನ ಮಾಡಲು ಭಾಷಾ ಪ್ರೌಢಿಮೆಯನ್ನು ಗಳಿಸುವುದು



ಮಾತೃ ಭಾಷೆಯೊಂದಿಗೆ ಇತರ ವಿಷಯಗಳನ್ನು, ಹೊಸ ಅರ್ಥಗಳನ್ನು ಗ್ರಹಿಸಲು, ತರ್ಕದಲ್ಲಿ ತೊಡಗಲು... ಈ ಪಠ್ಯ ಪುಸ್ತಕವು ಹೊಸ ವಿನ್ಯಾಸ ಹಾಗೂ ವರ್ಣರಂಜಿತವಾಗಿದ್ದು ಪರಿವಿಡಿಯೊಂದಿಗೆ ಈ ಪಠ್ಯ ಪುಸ್ತಕವು ನಿಮ್ಮ ಕೈಗಳಲ್ಲಿ....

12th_Kannada_Reader_Index.indd 8 22-05-2019 14:59:07

ಹನ್ನೆರಡನೆಯ ತರಗತಿ

ಪರಿವಿಡಿ

ಘಟಕ	ಶೀರ್ಷಿಕೆ		ಪುಟ ಸಂಖ್ಯೆ
1. ಭಾಷೆ			
ಕಾವ್ಯ ಕಣಜ :	ಜಯ ಭಾರತ ಪುತ್ರ	ಸೇಡಿಯಾಪು ಕೃಷ್ಣಭಟ್ಟ	2
ಗದ್ಯ ವಿಹಾರ :	ಚತುರನ ಚಾತುರ್ಯ	ಯಾದವ ಕವಿ	6
ಉಪಪಠ್ಯ :	ಭಾಷೆ ಮತ್ತು ಸಂಸ್ಕೃತಿ	ಡಾ. ತಮಿಳ್ ಸೆಲ್ವಿ	12
ವ್ಯಾಕರಣ :	ಕನ್ನಡ ವರ್ಣಮಾಲೆ		16
2. ಶಿಕ್ಷಣ			
ಕಾವ್ಯ ಕಣಜ :	ವಚನಗಳು ಕಂಠಪಾಠ	ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ	23
ಗದ್ಯ ವಿಹಾರ :	ಕಾವ್ಯಾಲಾಪ	ಡಾ. ಜಿ.ಎಸ್. ಶಿವರುದ್ರಪ್ಪ	28
ಉಪಪಠ್ಯ :	ಮಗು ಕಲಿಸಿದ ಪಾಠ	ತಿರುಮಲೆ ರಾಜಮ್ಮ	40
ವ್ಯಾಕರಣ :	ನಾಮಪದಗಳು		44
3. ನಾಗರಿಕತೆ/ಕಸುಬು/ವಾಣಿಜ್ಯ			
ಕಾವ್ಯ ಕಣಜ :	ಸಂತೆ ಕಂಠಪಾಠ	ಸಿದ್ಧಲಿಂಗಯ್ಯ	47
ಗದ್ಯ ವಿಹಾರ :	ಡಾಂಬರು ಬಂದುದು	ದೇವನೂರು ಮಹಾದೇವ	51
ಉಪಪಠ್ಯ :	ಕೃಷಿ ಸಂಸ್ಕೃತಿ ಮತ್ತು ಜಾಗತೀಕರಣ	ಸಿ.ಎಚ್.ಹನುಮಂತರಾಯ	58
ವ್ಯಾಕರಣ :	ಲಿಂಗ–ವಚನ–ವಿಭಕ್ತಿ		64
4. ಕಲೆ/ನವೀನತೆ/ಸೌಂದರ್ಯಮೀಮಾಂಸ			
ಕಾವ್ಯ ಕಣಜ :	ನೆಲೆಸುಗೆ ನಿನ್ನ ವಕ್ಷದೊಳ್	ಪಂಪ	67
ಗದ್ಯ ವಿಹಾರ :	ಕೆರೆಗೆ ಹಾರ	ತೀ.ನಂ.ಶ್ರೀ.	73
ಉಪಪಠ್ಯ :	ತೊಗಲು ಗೊಂಬೆಯಾಟ	ಗೊ.ರು.ಚನ್ನಬಸಪ್ಪ	81
ವ್ಯಾಕರಣ :	ಕಾಲ–ಕೃದಂತ–ತದ್ಧಿತಾಂತ–ಅವ್ಯಯ		87

12th_Kannada_Reader_Index.indd 9 22-05-2019 14:59:07

5. ಸಂಸ್ಕೃತಿ			
ಕಾವ್ಯ ಕಣಜ :	ಸಿಸು ಮಕ್ಕಳಿಗೊಲಿದ ಮಾದೇವ	ಜಾನಪದ	94
ಗದ್ಯ ವಿಹಾರ :	ಉಪಚಾರ	ನಾ. ಕಸ್ತೂರಿ	102
ಉಪಪಠ್ಯ :	ಶಬರಿಗಾದನು ಅತಿಥಿ ದಾಶರಥಿ	ಕುವೆಂಪು	110
ವ್ಯಾಕರಣ :	ದ್ವಿರುಕ್ತಿ, ಅನ್ಯದೇಶ್ಯ, ತತ್ಸಮ–ತದ್ಭವ, ಜೋಡಿ ಪದಗಳು, ಅನುಕರಣ ವಾಚಕಗಳು, ನುಡಿಗಟ್ಟು, ಗಾದೆಗಳು.		115
6. ಪ್ರಕೃತಿ/ಪರಿಸರ			
ಕಾವ್ಯ ಕಣಜ :	ಕಾರಿ ಹೆಗ್ಗಡೆಯ ಮಗಳು	ಬಿ.ಎಂ.ಶ್ರೀ.	120
ಗದ್ಯ ವಿಹಾರ :	ಬಸಯ್ಯ ಮತ್ತು ಜೇನು ಗೂಡು	ಅಮರೇಶ ನುಗಡೋಣಿ	125
ಉಪಪಠ್ಯ :	ಹೂವಾದ ಹುಡುಗಿ	ಜನಪದ ಕಥೆ (**ಎ.ಕೆ.ರಾಮಾನುಜನ್**)	131
ವ್ಯಾಕರಣ :	ಸಂಧಿಗಳು		137
7. ನಾಡು/ಸಮಾಜ/ರಾಜಕೀಯ ನಿರ್ವಹಣೆ			
ಕಾವ್ಯ ಕಣಜ :	ಅಂಬಿಗಾ ನಾ ನಿನ್ನ ನಂಬಿದೆ ಕಂಠಪಾಠ	ಪುರಂದರದಾಸ	142
ಗದ್ಯ ವಿಹಾರ :	ನಗು–ಅಳು	ಎಂ.ಎಸ್. ಸುಂಕಾಪುರ	146
ಉಪಪಠ್ಯ :	ಸ್ವಾತಂತ್ರ್ಯದ ಬೆಲೆ	ಕೆ.ಕುಮಾರ್ ಆಚಾರ್	151
ವ್ಯಾಕರಣ :	ಸಮಾಸಗಳು		158
8. ಮಾನವೀಯತೆ			
ಕಾವ್ಯ ಕಣಜ :	ಮನದೊಳಗೊಳಗೆ ಸತ್ತು ಹುಟ್ಟುತಿರ್ಪಳು	ರಾಘವಾಂಕ	162
ಗದ್ಯ ವಿಹಾರ :	ಸಾವಿತ್ರಿ	ಎ.ಆರ್.ಕೃಷ್ಣಶಾಸ್ತ್ರಿ	169
ಉಪಪಠ್ಯ :	ಮಗುವಿನ ಕರೆ		174
ವ್ಯಾಕರಣ :	ಛಂದಸ್ಸು, ಅಲಂಕಾರ, ಪತ್ರಲೇಖನ, ಪ್ರಬಂಧಗಳು.		180

12th_Kannada_Reader_Index.indd 10 22-05-2019 14:59:07

ಘಟಕ ಒಂದು

1. ಭಾಷೆ



ಕಾವ್ಯ ಕಣಜ	:	ಜಯ ಭಾರತ ಪುತ್ರ	–	ಸೇಡಿಯಾಪು ಕೃಷ್ಣಭಟ್ಟ
ಗದ್ಯ ವಿಹಾರ	:	ಚತುರನ ಚಾತುರ್ಯ	–	ಯಾದವ ಕವಿ
ಉಪಪಠ್ಯ	:	ಭಾಷೆ ಮತ್ತು ಸಂಸ್ಕೃತಿ	–	ಡಾ. ತಮಿಳ್ ಸೆಲ್ವಿ
ವ್ಯಾಕರಣ	:	ಕನ್ನಡ ವರ್ಣಮಾಲೆ		

12th_Kannada_Reader_1-2.indd 1 22-05-2019 14:19:56

ಕಾವ್ಯ ಕಣಜ

ಘಟಕ ಒಂದು

ಜಯ ಭಾರತ ಪುತ್ರ

– ಸೇಡಿಯಾಪು ಕೃಷ್ಣಭಟ್ಟ



ಭಾರತೀಯ ಸಾಹಿತ್ಯಕ್ಕೆ ಕನ್ನಡ ಭಾಷೆಯ ಕೊಡುಗೆ ಅಪಾರ. ಸರಿ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸಯುಳ್ಳ ಈ ಭಾಷೆಯ ಆದಿ ಕವಿಯಾದ ಪಂಪನಿಂದ ಇತ್ತೀಚಿನ ಹೊಸಗನ್ನಡ ಸಾಹಿತ್ಯದ ಮಹೋನ್ನತ ಸಾಹಿತಿಗಳು ತಮ್ಮ ಸಾಹಿತ್ಯದ ಮೂಲಕ ಭಾಷೆಯ ಹಿರಿಮೆ ಗರಿಮೆಗಳೊಂದಿಗೆ ರಾಷ್ಟ್ರದ ಶ್ರೀಮಂತ ಸಂಸ್ಕೃತಿಯ ಮಹತ್ವವನ್ನು ಸಾರುತ್ತ ಬಂದಿದ್ದಾರೆ. ಭಾರತೀಯ ಸಂಸ್ಕೃತಿಯು ವಿಶ್ವದ ಅತ್ಯಂತ ಪ್ರಾಚೀನ ಸಂಸ್ಕೃತಿಯಾಗಿದೆ. ಅನೇಕತೆಯಲ್ಲಿ ಏಕತೆಯನ್ನು ಕಂಡುಕೊಂಡ ಸಂಸ್ಕೃತಿ ಭಾರತೀಯರದು. ಭಾರತಾಂಬೆಯ ಮಡಿಲಲ್ಲಿ ಅನೇಕ ಜಾತಿ ಮತ ಪಂಥಗಳು ಹುಟ್ಟಿಕೊಂಡವು. ಎಲ್ಲರೂ ಪರಸ್ಪರ ಸಾಮರಸ್ಯದಿಂದ ಬಾಳುತ್ತಿರುವುದು ನಮ್ಮ ನಾಡಿನ ಹಿರಿಮೆಯನ್ನು ಸಾರುತ್ತದೆ. ಚಿಂತನಶೀಲ ಕವಿಯಾಗಿದ್ದ ಸೇಡಿಯಾಪು ಕೃಷ್ಣಭಟ್ಟರು ಈ ಭವ್ಯವಾದ ಪರಂಪರೆಯನ್ನು ನಾಡಿನ ಶ್ರೀಮಂತ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತೆ ಇಲ್ಲಿ ಕರೆ ನೀಡಿದ್ದಾರೆ.



12th_Kannada_Reader_1-2.indd 2 22-05-2019 14:19:57

ಓ ಭರತ ಭೂಮಿ ವರಪುತ್ರ!
ವಂಗವಾಗಲಿ ಕಳಿಂಗವಾಗಲಿ ತೆಲುಂಗವೋ ಮಹಾರಾಷ್ಟ್ರವೋ
ಗಾಂಗ ಯಾಮುನ ದ್ರಾವಿಡ ರೈವ ಕರ್ಣಾಟ ನಾಗ ಸೌರಾಷ್ಟ್ರವೋ
ಸಿಂಧುವೀಚಿಲಯಕೊಲೆವ ಸಿರಿಮುಡಿಯ ತೆಂಗುಗಳ್ ನಿಲ್ವ ತೀರವೋ
ಇದು ಭರತ ಭೂಮಿ ಸರ್ವತ್ರ
ಓ ಪುಣ್ಯ ಭೂಮಿ ವರಪುತ್ರ
ನೀ ಸಕಲ ಭಾಗ್ಯ ಸತ್ಪಾತ್ರ! ॥೧॥

ಓ ಭರತ ಭೂಮಿ ವರಪುತ್ರ!
ಮಳೆಯ ಬಿಲ್ಲಿನಲಿ ಹಲವು ಬಣ್ಣಗಳು ನೆರೆದಿಹಂತೆ ಶ್ರೀಭಾರತಿ
ಭಾರತೀಯ ಭಾಷೆಗಳ ಕಾಂತಿಯಲಿ ತೋರುತಿಹಳು ನಿಜ ಮೂರುತಿ
ಕಾಮಧೇನುವಿನ ಕೆಚ್ಚಲೆಲ್ಲ ನಿನಗಾಗಿರಲ್ಕೆ ಮೊಲೆಯೊಂದನೇ
ಬಾಯೊಳಿಟ್ಟು ತಣಿಯುವುದು ನಾಲ್ಮೊಲೆಯ ಹಾಲನುಂಡು ಕುಣಿ ಕಂದನೇ
ಈ ಸಕಲ ಭಾಷೆ ಸುಪವಿತ್ರ
ಓ ಭರತ ಭೂಮಿ ವರಪುತ್ರ
ನೀ ಮಹಾ ಭಾಗ್ಯ ಸತ್ಪಾತ್ರ! ॥೨॥

ಓ ಭರತ ಭೂಮಿ ವರಪುತ್ರ!
ವ್ಯಾಸನೋ ವಾಲ್ಮೀಕಿಯೋ ಬಡಗಣವರು ಶಂಕರ ತೆಂಕಣನಾಗಿರಲ್
ಪಾಣಿನಿ ಪಶ್ಚಿಮದವನು ರವೀಂದ್ರನು ಪೂರ್ವಭಾಗದವನಾಗಿರಲ್
ಕಾಳಿದಾಸನುಜ್ಜಯಿನಿಯವನು ಮದ್ರಾಸಿ ವಳ್ಳುವರನಾಗಿರಲ್
ಭೇದವೇ ಬೃಹದ್‌ಭಾರತಬೋಧಿಯ ಬೇರೆ ಬೇರೆ ಕೊಂಬೆಗಳಲಿ
ಆ ಸಿದ್ಧಿ ನಿನ್ನ ಗಾತ್ರ
ಓ ಭರತ ಭೂಮಿ ವರಪುತ್ರ
ನೀ ಪೂರ್ಣಪುಣ್ಯ ಪಾತ್ರ! ॥೩॥

ಓ ಭರತ ಭೂಮಿ ವರಪುತ್ರ!
ಆದಿಯ ಮಾನವರೀ ಧಾತ್ರಿಯಲ್ಲಿ ಮಾನವ ಧಾತ್ರಿಯ ಕಂಡಿರೆ
ಆರ್ಯರಾರೋ ಅಲ್ಲದವರಾರೋ ಒಡಗೂಡಿ ಒಂದೆ ಹಾಲುಂಡಿರೆ
ತಾಮ್ರ ತವರಗಳು ಕರಗಿ ಕೂಡಿ ಘನ ಘಂಟೆಯಾಗಿ ಢಾಣಿಸುತಿರೆ
ತಾಮ್ರವೆಲ್ಲಿ ತಾಂ ತವರವೆಲ್ಲಿ ಬರಿಗನಸು ಗಾವರವ ಮಾಣು ರೇ
ಭರತ ಭೂಮಿ ವರಪುತ್ರ
ನೀ ಮಾನುಷ್ಯ ಕುಲ ಸುಪುತ್ರ
ನೀನಖಿಲ ಜಗನ್ಮಿತ್ರ! ॥೪॥

12th_Kannada_Reader_1-2.indd 3 22-05-2019 14:19:57

ಓ ಭರತ ಭೂಮಿ ವರಪುತ್ರ!
ಪರರ ಕಣ್ಣ ಕನ್ನಡಕದಲ್ಲಿ ಜಗದಿರವ ನೋಡುವುದ ತೊರೆ
ಶ್ರೀ ಹೃದಯ ಶಾರದೆಯ ಭಜಿಸಿ ಪಡೆದವಳ ಕರದ ಪುಸ್ತಕವ ತೆರೆ
ಭವ ಸಮುದ್ರದೊಳ್ ಧುಮುಕಿ ತಂದು ನವರತ್ನ ವರ್ಷಗಳ ಕರೆ
ಜಗದ ಭಯದ ಶಲ್ಯಗಳ ತುಡುಕಿ ಹಿಡಿವೆಳೆ ದೀಪ್ತಿಯಲಿ ಬೆಳೆ
ಓ ಸತ್ಯ ವೀರಪುತ್ರ
ಮಾನುಷ್ಯ ಪಥನ ನೇತ್ರ
ಓ ಪುಣ್ಯಭೂಮಿ ವರಪುತ್ರ
ನೀ ಭಾವೀ ಯುಗದ ಧಾತ್ರ
ಜಯ ಭಾರತ ಪುತ್ರ! ॥೫॥

ಕವಿ ಕಾವ್ಯ ಪರಿಚಯ



ಸೇಡಿಯಾಪು ಕೃಷ್ಣಭಟ್ಟರು (1902) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಪಡ್ನೂರು ಗ್ರಾಮದ ಸೇಡಿಯಾಪಿನಲ್ಲಿ ಜನಿಸಿದರು. ಕನ್ನಡ ಹಾಗೂ ಸಂಸ್ಕೃತದಲ್ಲಿ ವಿದ್ವಾನ್ ಪದವಿ ಪಡೆದಿದ್ದ ಅವರು ಮಂಗಳೂರಿನ ಸಂತ ಅಲೋಷಿಯಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು, ಪಳಮೆಗಳು, ವಿಚಾರ ಪ್ರಪಂಚ, ಛಂದೋಗತಿ, ಕನ್ನಡ ಗೀತೆಯ ಲಕ್ಷಣ ಮತ್ತು ಧಾಟಿ, ಕನ್ನಡ ಛಂದಸ್ಸು, ಕನ್ನಡ ವರ್ಣಗಳು, ದೈವಲೀಲೆ ಮೊದಲಾದ ಕೃತಿಗಳನ್ನು ಇವರು ರಚಿಸಿದ್ದಾರೆ.

ವಿಚಾರ ಪ್ರಪಂಚ ಕೃತಿಗೆ ಪಂಪ ಪ್ರಶಸ್ತಿ, 'ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು' ಗ್ರಂಥಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ವರ್ಣಗಳು ಪಳಮೆಗಳು ಪುಸ್ತಕಗಳಿಗೆ ಮದರಾಸು ಸರ್ಕಾರದ ಪ್ರಶಸ್ತಿ ಲಭಿಸಿವೆ.

ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಪುಣ್ಯಭೂಮಿ ಭಾರತ. ಭಾರತದ ಪ್ರಜೆಗಳು ಪರಸ್ಪರ ಸಾಮರಸ್ಯದಿಂದ ಬಾಳಬೇಕು, ಏಕತೆ, ಸಹೋದರತೆ, ಪ್ರೀತಿ ಕರುಣೆ ಮೊದಲಾದ ಸದ್ಭಾವಗಳು ಮೂಡಿ ಬರಬೇಕು. ದೇಶ, ಸಂಸ್ಕೃತಿಯ ಹಿರಿಮೆಯನ್ನರಿತು ಯಶಸ್ಸನ್ನು ಕಾಣಬೇಕೆಂಬ ಧ್ವನಿ ಈ ಕವಿತೆಯ ಆಶಯ. ಪ್ರಸ್ತುತ ಐಕ್ಯತೆ ಎನ್ನುವ ಈ ಕವನವನ್ನು ಸೇಡಿಯಾಪು ಕೃಷ್ಣಭಟ್ಟರ 'ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು' ಎಂಬ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಕಳಿಂಗ–ಇಂದಿನ ಒರಿಸ್ಸಾ; ಗಾಂಗ–ಗಂಗಾ ನದಿಯ ತೀರ ಪ್ರದೇಶಗಳು; ಯಾಮುನಾ–ಯಮುನಾ ನದಿಯ ತೀರ ಪ್ರದೇಶಗಳು; ದ್ರವಿಡ–ಇಂದಿನ ತಮಿಳುನಾಡು; ರೈವ–ರೇವಾ(ನರ್ಮದಾ) ನದೀ ಪ್ರದೇಶ; ನಾಗಾ–ನಾಗಾಲ್ಯಾಂಡ್ ಪ್ರದೇಶ; ಸೌರಾಷ್ಟ್ರ–ಇಂದಿನ ಗುಜರಾತ್; ವೀಚಿ–ತೆರೆ, ಅಲೆ; ಲಯ–ನಿಯತ ಗತಿ, ತಾಳಬದ್ಧತೆ; ಒಲೆ–ತೊನೆ, ಬಾಗಿ ಬಳುಕು; ಸಿರಿಮುಡಿ–ಸುಂದರವಾದ ಶಿರೋಭೂಷಣ, ತಲೆಯ ಆಭರಣ; ಮಳೆಬಿಲ್ಲು–ಕಾಮನಬಿಲ್ಲು; ಬೋಧಿ–ಬೋಧಿವೃಕ್ಷ, ಅರಳೀ ಮರ; ಗಾತ್ರ–ಶರೀರ, ದೇಹ; ಪಾತ್ರ–ಅರ್ಹ; ಧಾತ್ರಿ–ಭೂಮಿ,

12th_Kannada_Reader_1-2.indd 4 22-05-2019 14:19:57

ಪೋಷಿಸುವ ತಾಯಿ; ಢಾಣಿಸು–ಢಣಢಣ ಶಬ್ದ ಮಾಡು; ಗಾವರ–ಗದ್ದಲ, ಗಲಾಟೆ; ಮಾಣು–ಬಿಟ್ಟುಬಿಡು; ರೇ–ಸಂಬೋಧನಾ ಅವ್ಯಯ, ಕರೆಯುವ ಧಾಟಿ, 'ಏ', 'ಓ' ಎಂಬಂತೆ; ಅಖಿಲ–ಸಂಪೂರ್ಣ; ಭವ–ಲೌಕಿಕ ಜೀವನ, ಬದುಕು; ನವರತ್ನ–ಹೊಸ ಸಾಹಿತ್ಯ(ಇಲ್ಲಿ ನವ–ಹೊಸ ಸಾಹಿತ್ಯವನ್ನು ರತ್ನವೆಂದು ಹೇಳಲಾಗಿದೆ); ವರ್ಷ–ಮಳೆ, ಸಂವತ್ಸರ; ಕರೆ–ಸುರಿಸು; ಶಲ್ಯ–ಚುಚ್ಚುವಂತಹ ಆಯುಧ; ತುಡುಕು–ಮೇಲೆ ಬೀಳು, ಆಕ್ರಮಣ ಮಾಡು; ಮನುಷ್ಯ ಪಥ–ಮನುಷ್ಯನ ಅಭಿವೃದ್ಧಿಯ ಮಾರ್ಗ; ಧಾತೃ–ಸೃಷ್ಟಿಕರ್ತ, ನಿರ್ಮಾತೃ.

ಟಿಪ್ಪಣಿಗಳು

ವಂಗ: ಬಂಗಾಳ; ಇದು ಭಾರತದ ಛಪ್ಪನ್ನ ದೇಶಗಳಲ್ಲಿ ಒಂದು. ಅಖಂಡ ಭಾರತವನ್ನು ಭರತ ಖಂಡವೆಂದೂ, ಈ ಖಂಡದಲ್ಲಿ ಐವತ್ತಾರು (ಛಪ್ಪನ್ನ) ದೇಶಗಳು ಇದ್ದುವೆಂದೂ ಪುರಾಣಗಳಿಂದ ತಿಳಿದು ಬರುತ್ತವೆ. ಇತಿಹಾಸ, ರಾಮಾಯಣ, ಮಹಾಭಾರತಗಳಲ್ಲಿ ಈ ದೇಶಗಳ ಹೆಸರನ್ನು ಕಾಣುತ್ತೇವೆ. ಅಂಗ, ವಂಗ, ಕಳಿಂಗ, ಕರ್ಣಾಟ, ಕೇರಳ, ಕಾಮರೂಪ, ಗೌಡ, ವನವಾಸ, ಕುಂತಲ, ಕೊಂಕಣ, ಮಗಧ, ಸೌರಾಷ್ಟ್ರ, ಮಾಳವ, ಲಾಟ, ಭೋಜ, ವರಾಟ, ಶಬರ, ಕುಕುರೆ, ಕುರು, ಅವಂತಿ, ಪಾಂಡ್ಯ, ಮದ್ರ, ಸಿಂಹಲ, ಗೂರ್ಜರ, ಪಾರಸಿಕ, ಮಿಥಿಲಾ, ಪಾಂಚಾಲ, ಶೂರಸೇನೀ, ಗಾಂಧಾರ, ಬಾಹ್ಲಿಕ, ಹೈಹಯ, ತಾಳವ, ಸಾಳ್ವ, ಪುಂಡ್ರಕ, ಪ್ರಾಗ್ಜ್ಯೋತಿಷ, ಮತ್ಸ್ಯ, ಚೇದಿ, ಬರ್ಬರ, ನೇಪಾಳ, ಗೌಳ, ಕಾಶ್ಮೀರ, ಕನ್ಯಾಕುಬ್ಜ, ವಿದರ್ಭ, ಖಿರಸಾಣ, ಮಹಾರಾಷ್ಟ್ರ, ಕೋಸಲ, ಅಹಿಚ್ಛತ್ರ, ತ್ರಿಲಿಂಗ, ಪ್ರಯಾಗ, ಕರಹಾಟಕ, ಕಾಂಭೋಜ, ಭೋಜ, ಚೋಳ, ಹೂಣ, ಕಾಶೀ – ಇವೇ ಛಪ್ಪನ್ನ ದೇಶಗಳು.

ಕಾಮಧೇನು: ಕಾಮಿಸಿದ್ದನ್ನು (ಬೇಡಿದ್ದನ್ನು) ನೀಡುವ ಧೇನು(ಹಸು). ಸಮುದ್ರ ಮಥನ ಕಾಲದಲ್ಲಿ ಹುಟ್ಟಿದ ಸುವಸ್ತುಗಳಲ್ಲಿ ಇದೂ ಒಂದು. ಇದು ದೇಂವೇಂದ್ರನಿಗೆ ನೀಡಲ್ಪಟ್ಟು, ಲೋಕ ಕಲ್ಯಾಣಾರ್ಥ ಇಂದ್ರ ಲೋಕದಲ್ಲಿ ನೆಲೆಸಿತು. ವಸಿಷ್ಠನ ಹೋಮಧೇನುವೆನಿಸಿತು. ನಂದಿನಿಗೂ ಈ ಹೆಸರಿದೆ.

ನಾಲ್ಮೊಲೆ: ನಾಲ್ಕು ಮೊಲೆಗಳು ದ್ರಾವಿಡ ಭಾಷಾ ಪರಿವಾರದ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಪ್ರಧಾನ ಭಾಷೆಗಳನ್ನು ಇಲ್ಲಿ ಮೊಲೆಗಳಿಗೆ ಸಾಂಕೇತಿಸಿದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದ ಸಮುದ್ರ ತೀರವು ಹೇಗೆ ಕಂಗೊಳಿಸುತ್ತದೆ?
2. ಶ್ರೀಭಾರತಿ ಭಾಷೆಗಳಕಾಂತಿಯಲ್ಲಿ ಹೇಗೆ ತೋರುತ್ತಿದ್ದಾಳೆ ?
3. ವ್ಯಾಸ ವಾಲ್ಮೀಕಿ ಭಾರತದ ಯಾವ ಭಾಗದವರು?
4. ಆದಿ ಕಾಲದ ಮಾನವರು ಭೂಮಿಯನ್ನು ಯಾವ ರೂಪದಲ್ಲಿ ಕಂಡರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕವಿ ಭಾರತದ ಪ್ರಾದೇಶಿಕ ವಿಭಿನ್ನತೆಯನ್ನು ಹೇಗೆ ವರ್ಣಿಸಿದ್ದಾನೆ ?
2. ಕವಿ ಯಾರು ಯಾರನ್ನು ಭಾರತವೆಂಬ ಬೋಧೀ ವೃಕ್ಷದ ಕೊಂಬೆಗಳೆಂದು ವರ್ಣಿಸಿದ್ದಾನೆ:

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭರತ ಭೂಮಿಯ ವರಪುತ್ರನಾಗಬಯಸುವವನು ಹೇಗೆ ಬೆಳೆದು ಬಾಳಬೇಕು?

ಭಾಷಾಭ್ಯಾಸ

1. **ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**
   ವರಪುತ್ರ, ಸರ್ವತ್ರ, ಮಳೆಯಬಿಲ್ಲು, ಕಾಂತಿ, ಕಾಮಧೇನು
2. **ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
   ಪುತ್ರ, ಪುಣ್ಯ, ಭಾಗ್ಯ, ಅನೇಕ, ಮೂಡಣ, ಪೂರ್ಣ.
3. **ಈ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**
   ಶ್ರೀ, ಘಂಟೆ, ಪುಸ್ತಕ, ಭೂಮಿ, ಯುಗ, ರತ್ನ

ಚಟುವಟಿಕೆ

1. ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಕುರಿತು ಒಂದು ಪ್ರಬಂಧ ರಚಿಸಿ.
2. 'ವೈವಿಧ್ಯತೆಯಲ್ಲಿ ಏಕತೆ' – ಈ ಹೇಳಿಕೆಯನ್ನು ಕುರಿತು ನಿಮ್ಮ ತರಗತಿಯಲ್ಲಿ ಚರ್ಚಿಸಿ.
3. ಭಾರತದ ರಾಜ್ಯಗಳ ಹೆಸರನ್ನು ಪಟ್ಟಿ ಮಾಡಿ.

12th_Kannada_Reader_1-2.indd 5 22-05-2019 14:19:58

ಘಟಕ ಒಂದು

ಚತುರನ ಚಾತುರ್ಯ

– ಯಾದವ ಕವಿ



'ಧೈರ್ಯಂ ಸರ್ವತ್ರ ಸಾಧನಂ' ಎಂಬ ಲೋಕೋಕ್ತಿಯಂತೆ ಧೈರ್ಯದಿಂದ ಕಾರ್ಯಪ್ರವೃತ್ತರಾದಾಗ ಯಶಸ್ಸು ಕಟ್ಟಿಟ್ಟ ಬುತ್ತಿ. ತೊಂದರೆಗೆ ಸಿಲುಕಿದಾಗ ಕೊರಗದೆ ಅದನ್ನು ಎದುರಿಸುವುದು ಮುಖ್ಯ. ಸಮಯೋಚಿತ ಪ್ರಜ್ಞೆಯಿಂದ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣ. ಪ್ರಸಕ್ತ ಕಾಲದಲ್ಲಿ ಸಮಯೋಚಿತ ಪ್ರಜ್ಞೆ ತೀರಾ ಅವಶ್ಯಕ. ಆಕಸ್ಮಿಕವಾಗಿ ಆಪತ್ತಿನೊಳಗೆ ಸಿಲುಕಿದ ಒಬ್ಬ ವ್ಯಕ್ತಿಯು ತನ್ನ ಸಮಯೋಚಿತ ಪ್ರಜ್ಞೆಯಿಂದ ಹೇಗೆ ಪಾರಾದನೆಂದುನ್ನು ಈ ಕಥೆಯಲ್ಲಿ ನೋಡಬಹುದು.



ಒಂದು ಕುಗ್ರಾಮದೊಳ್ ಚತುರನಾದೋರ್ವ ನಾಪಿತನು ವಾಸ ಮಾಡಿರುವನವನು ಅದೇ ಗ್ರಾಮವಾಸಿಯಾಗಿರುವೋರ್ವ ಪಂಚಾಂಗಮನ್ನೊರೆವ ಪಾಮರನಾದ ಪಾರುವನಿರುವನ್ ಅವನೊಳಿವನತ್ಯಂತ ವಿಶ್ವಾಸಮಂ ತಾಳಿ ಅವನೆಡೆಗೆ ಪೋಗಿ ವಂದಿಸಿ, ಕೇಳುತ್ತ ಅವನೊರೆದಂತೆ ಮಾಡುತ್ತಿರುವನ್. ಆ ಗ್ರಾಮಕ್ಕೆ ನಾಲ್ಕು ಯೋಜನದಲ್ಲಿರುವ ಮಹಾಕ್ಷೇತ್ರದೊಳು ಮಹಾದೇವನ ಮಹೋತ್ಸವ ಪ್ರಸಕ್ತಮಾಗಿ ದೇಶದೇಶಗಳಿಂದನೇಕ ಜನರೈತಂದು, ಪರಿಷದಾಗುವುದು. ಮೋರಿಯನ್ನೂದುವುದರಲ್ಲಿಯುಂ ಪ್ರವೀಣನಾಗಿರುವ ನಾಪಿತನು ಮಹಾದೇವೋತ್ಸವಕ್ಕೆ ತಾನಲ್ಲಿಗೈದಿದಡೆ, ದೇವತಾ ಯಾತ್ರೆಯೂ ದ್ರವ್ಯ ಸಂಪಾದನೆಯೂ ಎರಡೂ ಸಂಭವಿಕುಮೆಂದು ಮನದೊಳಾಲೋಚನೆಯ ಮಾಡಿ, ವಿಪ್ರನೆಡೆಗೈತಂದು

12th_Kannada_Reader_1-2.indd 6 22-05-2019 14:19:58

ತೆರಳುವರೆ ಮುಹೂರ್ತಮಂ ಬೆಸಗೊಳ್ಳಲು, ಆ ಪಾರುವನಿಗೊಂದು ತಿಳಿಯದಾದಡೆಯು ನಾಳೆಯುದಯದೊಳೆಂದು ಪೇಳಲವನ ವಾಣಿಯೊಳ್ ಪರಮ ವಿಶ್ವಾಸಮನ್ನೊಂದಿರುವನಾದ ಕಾರಣದಿಂದ ರವಿಯುದಯದೊಳ್ ತೆರಳಿ ನಾಪಿತನು ಮಾರ್ಗದಲ್ಲಿ ಮಹಾ ವಿಪಿನದೊಳಗೋರ್ವನೇ ಬರುತಿರಲ್ ಮಾನುಷರ ಮಾಂಸರುಚಿಯನ್ನರಿದ ಮಹೋಗ್ರಮಾದೊಂದು ಶಾರ್ದೂಲನೆದುರಾಗಿ ಬಂದು ನಾಪಿತನ ಕಂಡು, ಮಹಾಟ್ಟಹಾಸಮಂ ಮಾಡಲು ಮಾನುಷಗೆ ಮೃತ್ಯುರೂಪಾಗಿರುವ ಪುಂಡ–ರೀಕಮಂ ಕಂಡು ಮರಣಂ ನಿಶ್ಚಯಿಸಿ, ಪತ್ನೀಪುತ್ರರನಾಥರಾದರ್ ಅವರಿಗಿನ್ನೇನು ಗತಿಯೆಂದು ಹಂಬಲಿಸುತ್ತಿರಲು, ಘೋರತರಮಾಗಿರುವ ಪುಲಿಯು, ಅನಿತರೊಳ್ ಸಮೀಪಮನೈದಲು ಆ ನಾಪಿತನು ಯತನಮಂ ಮಾಡಿ ನೋಡುವೆನೆಂದು ಶರಗ ಸಂವರಿಸಿ ಕರಗಳಿಂ ಭುಜಾಸ್ಫೋಟಮಂ ಮಾಡಿ ಮಹಾಟ್ಟಹಾಸಮಂ ಗೈಯ್ವುತ್ತ, 'ಎಲವೋ ಶಾರ್ದೂಲ! ಹೃಷ್ಟಪುಷ್ಟಾಂಗನಾದ ನೀನೆಮಗೆ ದೈವವಶದಿಂ ದೊರೆತೆ. ಬಾ, ಮುಂದಕ್ಕಡಿಯಿಡು'ವುದೆಂದು ಕರದೊಳಿರುವ ರಜ್ಜುವನ್ನದರ ಕೊರಳಿಂಗೆ ಕಟ್ಟುವನಂತೆ ಸನ್ನಾಹಗೈಯುತ್ತಾ ಹಾ! ಎಂದು ನಗುತ 'ಬಾ ಬಾ ಮುಂದಕ್ಕಡಿಯಿಡು' ಎಂದು ಕೂಗುತ್ತಾ ನಡೆತರಲು; ಆ ಪುಲಿಯು ಇವನ ಧೈರ್ಯಾಟ್ಟಹಾಸ ಸನ್ನಾಹಗಳ ನೋಡಿ 'ಮಾನುಷನು ತನ್ನ ನೋಡಿ ಮಹಾಟ್ಟಹಾಸಮಂ ಗೈಯುತ್ತೆನ್ನನಡಿಗಡಿಗೆ ಮುಂದಕ್ಕಡಿಯಿಟ್ಟು ಬಾ ಎಂದು ಘರ್ಜಿಸುತ್ತಿರುವನ್ ಇದೇನಚ್ಚರಿಯು! ತನ್ನ ಕಟ್ಟುವನಂತೆ ರಜ್ಜುಮಂ ಸರಿಸಮಂ ಮಾಡುವನಿದೇನು ಕಾರಣಮೋ ?' ಎಂದು ಶಂಕೆಯಂ ತಾಳಿ ನುಡಿದುದು 'ಎಲವೋ ಮಾನುಷನ ತಿಂದು ತೇಗುವ ತನ್ನ ನೀಂ ಕಂಡು ಮಹಾಟ್ಟಹಾಸಮಂ ಮಾಡೆ ನೀನ್ಯಾರು ? ಪೇಳ್' ಎಂದು ಕೇಳಲು, ಆ ದಿವಾಕೀರ್ತಿಯು 'ಎಲವೋ ಮೂಢ ಜಂತುವೇ! ಸಮಸ್ತ ಲೋಕಾಧಿಪತಿಯಾದ ಮಹೇಂದ್ರನು ವ್ಯಾಘ್ರ ಯಜ್ಞಮನ್ನುಪಕ್ರಮಿಸಿರುವುದನರಿಯಾ? ತಾನು ಮೊದಲಾಗಿ ಐದು ಮಂದಿ ಗಂಧರ್ವರಂ ಕರೆದು ಮಾನುಷರಾಗಿ ಧರಣಿಯನ್ನೈದಿ ಓರೊರ್ವರೂ ನೂರು ನೂರು ವ್ಯಾಘ್ರಗಳ ಪಿಡಿದು ತಂದೊಪ್ಪಿಸುವುದೆಂದು ಕಟ್ಟಳೆಯ ಮಾಡಿ ಕಳುಹಿರುವರಾದ ಕಾರಣ ತಾವೈತಂದಿರುವೆವಾನು ತೊಂಭತ್ತನಾಲ್ಕು ಶಾರ್ದೂಲಗಳ ಪಿಡಿದು ಮಹೇಂದ್ರನಡಿಗಳಿಂಗೊಪ್ಪಿಸಿದೆನ್ ಇನ್ನಾರು ಪುಂಡ–ರೀಕಗಳು ಶೇಷಮಾಗಿರುವುದದಕ್ಕೆ ನಿನ್ನೆ ಈ ಮಹಾರಣ್ಯದಲ್ಲಿ ನಿನ್ನ ಪೋಲುವ ಪುಲಿಯೊಂದು ಸಿಕ್ಕಿದುದು ಅದಂ ಕಕ್ಷ್ಯದಲ್ಲಿ ಕಟ್ಟಿರಿಸಿರುವೆನ್ ಇಂದು ನೀನೊರ್ವನಾದೈ ರಾಜ್ಞೆಯಂ ದೋರದೆ ಮಾನುಷರ ತಿಂದು ತೇಗುವ ನಿನ್ನ ಸಾಮರ್ಥ್ಯಮಂ ಬಲ್ಲೆ ಬಾ ಬೇಗ ಮುಂದಕ್ಕಡಿಯಿಟ್ಟು ಇನ್ನು ಮೂರೊಂದು ದೊರೆಯೆ ತಾ ಕೃತಕೃತ್ಯನ್' ಎಂದು ಘರ್ಜಿಸುತ್ತ ಬರಲು, ಆ ತರಕ್ಷುವು ಮನದೊಳತ್ಯಂತ ಭೀತಿಯಂ ತಾಳಿ ಮೆಲ್ಲನೆ, 'ಎಲ್ಲಿ ನಿಮ್ಮ ಕಕ್ಷ್ಯದೊಳಿರುವ ತರಕ್ಷುವನು ತೋರೆ'ನ್ನಲು ಆ ನಾಪಿತನು ಭೀತಿಯಿಂ ಮೆಲ್ಲನೆ ನುಡಿದ ವ್ಯಾಘ್ರನಂ ನೋಡಿ, ಮನದೊಳುತ್ಸಾಹದಿಂದ 'ಎಲವೋ ತನ್ನಂ ಪರೀಕ್ಷೆಯಂ ಮಾಡುವೆಯಾ? ಹಾಗಾದಡೀಗ ನೋಡು' ಎಂದು ಹಡಪದಲ್ಲಿರುವ ಕೈಪಿಡಿಯ ತೆಗೆದು ವ್ಯಾಘ್ರನಿಗೆ ತೋರಲು ಆ ದ್ವೀಪಿಯು ದರ್ಪಣದೊಳತಿ ಸ್ಥೂಲಮಾಗಿ ಕಾಣುತ್ತಿರುವ ತನ್ನ ಪ್ರತಿಬಿಂಬಮಂ ನೋಡುತ್ತತ್ಯಂತ ಭೀತಿಯಂ ತಾಳುತ್ತಹಹ ತನಗಿಂತಲತಿಶಯಮಾದ ಈ ಮಹಾದ್ವೀಪಿಯಂ ಪ್ರಾದೇಶ ಮಾತ್ರ ಪ್ರದೇಶದೊಳು ಕಟ್ಟಿರುವನಿವನು ಮಾನುಷನೇ ಶಿವಶಿವಾ! ತಾನಿವನು ನರನು ತಿಂಬುವನೆಂದು ಎದುರಾಗಿ ಬಂದು ಕೆಟ್ಟೆನಿನ್ನೇನು ಗತಿಯೆಂದು ನಿಶ್ಚೇತನಾದ ಶಾರ್ದೂಲನಂ ಕಂಡು ಕೈಪಿಡಿಯ ಹಡಪದೊಳಗಿರಿಸಿ 'ನೋಡಿದೆಯಲಾ!' ಎಂದು ಘರ್ಜಿಸುತ್ತಾ, ರಜ್ಜುವಂ ಕೊರಳಿಂಗೆ ಹಾಯ್ಕುತ್ತಿರಲು ಆ ದ್ವೀಪಿಯವನಡಿಗೆ ಪೊಡಮಟ್ಟು, 'ದಮ್ಮಯ್ಯ ತನ್ನನುಳುಹಿ ಬಿಡು ಬಹುಮಂದಿ ಮಾನುಷರ ತಿಂದ ತನ್ನ ಗುಹೆಯೆಡೆಯೊಳನೇಕ ರತ್ನಭೂಷಣ ದ್ರವ್ಯವಿರುವುದದಂ ನೀಡುವೆನು. ತನ್ನ ಪಿಡಿದೊಯ್ಯಬೇಡ' ಎಂದು ಬಲು ದೈನ್ಯದಿಂ ಬೇಡುತ್ತ ತಿರೆಯಲ್ಲಿ ಬಿದ್ದು ಪೊರಳುತ್ತಿರಲು, 'ಹಾಗಾದಡೆಲ್ಲಿ? ನಿನ್ನ ಗುಹೆಯಂ ನೋಡುವೆ'ನೆಂದು ನುಡಿಯಲಾ ಪುಲಿಯು ಗಡಗಡನೆ ನಡುಗುತ್ತ ಗುಹೆಯೆಡೆಗೆ ಕರೆದೊಯಿದು ತೋರಲು ನಾಪಿತನು ನರಕಪಾಲಾಸ್ಥಿಗಳ್ಕೆದೆಗಳಿಂ ಮೇದೋಮಾಂಸ ರಕ್ತಪ್ರವಾಹದಿಂ ಕರ್ದಮಿತಮಾಗಿರುವ ಪ್ರದೇಶದೊಳ್ ರಾಸಿರಾಸಿಯಾಗಿ ಬಿದ್ದಿರುವನೇಕ ದ್ರವ್ಯಭೂಷಣಗಳಂ ತಾನು ಹೊರುವಂತೆ ಕಟ್ಟಿ 'ಎಲವೋ ಶಾರ್ದೂಲ ನಿನ್ನನ್ನುಳುಹಿ ಬಿಟ್ಟಿರುವೆ. ಧರ್ಮದಿಂ ಜೀವಿಸು

12th_Kannada_Reader_1-2.indd 7 22-05-2019 14:19:58

ಪೋಗು. ತನ್ನಂತೆ ಇನ್ನೂ ನಾಲ್ವರಿದೇ ರೀತಿಯಿಂ ತಿರೆಯಲ್ಲಿ ತಿರುಗುತ್ತಿಹರವರ ದೃಷ್ಟಿಪಥಕ್ಕೆ ಬೀಳದೆಚ್ಚರದೊಳಿರುವುದು' ಎಂದೊರೆದು, 'ಜನನಿಯುದರದಿಂ ಬಂದೆ'ನೆಂದು ಜವದೊಳಲ್ಲಿಂ ತೆರಳಿ ಹಿಂದಿರುಗಿ ನಿಲಯಕ್ಕೆ ನಡೆತಂದು ತಾನು ತಂದ ಭೂಷಣದ್ರವ್ಯದೊಳಗರ್ಘಮಂ ವಿಪ್ರನಿಗೆ ತಂದಿತ್ತು ತನ್ನ ಮನೆಗೈತಂದು ಸುಖದಿಂದ ಕಾಲಕ್ರಮಣವಂ ಮಾಡುತ್ತಿರಲು, ವತ್ಸರವತಿಕ್ರಮಿಸಿ ಆ ಮಹಾದೇವನುತ್ಸವವು ಯಥಾಪೂರ್ವಮಾಗಿ ಸಂಪ್ರಾಪ್ತಮಾಗಲಾ ಮೋರಿಯೂದುವ ದಿವಾಕೀರ್ತಿಯು ಮೊದಲ ಸಂವತ್ಸರದಿ ದೇವತಾಯಾತ್ರೆಯಂ ಮಾಡುವೆನೆಂದು ತೆರಳಿ ಧನದಾಶೆಯಿಂ ಹಿಂದಿರುಗಿ ಪರಮ ದುರಿತಕ್ಕೆ ಗು–ರಿಯಾದೆನದರಿಂದ ಈಗಳಾದಡೆಯು ಪೋಗಿ ಜಗದೊಡೆಯನಡಿದಾವರೆಯ ದರುಶನ ಮಾಡಿ ಬರುವೆನೆಂದು ಆಲೋಚನೆಯ ಮಾಡಿ, ವಿಪ್ರನೆಡೆಗೈತಂದು ಲಗ್ನಮಂ ಪೇಳಬೇಕೆಂದು ಬೆಸಗೊಳ್ಳಲು ಆ ಹಾರುವನು ಮೊದಲಿನಂತಿವನು ಧನಾರ್ಜನೆಗೆ ಪೋಗುವನು. ಮೊದಲು ತನಗಂತಿತ್ತ ಇವನೆಂತು ತಂದನೋ? ಕಾಣೆನದ–ರಿಂದೀಗಲಿವನೊಡನೆ ತಾನು ತೆರಳುವೆನೆಂದು ಯೋಚಿಸುತ್ತ 'ಎಲವೋ ನಾಪಿತನೆ, ತಾನು ದೇವತಾ ಪ್ರಾರ್ಥನೆಯ ಮಾಡಿರುವೆನದರಿಂದ ನಾಳೆಯುದಯವಾದೈದು ಘಳಿಗೆಯ ಮೇಲೆ ತೆರಳುವೆವೆ'ಂದು ವಾಚಿಸಲು, ಆ ದಿವಾಕೀರ್ತಿಯು ಅವನೊಡನೆ ತೆರಳಿ ಮತ್ತೊಂದು ಮಾರ್ಗದೊಳ್ ನಡೆದು ವಿಪಿನಮಂ ಪೊಕ್ಕು ಬರುತ್ತಿರಲು ಪೂರ್ವದಲ್ಲಿ ಈ ನಾಪಿತನ ಕರದಲ್ಲಿ ಸಿಲುಕಿ ಮಹಾಪದವನೈದಿರ್ದ ಶಾರ್ದೂಲನು ತತ್ಕಾಲದೊಳಗಿಂದಿವನ ಮುಖದಿಂ ತಾನು ಮುಕ್ತನಾದೊಡೆ ಸಜಾತೀಯರಂ ಬಹುವಿಧ ಮಾಂಸರಕ್ತಗಳಿಂ ಸತ್ಕರಿಸಿ ಸಮ್ಯಗಾರಾಧಿಸುವೆನೆಂದು ಬೇಡಿರ್ದುದಾದ ಕಾರಣ ಅಂದೇ ಗಹನಮನ್ನುಳಿದು ಇವರೈತರುವರಣ್ಯಮಂ ಸೇರಿ ಅಂದು ಮೊದಲಾಗಿ ಅನೇಕ ಪಶು ಮೃಗಗಳಂ ಸಂಹರಿಸಿ ಜತೆಗೈದು ಸಜಾತೀಯರಾದನೇಕ ವ್ಯಾಘ್ರಗಳನ್ನಾತಿಥ್ಯಮಂ ಗೈಯುವರೆ ಕರೆಯುತ್ತಪರಿಮಿತ ಶಾರ್ದೂಲಗಳನ್ನೊಡಗೂಡಿ ನಡೆತರಲು, ಎಲ್ಲಿ ನೋಡಿದಡೆಯುಂ ಹುಲಿಗಳೇ ಕಾಣುತ್ತಿಹುದು ಶಿವಶಿವಾ! ಈ ವಿಪ್ರನೆನ್ನೊಡನೆ ನಡೆತಂದು ಹುಲಿಯ ತುತ್ತಾದನಿನ್ನೇನ ಗೈವೆವಾಕಸ್ಮಿಕದಿ ಮೃತ್ಯು ಬಂದೊದಗಲು ನೋಡುವೆನೆಂದು ದ್ವಿಜನಿಂ ಸಹಿತ ಮಹಾವೃಕ್ಷಮನ್ನೇರಿ ನುಡಿದನು : 'ಅಯ್ಯಾ! ಹಾರುವನೇ, ನೀನಂಜದಿರು, ದೃಢವಾದ ಶಾಖೆಯಂ ಭುಜಗಳಿಂದಪ್ಪಿ ಚಲಿಸದೆ ಕುಳ್ಳಿರುವುದೆಂದು ಮೆಲ್ಲನೊರೆಯುತ್ತಿರುವನಿತರೊಳಾ ಶಾರ್ದೂಲ ಸಮೂಹವು ಸಮವಾಗಿ ವಿಶಾಲಮಾಗಿರುವದೇ ವೃಕ್ಷದಡಿಯ ಶಾಡ್ವಲ ಪ್ರಾದೇಶದೊಳ್ ಬಂದು ಕುಳ್ಳಿರಲು ಆ ಮಹೋಗ್ರ ಪುಂಡರೀಕಗಳ ತಂಡತಂಡಗಳ ಕಂಡು ಭೂಸುರನ ಹರಣ ನೆತ್ತಿಯನ್ನಡರೆ ನಾಪಿತನು ನೋಡಿ ಇಂದುಳಿಯುವ ಸಂದರ್ಭಮಂ ಕಾಣೆ ಶಿವಶಿವಾ! ಎಂದು ಬಹುವಿಧದಿ ಯೋಚಿಸುತ್ತಿರಲು, ಆ ಶಾರ್ದೂಲ ಚಿರಕಾಲದಿಂ ಸಂಹರಿಸಿ ಸಂಗ್ರಹಿಸಿದ ಮನುಷ್ಯ ಮೃಗ ಪಶುವೇ ಮೊದಲಾದ ಶವ ಶರೀರಗಳ ತಂದು ಆ ವ್ಯಾಘ್ರಂಗಳಿಗೆ ನೀಡಲಾ ಘೋರ ಜಂತುಗಳ ಶವಶರೀರಂಗಳಂ ನಖಗಳಿಂ ಪಲ್ಗಳಿಂ ಖಂಡಿಸುತ್ತ ಖಂಡಗಳ ಬಗೆಬಗೆದು ತಿಂದು, ರಕ್ತವ ಸವಿಯುತ್ತಿರಲದರೊಳೊಂದು ಹೆಗ್ಗಡಿಯಾದ ವ್ಯಾಘ್ರನು ಈ ಶಾರ್ದೂಲನಂ ಕುರಿತು 'ಇದೇನಯ್ಯಾ ತರಕ್ಷುವೇ, ತಮಗೆ ನೀವಾತಿಥ್ಯಮನ್ನೆಸಗೆ ಕಾರಣಮದೇನೆ'ಂದು ಕೇಳಲು ಆ ದ್ವೀಪಿಯು ತನ್ನ ವೃತ್ತಾಂತಮನ್ನೊರೆಯಲಾ ಹೆಗ್ಗಡಿಯು, 'ನರ ತನ್ನ ತನುವನ್ನುಳುಹಿ ಕೊಂಬರಿದೊಂದು ಸಂವಿಧಾನಮಂ ಮಾಡಿ ನಿನ್ನ ವಂಚಿಸಿದನೆ'ಂದಾಡಲು, ಆ ಹುಲಿಯು 'ಅಯ್ಯಾ, ಶಾರ್ದೂಲ ಪ್ರವರನೇ ಕೇಳು, ತನಗಿಂತಧಿಕವಾಗಿದ್ದ ನಿಮ್ಮಂತಿರುವೊಂದು ಮಹಾವ್ಯಾಘ್ರನಂ ಪ್ರತ್ಯಕ್ಷಮಾಗಿ ಪ್ರಾದೇಶ ಮಾತ್ರ ಪ್ರದೇಶದೊಳ್ ಕಟ್ಟಿರ್ದನದಂ ನೋಡಿ, ಭೀತಿಯಿಂ ಬಹುಪ್ರಕಾರದಿಂದ ಗಂಧರ್ವನಂ ಬೇಡಿ ತನುವನ್ನುಳುಹಲಾಗಿ ಬಹು ಧನವ ತೋರಲವನು ದಯೆಗೈದು ತನ್ನಂತೆ ಇನ್ನು ನಾಲ್ವರೈತರುವರವರ ದೃಷ್ಟಿಪಥಕ್ಕೆ ಬೀಳದಿರೆಂದರುಹಿ ತನ್ನನುಳುಹಿ ತೆರಳಿದನಾದರದೊಳಾನು ನಿಮಗಾತಿಥ್ಯಮಂ ಮಾಡುವೆನೆಂದು ಮಹಾದೇವನಂ ಬೇಡಿಕೊಂಡಿರ್ದೆ'ನೆಂದು ನುಡಿಯುತ್ತಿರುವನಿತರೊಳ್ ರಕ್ತಮಾಂಸಗಳ ತಿಂದು ವ್ಯಾಘ್ರಗಳೇಕ ಕಾಲದೊಳು ಮಹೋತ್ಸಾಹದಿಂದಬ್ಬರಿಸಿ ಘರ್ಜಿಸಲು ಧರೆಯು ಕಂಪಿಸಲು ಕಾಂತಾರವೆಲ್ಲವನೇಕ ಸಿಡಿಲೆರಗಿದಂತೆ ಶಬ್ದಮಯಮಾಗೆ ತರಹರಿಸಲಾರದಾ ವಿಪ್ರನಾಗಲ್

12th_Kannada_Reader_1-2.indd 8 22-05-2019 14:19:58

ಅಗ್ರದಿಂ ಧೊಪ್ಪನಾ ವ್ಯಾಘ್ರಗಳ ಮಧ್ಯದಲ್ಲಿ ಬೀಳಲು ನಾಪಿತನಹಹಾ! ಪಾಪಿ ವ್ಯರ್ಥವಾಗಿ ಹರಣಂ ನೀಗುವೆಯಾ? ಮೋಸವಾದುದು ಏಂ ಗೈವೆನೆಂದು ಯೋಚಿಸಿ, ಇನ್ನೇನು ಕೆಟ್ಟು ಪೋಪುದು ಯತನಮಂ ಮಾಡಿ ನೋಡುವೆನೆಂದು 'ಎಲವೋ ಗಂಧರ್ವ, ನೀಂ ಧುಮುಕಿದುದು ಲೇಸಾಯ್ತು ಮುಂಚಿತಮಾಗಿ ಆ ಗಡ್ಡದ ಹೆಗ್ಗಡಿಯ ವ್ಯಾಘ್ರನಂ ಪಿಡಿ ಪಿಡಿ ಪಿಡಿ' ಎಂದು ವನಮೆಲ್ಲ ಕಂಪಿಸುವಂತೆ ಮಹಾಟ್ಟಹಾಸಮಂ ಗೈದು ಬೊಬ್ಬಿರಿಯಲು, ಆ ಹುಲಿಗಳೆಲ್ಲ ಆಹಾ! ಗಂಧರ್ವನೆಮ್ಮೆಲ್ಲರನ್ನೇಕ ಕಾಲದೊಳ್ ಪಿಡಿಯೆ ಪ್ರಚ್ಛನ್ನನಾಗಿ ಅಡಗಿರ್ದನೆಂದು ಭೀತಿಯಿಂದ ತಾವೆಲ್ಲ ಸಿಕ್ಕಿದುವೆಂದು ನಿಶ್ಚಯಿಸಿ ಪಲಾಯನವ ಮಾಡಿ ಹಿಂದಿರುಗಿ ನೋಡಲಮ್ಮದೆ ಭೀತಿಯಿಂ ದಿಗ್ದೇಶಗಳನ್ಯೈದಲು, ಆ ವಿಪಿನದೊಳಗಿಂತು ಭೀತಿಯಿಂ ಮೈಮರೆದು ಪಲಾಯನವ ಮಾಡುತ್ತಿರುವ ಶಾರ್ದೂಲನಂ ನರಿ ಕಂಡಿದೇನಚ್ಚರಿಯೆಂದು 'ಎಲವೋ ಸಮಸ್ತ ಪ್ರಾಣಿಗಳು ನಿನಗಂಜಿ ಪಲಾಯನ ಮಾಡುವರು, ನೀನಿಂತು ಬೆದರಿ ತೆರಳುವುದುಚಿತಮಲ್ಲೊಂದು ನಿಮಿಷ ನಿಂದು ವೃತ್ತಾಂತಮಂ ತಿಳುಹು ಭಯಮೇನು, ತಾನಿರುವೆನಂಜದಿರೆ'ಂದು ಸಂತಯಿಸಿ ಕೇಳಲು, ಆ ದ್ವೀಪಿಯದರ ಭರವಸದಿಂದ ಮೆಲ್ಲಮೆಲ್ಲನೆ ವೃತ್ತಾಂತಮೆಲ್ಲಮಂ ಪೇಳಿ ತನ್ನ ಪಿಡಿಯೆ ಗಂಧರ್ವನೈತರುವನೆಂದು ಭೀತಿಯಿಂದರುಹಲು ನರಿಯದಂ ಕೇಳಿ, 'ಮಾನವನು ಬಲು ಚಾತುರ್ಯಮನ್ನೆಸಗಿದನು, ಮರಣ ಭಯದಿಂ ನೆಲಕ್ಕುರುಳೆ ಮರದ ಮೇಲಿರುವನಿವನು ಸಾಯುವನೆಂದು ಚಮತ್ಕಾರಮಂ ಮಾಡಿ ನುಡಿದ ಮಾತ್ರಕ್ಕೆ ಕಾಲ್ಗೆಟ್ಟು ಭೀತಿಯಿಂ ಪಲಾಯನವ ಮಾಡುವರೇ, ಸುಡು ನಿನ್ನ ಧೈರ್ಯಮನ್ನೀ ಕ್ಷಣದಿ ನಿನ್ನಿಂದ ಮಾನುಷಾಧಮನ ಕೊಲ್ಲಿಸುವೆನು, ತೋರು ನೀನಾ ತಾಣಮಂ ತನ್ನೊಡನೆ ತೆರಳೆ'ಂದು ನುಡಿಯಲು ಆ ದ್ವೀಪಿ ನರಿಯಂ ಕುರಿತು 'ಮೇಲಿಂದ ಧುಮುಕಿ ತನ್ನನ್ನೇ ಮುಂಚಿತಮಾಗಿ ಪಿಡಿಯೆಂದು ಕೂಗಿದವನು ಮಾನುಷನದೆಂತಾಗುವಂ ತನಗೆ ಧೈರ್ಯಮಿನಿತಿಲ್ಲ ತಾನೈತರಲಾರೆ'ನೆಂದು ಭೀತಿಗೊಳ್ಳಲು ಆ ನರಿಯು ನಾನಾ ವಿಧೋಪಾಯದಿಂದದನ್ನೊಡಂಬಡಿಸಿ ಧೈರ್ಯಮಂ ಪೇಳಿ 'ತಾ ಮುಂದೆ ಪೋಗುವೆನು ತನ್ನೊಡನೆ ಪಿಂದೆ ನೀನೈತರುವುದೆ'ಂದು ಭೀತಿಯಂ ಕಳೆದು ಮಾನವರು ಚತುರರೆಂದವನು ಮಾಡಿದ ಸಂದರ್ಭಮಂ ತಿಳುಹಿ ನಂಬಿಗೆಯನ್ನಿತ್ತದನ್ನೊಡಗೊಂಡು ಹಿಂದಿರುಗಿ ಅದೇ ಕಾನನವ ಪೊಕ್ಕು ಬರುತ್ತಿರಲು

ಇತ್ತ ನಾಪಿತನು ಹುಲಿಗಳೆಲ್ಲ ಪಲಾಯನವ ಮಾಡೆ ಮೆಲ್ಲನಾ ವೃಕ್ಷದಿಂದಿಳಿದು ಮೂರ್ಛಿತನಾದ ವಿಪ್ರನಂ ಸಂತೈಸಿ, 'ಅಯ್ಯಾ! ಮೊದಲೇ ಮಾರ್ಗ ಸುಪಥಮಲ್ಲ, ನೀವೈತರಬೇಡಿ ಎಂದು ಪೇಳಿದಡೆ ಉಕ್ಕಾಳಗೈದಿರಿರಿ. ಆದಡೆಯು ಇನಿತು ಮಾತ್ರ ಧೈರ್ಯವಿಲ್ಲದಡೆ ಮುಂದೇನು ಗತಿ ಶಿವಶಿವಾ!' ಎಂದು ಮೃದುವಾದ ಶಾಬ್ದಲ ಪ್ರದೇಶಮಾದ ಕಾರಣದಿಂ ಕರಪಾದಗಳು ಮುರಿಯದೆ ಯಥಾ-ಸ್ಥಿತಿಮಾಗಿರಲಿದೇ ಪುಣ್ಯಮೆಂದವನಿಂ ಸಹಿತನಾಗಿ, 'ಸಾಕು, ದೇವರ ಸೇವೆ. ಊರ ಸೇರುವೆ'ನೆಂದು ಹಿಂದಿರುಗಿ ಜವದಿಂದ ನಡೆಯುತ್ತೆ ಬರುತ್ತಿರಲು, ಬಂದುದೆದುರಾಗಿ ಮಹಾಶಾರ್ದೂಲನಿಂ ಸಹಿತ ನರಿಯಂ ಕಂಡು ನಾಪಿತನು 'ಆಹಾ! ಪಲಾಯನವ ಮಾಡುತಿರ್ದ ಹುಲಿಯನ್ನೊಡಗೊಂಡು ಬರುವುದೀ ನರಿ ಅರಣ್ಯ ಜಂತುಗಳಲ್ಲಿ ಮಹಾ ಬುದ್ಧಿಶಾಲಿಯಾದುದಿದು, ಸರ್ವ ಸತ್ವಗಳಲ್ಲಿ ಮಹಾ ಸತ್ವಶಾಲಿಯಾದುದೀ ಹುಲಿಯು. ಇವೆರಡೊಂದಾಗಿ ನಡೆತಂದ ಬಳಿಕ ತಾವು ಉಳಿಯುವುದೆಂತು? ಶಿವಶಿವಾ! ಯತನಮಂ ಮಾಡಿ ನೋಡುವೆ'ನೆಂದು ಹುಲಿಯಿಂ ಸಹಿತ ಸಮೀಪಕ್ಕೆ ಬಂದ ನರಿಯಂ ಕುರಿತು, 'ಎಲವೋ, ರಂಡಾಪುತ್ರ ದುರ್ಜಂತುವೇ ಮೂರು ದಿನದೊಳಗಾಗಿ ಐದು ಪುಲಿಗಳ ಪಿಡಿದು ತಂದು ನಿಮಗೊಪ್ಪಿಸುವೆನೆಂದು ಶಪಥಪೂರ್ವಕವಾಗಿ ತಮ್ಮೊಡನೆ ಪೇಳಿ ಐದು ದಿನಕ್ಕಾಗಿ ಒಂದನಾಮಧೇಯ ವ್ಯಾಘ್ರನಂ ಪಿಡಿದು ತಂದೆಯಾ?' ಎಂದು ಘರ್ಜಿಸುತ್ತಾ ನೆಲದ ಮೇಲಿರುವ ಕಲ್ಲುಗಳ ತೆಗೆದು ಬೀರಲು ಆ ವ್ಯಾಘ್ರನು 'ಆಹಾ! ಈ ನರಿಯು ತನ್ನ ಮೋಸದಿಂ ಗಂಧರ್ವಗೊಪ್ಪಿಸಲ್ ಕರತಂದುದಿದರ ವಂಚನೆಯನ್ನರಿಯದೀ ಪಾಪಿಯಾಲಾಪಮಂ ನಂಬಿ ಕೆಟ್ಟೆನಿನ್ನೇನು ಗತಿ'ಯೆಂದು ಹಿಂದಿರುಗಿ ಪಲಾಯನಗೈದು ದಿಗ್ದೇಶಮನ್ಯೈದಲು, ಆ ನರಿಯು ನಾಪಿತನ ಪಾಶಾಣ ಪ್ರಹಾರದಿಂದಸುವ ನೀಗಲಾ ದಿವಾಕೀರ್ತಿಯು ಜವದಿಂದರಣ್ಯಮಂ ದಾಂಟಿ ಇಂದು ಜನನಿಯುದರದಿಂ ತಾವು ಜನಿಸಿದೆವೆಂದು ವಿಪ್ರನಿಂ ಸಹಿತನಾಗಿ ಗ್ರಾಮಮನ್ಯೈದಿದನು.

12th_Kannada_Reader_1-2.indd 9 22-05-2019 14:19:58

ಕೃತಿ–ಕರ್ತೃ ವಿಚಾರ

ಯಾದವ ಕವಿ(ಕ್ರಿ.ಶ.1800). 'ಕಲಾವತೀ ಪರಿಣಯಂ' ಗ್ರಂಥದ ಕರ್ತೃ ಯಾದವ ಕವಿ. ಚಿಕ್ಕಬಳ್ಳಾಪುರ ಇವನ ಜನ್ಮಸ್ಥಳ. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಇವನು ಪಂಡಿತನಾಗಿದ್ದನು. ಉಭಯ ಕವಿ ವಿಚಕ್ಷಣ, ಉಭಯ ಕವಿತಾ ವಿಶಾರದ ಎಂಬುವು ಇವನ ಬಿರುದುಗಳು.

ವಿದ್ಯಾವಂತನಲ್ಲದ ನಾಪಿತನೊಬ್ಬ ತೊಂದರೆಗಳು ಎದುರಾದ ಸಂದರ್ಭದಲ್ಲಿ ತನ್ನ ಜಾಣ್ಮೆಯಿಂದ ಪ್ರಾಣಾಪಾಯವನ್ನು ತಪ್ಪಿಸಿಕೊಳ್ಳುವ ಪ್ರಸಂಗ ಇದು. ಹೆದರದೆ ಮುನ್ನುಗ್ಗುವ ಹಾಗೂ ಯುಕ್ತಿಯಿಂದ ಸಮಸ್ಯೆಯನ್ನು ಎದುರಿಸುವ ಚಾಣಾಕ್ಷತೆ ಈ ಕಥೆಯಲ್ಲಿದೆ.

ಪದಗಳ ಅರ್ಥ

ನಾಪಿತ–ಕ್ಷೌರಿಕ, ದಿವಾಕೀರ್ತಿ; ಒರೆ–ಹೇಳು; ಪಾಮರ–ಮುಗ್ಧ, ಮೂಢ, ದಡ್ಡ, ಸಾಮಾನ್ಯ ಮನುಷ್ಯ; ಪಾ(ಹಾ)ರುವ(ಪಾರ್ವ)–ಬ್ರಾಹ್ಮಣ; ಯೋಜನ–ಎರಡು ಗಾವುದ ದೂರ, ಹನ್ನೆರಡು ಮೈಲು ದೂರ; ಪರಿಷ–ಪರಿಷೆ, ಜಾತ್ರೆ; ಮೋರಿ–ವಾಲಗ, ವಾದ್ಯ; ದ್ರವ್ಯ–ಸಂಪತ್ತು; ವಿಪ್ರ–ಬ್ರಾಹ್ಮಣ; ವಾಣಿ–ಮಾತು, ನುಡಿ, ಸರಸ್ವತಿ; ಬೆಸಗೊಳ್–ಕೇಳು, ವಿಚಾರಿಸು; ವಿಪಿನ–ಕಾಡು, ಕಾಂತಾರ, ಕಾನನ; ಕರ–ಕೈ, ಕಿರಣ, ತೆರಿಗೆ; ಶರಗು–ಸೆರಗು, ಮೇಲುಹೊದಿಕೆ; ಸಂವರಿಸಿ–ಒಟ್ಟುಗೂಡಿಸಿ, ಸರಿಪಡಿಸಿ, ಹಿಂದೆ ಸರಿಸಿ; ಹುಲಿ–ಶಾರ್ದೂಲ, ಪುಂಡರೀಕ, ವ್ಯಾಘ್ರ, ತರಕ್ಷು, ದ್ವೀಪಿ; ಹೃಷ್ಟಪುಷ್ಟ–ಚೆನ್ನಾಗಿ ತಿಂದು ಕೊಬ್ಬಿರುವ, ಚೆನ್ನಾಗಿ ಬೆಳೆದಿರುವ; ರಜ್ಜು–ಹಗ್ಗ, ಪಾಶ; ಕಟ್ಟಳೆ–ನಿಯಮ; ಸನ್ನಾಹ–ಸಿದ್ಧತೆ; ಜಂತು–ಕ್ಷುದ್ರಪ್ರಾಣಿ, ಉಪಕ್ರಮ–ಪ್ರಾರಂಭ, ತೊಡಗು; ಶೇಷ–ಉಳಿದ, ಮಿಕ್ಕಿದ್ದು, ಪ್ರಸಾದ, ಸರ್ಪ; ಕಕ್ಷ–ಕಂಕುಳು, ಬಗಲು; ಹಡಪ–ಕ್ಷೌರದ ಸಲಕರಣೆಗಳನ್ನಿಡುವ ಚೀಲ; ಕೈಪಿಡಿ–ಕೈಗನ್ನಡಿ; ದರ್ಪಣ–ಕನ್ನಡಿ; ಸ್ಥೂಲ–ದೊಡ್ಡ, ದಪ್ಪ, ಸರಿಸುಮಾರು, ಅಂದಾಜು; ಪ್ರಾದೇಶ ಮಾತ್ರ ಪ್ರದೇಶ–ಹೆಬ್ಬೆರಳು ಮತ್ತು ತೋರು ಬೆರಳಿನ ನಡುವಿನ ಸ್ಥಳ; ಹಾ(ಪಾ)ಯ್ಕು–ಹಾಕು; ಸಾಧ್ವಸದಿ–ಭಯದಿಂದ; ಪೊಡಮಡು–ನಮಸ್ಕರಿಸು; ನರಕಪಾಲಾಸ್ಥಿಮೆದೆಗಳ್ (ನರ+ಕಪಾಲ+ಅಸ್ಥಿ+ಮೆದೆಗಳ್) –ತಲೆಬುರುಡೆ ಹಾಗೂ ಮೂಳೆಯ ರಾಶಿಗಳು; ಮೇಧ–ಕೊಬ್ಬು; ಕರ್ದಮಿತ–ಕೆಸರಾಗಿರುವ, ಅಂಟಿಕೊಂಡಿರುವ; ದೃಷ್ಟಿಪಥ–ಕಣ್ಣಿಗೆ ಬೀಳುವ ಹಾದಿ; ವತ್ಸರ–ಸಂವತ್ಸರ, ವರ್ಷ; ಸಂಪ್ರಾಪ್ತ–ಸಂಭವಿಸು, ಒದಗು; ಜವ–ವೇಗ, ಯಮ; ದುರಿತ–ಪಾಪ; ಘಳಿಗೆ–ಗಳಿಗೆ, ಸಮಯ, ಒಂದು ದಿನದ 1/60ನೇ ಭಾಗ, 24 ನಿಮಿಷಗಳು; ಪೂರ್ವ–ಮುಂಚೆ, ಹಿಂದಿನ, ದಿಕ್ಕು; ಮಹಾವೃಕ್ಷ–ದೊಡ್ಡ ಮರ; ಶಾಖೆ–ಕೊಂಬೆ; ಶಾಡ್ವಲ–ಹಸಿರಾದ ಪ್ರದೇಶ, ಗಿಡಮರಗಳಿಂದ ತುಂಬಿದ ಪ್ರದೇಶ, ಹುಲ್ಲುಹಾಸಿನಿಂದ ಹಸಿರಾಗಿರುವ ಸ್ಥಳ; ಹರಣ–ಪ್ರಾಣ; ಚಿರಕಾಲ–ಬಹಳ ಸಮಯ; ನಖ–ಉಗುರು; ಖಂಡಿಸು–ತುಂಡು ಮಾಡು, ಕತ್ತರಿಸು; ಖಂಡ–ತುಂಡು, ಚೂರು; ಹೆಗ್ಗಡಿ–ಹಿರಿಯ, ಒಡೆಯ, ಮುಖ್ಯಸ್ಥ; ಪ್ರವರ–ಪೀಳಿಗೆಯ ವಿವರಣೆ; ಸಂವಿಧಾನ–ತಂತ್ರ; ನಗಾಗ್ರ–ಮರದ ತುದಿ(ನಗ–ಮರ, ಒಡವೆ, ಬೆಟ್ಟ), ಪ್ರಚ್ಛನ್ನ–ಅಡಗಿಕೊಂಡು, ಮರೆಯಾಗಿ, ಕಣ್ಣಿಗೆ ಕಾಣದಂತೆ; ನೋಡಲಮ್ಮದೆ–ಇಷ್ಟಪಡದೆ; ದಿಗ್ದೇಶ(ದಿಕ್+ದೇಶ)–ದಿಕ್ಕಾಪಾಲು; ತಾಣ–ಸ್ಥಳ, ಜಾಗ; ಉಕ್ಕಾಳ–ಉತ್ಸಾಹ, ಉಬ್ಬಿಹೋಗು; ಪಾಷಾಣ–ಕಲ್ಲು, ವಿಷ; ಅಸು–ಪ್ರಾಣ; ಸಮ್ಯಗ್–ಒಳ್ಳೆಯ; ಜನನಿ–ತಾಯಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಹುಲಿ ಕಾಡಿನಲ್ಲಿ ಯಾರಿಗೆ ಎದುರಾಗಿ ಬಂದಿತು?
2. ಮಾಹೇಂದ್ರನು ಯಾವ ಯಜ್ಞವನ್ನು ಕೈಗೊಂಡಿದ್ದನು?
3. ಹುಲಿ ಕನ್ನಡಿಯಲ್ಲಿ ಕಂಡಿದ್ದೇನು?
4. ಹುಲಿಯು ನಾಪಿತನಿಗೆ ಏನನ್ನು ನೀಡುತ್ತೇನೆಂದು ಹೇಳಿತು?

12th_Kannada_Reader_1-2.indd 10 22-05-2019 14:19:58

5. ನಾಪಿತನು ತಂದ ದ್ರವ್ಯದಲ್ಲಿ ವಿಪ್ರನಿಗೆ ಎಷ್ಟು ಕೊಟ್ಟನು?
6. ಹುಲಿಯ ಹಿಂಡನ್ನು ಕಂಡು ಹೆದರಿದ ನಾಪಿತ ಮತ್ತು ವಿಪ್ರರು ಎಲ್ಲಿ ಅಡಗಿಕೊಂಡರು?
7. ವಿಪ್ರನು ಮರದಿಂದ ಎಲ್ಲಿಗೆ ಬಿದ್ದನು?
8. ನರಿಗೆ ಏಕೆ ಆಶ್ಚರ್ಯವುಂಟಾಯಿತು?
9. ಅರಣ್ಯ ಜಂತುಗಳಲ್ಲಿ ಬುದ್ಧಿಶಾಲಿಯಾದ ಪ್ರಾಣಿ ಯಾವುದು?
10. ನರಿ ಯಾವ ಹೊಡೆತಕ್ಕೆ ಪ್ರಾಣ ಬಿಟ್ಟಿತು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಹಾದೇವನ ಉತ್ಸವಕ್ಕೆ ನಾಪಿತನು ತೆರಳಿದ ಉದ್ದೇಶವೇನು?
2. ಹುಲಿಯ ಗುಹೆಯಲ್ಲಿ ನಾಪಿತ ಏನೇನನ್ನು ಕಂಡನು?
3. ಎರಡನೆಯ ಬಾರಿ ಮಹಾದೇವನ ಉತ್ಸವಕ್ಕೆ ನಾಪಿತ ತೆರಳಿದ್ದೇಕೆ?
4. ಕಾಡಿನಲ್ಲಿ ಹುಲಿಗಳೆಲ್ಲ ದಿಕ್ಕಾಪಾಲಾಗಿ ಓಡಿಹೋದದ್ದೇಕೆ?
5. ನರಿಯೊಡನೆ ಬರುತ್ತಿರುವ ಹುಲಿಯನ್ನು ಕಂಡು ನಾಪಿತನು ಏನೆಂದು ಯೋಚಿಸಿದನು?
6. ನರಿಯನ್ನು ನಾಪಿತ ಏನೆಂದು ಗದರಿದನು?

III. ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1. ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿಕೊಂಡು ಹೇಳಿದ ಕಥೆ ಯಾವುದು?
2. ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.
3. ವ್ಯಾಘ್ರಗಳ ಮಧ್ಯೆ ಬಿದ್ದ ವಿಪ್ರನನ್ನು ಉಳಿಸಿಕೊಳ್ಳಲು ನಾಪಿತನು ಮಾಡಿದ ಉಪಾಯವೇನು?
4. ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿ ಹೇಗೆ ಸಮಾಧಾನ ಪಡಿಸಿ ಹಿಂದಕ್ಕೆ ಕರೆತಂದಿತು?
5. ಮೂರ್ಛೆ ಹೋದ ವಿಪ್ರನನ್ನು ನಾಪಿತನು ಹೇಗೆ ಸಂತೈಸಿದನು?

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**
   ಹುಲಿ, ಕಾಡು, ರವಿ, ಧರಣಿ, ಮರಣ.
2. **ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
   ವಿಶ್ವಾಸ, ಧರ್ಮ, ಸಜಾತಿ, ನಂಬಿಕೆ, ಭೀತಿ.
3. **ಈ ಪದಗಳಿಗೆ ತತ್ಸಮ ತದ್ಭವ ಬರೆಯಿರಿ**
   ಪುಸ್ತಕ, ರಕ್ತ, ರತ್ನ, ಮುಖ, ಮೃಗ.
4. **ಕೆಳಗಿನ ಪದಗಳ ಸಂಧಿ ಬಿಡಿಸಿ ಹೆಸರಿಸಿ.**
   ಮಹೋತ್ಸವ, ತಮ್ಮೊಡನೆ, ಮಹೇಂದ್ರ, ಮಹಾರಣ್ಯ.
5. **ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.**
   ವಿಶ್ವಾಸ, ಆಲೋಚನೆ, ಪ್ರಾರ್ಥನೆ, ಶಪಥ, ಕಟ್ಟಳೆ.

ಚಟುವಟಿಕೆ

ಸಮಾನಾರ್ಥಕ ಪದಗಳು: ಭಾಷೆಯಲ್ಲಿ ಒಂದೇ ಅರ್ಥವನ್ನು ಸೂಚಿಸುವ ಹಲವು ಪದಗಳು ರೂಢಿಯಲ್ಲಿರುತ್ತವೆ. ಸಣ್ಣ ವ್ಯತ್ಯಾಸ ಮತ್ತು ಒಂದೇ ಅರ್ಥದ ಛಾಯೆಯನ್ನು ಸೂಚಿಸಲು ಇಂಥ ಪದಗಳ ಸೃಷ್ಟಿ ಆಗಿರುತ್ತದೆ. ಅನ್ಯ ಭಾಷೀಯ ಪದಗಳನ್ನು ಸಮಾನಾರ್ಥದಲ್ಲಿ ಬಳಸಲಾಗುವುದು. ಉದಾ : ಹುಲಿ–ವ್ಯಾಘ್ರ, ಶಾರ್ದೂಲ, ಪುಂಡರೀಕ, ತರಕ್ಷು, ದ್ವೀಪಿ; ಕಾಡು–ವಿಪಿನ, ಕಾಂತಾರ, ವನ, ಅರಣ್ಯ, ಅಡವಿ ಇತ್ಯಾದಿ. ಇಂತಹ ಇನ್ನೂ ಕೆಲವು ಸಮಾನಾರ್ಥಕ ಪದಗಳನ್ನು ಪಟ್ಟಿ ಮಾಡಿ.

12th_Kannada_Reader_1-2.indd 11 22-05-2019 14:19:58

ಉಪಪಠ್ಯ

ಘಟಕ ಒಂದು

ಭಾಷೆ ಮತ್ತು ಸಂಸ್ಕೃತಿ

– ಡಾ. ತಮಿಳ್ ಸೆಲ್ವಿ



ಭಾಷೆ ಎಂಬುದು ಮನುಷ್ಯನ ಬುದ್ಧಿಶಕ್ತಿಯ ಪ್ರತೀಕವಾಗಿದೆ. ಮನುಷ್ಯ, ಸೃಷ್ಟಿಯಲ್ಲಿನ ಉಳಿದೆಲ್ಲ ಜೀವಿಗಳಿಗಿಂತ ಪ್ರತ್ಯೇಕವಾಗಿ ಗುರುತಿಸಲ್ಪಡುವುದು ಆತನ ಬೌದ್ಧಿಕತೆ ಹಾಗೂ ಅದರಿಂದ ಆತ ರೂಪಿಸಿಕೊಂಡಿರುವ ಭಾಷೆಯ ಕಾರಣದಿಂದಲೇ. ಭಾಷೆ ಮನುಷ್ಯನಿಗೆ ರಕ್ತಗತವಾಗಿಯೋ, ವಂಶವಾಹಿನಿಯಾಗಿಯೋ, ದೈವದತ್ತವಾಗಿಯೋ ಬರುವಂತಹುದಲ್ಲ. ಅದು ಕೇವಲ ಕಲಿಕೆಯಿಂದ ಮತ್ತು ಅಭ್ಯಾಸದಿಂದ ಮಾತ್ರ ಬರುವಂತಹದ್ದು. ಕನ್ನಡ ಭಾಷೆಯ ಬಗೆಗೆ ಹಲವು ಮಹತ್ವದ ಮಾಹಿತಿಗಳು ಇಲ್ಲಿವೆ.



ಭಾಷೆಯೆಂದ ಕೂಡಲೇ ಬರೆಯುವ, ಲಿಪಿಬದ್ಧವಾದ ಭಾಷೆ ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಆದರೆ ಲಿಪಿ ನಿಜವಾದ ಭಾಷೆಯಲ್ಲ, ಆಡುವ ಮಾತೇ ನಿಜವಾದ ಭಾಷೆ. ಲಿಪಿಯಿಲ್ಲದಿರುವ ನೂರಾರು ಭಾಷೆಗಳು ಜಗತ್ತಿನಲ್ಲಿವೆ. ಧ್ವನಿಗಳ ಸಂಕೇತದಿಂದ ಭಾಷೆ ಕೂಡಿರುತ್ತದೆ. ಎಂದರೆ ನಿರ್ದಿಷ್ಟ ಧ್ವನಿಗಳಿಗೆ, ನಿರ್ದಿಷ್ಟ ಅರ್ಥ ಸಂಕೇತವನ್ನು ಭಾಷೆಯಲ್ಲಿ ರೂಢಿಸಿಕೊಂಡಿರುತ್ತಾರೆ. ಎಂದರೆ ಒಂದು ಅರ್ಥಕ್ಕೆ ಒಂದು ನಿರ್ದಿಷ್ಟ ಧ್ವನಿ ಸಮೂಹವನ್ನು ಸಂಕೇತವಾಗಿ ಮಾಡಿಕೊಂಡು, ಬಳಸುತ್ತಿರುತ್ತಾರೆ. ಆ ಧ್ವನಿ ಸಂಕೇತಗಳನ್ನು, ಲಿಪಿಯ ಮೂಲಕ ಹಿಡಿದಿಡಲಾಗುತ್ತದೆ.

12th_Kannada_Reader_1-2.indd 12 22-05-2019 14:19:58

ಭಾಷೆಯನ್ನು ಭಾರತೀಯರು ಬೆಳಕು, ಜ್ಯೋತಿ ಎನ್ನುತ್ತಾರೆ. 'ಭಾಷೆಯೆಂಬ ಬೆಳಕು ಇಲ್ಲದಿದ್ದರೆ ಜಗತ್ತೇ ಕತ್ತಲಲ್ಲಿ ಮುಳುಗಿರುತ್ತಿತ್ತು' ಎಂದು ಸಂಸ್ಕೃತದ ವ್ಯಾಕರಣಕಾರ ಪಾಣಿನಿ ಹೇಳುತ್ತಾನೆ. 'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಅಲ್ಲಮಪ್ರಭುವಿನ ವಚನವೊಂದರ ಸಾಲು ಭಾಷೆಯ ಮಹತ್ವದ ಬಗ್ಗೆ ಗಂಭೀರವಾಗಿ ನಮ್ಮನ್ನು ಚಿಂತಿಸುವಂತೆ ಮಾಡುತ್ತದೆ. ಇಂತಹ ಬದುಕಿಗೆ ಬೆಳಕಾದ, ಮನುಷ್ಯನಿಗೆ ಬಗೆಬಗೆಯಲ್ಲಿ ಉಪಯುಕ್ತವಾಗುವ ಭಾಷೆಯ ಬಗ್ಗೆ ಒಂದು ಸೂತ್ರದಲ್ಲಿ ವಿವರಣೆ ನೀಡುವುದು ಕಷ್ಟ.

ಭಾಷೆ ಮನುಷ್ಯನಿಗೆ ನಿಸರ್ಗದತ್ತವಾಗಿಯೋ, ದೈವದತ್ತವಾಗಿಯೋ, ವಂಶಪಾರಂಪರ್ಯವಾಗಿಯೋ ದೊರೆತದ್ದಲ್ಲ. ಅದು ನಿರಂತರ ಕಲಿಕೆ ಹಾಗೂ ಅಭ್ಯಾಸದ ಮೂಲಕ ಮಾತ್ರ ಸಿದ್ಧಿಸುತ್ತದೆ. 'ನನ್ನ ರಕ್ತದಲ್ಲಿ ತಾಯಿನುಡಿ ಹರಿಯುತ್ತದೆ' ಎಂದು ಭಾವೋದ್ರೇಕದಿಂದ ಹೇಳಿದರೂ, ಭಾಷೆ ರಕ್ತಗತವಾಗಿ ಬರುವಂತಹುದಲ್ಲ. ಉದಾಹರಣೆಗೆ ಕನ್ನಡ ಮಾತನಾಡುವ ತಂದೆತಾಯಿಗಳಿಗೆ ಹುಟ್ಟಿದ ಮಗುವನ್ನು ರಷ್ಯಾದಲ್ಲಿ ಬೆಳೆಸಿದರೆ ಅದು ಅಲ್ಲಿನ ಭಾಷೆಯನ್ನೇ ಕಲಿಯುತ್ತದೆ. ಅದೇ ರೀತಿ ಜರ್ಮನ್ ಮಾತನಾಡುವ ಮಗುವನ್ನು ತಂದು, ಹಿಂದಿ ಮಾತನಾಡುವ ಜನರ ನಡುವೆ ಬೆಳೆಸಿದರೆ ಅದು ಅದನ್ನೇ ಸಹಜವಾಗಿ ಕಲಿಯುತ್ತದೆ! ಬೇರೆ ಬೇರೆ ರಾಷ್ಟ್ರಗಳಿಗೆ ಉದ್ಯೋಗ ನಿಮಿತ್ತ ಹೋಗಿ ನೆಲೆಸುವ ತಂದೆತಾಯಿಗಳ ಮಕ್ಕಳು ಸಹಜವಾಗಿ ಅಲ್ಲಿನ ಭಾಷೆಯನ್ನೇ ಕಲಿಯುತ್ತಾರೆ. ಎಂದರೆ ಭಾಷೆ ಹುಟ್ಟಿನಿಂದ ಬರುವಂತಹುದಲ್ಲ; ಕಲಿಕೆಯಿಂದ ಬರುವಂತಹುದು.

ಪ್ರಾಣಿಗಳಂತೆ ಬದುಕುತ್ತಿದ್ದ ಆದಿಮಾನವನಿಗೆ ಜೀವಕಳೆ ತುಂಬಿ ಆತನನ್ನು ನಾಗರಿಕತೆಯ ಕಡೆಗೆ ಬೆಳೆಸಿ ಚೈತನ್ಯಶೀಲವನ್ನಾಗಿ ರೂಪಿಸಿದ್ದೇ ಭಾಷೆ. ಇದು ಮನುಷ್ಯನನ್ನು ವಿಚಾರವಂತನನ್ನಾಗಿ ಬೆಳೆಸಿತು. ಬುದ್ಧಿಜೀವಿಯಾದ ಮಾನವ ಮಾತ್ರ ಮಾತನಾಡಬಲ್ಲ. ಹಾಕೆಟ್ ಎನ್ನುವ ಪ್ರಸಿದ್ಧ ಭಾಷಾವಿಜ್ಞಾನಿ, 'ಭಾಷೆ ಮನವ ಜನಾಂಗದ ಅತ್ಯಮೂಲ್ಯವಾದ ಏಕೈಕ ಸೊತ್ತು' ಎಂದಿದ್ದಾನೆ! ಪ್ರಪಂಚದಲ್ಲಿ ಸುಮಾರು 7000 ಭಾಷೆಗಳಿವೆಯೆಂದು ವಿದ್ವಾಂಸರು ಗುರುತಿಸಿದ್ದಾರೆ.

ಭಾರತದ ಮೂಲ ನಿವಾಸಿಗಳನ್ನು ದ್ರಾವಿಡರೆಂದೂ, ಅವರು ಮಾತನಾಡುವ ಭಾಷೆಗಳನ್ನು ದ್ರಾವಿಡ ಭಾಷೆಗಳೆಂದೂ ಕರೆಯುತ್ತಾರೆ. ಎಂದರೆ, ಪ್ರಾಚೀನ ಕಾಲದಲ್ಲಿ ಭಾರತಕ್ಕೆ ಆರ್ಯರು ವಲಸೆ ಬರುವುದಕ್ಕಿಂತ ಮುಂಚಿನಿಂದಲೂ ಭಾರತದಲ್ಲಿ ವಾಸಿಸುತ್ತಿದ್ದವರೇ ದ್ರಾವಿಡರು. ಇವರಾಡುವ ಭಾಷೆಗಳಿಗೂ, ಆರ್ಯರ ಸಂಸ್ಕೃತ ಭಾಷೆಗೂ ಮೂಲಭೂತವಾದ ವ್ಯತ್ಯಾಸಗಳಿವೆ. ಕನ್ನಡವು ಮೂಲತಃ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದುದು. ಕನ್ನಡ ಭಾಷೆಯು ಸಂಸ್ಕೃತದಿಂದ ಹುಟ್ಟಿದುದು ಎಂಬ ಅಭಿಪ್ರಾಯ ಹಿಂದೆ ಜನರಲ್ಲಿ ಮನೆ ಮಾಡಿತ್ತು. ಆದರೆ ಭಾಷಾ ವಿಜ್ಞಾನಿಗಳು ಇದು ತಪ್ಪು ಅಭಿಪ್ರಾಯವೆಂದೂ, ಇದು ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದುದು ಎಂಬುದನ್ನೂ ಅಧ್ಯಯನ ಪೂರಕವಾಗಿ ಸಾಬೀತು ಪಡಿಸಿದ್ದಾರೆ. ಬಹುಶಃ ಸಂಸ್ಕೃತವು ಭಾರತದ ಎಲ್ಲ ಭಾರತದ ಭಾಷೆಗಳ ಮೇಲೂ ಹೇರಳವಾದ ಪ್ರಭಾವ ಬೀರಿರುವುದರಿಂದ, ಕನ್ನಡದಲ್ಲಿ ಸಂಸ್ಕೃತ ಅಕ್ಷರಗಳು, ಪದಗಳು ಬಹಳವಾಗಿ ಬೆರೆತು ಹೋಗಿರುವುದ–ರಿಂದ ಈ ಅಭಿಪ್ರಾಯ ಮೂಡಿರಬಹುದು. ದ್ರಾವಿಡ ಭಾಷೆಗಳ ಅಧ್ಯಯನದ ಪಿತಾಮಹ ಎನಿಸಿರುವ ಡಾಕ್ಟರ್ ಕಾಲ್ಡ್‌ವೆಲ್, 'ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ' ಎನ್ನುವ ಕೃತಿಯನ್ನು ರಚಿಸಿ, ದ್ರಾವಿಡ ಭಾಷೆಗಳ ಮಹತ್ವವನ್ನು ತಿಳಿಸಿಕೊಟ್ಟನು.

ಕನ್ನಡ ಭಾಷೆ ತನ್ನ ಪ್ರಾಚೀನತೆ ಹಾಗೂ ಸಾಹಿತ್ಯದ ಸಮೃದ್ಧತೆಯಿಂದಾಗಿ ಶಾಸ್ತ್ರೀಯ ಸ್ಥಾನವನ್ನು ಪಡೆದುಕೊಂಡಿದೆ. ಕನ್ನಡ ಭಾಷೆ ಎಂದಿನಿಂದ ಅಸ್ತಿತ್ವದಲ್ಲಿತ್ತು ಎಂಬ ಬಗ್ಗೆ ಖಚಿತ ಆಧಾರಗಳು ಇಲ್ಲ. ಸಿಕ್ಕಿರುವ ಆಧಾರಗಳ ಮೂಲಕ ಇದು ಸುಮಾರು ಎರಡು ಸಾವಿರ ವರ್ಷಗಳಷ್ಟು ಪ್ರಾಚೀನವಾದುದು ಎಂದು ವಿದ್ವಾಂಸರು ಹೇಳುತ್ತಾರೆ. ಪ್ರಾಚೀನತೆ, ಪ್ರಾದೇಶಿಕ ವಿಸ್ತಾರ, ಸಾಹಿತ್ಯಕ ಮೌಲ್ಯ ಮೊದಲಾದ ಗುಣಗಳಿಂದ ಕನ್ನಡಕ್ಕೆ ವಿಶೇಷ ಸ್ಥಾನಮಾನವಿದೆ.

ಭಾಷೆಯು ಹರಿಯುವ ನದಿಯಂತೆ ನಿರಂತರ ಬದಲಾವಣೆಗಳಿಗೆ ಒಳಗಾಗುತ್ತಲೇ ಇರುತ್ತದೆ. ಎಂದರೆ ಭಾಷೆಯಲ್ಲಿ ಸದಾ ಪರಿವರ್ತನೆಗಳು ನಡೆಯುತ್ತಿರುತ್ತವೆ. ಈ ಪರಿವರ್ತನೆ ಅಪ್ರಜ್ಞಾಪೂರ್ವಕವಾಗಿ ಹಾಗೂ ಸಹಜವಾಗಿ ನಡೆಯುತ್ತದೆಯೇ ಹೊರತು ತಿಳಿದು ನಡೆಯುವುದಿಲ್ಲ. ಈ ಬದಲಾವಣೆಗಳ ಕಾರಣದಿಂದಾಗಿ ಒಂದು ಭಾಷೆಯಲ್ಲಿ ಹಲವು ಉಪಭಾಷೆಗಳು ಹುಟ್ಟಿಕೊಳ್ಳುತ್ತವೆ. ಭಾಷೆಯಲ್ಲಿ ಕಂಡು ಬರುವ ಭಿನ್ನ ಸ್ವರೂಪಗಳೇ ಉಪಭಾಷೆಗಳೆನಿಸುತ್ತವೆ. ಕನ್ನಡದಲ್ಲೂ ಹೀಗೆ ಹಲವು ಉಪಭಾಷೆಗಳು ಕಂಡು ಬರುತ್ತವೆ. ದಾರವಾಢ ಕನ್ನಡ, ಬೆಂಗಳೂರು ಕನ್ನಡ,

12th_Kannada_Reader_1-2.indd 13 22-05-2019 14:19:58

ಮಂಡ್ಯದ ಕನ್ನಡ, ಗುಲ್ಬರ್ಗ ಕನ್ನಡ, ಮಂಗಳೂರು ಕನ್ನಡ, ಹೈದರಾಬಾದ್ ಪ್ರಾಂತ್ಯದ ಕನ್ನಡ ಹೀಗೆ ಹಲವು ಪ್ರಾಂತ್ಯಬೇಧಗಳನ್ನು ಕನ್ನಡ ಭಾಷೆಯಲ್ಲಿ ಕಾಣಬಹುದು. ಇವೆಲ್ಲ ಕನ್ನಡದ ಉಪಭಾಷೆಗಳು.

ಕನ್ನಡ ಭಾಷೆಯನ್ನು ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡಗಳೆಂದು ನಾಲ್ಕು ರೀತಿಯಲ್ಲಿ ವಿಭಾಗ ಮಾಡಲಾಗುವುದು. ಆಯಾ ಕಾಲಕ್ಕೆ ಭಾಷೆಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಆಧರಿಸಿ ಕನ್ನಡ ಭಾಷೆಯನ್ನು ಹೀಗೆ ವಿಭಾಗ ಮಾಡಲಾಗಿದೆ.

ಕನ್ನಡ ಭಾಷೆಯು ಪ್ರಾಚೀನ ಕಾಲದಿಂದಲೂ ಹಲವು ಭಾಷೆಗಳ ಪ್ರಭಾವಕ್ಕೆ ಒಳಗಾಗಿದೆ. ಎಂದರೆ ಆ ಭಾಷೆಯ ಪದಗಳು ಕನ್ನಡದಲ್ಲಿ ಸೇರಿಕೊಂಡಿವೆ. ಪ್ರಾಚೀನ ಕಾಲದಲ್ಲಿ ಪ್ರಾಕೃತ, ಸಂಸ್ಕೃತ ಭಾಷೆಗಳು ಕನ್ನಡದ ಮೇಲೆ ಪ್ರಭಾವ ಬೀರಿವೆ. ಈಗ ಇಂಗ್ಲಿಷ್‌ನ ಪ್ರಭಾವ ಕನ್ನಡದ ಮೇಲೆ ದಟ್ಟವಾಗಿ ಕಂಡು ಬರುತ್ತದೆ. ಇವಷ್ಟೇ ಅಲ್ಲದೆ ಪೋರ್ಚುಗೀಸ್, ಉರ್ದು, ಹಿಂದಿ, ಮರಾಠಿ, ತಮಿಳು, ತೆಲುಗು ಇತ್ಯಾದಿ ಹಲವು ಭಾಷೆಗಳೂ ಕನ್ನಡದ ಮೇಲೆ ಪ್ರಭಾವ ಬೀರಿದೆ. ಹೀಗೆ ಪರಸ್ಪರ ಪ್ರೇರಣೆ, ಪ್ರಭಾವಕ್ಕೊಳಗಾಗುವುದು ಕೂಡ ಭಾಷೆಯ ಸಹಜ ಗುಣ. ಆ ಕಾರಣದಿಂದಲೇ ಭಾಷೆಯನ್ನು ಹರಿಯುವ ನದಿಗೆ ಹೋಲಿಸಲಾಗುವುದು.

ಕೃತಿ–ಕರ್ತೃ ವಿಚಾರ



ಡಾ. ತಮಿಳ್ ಸೆಲ್ವಿ

ಡಾ. ತಮಿಳ್ ಸೆಲ್ವಿ: ಡಾ. ತಮಿಳ್ ಸೆಲ್ವಿಯವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಕನ್ನಡ ಹಾಗೂ ತಮಿಳು ಎರಡೂ ಭಾಷೆಗಳಲ್ಲೂ ಪರಿಣತಿ ಗಳಿಸಿದ್ದಾರೆ. ಹಳಗನ್ನಡ ಕಾವ್ಯಗಳ ವಾಚನದಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದಾರೆ. ತಮಿಳು ಹಾಗೂ ಕನ್ನಡ ಎರಡೂ ಭಾಷೆಗಳ ನಡುವೆ ಸೌಹಾರ್ದ ಸಂಬಂಧ ಬೆಸೆಯುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವೈಚಾರಿಕ ದೃಷ್ಟಿಕೋನ, ಸೃಜನಶೀಲತೆ ಹಾಗೂ ಶೈಕ್ಷಣಿಕ ವಲಯದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಮೂಲಕ ಹೆಸರು ಮಾಡಿದ್ದಾರೆ. 'ಗಂಗರ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಪಿಎಚ್.ಡಿ ಪ್ರಬಂಧವನ್ನು ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. ಇತ್ತೀಚೆಗೆ ತಮಿಳು ಹಾಗೂ ಕನ್ನಡ ಭಾಷೆಗಳ ನಡುವಿನ ಅನನ್ಯತೆಯನ್ನು ಕುರಿತು ಮಾಡಿರುವ ಸಂಶೋಧನಾ ಪ್ರಬಂಧಕ್ಕೆ ಡಿ.ಲಿಟ್., ಪದವಿಯನ್ನೂ ಗಳಿಸಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳ ಹಲವು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಲಿ, ಪರೀಕ್ಷಾ ಮಂಡಲಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ತಮಿಳು ನಾಡು ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸಂಕ್ರಾಂತಿ, ನೇಪಥ್ಯ, ಪಲ್ಲವ–ಚೋಳ ಶಿಲ್ಪಕಲೆ, ಅಶೋಕ ಮಿತ್ರನ್ ಕಥೆಗಳು, ಅನನ್ಯ, ಅವಲೋಕನ ಮೊದಲಾದ ಮುವ್ವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ 'ನಾನು ಅವನಲ್ಲ, ಅವಳು' ಎನ್ನುವ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಪದಗಳ ಅರ್ಥ

ತೌಲನಿಕ–ಹೋಲಿಸುವ, ಒಂದರ ಜೊತೆಗೆ ಇನ್ನೊಂದನ್ನು ಹೋಲಿಸಿ ನೋಡುವ; ಬೌದ್ಧಿಕತೆ–ಬುದ್ಧಿಶಕ್ತಿ; ಲಿಪಿ–ಬರಹ; ಭಾವನೆ–ಅಭಿಪ್ರಾಯ; ಆಡುವ–ನುಡಿಯುವ, ಮಾತನಾಡುವ; ಜ್ಯೋತಿ–ದೀಪ; ನಿಸರ್ಗ–ಪ್ರಕೃತಿ; ದೈವದತ್ತ–ದೇವರಿಂದ ದೊರೆತ; ನಿರಂತರ–ಸದಾ, ಯಾವಾಗಲೂ,

12th_Kannada_Reader_1-2.indd 14 22-05-2019 14:19:58

ಒಂದೇ ಸಮನೆ; ಸೊತ್ತು–ಆಸ್ತಿ; ನಿಮಿತ್ತ–ಕಾರಣ; ಪರಿವರ್ತನೆ–ಬದಲಾವಣೆ; ಅಪ್ರಜ್ಞೆ–ಪ್ರಜ್ಞೆಯಿಲ್ಲದೆ, ತಿಳಿಯದೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಯಾವುದು ನಿಜವಾದ ಭಾಷೆ?
2. ಮನುಷ್ಯನನ್ನು ಇತರ ಜೀವಿಗಳಿಂದ ಪ್ರತ್ಯೇಕಗೊಳಿಸುವುದು ಯಾವುದು?
3. ಧ್ವನಿಗಳು ಯಾವುದರ ಸಂಕೇತವಾಗಿರುತ್ತವೆ?
4. ಭಾಷೆಯನ್ನು ಭಾರತೀಯರು ಏನೆಂದು ಕರೆಯುತ್ತಾರೆ?
5. ಪಾಣಿನಿ ಏನು ಹೇಳುತ್ತಾನೆ?
6. ಕನ್ನಡವು ಹೇಗೆ ಶಾಸ್ತ್ರೀಯ ಸ್ಥಾನ ಪಡೆದುಕೊಂಡಿದೆ?
7. ಕನ್ನಡವು ಎಷ್ಟು ಪ್ರಾಚೀನವಾದುದು?
8. ಕನ್ನಡ ಭಾಷೆಯು ಯಾವ ಭಾಷಾ ಪರಿವಾರಕ್ಕೆ ಸೇರಿದುದು?
9. ದ್ರಾವಿಡ ಭಾಷೆಗಳ ಅಧ್ಯಯನದ ಪಿತಾಮಹ ಯಾರು?
10. ಕಾಲ್ಡ್‌ವೆಲ್ ರಚಿಸಿದ ಕೃತಿಯ ಹೆಸರೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಉಪಭಾಷೆ ಎಂದರೇನು? ಕನ್ನಡದ ಉಪಭಾಷೆಗಳು ಯಾವುವು?
2. ಕನ್ನಡ ಭಾಷೆಯನ್ನು ಎಷ್ಟು ರೀತಿಯಲ್ಲಿ ವಿಂಗಡಿಸಲಾಗಿದೆ. ಏಕೆ?
3. ಕನ್ನಡ ಭಾಷೆಯ ಮೇಲೆ ಯಾವ ಯಾವ ಭಾಷೆಗಳು ಪ್ರಭಾವ ಬೀರಿವೆ. ಏಕೆ?
4. ಕನ್ನಡ ಭಾಷೆಯು ಸಂಸ್ಕೃತದಿಂದ ಜನಿಸಿದ್ದು ಎಂದು ಭಾವಿಸಲು ಕಾರಣವೇನು?

ಆಕಾಶಕ್ಕೆದ್ದು ನಿಂತ.... ನಾವು ಭಾರತೀಯರು


K.S Narasimhaswamy

ಆಕಾಶಕ್ಕೆದ್ದು ನಿಂತ ಪರ್ವತ ಹಿಮ ಮೌನದಲ್ಲಿ
ಕರಾವಳಿಗೆ ಮುತ್ತನಿಡುವ ಬೇರ್ದೆರೆಗಳ ಗಾನದಲ್ಲಿ
ಬಯಲ ತುಂಬ ಹಸಿರ ದೀಪ ಹಚ್ಚಿ ಹರಿವ ನದಿಗಳಲ್ಲಿ
ನೀಲಿಯಲ್ಲಿ ಹೊಗೆಯ ಚೆಲ್ಲಿ ಯಂತ್ರಘೋಷವೇಳುವಲ್ಲಿ
ಕಣ್ಣು ಬೇರೆ ನೋಟವೊಂದು ನಾವು ಭಾರತೀಯರು.

ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ
ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ
ಒಂದೆ ನೆಲದ ತೊಟ್ಟಿಲಲ್ಲಿ ಬೆಳೆದ ನಮ್ಮ ಕೊರಲಿನಲ್ಲಿ
ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ
ಭಾಷೆ ಬೇರೆ ಭಾವವೊಂದು ನಾವು ಭಾರತೀಯರು

ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲೂ ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಎರುವಲ್ಲಿ ಬಿರುಗಾಳಿಯ ಮೊಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ
ಎಲ್ಲೇ ಇರಲಿ ನಾವು ಒಂದು ನಾವು ಭಾರತೀಯರು.

– ಕೆ. ಎಸ್. ನರಸಿಂಹ ಸ್ವಾಮಿ.

12th_Kannada_Reader_1-2.indd 15 22-05-2019 14:19:58

ವ್ಯಾಕರಣ

ಘಟಕ ಒಂದು

ಕನ್ನಡ ವರ್ಣಮಾಲೆ

ಭಾಷೆ

ಮಾನವ ಮಾತನಾಡುವ ಪ್ರಾಣಿ. ಮಾತಿನ ಸಹಾಯದಿಂದ ಅವನು ತನ್ನ ಪ್ರತಿನಿತ್ಯದ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುವುದಕ್ಕೆ ಶಕ್ತನಾಗಿದ್ದಾನೆ. ಮಾನವನ ಬಾಯಿಯಲ್ಲಿ ಗಂಟಲಿನಿಂದ ತುಟಿಯವರೆಗೂ ಹಲವಾರು ಅಂಗಗಳುಂಟು. ಇವು ಧ್ವನಿಗಳನ್ನು ಹೊರಡಿಸುವುದಕ್ಕೆ ಸಹಾಯ ಮಾಡುತ್ತವೆ. ಮಾನವ ಈ ಧ್ವನ್ಯಂಗಗಳಿಂದ ಧ್ವನಿಗಳನ್ನು ಹೊರಡಿಸಿ ಅವುಗಳನ್ನು ಇಷ್ಟ ಬಂದಂತೆ ಜೋಡಿಸಿ ಒಂದು ವ್ಯವಸ್ಥಿತವಾದ ಅರ್ಥಪೂರ್ಣ ರೂಪವನ್ನು ಕೊಡಬಲ್ಲ. ಈ ಮೂಲಕ ಅವನು ತನ್ನ ಪರಿಸರದ ಜನರೊಂದಿಗೆ ವ್ಯವಹರಿಸುತ್ತಾನೆ. ಹೀಗೆ ಇನ್ನೊಬ್ಬರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಪ್ರತಿಕ್ರಿಯೆಯನ್ನು ಪಡೆಯಲು ಸಹಾಯ ಮಾಡುವ ಮಾಧ್ಯಮವೇ ಭಾಷೆ.

ಬರವಣಿಗೆ

ಭಾಷೆಗೆ ಎರಡು ರೂಪಗಳುಂಟು. ಮಾತನಾಡುವಾಗ ಕಿವಿಯಿಂದ ಕೇಳಿಸಿಕೊಳ್ಳುತ್ತೇವೆ. ಇದು ಕೇಳಬಹುದಾದ ರೂಪ. ಇದನ್ನು ಶ್ರವಣ ರೂಪ ಎನ್ನುತ್ತೇವೆ. ಇದೇ ಆಡುಭಾಷೆ. ಮಾತಿನ ಮಹತ್ವದ ಧ್ವನಿಗಳಿಗೆ ಲಿಪಿ ಸಂಕೇತ ಕೊಟ್ಟು ಅವುಗಳ ಸಹಾಯದಿಂದ ಭಾಷೆಯನ್ನು ಬರೆದಿಡುತ್ತೇವೆ. ಇದು ನೋಡಬಹುದಾದ ರೂಪ. ಇದನ್ನು ಚಾಕ್ಷುಷ ರೂಪ ಎನ್ನುತ್ತೇವೆ. ಇದೇ ಬರವಣಿಗೆಯ ಭಾಷೆ. ಆಡುಭಾಷೆಯನ್ನು ಬರೆದಿಡಬಹುದಾದರೂ ಅದು ಶಿಷ್ಟಭಾಷೆಯಾಗುವುದಿಲ್ಲ. ಒಂದು ಭಾಷೆಯನ್ನಾಡುವ ಎಲ್ಲ ಜನರಿಗೂ ಅರ್ಥವಾಗುವಂತಹ ಒಂದು ಸಾಮಾನ್ಯ ಭಾಷೆಯನ್ನೇ ಶಿಷ್ಟ ಭಾಷೆ ಎನ್ನುತ್ತೇವೆ. ಈ ಶಿಷ್ಟಭಾಷೆಯನ್ನೇ ಬರವಣಿಗೆಯ ರೂಪದಲ್ಲಿ ಎಲ್ಲೆಡೆ, ಮುಖ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಬಳಸುತ್ತೇವೆ. ಭಾಷೆಯನ್ನು ವಿವರಿಸುವ ಶಾಸ್ತ್ರವನ್ನು ವ್ಯಾಕರಣವೆಂದೂ, ಈಚಿನ ದಿನಗಳಲ್ಲಿ ಭಾಷಾಶಾಸ್ತ್ರವೆಂದೂ ಕರೆಯುತ್ತೇವೆ.

ಕನ್ನಡ ವರ್ಣಮಾಲೆ

ರೂಢಿಯಲ್ಲಿರುವ ಒಟ್ಟು ಕನ್ನಡ ಅಕ್ಷರಗಳು – 49

ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳನ್ನು ಹೀಗೆ ಗುರುತಿಸಬಹುದು.

ಅ	ಆ	ಇ	ಈ	ಉ	ಊ	ಋ	ಎ	ಏ	ಐ	ಒ	ಓ	ಔ	ಅಂ	ಅಃ
ಕ		ಖ		ಗ		ಘ	ಙ							
ಚ		ಛ		ಜ		ಝ	ಞ							
ಟ		ಠ		ಡ		ಢ	ಣ							
ತ		ಥ		ದ		ಧ	ನ							
ಪ		ಫ		ಬ		ಭ	ಮ							
ಯ		ರ		ಲ		ವ	ಶ	ಷ		ಸ		ಹ		ಳ

12th_Kannada_Reader_1-2.indd 16 22-05-2019 14:19:58

ವರ್ಣಮಾಲೆಯ ವಿಭಾಗಗಳು

ಕನ್ನಡ ವರ್ಣಮಾಲೆಯನ್ನು ಸ್ವರಗಳು, ವ್ಯಂಜನಗಳು, ಯೋಗವಾಹಗಳು ಎಂದು ಮೂರು ಭಾಗಗಳಾಗಿ ವಿಭಾಗಿಸಬಹುದು.

ಸ್ವರಗಳು

ಸ್ವತಂತ್ರವಾಗಿ ಉಚ್ಚಾರ ಮಾಡುವ ಅಕ್ಷರಗಳನ್ನು ಸ್ವರಗಳು ಎನ್ನುತ್ತೇವೆ. ಕನ್ನಡ ವರ್ಣಮಾಲೆಯಲ್ಲಿ 13 ಸ್ವರಗಳಿವೆ. ಅವು:

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

'ಐ'(ಅ+ಯ್) ಮತ್ತು ಔ(ಅ+ವ್) ಧ್ವನಿಯನ್ನು ಸಂಧ್ಯಕ್ಷರಗಳೆಂದೂ ಗುರುತಿಸುತ್ತಾರೆ. ಸ್ವರಗಳಲ್ಲಿ ಹ್ರಸ್ವಸ್ವರ, ದೀರ್ಘಸ್ವರ, ಪ್ಲುತ ಸ್ವರ ಎಂದು ಮೂರು ವಿಧಗಳುಂಟು.

1. ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹ್ರಸ್ವ ಸ್ವರ ಎಂದು ಹೆಸರು(ಉದಾಹರಣೆಗೆ, 'ಅ' ಎನ್ನುವ ಒಂದು ಅಕ್ಷರವನ್ನು ಉಚ್ಚರಿಸುವ ಕಾಲಕ್ಕೆ ಒಂದು ಮಾತ್ರಾ ಕಾಲ ಎಂದು ಹೆಸರು). ಕನ್ನಡದಲ್ಲಿ ಆರು ಹ್ರಸ್ವ ಸ್ವರಗಳಿವೆ. ಅವು, ಅ,ಇ,ಉ,ಋ,ಎ,ಒ.

2. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ದೀರ್ಘ ಸ್ವರ ಎಂದು ಹೆಸರು. ಕನ್ನಡದಲ್ಲಿ ಏಳು ದೀರ್ಘ ಸ್ವರಗಳಿವೆ. ಅವು, ಆ, ಈ, ಊ, ಏ, ಐ, ಓ, ಔ.

3. ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸಲಾಗುವ ಸ್ವರಗಳನ್ನು ಪ್ಲುತ ಎನ್ನುತ್ತಾರೆ. ಉದಾಹರಣೆಗೆ, ಅಮ್ಮಾ$_{3}$..., ದೇವರೇ$_{3}$... ಕೊನೆಯ ಸ್ವರವನ್ನು ಎಳೆದು ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸುವುದರಿಂದ ಇವು ಪ್ಲುತ ಎನ್ನಿಸುವುವು.

ವ್ಯಂಜನಗಳು

ಸ್ವರಗಳ ಸಹಾಯದಿಂದ ಉಚ್ಚಾರ ಮಾಡಲಾಗುವ ಅಕ್ಷರಗಳಿಗೆ ವ್ಯಂಜನಗಳೆಂದು ಹೆಸರು. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಮುವ್ವತ್ನಾಲ್ಕು ವ್ಯಂಜನಾಕ್ಷರಗಳಿವೆ ಅವು:

ಕ್ ಖ್ ಗ್ ಘ್ ಙ್

ಚ್ ಛ್ ಜ್ ಝ್ ಞ್

ಟ್ ಠ್ ಡ್ ಢ್ ಣ್

ತ್ ಥ್ ದ್ ಧ್ ನ್

ಪ್ ಫ್ ಬ್ ಭ್ ಮ್

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

ವ್ಯಂಜನಗಳಲ್ಲಿ ವರ್ಗೀಯ ವ್ಯಂಜನ, ಅವರ್ಗೀಯ ವ್ಯಂಜನ ಎಂದು ಎರಡು ವಿಧಗಳಿವೆ.

12th_Kannada_Reader_1-2.indd 17 22-05-2019 14:19:58

1. ವರ್ಗೀಯ ವ್ಯಂಜನಗಳು

ಕ್ ನಿಂದ ಮ್ ವರೆಗಿನ 25 ಅಕ್ಷರಗಳನ್ನು ವರ್ಗೀಯ ವ್ಯಂಜನಗಳು ಎನ್ನುವರು. ಇಲ್ಲಿ 5 ವರ್ಗಗಳಿವೆ. ಪ್ರತಿ ವರ್ಗದಲ್ಲಿಯೂ ತಲಾ ಐದೈದು ಅಕ್ಷರಗಳಿವೆ. ಆಯಾ ವರ್ಗದ ಮೊದಲನೇ ಅಕ್ಷರದಿಂದಲೇ ವರ್ಗಗಳನ್ನು ಹೆಸರಿಸಲಾಗಿದೆ.

ವರ್ಗಗಳು	ಅಲ್ಪಪ್ರಾಣ	ಮಹಾಪ್ರಾಣ	ಅನುನಾಸಿಕ	ಅಕ್ಷರ ಸಂಖ್ಯೆ
ಕವರ್ಗ	ಕ್	ಖ್	ಗ್	ಘ್	ಙ್	5
ಚವರ್ಗ	ಚ್	ಛ್	ಜ್	ಝ್	ಞ್	5
ಟವರ್ಗ	ಟ್	ಠ್	ಡ್	ಢ್	ಣ್	5
ತವರ್ಗ	ತ್	ಥ್	ದ್	ಧ್	ನ್	5
ಪವರ್ಗ	ಪ್	ಫ್	ಬ್	ಭ್	ಮ್	5
				ಒಟ್ಟು ಸಂಖ್ಯೆ		**25**

ಅಕ್ಷರಗಳನ್ನು ಉಚ್ಚರಿಸುವಾಗ ಅವುಗಳು ಎಲ್ಲೆಲ್ಲಿ ಹುಟ್ಟುತ್ತವೆ ಎಂಬುದರ ಆಧಾರದ ಮೇಲೆ ವರ್ಗೀಯ ವ್ಯಂಜನಗಳನ್ನು ವಿಭಾಗಿಸಲಾಗಿದೆ. ಅವುಗಳನ್ನು ಗಮನಿಸಿ.

1. **ಕ ಖ ಗ ಘ ಙ** – ಇವುಗಳು ಕಂಠದಲ್ಲಿ ಹುಟ್ಟುತ್ತವಾದ್ದರಿಂದ ಇವುಗಳು ಕಂಠ್ಯಾಕ್ಷರಗಳು.

2. **ಚ ಛ ಜ ಝ ಞ** – ಇವುಗಳು ತಾಲುವಿನಲ್ಲಿ ಹುಟ್ಟುತ್ತವೆ. ಹಾಗಾಗಿ ಇವು ತಾಲವ್ಯ ಅಕ್ಷರಗಳು.

3. **ಟ ಠ ಡ ಢ ಣ** – ಇವುಗಳು ಹುಟ್ಟುವ ಸ್ಥಳ ಮೂರ್ಧ. ಎಂದರೆ ಬಾಯಿಯ ಮೇಲ್ಭಾಗ. ನಾಲಿಗೆಯನ್ನು ಮಡಚಿ ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿ ಈ ಅಕ್ಷರಗಳನ್ನು ಉಚ್ಚರಿಸಲಾಗುತ್ತದೆ. ಹಾಗಾಗಿ ಇವು ಮೂರ್ಧನ್ಯ ಅಕ್ಷರಗಳು.

4. **ತ ಥ ದ ಧ ನ** – ಇವುಗಳು ಹುಟ್ಟುವ ಸ್ಥಳ ಹಲ್ಲುಗಳ ಬಳಿ. ಹಾಗಾಗಿ ಇವು ದಂತ್ಯಾಕ್ಷರಗಳು.

5. **ಪ ಫ ಬ ಭ ಮ** – ಇವುಗಳು ತುಟಿಗಳ ಸಹಾಯದಿಂದ ಉಚ್ಚರಿಸಲ್ಪಡುವುದರಿಂದ ಇವುಗಳನ್ನು ಓಷ್ಠ್ಯ ಅಕ್ಷರಗಳೆಂದು ಕರೆಯಲಾಗುವುದು.

ವರ್ಗೀಯ ವ್ಯಂಜನಗಳಲ್ಲಿ 'ಅಲ್ಪ ಪ್ರಾಣ', 'ಮಹಾಪ್ರಾಣ' ಮತ್ತು 'ಅನುನಾಸಿಕ'ಗಳೆಂದು ಮೂರು ಬಗೆಗಳಿವೆ.

1. ಅಲ್ಪಪ್ರಾಣ : ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.
   ಅವು : ಕ್ ಚ್ ಟ್ ತ್ ಪ್ ಗ್ ಜ್ ಡ್ ದ್ ಬ್

2. ಮಹಾಪ್ರಾಣ : ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.
   ಅವು : ಖ್ ಛ್ ಠ್ ಥ್ ಫ್ ಘ್ ಝ್ ಢ್ ಧ್ ಭ್

3. ಅನುನಾಸಿಕ : ಮೂಗಿನ ಸಹಾಯದಿಂದ ಉಚ್ಚರಿಸುವ ವ್ಯಂಜನಾಕ್ಷರಗಳು.
   ಅವು : ಙ್ ಞ್ ಣ್ ನ್ ಮ್

   ವರ್ಗೀಯ ವ್ಯಂಜನಗಳ ಒಟ್ಟು ಸಂಖ್ಯೆ = 25.

12th_Kannada_Reader_1-2.indd 18 22-05-2019 14:19:58

2. ಅವರ್ಗೀಯ ವ್ಯಂಜನಗಳು

ಯ್ ನಿಂದ ಳ್ ವರೆಗಿನ ಒಂಭತ್ತು ಅಕ್ಷರಗಳು ಅವರ್ಗೀಯ ವ್ಯಂಜನಗಳು.

ಅವು: ಯ್ ರ್ ಲ್ ವ್ ಶ್ ಷ್ ಸ್ ಹ್.

3. ಯೋಗವಾಹಗಳು

ಯಾವುದಾದರೂ ಒಂದು ಅಕ್ಷರ ಸಂಬಂಧದಿಂದಲೇ ಉಚ್ಚರಿಸಲ್ಪಡುವುವು ಯೋಗವಾಹಕಗಳು ಎನಿಸುತ್ತವೆ. ಇವುಗಳಿಗೆ ಸ್ವತಂತ್ರವಾದ ಉಚ್ಚಾರವಿಲ್ಲ. 'ಯೋಗ' ಎಂದರೆ, ಸಂಬಂಧ; 'ವಾಹ' ಎಂದರೆ ಹೊಂದಿದ ಎಂದು ಅರ್ಥ.

1. ಅನುಸ್ವಾರ = ಂ.

2. ವಿಸರ್ಗ = ಃ

ಅನುಸ್ವಾರ ಹಾಗೂ ವಿಸರ್ಗಗಳು ಸ್ವರ ಸಂಬಂಧ ಪಡೆದು ಉಚ್ಚಾರಣೆಗೊಳ್ಳುತ್ತವೆ. ಇದರಿಂದ ಅನುಸ್ವಾರ ವಿಸರ್ಗಗಳನ್ನು ಅಕಾರದ ಮುಂದೆ ಬರೆಯುವುದು ವಾಡಿಕೆಯಾಗಿದೆ. ಉದಾಹರಣೆಗೆ ಅಂ, ಅಃ.

ಕನ್ನಡದ ವರ್ಣಮಾಲೆ					
ಸ್ವರಗಳು		ವ್ಯಂಜನಗಳು		ಯೋಗವಾಹಕಗಳು	
ಹ್ರಸ್ವಸ್ವರ 6	ದೀರ್ಘಸ್ವರ 7	ವರ್ಗೀಯ 25	ಅವರ್ಗೀಯ 9	ಅನುಸ್ವಾರ 1	ವಿಸರ್ಗ 1
ಅ ಇ ಉ ಋ ಎ ಒ	ಆ ಈ ಊ ಏ ಐ ಓ	ಕವರ್ಗ ಚವರ್ಗ ಟವರ್ಗ ತವರ್ಗ ಪವರ್ಗ	ಯ ರ ಲ ವ ಶ ಷ ಸ ಹ ಳ	ಂ	ಃ

ಒಟ್ಟು ಅಕ್ಷರಗಳು		
ಕ್ರಮಸಂಖ್ಯೆ	ವಿಭಾಗ	ಅಕ್ಷರ ಸಂಖ್ಯೆ
1	ಸ್ವರಗಳು (6+7)	13
2	ವ್ಯಂಜನಗಳು (25+9)	34
3	ಯೋಗವಾಹಗಳು (1+1)	2
	ಕನ್ನಡ ವರ್ಣಮಾಲೆಯ ಒಟ್ಟು ಅಕ್ಷರಗಳು	49

12th_Kannada_Reader_1-2.indd 19 22-05-2019 14:19:58

ಗುಣಿತಾಕ್ಷರಗಳು	
ವ್ಯಂಜನಗಳಿಗೆ ಸ್ವರಗಳು ಸೇರಿದಾಗ ಗುಣಿತಾಕ್ಷರಗಳು ಎನಿಸುವುವು	
ಕ್ರಮಸಂಖ್ಯೆ	ವ್ಯಂಜನ + ಸ್ವರ = ಗುಣಿತಾಕ್ಷರ
1	ಕ್ + ಅ = ಕ
2	ಕ್ + ಆ = ಕಾ
3	ಕ್ + ಇ = ಕಿ
4	ಕ್ + ಈ = ಕೀ
5	ಕ್ + ಉ = ಕು
6	ಕ್ + ಊ = ಕೂ
7	ಕ್ + ಋ = ಕೃ
8	ಕ್ + ಎ = ಕೆ
9	ಕ್ + ಏ = ಕೇ
10	ಕ್ + ಐ = ಕೈ
11	ಕ್ + ಒ = ಕೊ
12	ಕ್ + ಓ = ಕೋ
13	ಕ್ + ಔ = ಕೌ

ವರ್ಣಮಾಲೆಯಲ್ಲಿ ಮೊದಲು ಕ್ ವ್ಯಂಜನಕ್ಕೆ ಸ್ವರಗಳನ್ನು ಸೇರಿಸುವ ಪ್ರಕ್ರಿಯೆಯು ಆರಂಭವಾಗುವುದರಿಂದ ಕಾಗುಣಿತ ಎಂದು ಇದನ್ನು ಕರೆಯುವುದು ರೂಢಿಗೆ ಬಂತು.

ನಾವು ವರ್ಣಮಾಲೆಯಲ್ಲಿ ಕಾಣುವ ವ್ಯಂಜನಾಕ್ಷರಗಳು ಸ್ವರಗಳೊಡನೆ ಕೂಡಿವೆ. ಉದಾಹರಣೆಗೆ :

ಕ	=	ಕ್	+	ಅ	ಚ	=	ಚ್	+ ಅ
ಖ	=	ಖ್	+	ಅ	ಛ	=	ಛ್	+ ಅ
ಗ	=	ಗ್	+	ಅ	ಜ	=	ಜ್	+ ಅ
ಘ	=	ಘ್	+	ಅ	ಝ	=	ಝ್	+ ಅ
ಙ	=	ಙ್	+	ಅ	ಞ	=	ಞ್	+ ಅ

ಅವರ್ಗೀಯ ವ್ಯಂಜನಗಳೂ ಕೂಡ ಸ್ವರ ಸಹಿತವಾಗಿವೆ:

ಯ=ಯ್+ಅ; ರ=ರ್+ಅ; ಲ=ಲ್+ಅ; ವ=ವ್+ಅ; ಶ=ಶ್+ಅ; ಷ=ಷ್+ಅ; ಸ=ಸ್+ಅ; ಹ=ಹ್+ಅ; ಳ=ಳ್+ಅ.

ಕಾಗುಣಿತ ಮಾಲೆಯಲ್ಲಿ, 25 ವರ್ಗೀಯ ವ್ಯಂಜನಗಳಿಗೂ 9 ಅವರ್ಗೀಯ ವ್ಯಂಜನಗಳಿಗೂ (ಒಟ್ಟು 34 ವ್ಯಂಜನಗಳಿಗೂ) 13 ಸ್ವರಗಳನ್ನು ಸೇರಿಸಿ ಹೊಸ ಅಕ್ಷರಗಳನ್ನು ರೂಪಿಸಿಕೊಳ್ಳುತ್ತೇವೆ.

12th_Kannada_Reader_1-2.indd 20 22-05-2019 14:19:59

ಸಂಯುಕ್ತಾಕ್ಷರಗಳು

ಎರಡು ಅಥವಾ ಹೆಚ್ಚು ಅಕ್ಷರಗಳು ಕಾಲ ವಿಳಂಬವಿಲ್ಲದೆ ಕೂಡಿದಾಗ ಸಂಯುಕ್ತಾಕ್ಷರಗಳೆನಿಸುವುವು. ಉದಾಹರಣೆಗೆ : **ಕನ್ನಡ, ಅಣ್ಣ, ವಸ್ತ್ರ** – ಈ ಪದಗಳನ್ನು ನೋಡಿ. ಈ ಅಕ್ಷರಗಳಲ್ಲಿ ವ್ಯಂಜನಗಳು ಸೇರಿರುವುದನ್ನು ಗಮನಿಸಿ.

ನ್ನ = ನ್ + ನ್ + ಅ
ಣ್ಣ = ಣ್ + ಣ್ + ಅ
ಸ್ತ್ರ = ಸ್ + ತ್ + ರ್ + ಅ

ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಹಾಗೂ ವಿಜಾತೀಯ ಸಂಯುಕ್ತಾಕ್ಷರ ಎಂದು ಎರಡು ವಿಧ.

1. ಸಜಾತೀಯ ಸಂಯುಕ್ತಾಕ್ಷರ

ಒಂದು ವ್ಯಂಜನಾಕ್ಷರಕ್ಕೆ ಅದೇ ವ್ಯಂಜನಾಕ್ಷರ ಸೇರಿ ಆಗುವ ಅಕ್ಷರವು 'ಸಜಾತೀಯ ಸಂಯುಕ್ತಾಕ್ಷರ' ಎನ್ನಿಸುವುದು. ಇದನ್ನು 'ದ್ವಿತ್ವ' ಎಂದೂ ಕರೆಯಲಾಗುವುದು. ಉದಾಹರಣೆಗೆ:

ಅಕ್ಕ = ಕ್ + ಕ್ + ಅ
ಅಜ್ಜ = ಜ್ + ಜ್ + ಅ
ಹುತ್ತ = ತ್ + ತ್ + ಅ
ಬಣ್ಣ = ಣ್ + ಣ್ + ಅ
ಅಯ್ಯ = ಯ್ + ಯ್ + ಅ
ಅಮ್ಮ = ಮ್ + ಮ್ + ಅ

2. ವಿಜಾತೀಯ ಸಂಯುಕ್ತಾಕ್ಷರ

ಒಂದು ವ್ಯಂಜನಾಕ್ಷರಕ್ಕೆ ಬೇರೆಯ ಒಂದು ಅಥವಾ ಅದಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳು ಸೇರಿ ಆಗುವ ಅಕ್ಷರಗಳು ವಿಜಾತೀಯ ಸಂಯುಕ್ತಾಕ್ಷರಗಳು ಎನ್ನಿಸುವುವು. ಉದಾಹರಣೆಗೆ:

ಅಕ್ಷರ – ಕ್ + ಷ್ + ಅ = ಕ್ಷ
ಭಕ್ತಿ – ಕ್ + ತ್ = ಇ = ಕ್ತಿ
ಸ್ವಾರ್ಥಿ – ಸ್ + ವ್ + ಆ, ರ್ + ಥ್ + ಇ = ಸ್ವಾರ್ಥಿ
ಶಾಸ್ತ್ರ – ಸ್ + ತ್ + ರ್ + ಅ = ಸ್ತ್ರ

ಪದನಱಿದು ನುಡಿಯಲುಂ ನುಡಿದುದ
ನಱಿಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋದದೆಯುಂ
ಕಾವ್ಯಪ್ರಯೋಗ ಪರಿಣತಮತಿಗಳ್

12th_Kannada_Reader_1-2.indd 21 22-05-2019 14:19:59

ಘಟಕ
ಎರಡು

2. ಶಿಕ್ಷಣ



ಕಾವ್ಯ ಕಣಜ	:	ವಚನಗಳು	–	ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ
ಗದ್ಯ ವಿಹಾರ	:	ಕಾವ್ಯಾಲಾಪ	–	ಡಾ. ಜಿ.ಎಸ್. ಶಿವರುದ್ರಪ್ಪ
ಉಪಪಠ್ಯ	:	ಮಗು ಕಲಿಸಿದ ಪಾಠ	–	ತಿರುಮಲೆ ರಾಜಮ್ಮ
ವ್ಯಾಕರಣ	:	ನಾಮಪದಗಳು		

12th_Kannada_Reader_1-2.indd 22 22-05-2019 14:19:59

ಘಟಕ ಎರಡು

ವಚನಗಳು



ಸಜ್ಜನರ ಸಂಗ ಸತ್ವಪೂರ್ಣವಾದುದು. ಹೃದಯ ಪರಿಶುದ್ಧವಲ್ಲದವರ ಸಂಗ ಬೇಡ. ಗಿಳಿಯು ಎಷ್ಟೇ ಶಾಸ್ತ್ರಪಠಣ ಮಾಡಿದರೂ ಬೆಕ್ಕು ತನ್ನ ಮೇಲೆರಗುವುದನ್ನು ಅದು ತಿಳಿದಿರುವುದಿಲ್ಲ. ಗೀತೆ ಶಾಸ್ತ್ರ ಪುರಾಣ ವೇದಾಂತವನ್ನು ಓದಿದರೇನು? ಬುದ್ಧಿವಂತನಾದರೂ ಭಕ್ತಿಯಿಲ್ಲದವರನ್ನು ಕೂಡಲ ಸಂಗಮದೇವ ಮೆಚ್ಚುವುದಿಲ್ಲ ಎಂದು ಬಸವಣ್ಣನವರು ತಿಳಿಸುತ್ತಾರೆ.

ಗುರುವಿನ ಆಶೀರ್ವಾದ ನಮಗೆ ಇದ್ದರೆ ನಮ್ಮ ಎಲ್ಲಾ ತಪ್ಪುಗಳನ್ನೂ ತಿದ್ದಿ ಸನ್ಮಾರ್ಗದಲ್ಲಿ ನಡೆಸುತ್ತಾರೆ. ನಮ್ಮ ದೇಹ ಪ್ರಾಣ ಭಾವದಲಿ ನಮ್ಮ ಜೀವನದುದ್ದಕ್ಕೂ ನಮ್ಮ ಜೊತೆಯಲ್ಲಿದ್ದು ನಮ್ಮ ಜನ್ಮವನ್ನು ಸಾರ್ಥಕ ಪಡಿಸುತ್ತಾರೆ. ಗುರುವಿನ ಕರದಲ್ಲಿರುವ ಶಿಷ್ಯನಿಗೆ ಯಾವುದೇ ಭಯವಿಲ್ಲ ಎನ್ನುತ್ತಾರೆ ಅಲ್ಲಮ ಪ್ರಭುಗಳು.

ಗುರುವಿನ ಕರುಣೆಯಿಂದ ಒಳ್ಳೆಯವರ ಸಂಗ ಮಾಡಿದರೆ ಬೆಣ್ಣೆಯಂತಿರುತ್ತದೆ. ಗುರುವಿನ ಕರುಣೆಯಿಂದ ಲಿಂಗ, ಜಂಗಮ, ಸಾರೋದಕ, ಸಜ್ಜನ ಉಪನ್ಯಾಸ ಕೇಳಿದೆ. ಮಾನವ ಜನ್ಮದಿಂದ ಬಿಡುಗಡೆ ಹೊಂದಿ ಭಕ್ತಳನ್ನಾಗಿ ಮಾಡಿದ ಗುರುವಿಗೆ ಶರಣು, ಲೋಕದ ಕ್ರಿಯೆಗೆ ರವಿ ಮೂಲವಾದಂತೆ ನನಗೆ ಚನ್ನಮಲ್ಲಿಕಾರ್ಜುನನೇ ಸರ್ವಸ್ವ ಎಂದು ಅಕ್ಕಮಹಾದೇವಿ ಹೇಳುತ್ತಾಳೆ.



12th_Kannada_Reader_1-2.indd 23 22-05-2019 14:19:59

ಬಸವಣ್ಣನವರ ವಚನಗಳು

ಸಾರ ಸಜ್ಜನರ ಸಂಗ ಲೇಸು ಕಂಡಯ್ಯ
ದೂರ ದುರ್ಜನರ ಸಂಗವದು ಭಂಗವಯ್ಯ
ಸಂಗವೆರಡುಂಟು ಒಂದು ಬಿಡು ಒಂದು ಹಿಡಿ
ಮಂಗಳ ಮೂರ್ತಿ ನಮ್ಮ ಕೂಡಲ ಸಂಗನ ಶರಣ ||

ಗಿಳಿಯೋದಿ ಫಲವೇನು ? ಬೆಕ್ಕು ಬಹುದು ಹೇಳಲರಿಯದು
ಜಗವೆಲ್ಲ ಕಾಂಬ ಕಣ್ಣು ತನ್ನ ಕೊಂಬ ಕೊಯಿಲೆಯ ಕಾಣಲರಿಯದು
ಇದಿರಿ ಗುಣವ ಬಲ್ಲೆವೆಂಬರು
ತಮ್ಮ ಗುಣವನರಿಯರಾ ಕೂಡಲಸಂಗಮದೇವಾ ||

ಗೀತವ ಹಾಡಿದಡೇನು? ಶಾಸ್ತ್ರ ಪುರಾಣವ ಕೇಳಿದಡೇನು ?
ವೇದ ವೇದಾಂತವನೋದಿದಡೇನು ?
ಮನವೊಲಿದು ಲಿಂಗ ಜಂಗಮವ ಪೂಜಿಸಲರಿಯದವರು
ಎಲ್ಲ ಬಲ್ಲ ಅನುಭಾವಿಯಾದೊಡೇನು
ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ ||

ಅಲ್ಲಮಪ್ರಭುವಿನ ವಚನಗಳು

ಅಯ್ಯಾ! ನೀನೆನಗೆ ಗುರುವಪ್ಪಡೆ
ನಾ ನಿನಗೆ ಶಿಷ್ಯನಪ್ಪಡೆ
ಎನ್ನ ಕರಣಾದಿ ಗುಣಂಗಳ ಕಳೆದು
ಎನ್ನ ಕಾಯದ ಕರ್ಮವ ತೊಡೆದು
ಎನ್ನ ಪ್ರಾಣನ ಧರ್ಮವ ನಿಲ್ಲಿಸಿ
ನೀನೆನ್ನ ಕಾಯದಲಡಗಿ
ನೀನೆನ್ನ ಭಾವದಲಡಗಿ
ನೀನೆನ್ನ ಕರಸ್ಥಲಕ್ಕೆ ಬಂದು
ಕಾರುಣ್ಯವ ಮಾಡು ಗುಹೇಶ್ವರ ||

12th_Kannada_Reader_1-2.indd 24 22-05-2019 14:19:59

ಕಸ್ತೂರಿಯ ಮೃಗ ಬಂದು ಸುಳಿಯಿತ್ತಯ್ಯಾ
ಸಕಲ ವಿಸ್ತಾರದ ರೂಹು ಬಂದು ನಿಂದಿತ್ತಯ್ಯಾ
ಆವ ಗ್ರಹ ಬಂದು ಸೋಂಕಿತ್ತೆಂದಱಿಯೆನಯ್ಯಾ
ಆವ ಗ್ರಹ ಬಂದು ಹಿಡಿಯಿತ್ತೆಂದಱಿಯೆನಯ್ಯಾ
ಹೃದಯ ಕಮಲ ಮಧ್ಯದಲ್ಲಿ
ಗುರುವನಱಿದು ಪೂಜಿಸಿ
ಗುರು ವಿಖ್ಯಾತನೆಂಬುದು ನಾನಱಿದೆನಯ್ಯಾ
ಗುರು ಗುಹೇಶ್ವರನಲ್ಲಿ ಹಿಂದಣ ಹುಟ್ಟಱಿತು ಹೋದುದ ಕಂಡೆನಯ್ಯಾ ||

ಜ್ಯೋತಿಯೊಳಗಣ ಕರ್ಪೂರಕ್ಕೆ
ಅಪ್ಪುವಿನೊಳಗಿಪ್ಪ ಉಪ್ಪಿಂಗೆ
ಶ್ರೀಗುರುವಿನ ಹಸ್ತದೊಳಗಿಪ್ಪ ಶಿಷ್ಯರಿಗೆ
ಈ ಮೂರಕ್ಕೆಯೂ
ಬೇಱೆ ಕ್ರಿಯಾ ವರ್ತನೆಯುಂಟೆ ಗುಹೇಶ್ವರ ||

ಅಕ್ಕಮಹಾದೇವಿಯ ವಚನಗಳು

ಅರಿಯದವರೊಡನೆ ಸಂಗ ಮಾಡಿದರೆ
ಕಲ್ಲು ಹೊಯ್ದು ಕಿಡಿಯ ತೆಗೆದು ಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದರೆ
ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸಂಗ
ಕರ್ಪೂರ ಗಿರಿಯ ಉರಿಕೊಂಬಂತೆ ||

ಎನ್ನ ಮಾಯದ ಮದವ ಮುರಿಯಯ್ಯಾ
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಜೀವದ ಜಂಜಡವ ಮಾಣಿಸಯ್ಯಾ
ಎನ್ನ ಜೀವ ಚನ್ನಮಲ್ಲಿಕಾರ್ಜುನ
ಎನ್ನ ಸುತ್ತಿದ ಪ್ರಪಂಚ ಬಿಡಿಸು ನಿನ್ನ ಧರ್ಮ ||

12th_Kannada_Reader_1-2.indd 25 22-05-2019 14:19:59

ನರ ಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ
ಭವ ಬಂಧನವ ಬಿಡಿಸಿ ಪರಮಸುಖ ತೋರಿದ ಗುರುವೇ
ಭವ ಎಂಬುದು ತೊಡೆದು ಭಕ್ತಿ ಎಂದೆನಿಸಿದ ಗುರುವೇ
ಚನ್ನಮಲ್ಲಿಕಾರ್ಜುನನನ್ನು ಕೈ ವಶಕ್ಕೆ ಕೊಟ್ಟ ಗುರುವೇ ಶರಣು ||

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕಂಗಳ ಚೇಷ್ಟೆಗೆ ಮನವೇ ಬೀಜ
ಎನಗುಳ್ಳದೊಂದು ಮನ ಆ ಮನ ನಿಮ್ಮಲ್ಲಿ
ಒಡವೆಂದ ಬಳಿಕ ಎನಗೆ ಭಯವುಂಟೆ
ಚನ್ನಮಲ್ಲಿಕಾರ್ಜುನ ||

ಕವಿ ಕಾವ್ಯ ಪರಿಚಯ

ಬಸವಣ್ಣ

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಎಂಬ ಹೊಸ ಸಾಹಿತ್ಯ ಕ್ರಾಂತಿಯನ್ನು ಆರಂಭಿಸಿದವರು ವಚನಕಾರರು.

ಬಸವಣ್ಣನವರು ಬಸವನ ಬಾಗೇವಾಡಿಯಲ್ಲಿ ಮಾದರಸ ಮಾದಲಾಂಬಿಕೆಯರ ಮಗನಾಗಿ ಜನಿಸಿದರು. ಬಿಜ್ಜಳ ರಾಜನ ಆಸ್ಥಾನದಲ್ಲಿ ಭಂಡಾರಿಯಾಗಿದ್ದರು. ಕೂಡಲ ಸಂಗಮದೇವ ಎಂಬುದು ಇವರ ಅಂಕಿತ ನಾಮ.

ಅಲ್ಲಮ ಪ್ರಭು

ಬನವಾಸಿಯ ಬಳ್ಳಿಗಾವೆ ಎಂಬ ಊರಿನಲ್ಲಿ ನಿರಹಂಕಾರ ಮತ್ತು ಸುಜ್ಞಾನ ದೇವಿಗೆ ಮಗನಾಗಿ ಇವರು ಜನಿಸಿದರು. ಕೋಡಿ ಮಠದ ವಿದ್ಯಾಭರಣ ಪಂಡಿತರ ಶಿಷ್ಯರಾದರು. ಇವರ ವಚನಾಂಕಿತ ಗುಹೇಶ್ವರ.

ಅಕ್ಕಮಹಾದೇವಿ

ಅಕ್ಕಮಹಾದೇವಿ ಒಬ್ಬ ಸುಪ್ರಸಿದ್ಧ ಶಿವಶರಣೆ. ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬ ಗ್ರಾಮ ಈಕೆಯ ಜನ್ಮಸ್ಥಳ. ನಿರ್ಮಲ ಶೆಟ್ಟಿ ಮತ್ತು ಸುಮತಿಯರು ಇವರ ತಂದೆತಾಯಿಗಳು. ಈಕೆಯ ಅಂಕಿತ ನಾಮ ಚನ್ನಮಲ್ಲಿಕಾರ್ಜುನ. ಇವಳ ವಚನಗಳು ಹೆಚ್ಚು ಕಾವ್ಯ ಸೌಂದರ್ಯದಿಂದ ತುಂಬಿವೆ.

ಪದಗಳ ಅರ್ಥ

ಸಜ್ಜನ–ಒಳ್ಳೆಯವರು; ಕೊಯಿಲೆಯ–ವೈರಿಯ; ಇದಿರಿ–ವೈರಿ; ಅನುಭಾವಿ–ಆಧ್ಯಾತ್ಮಿಕ ಜ್ಞಾನವುಳ್ಳವ; ಅರಿಯದವರು–ಅಜ್ಞಾನಿಗಳು; ಬಲ್ಲವರು–ಜ್ಞಾನಿಗಳು; ಕತ್ತಲೆ–ಅಜ್ಞಾನ; ನರ ಜನ್ಮ–ಮಾನವ ಜನ್ಮ; ಚೇಷ್ಟೆಗೆ–ಕ್ರಿಯೆಗೆ; ಬೀಜ–ಮೂಲ.

12th_Kannada_Reader_1-2.indd 26 22-05-2019 14:19:59

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಸವಣ್ಣನವರ ಪ್ರಕಾರ ಎಂತಹವರ ಸಂಗ ಲೇಸು?
2. ಬಸವಣ್ಣನವರು ಎಂತಹವರ ಸಂಗ, ಭಂಗ ಎನ್ನುತ್ತಾರೆ?
3. ಗಿಳಿ ಏನನ್ನು ತಿಳಿದಿರುವುದಿಲ್ಲ?
4. ಅರಿಯದವರ ಸಂಗ ಮಾಡಿದರೆ ಏನಾಗುತ್ತದೆ?
5. ಅಲ್ಲಮಪ್ರಭು ಯಾವುದನ್ನು ಕಳೆಯಬೇಕೆನ್ನುತ್ತಾರೆ?
6. ಗುರು ಕಾರುಣ್ಯ ಹೇಗೆ ಆಗುತ್ತದೆಂದು ಅಲ್ಲಮಪ್ರಭು ತಿಳಿಸುತ್ತಾರೆ?
7. ಯಾವ ಮೃಗ ಸುವಾಸನೆಯಿಂದ ಕೂಡಿರುತ್ತದೆ ?
8. ಯಾವ ಮೂರಕ್ಕೆ ಕ್ರಿಯಾ ವರ್ತನೆಯುಂಟೇ ಎಂದು ಅಲ್ಲಮಪ್ರಭು ಕೇಳುತ್ತಾರೆ?
9. ಚನ್ನಮಲ್ಲಿಕಾರ್ಜುನನ ಸಂಗ ಮಾಡಿದರೆ ಏನಾಗುತ್ತದೆ?
10. ಯಾವುದನ್ನು ಬಿಡಿಸಬೇಕೆಂದು ಅಕ್ಕಮಹಾದೇವಿ ಹೇಳುತ್ತಾರೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕೂಡಲ ಸಂಗಮದೇವ ಯಾರನ್ನು ಮೆಚ್ಚುವುದಿಲ್ಲ ಎಂದು ಬಸವಣ್ಣನವರು ಹೇಳುತ್ತಾರೆ?
2. ಹಿಂದಣ ಜನ್ಮದ ಬಗ್ಗೆ ಹೇಗೆ ತಿಳಿಯಿತು ಎಂದು ಅಲ್ಲಮಪ್ರಭು ಹೇಳುತ್ತಾರೆ?
3. ಅಕ್ಕಮಹಾದೇವಿ ಗುರುವೇ ಶರಣು ಎಂದು ಏಕೆ ಹೇಳುತ್ತಾರೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಭಕ್ತಿ, ಜ್ಞಾನದ ಬಗ್ಗೆ ಬಸವಣ್ಣನವರ ಅಭಿಪ್ರಾಯವೇನು ? ವಿವರಿಸಿ.
2. ಗುರು ಕಾರುಣ್ಯ ಹೇಗಾಗುತ್ತದೆಂದು ಅಲ್ಲಮ ಪ್ರಭು ತಿಳಿಸುತ್ತಾರೆ ? ವಿವರಿಸಿ.
3. ಅಕ್ಕ ಮಹಾದೇವಿಯು ಗುರು ಭಕ್ತಿಯ ಬಗ್ಗೆ ಹೇಳುವ ಮಾತುಗಳೇನು ?

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.

ಸಂಗವೆರಡು, ಗಿಳಿಯೋದಿ, ಹೇಳಲರಿಯದು, ಮನವೊಲಿದು, ಬೀಜವಾದಂತೆ, ಮಹೇಶ್ವರ.

2. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಮಂಗಳ, ಭಯ, ಸಜ್ಜನ, ಸುಖ, ಕತ್ತಲೆ.

3. ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ಕಸ್ತೂರಿ, ವಿಸ್ತಾರ, ಮೃಗ, ಜನ್ಮ, ಶ್ರೀ, ಭಕ್ತಿ, ಲೋಕ.

ಚಟುವಟಿಕೆ

1. ವಾಚನಾಲಯಕ್ಕೆ ಭೇಟಿ ನೀಡಿ ವಚನಗಳನ್ನು ಸಂಗ್ರಹಿಸಿ ಓದಿ, ವಚನಕಾರರು ಹೇಳಿರುವಂತೆ ಜೀವನದಲ್ಲಿ ನಡೆದುಕೊಳ್ಳಿ.
2. ಉತ್ತಮ ವಚನಗಳನ್ನು ಸಂಗ್ರಹಿಸಿ ರಾಗ ಸಂಯೋಜಿಸಿ ತರಗತಿಗಳಲ್ಲಿ, ಶಾಲಾ ಕಾರ್ಯಕ್ರಮಗಳಲ್ಲಿ ಹಾಡಿರಿ.





12th_Kannada_Reader_1-2.indd 27 22-05-2019 14:19:59

ಘಟಕ ಎರಡು

ಕಾವ್ಯಾಲಾಪ

– ಡಾ. ಜಿ.ಎಸ್. ಶಿವರುದ್ರಪ್ಪ



ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಆತನ ಬಾಲ್ಯ ಪ್ರಮುಖ ಪಾತ್ರ ವಹಿಸುತ್ತದೆ. ವಿದ್ಯಾರ್ಥಿ ಜೀವನದಲ್ಲಿ ನೋಡಿದ್ದು, ಕೇಳಿದ್ದು, ಕಲಿತದ್ದು ಇಟ್ಟುಕೊಂಡ ಆದರ್ಶ, ಪಡೆದ ಪ್ರೇರಣೆ ಇವು ಆತನ ಜೀವನದುದ್ದಕ್ಕೂ ಪ್ರಭಾವ ಬೀರುತ್ತವೆ. ನಮ್ಮ ಕಷ್ಟ ಸುಖಗಳಿಗೆ ನಾವೇ ಜವಾಬ್ದಾರರು ಎಂಬುದನ್ನು ಜೀವನದ ನೈಜ ಸಂಗತಿಗಳ ಮೂಲಕ ರಾಷ್ಟ್ರಕವಿ ಜಿ.ಎಸ್.ಎಸ್. ಅವರು ರಸವತ್ತಾಗಿ ಇಲ್ಲಿ ಬಣ್ಣಿಸಿದ್ದಾರೆ.



ನಾನು ಬರೆಯಲು ಶುರು ಮಾಡಿದ್ದು ನನಗೆ ನೆನಪಿರುವಂತೆ ನಾನು ದಾವಣಗೆರೆ ಹೈಸ್ಕೂಲಿನ ಎರಡನೇ ತರಗತಿಯ ವಿದ್ಯಾರ್ಥಿಯಾಗಿದ್ದಾಗ. ಆಗ ನನಗೆ ಹದಿನಾಲ್ಕು ವರ್ಷ ವಯಸ್ಸು. ಆ ವೇಳೆಗೆ ನನ್ನ ಪ್ರಾಥಮಿಕ ತರಗತಿಯ ದಿನಗಳಲ್ಲಿ ನನಗೆ ಸಾಹಿತ್ಯದ ಬಗ್ಗೆ ರುಚಿ ಹುಟ್ಟಿಸಿದ್ದು ಅಂದಿನ ಪರಿಸರದಲ್ಲಿ ಪ್ರಕಟವಾಗುತ್ತಿದ್ದ ಕೆಲವು ಸಾಹಿತ್ಯಕ ಪತ್ರಿಕೆಗಳು, ಮಕ್ಕಳ ಪುಸ್ತಕಗಳು, ಕಥೆಗಾರ ಮೊದಲಾದ ಸಂಚಿಕೆಗಳು; ಮತ್ತು ಆಗ ತಾನೇ ಕಂತುಕಂತಾಗಿ ಬರುತ್ತಿದ್ದ ಶಿವರಾಮ ಕಾರಂತರ ಬಾಲ ಪ್ರಪಂಚ ಎನ್ನುವ ಸಂಚಿಕೆಗಳಲ್ಲಿನ ಕಥೆಯಂತಹ ಸಂಗತಿಗಳು. ನಮ್ಮ ತಂದೆ ಮಿಡಲ್ ಸ್ಕೂಲಿನ ಹೆಡ್‌ಮಾಸ್ಟರ್ ಆಗಿದ್ದುದರಿಂದ ಮತ್ತು ಅವರಿಗೆ ಮೂರು ವರ್ಷಕ್ಕೆ ಒಂದು ಬಾರಿಯಂತೆ ಊರಿಂದ ಊರಿಗೆ ವರ್ಗವಾಗುತ್ತಾ ಹೋದುದ–

12th_Kannada_Reader_1-2.indd 28 22-05-2019 14:20:00

ರಿಂದ, ಬೇರೆ ಬೇರೆ ಪರಿಸರದ ಬದುಕಿನ ಪರಿಚಯದ ಜೊತೆ ಆಯಾ ಊರುಗಳ ಸ್ಕೂಲುಗಳಲ್ಲಿದ್ದ ಲೈಬ್ರರಿ ಪುಸ್ತಕಗಳು, ನನ್ನ ಎಳೆಯಂದಿನಲ್ಲಿ ಹೇಗೋ ಹುಟ್ಟಿಕೊಂಡ ಓದಿನ ಹಸಿವಿಗೆ ಧಾರಾಳವಾಗಿ ಗ್ರಾಸವನ್ನು ಒದಗಿಸಿದವು. ಆ ಕಾಲದ ಕಾದಂಬರಿಗಳು, ಮುಖ್ಯವಾಗಿ ಗಳಗನಾಥ, ವೆಂಕಟಾಚಾರ್ಯ, ದೇವುಡು ಮೊದಲಾದವರ ಕಾದಂಬರಿಗಳು ನನಗೆ ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಮೂಡಿಸಿದವು. ಹೀಗೆ ಸಾಹಿತ್ಯದ ಬಗ್ಗೆ ನನಗೆ ಆಕರ್ಷಣೆ ಹುಟ್ಟಿಸಿದ್ದು ಕಥಾ ಸಾಹಿತ್ಯವೇ ಆದರೂ ನಾನು ಕಥೆ, ಕಾದಂಬರಿಗಳನ್ನು ಬರೆಯದೆ ಯಾಕೆ ಕವಿತೆ ಬರೆಯಲು ಮೊದಲು ಮಾಡಿದೆ ಮತ್ತು ಮುಖ್ಯವಾಗಿ ಕವಿಯಾಗಿಯೇ ಯಾಕೆ ರೂಪುಗೊಂಡೆ ಎಂಬುದನ್ನು ನಾನು ಹೇಳಲಾರೆ. ಆದರೂ ಒಂದು ಹಂತದಲ್ಲಿ ಅಂದರೆ 1942–1943ರ ಕಾಲದಲ್ಲಿ ಮಾಡಲು ಕೆಲಸವಿಲ್ಲದೆ ಪುಟಗಟ್ಟಲೆ ಕಥೆ ಬರೆದೆ. ಆ ನಂತರ ಓದಿ ನೋಡಿದ್ದರಲ್ಲಿ ಅವುಗಳಲ್ಲಿ ಅಂತಹ ಸ್ವಾರಸ್ಯವೇನೂ ಕಾಣಲಿಲ್ಲ. ಅದರಿಂದಾಗಿ ಅವುಗಳೆಲ್ಲವನ್ನೂ ಹರಿದು ಹಾಕಿದೆ. ಕಥೆ ಬರೆಯುವುದು ಬಹುಶಃ ನನಗೆ ಒಗ್ಗತಕ್ಕದ್ದಲ್ಲ ಅನ್ನುವುದನ್ನು ನಾನು ಕಂಡುಕೊಂಡೆನೋ ಏನೋ?

ನಾನು ದಾವಣಗೆರೆಯ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ನಮ್ಮ ಗಣಿತದ ಮೇಷ್ಟ್ರೊಬ್ಬರು, ಹೈಸ್ಕೂಲ್ ರೇವಣ್ಣ ಎಂದು ಹೆಸರು. ತಮಗೆ ಹಾಕುತ್ತಿದ್ದ ಬದಲೀ ಪಿರಿಯಡ್‌ಗಳಲ್ಲಿ ಗಣಿತದ ಪಾಠ ಮಾಡಲು ಹೋಗದೆ ಅಂದಿನ ಕೆಲವು ಕವಿಗಳ ಸಾಹಿತ್ಯ ಕೃತಿಗಳನ್ನು ತಂದು ತರಗತಿಗಳಲ್ಲಿ ಓದುತ್ತಿದ್ದರು. ಅದರಲ್ಲೂ ಅವರಿಗೆ ಅತ್ಯಂತ ಪ್ರಿಯವಾದ ಕುವೆಂಪು ಅವರ ಕೆಲವು ಕವಿತೆಗಳನ್ನೂ, ರಕ್ತಾಕ್ಷಿ ಎಂಬ ನಾಟಕವನ್ನೂ ಒಮ್ಮೆ ಓದಿ ತೋರಿಸಿದರು. ಅದೇನಾಯಿತೋ ಕುವೆಂಪು ಅವರ ಕಾವ್ಯ–ನಾಟಕ ವಾಚನದ ಮೋಡಿ ನನ್ನನ್ನು ಅಂದು ಮೊಸಳೆಯಂತೆ ಕಾಲು ಹಿಡಿದು ನಾನರಿಯದ ಅನಿರ್ವಚನೀಯ ಅನುಭವದ ಮಡುವಿನೊಳಕ್ಕೆ ಎಳೆದುಕೊಂಡು ಹೋದಂತಾಯಿತು. ನನ್ನೊಳಗೆ ಮಲಗಿದ್ದ ಮೂಕ ಮರ್ಮರಗಳನ್ನು ತಟ್ಟಿ ಎಚ್ಚರಿಸಿದಂತಾಯಿತು. ಈ ಅರ್ಥದಲ್ಲಿ ಶ್ರೀ ಕುವೆಂಪು ಅವರೇ ನನ್ನ ಕಾವ್ಯಾಸಕ್ತಿ ಹಾಗೂ ಕಾವ್ಯ ನಿರ್ಮಿತಿಯ ಪ್ರಥಮ ಸ್ಫೂರ್ತಿ ಎನ್ನಬಹುದು. ಅನಂತರ ಆರೇಳು ವರ್ಷಗಳ ಮೇಲೆ ನಾನು ಮಹಾರಾಜಾ ಕಾಲೇಜಿಗೆ ಬಿ.ಎ., ಆನರ್ಸ್ ಹಾಗೂ ಎಂ.ಎ., ತರಗತಿಯ ವಿದ್ಯಾರ್ಥಿಯಾಗಿ ಕುವೆಂಪು ಅವರ ಸಾಕ್ಷಾತ್ ಸಂಪರ್ಕಕ್ಕೆ ಒಳಗಾದಾಗ, ಹಿಂದೆ ಹೈಸ್ಕೂಲಿನ ದಿನಗಳಲ್ಲಿ ಅಕಸ್ಮಾತ್ ಕಾಲಿರಿಸಿದ ಈ ನದಿಯ ಮೂಲಕ ದೋಣಿಯಲ್ಲಿ ತೇಲಿಕೊಂಡು ಬಂದು ಭೋರ್ಗರೆಯುವ ಕಡಲಿನೊಳಕ್ಕೆ ಪ್ರವೇಶಿಸಿದ ಅನುಭವವಾಯಿತು. ಮುಂದೆ ಅವರ ವ್ಯಕ್ತಿತ್ವ ಅವರ ಕಾವ್ಯ ಎಲ್ಲವೂ ನನ್ನನ್ನು ಆಕ್ರಮಿಸಿಕೊಂಡವು. 1951ರಲ್ಲಿ ಕುವೆಂಪು ಅವರ ಮುನ್ನುಡಿಯೊಂದಿಗೆ ಪ್ರಕಟವಾದ ನನ್ನ ಪ್ರಥಮ ಕವನ ಸಂಗ್ರಹ 'ಸಾಮಗಾನ' ಬಹುಮಟ್ಟಿಗೆ ಕುವೆಂಪು ಅವರ ದಟ್ಟವಾದ ಪ್ರಭಾವದ ಸಂಕೇತದಂತೆ ತೋರುತ್ತದೆ. ಅಲ್ಲಿಂದ ಮುಂದೆ ಪ್ರಕಟವಾದ ನನ್ನ ಇನ್ನಿತರ ಕವನ ಸಂಗ್ರಹಗಳು ಈ ಸೆಳೆತದಿಂದ ನಾನು ಪಾರಾದದ್ದು ಹೇಗೆ ಎನ್ನುವುದನ್ನು ಹೇಳುತ್ತವೆ. ಅಂತೂ ನನ್ನ ಹೈಸ್ಕೂಲಿನ ದಿನಗಳಲ್ಲಿ ಕುವೆಂಪು ಅವರ ಕವಿತೆಯ ಪ್ರೇರಣೆಯಿಂದ ನನ್ನಲ್ಲಿ ಎಚ್ಚರಗೊಂಡ ಕಾವ್ಯಾಭಿರುಚಿಯನ್ನು ನೀರೆರೆದು ಬೆಳೆಸಿದವರು ಈಗಾಗಲೇ ಹೇಳಿದ ನನ್ನ ಗಣಿತದ ಉಪಾಧ್ಯಾಯರೇ. ಅವರು ನಾನಿದ್ದ ಜಯದೇವ ಹಾಸ್ಟೆಲ್ಲಿನ ವಾರ್ಡನ್ ಆಗಿದ್ದರು. ಮಾತ್ರವಲ್ಲ, ಅಲ್ಲಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರೂ ಕೂಡ. ಅವರು ವಾರಕ್ಕೆ ಒಂದು ಸಲ ಭಾನುವಾರ ಎಲ್ಲ ವಿದ್ಯಾರ್ಥಿಗಳೂ ಏನಾದರೊಂದು ವಿಷಯವನ್ನು ಕುರಿತು ಮಾತನಾಡಬೇಕು ಅಥವಾ ಬರೆದು ತಂದು ಓದಬೇಕು ಎಂದು ವ್ಯವಸ್ಥೆ ಮಾಡಿದ್ದರು. ಅಂತಹ ಒಂದು ಭಾನುವಾರ ನಾನೂ ಒಂದು ಪದ್ಯ ತಯಾರಿಸಿ ಓದಿದೆ. ಮಕ್ಕಳಿಗೆ ಪ್ರಿಯವಾಗಬಹುದಾದ ನಾನು ಎಲ್ಲೋ ಕೇಳಿದ ಕಥೆಯೊಂದು ನನ್ನ ಪದ್ಯದ ವಸ್ತು. ಆ ಪದ್ಯದ ಕೆಲವು ಸಾಲುಗಳು(ಇನ್ನೂ ನನಗೆ ನೆನಪಿವೆ) ಅವು ಹೀಗಿವೆ:

ಇರುವೆಯೊಂದು ತನ್ನ ಮರಿಗೆ
ನೀರೊಳೀಜು ಕಲಿಸಲೆಂದು
ಹರಿವ ತೊರೆಯ ತಡಿಗೆ ಬಂದು
ನಿಂತುಕೊಂಡಿತು

ನನ್ನ ಹದಿನಾಲ್ಕನೆಯ ವಯಸ್ಸಿನ ಈ ರಚನೆಯನ್ನು ಕೇಳಿ ನನ್ನ ಆ ಮೇಷ್ಟ್ರು ಹಿಗ್ಗಿ ಹೀರೇಕಾಯಾಗಿ ನನ್ನ ಬೆನ್ನು ತಟ್ಟಿದ್ದನ್ನು ನಾನೆಂದೂ ಮರೆಯಲಾರೆ.

ನನ್ನ ಮನೆತನದಲ್ಲಿ ಸಾಹಿತ್ಯಾಸಕ್ತಿಯುಳ್ಳ ಅಥವಾ ಸಾಹಿತ್ಯ ನಿರ್ಮಿತಿಯನ್ನು ಕೈಕೊಂಡವರು

12th_Kannada_Reader_1-2.indd 29 22-05-2019 14:20:00

ಯಾರಾದರೂ ಇದ್ದರೋ ಹೇಗೆ ಎಂಬುದು ನನಗೆ ತಿಳಿಯದು. ನಮ್ಮ ತಂದೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದವರು. ಅವರು ತಮ್ಮ ತಂದೆಯನ್ನು ತಮ್ಮ ಎಳೆಯಂದಿನಲ್ಲೇ ಕಳೆದುಕೊಂಡಿದ್ದರಿಂದ, ಆ ಮಬ್ಬಿನಾಚೆಗೇನಿತ್ತೋ ಅದು ಅವರಿಗೂ ತಿಳಿಯದು. ಜೊತೆಗೆ ನನ್ನ ತಂದೆ, ಅವರ ತಂದೆಗೆ ಒಬ್ಬನೇ ಮಗನಾದದ್ದರಿಂದ ಮತ್ತು ಅನಂತರ ಸರ್ಕಾರಿ ಕೆಲಸಕ್ಕೆ ಸೇರಿ, ಊರೂರು ಸುತ್ತುವ ಪಾಡು ಪ್ರಾಪ್ತವಾದದ್ದರಿಂದ ನನ್ನ ಎಳೆಯಂದಿನಲ್ಲಿಯೂ ನನಗೆ ಶಿಕಾರಿಪುರದ ವಾಸ್ತವವಾದ ದರ್ಶನವಾಗಲಿಲ್ಲ. ಹೀಗಾಗಿ ಶಿಕಾರಿಪುರವನ್ನು ನಾನು ನೋಡಿದ್ದು ತೀರಾ ಇತ್ತೀಚೆಗೆ. ನಮ್ಮ ಪೂರ್ವಿಕರು ಶಿಕಾರಿಪುರಕ್ಕೆ ಬರುವ ಮುನ್ನ ಗುಗ್ಗರಿಯಲ್ಲಿದ್ದರಂತೆ. ಗುಗ್ಗರಿ ಧಾರವಾಡ ಜಿಲ್ಲೆಯಲ್ಲಿರುವ ಒಂದು ಊರು. ನನ್ನ ಇನಿಷಿಯಲ್ಲಿನೊಳಗಿರುವ ಈ 'ಜಿ' ಸೂಚಿಸುವುದು 'ಗುಗ್ಗರಿ'ಯನ್ನೇ. ಅಂತೂ ಪಂಪನ ಬನವಾಸಿ ನಾಡಿಗೆ ಸೇರಿದವನು ನಾನು. ಆದರೂ, ಮುಂದೆ ನನ್ನ ಎರಡನೆಯ ತಾಯಿಯ ಕಾರಣದಿಂದ ಚಿತ್ರದುರ್ಗದ ಪರಿಸರ ನನ್ನ ಬದುಕನ್ನು ತುಂಬಿಕೊಂಡಿತು. ಮತ್ತೆ ಅಲ್ಲಿಂದ ತುಮಕೂರು ಜಿಲ್ಲೆಯ ಊರುಗಳಿಗೆ ನಮ್ಮ ತಂದೆ ವರ್ಗವಾಗಿ ಬಂದದ್ದರಿಂದ, ಎಸ್. ಎಸ್.ಎಲ್.ಸಿ. ತರಗತಿಗೆ ಬಂದ ಹೊತ್ತಿಗೆ ನಾನು ದಾವಣಗೆರೆ ಹೈಸ್ಕೂಲಿನಿಂದ ತುಮಕೂರು ಹೈಸ್ಕೂಲಿಗೆ ವರ್ಗಾಯಿಸಿಕೊಂಡು, ಸಿದ್ಧಗಂಗೆಯ ಮಠವನ್ನು ಸೇರಿದೆ. ತುಮಕೂರಿನಿಂದ ಮೂರೂವರೆ ಮೈಲಿ ದೂರದ ಈ ಋಷ್ಯಾಶ್ರಮ ಸದೃಶವಾದ ಸ್ಥಳದಲ್ಲಿನ ಬಂಡೆ, ಬೆಟ್ಟಗಳು, ಈ ಬೆಟ್ಟಗಳಿಗೆ ಒತ್ತಿಕೊಂಡಂತಿರುವ ಮರಗಳು, ಆಚೆಯ ಕಣಿವೆಯಲ್ಲಿ ಹರಿಯುವ ಹಳ್ಳ, ಮಿರುಗುವ ಕೆರೆ, ದೇವಸ್ಥಾನಗಳ ಗಂಟೆಗಳ ದನಿ, ವಿಸ್ತಾರವಾಗಿ ಹಬ್ಬಿಕೊಂಡ ಹೊಲಗದ್ದೆಗಳು, ಈ ಎಲ್ಲವೂ ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿವೆ. ಈ ಪರಿಸರದಲ್ಲಿ ನಾನು ಸಾಕಷ್ಟು ಪದ್ಯ ಬರೆದೆ. ಹಾಗೆ ಬರೆದ ನನ್ನ ಕವಿತೆಯ ಕಂತೆಯನ್ನು ಒಂದು ಸಲ ನನ್ನ ಹೈಸ್ಕೂಲಿನ ಕನ್ನಡ ಪಂಡಿತರ ಕೈಗೆ ಕೊಟ್ಟೆ. ಕಂದ, ವೃತ್ತಾದಿಗಳ ಸಂಸ್ಕಾರದಲ್ಲಿ ಬೆಳೆದ ಅವರ ಮನಸ್ಸಿಗೆ ನನ್ನ ಪದ್ಯಗಳು ಹಿಡಿಸಲಿಲ್ಲವೆಂದು ತೋರುತ್ತದೆ. ನಾಲ್ಕು ಉಪಚಾರದ ಮಾತನ್ನಾಡಿ ಹಿಂದಕ್ಕೆ ಕೊಟ್ಟರು. ಅದರ ಮುಂದಿನ ವರ್ಷ ಕಾಲೇಜಿಗೆ ಸೇರಿದೆ. ಸೇರಿದ ಎರಡು ತಿಂಗಳಲ್ಲೇ ಭಾರತ ಸ್ವಾತಂತ್ರ್ಯ ಚಳುವಳಿಯ ಗಾಳಿಯಲ್ಲಿ ದೇಶವೇ ಅಲ್ಲೋಲಕಲ್ಲೋಲವಾಗಿ ನಾನು ಊರಿಗೆ ಹೋಗಬೇಕಾಯಿತು. ಮತ್ತೆ ಅದರ ಮುಂದಿನ ವರ್ಷ, 1943ರ ಜೂನ್ ವೇಳೆಗೆ ಮತ್ತೆ ಕಾಲೇಜಿಗೆ ಬಂದು ಓದನ್ನು ಮುಂದುವರೆಸಿದಾಗ ಅಲ್ಲಿ ಜಿ.ಪಿ.ರಾಜರತ್ನಂ ನನಗೆ ಅಧ್ಯಾಪಕರು. ಒಳ್ಳೆಯ ಕಟ್ಟುಮಸ್ತಾದ ಜಟ್ಟಿಯ ಮೈಕಟ್ಟು, ದುಂಡು ಮುಖ, ಅಗಲವಾದ ಕಣ್ಣುಗಳು, ಕಂಚಿನ ಕಂಠ, ನಿರರ್ಗಳ ವಾಗ್ಝರಿ. ಜೋಗದ ಜಲಪಾತದ ಎದುರು ನಿಂತ ಅನುಭವ. ಮನಸ್ಸಿನ ಮೂಲೆ ಮೂಲೆಗಳಲ್ಲೂ ವಿದ್ಯುತ್, ಬೆಳಕು.

ಅವರ ವೇಷ ಎಂತಹುದು! ಒಂದು ಖಾದಿ ಬನಿಯನ್, ಒಂದು ಲುಂಗಿಪಂಚೆ. ಮೇಲೆ ಒಂದು ಛದ್ದರ್! ಎಂತಹ ಬಿಸಿಲಿನಲ್ಲೂ ಉಲ್ಲನ್ ಸೂಟು ಹಾಕಿ, ಕೊರಳಿಗೆ ಟೈ ಬಿಗಿದುಕೊಂಡು ಬೆವರುತ್ತಾ ಇಂಗ್ಲಿಷಿನಲ್ಲೇ ವ್ಯವಹರಿಸುವ ಬಹುತೇಕ ಕಾಲೇಜು ಅಧ್ಯಾಪಕರ ನಡುವೆ ರಾಜರತ್ನಂ ಬೌದ್ಧ ಭಿಕ್ಷುಗಳನ್ನು ನೆನಪಿಗೆ ತರುವ ಅಪ್ಪಟ ದೇಸೀಯತೆಯ ಪ್ರತೀಕವಾಗಿದ್ದರು.

ಅದು ಗಾಂಧೀಜಿಯವರ ಸ್ವಾತಂತ್ರ್ಯ ಚಳವಳಿಯ ಉತ್ಕರ್ಷದ ಕಾಲ. ದಿನಬೆಳಗಾದರೆ ತರಗತಿಗಳಿಗೆ ಬಹಿಷ್ಕಾರ. ಬ್ರಿಟೀಷ್ ಪ್ರಭುತ್ವಕ್ಕೆ ಧಿಕ್ಕಾರ, ಸತ್ಯಾಗ್ರಹ, ಲಾಠಿಚಾರ್ಜು ಇತ್ಯಾದಿ. ಈ ಪರಿಸರದಲ್ಲಿ ರಾಜರತ್ನಂ ಅವರ ಈ ಗಾಂಧೀ ಡ್ರೆಸ್ಸು ಆಳುವವರ ಪಾಲಿಗೆ ಕಸಿವಿಸಿಯನ್ನು ತಂದಿತು. ಸರಿ, ಸರ್ಕಾರದಿಂದ ಅವರಿಗೊಂದು ಮೆಮೋ ಜಾರಿಯಾಯಿತು. 'ರಾಜರತ್ನಂ ಅವರು ಘನತೆಗೆ ತಕ್ಕುದಲ್ಲದ ಉಡುಗೆಯಲ್ಲಿ ಸರ್ಕಾರಿ ಕೆಲಸಕ್ಕೆ ಹಾಜರಾಗ ತಕ್ಕದ್ದಲ್ಲ. ಅವರು ಮೈತುಂಬಾ ಉಡುಪು ತೊಟ್ಟು ಬರಬೇಕು' ಇದು ಅವರಿಗೆ ಬಂದ ನೋಟೀಸಿನ ಒಕ್ಕಣೆ. ರಾಜರತ್ನಂ ಅವರಿಗೆ ರೇಗಿತು. 'ಮೈ ತುಂಬಾ ಉಡುಪು ತೊಡಬೇಕು ತಾನೇ? ಆಗಲಿ' ಎಂದರು. ಒಂದು ವಾರದ ನಂತರ ವಿದ್ಯಾರ್ಥಿಗಳಾದ ನಾವೆಲ್ಲ ನೋಡುತ್ತೇವೆ. ರಾಜರತ್ನಂ ತರಗತಿಯೊಳಗೆ ಆಗಮಿಸಿದರು, ಮೈತುಂಬಾ ಉಡುಪು ತೊಟ್ಟು. ಅದೊಂದು ಡ್ರಮ್ಮಿನಾಕಾರಾದ ಸುದೀರ್ಘವಾದ ಮುಚ್ಚುಕೋಟು! ಕೆಳಗೆರಡು ಪಾದ, ಮೇಲೊಂದು ತಲೆ ಮಾತ್ರ ಕಾಣಿಸುವಂತದು. ಈ ಕೋಟನ್ನು ನಮ್ಮ ಕಾಲೇಜಿನ ಕೊಠಡಿಯಲ್ಲೇ

12th_Kannada_Reader_1-2.indd 30 22-05-2019 14:20:00

ನೇತು ಹಾಕಿ, ತರಗತಿಗಳಿಗೆ ಹೋಗುವಾಗ ಮಾತ್ರ ಧರಿಸುವುದು. ಉಳಿದಂತೆ ಕಾಲೇಜಿಗೆ ಬರುವಾಗ ಮತ್ತು ಹೋಗುವಾಗ ಅದೇ ಗಾಂಧೀ ಡ್ರೆಸ್ಸು. 'ಇದೇನು ಸಾರ್? ಹೀಗೆ ಹೊಲಿಸಿದ್ದೀರಿ ಕೋಟನ್ನು?' ಎಂದು ಯಾರಾದರೂ ಅಂದರೆ ಕಾದಿತ್ತು ಉತ್ತರ! 'ಇದೇ? ಇದು ನಮ್ಮ ಗುಲಾಮಗಿರಿಯ ಸಂಕೇತ. ಅದಕ್ಕೇ ಇದನ್ನು ಈ ಸ್ಟಾಪ್‌ರೂಮಿನಲ್ಲಿ ನೇತು ಹಾಕುತ್ತೇನೆ!'. ಇದು ರಾಜರತ್ನಂ ಅವರ ಪ್ರತಿಭಟನೆಯ ಒಂದು ರೂಪ.

ತುಂಬ ಸಂಕೋಚದ ನಾನು ನನ್ನ ಕವಿತೆಗಳನ್ನು ಅವರಿಗೆ ತೋರಿಸುವುದು ಹೇಗೆ ಎಂದು ಕೆಲವು ತಿಂಗಳು ದೂರ ನಿಂತೆ. ಈ ಕಾಲದಲ್ಲಿ ಇಂಗ್ಲಿಷ್ ತರಗತಿಗಳಲ್ಲಿ ಭೋಧಿತವಾಗುತ್ತಿದ್ದ ಕವಿತೆಗಳ ಸೊಗಸು ನನ್ನನ್ನು ಸೆಳೆದುಕೊಂಡಿತು. ಬೈರನ್, ಗ್ರೇ, ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್ ಇಂತಹವರ ಪದ್ಯಗಳ ಗುಂಗು ನನ್ನನ್ನು ಕಾಡಿತು. ಅವುಗಳಿಂದ ಪ್ರಭಾವಿತನಾಗಿ ಒಂದಷ್ಟು ಗೀಚಿದೆ. ಕಡೆಗೊಂದು ದಿನ ಧೈರ್ಯ ಮಾಡಿ ನನ್ನ ಕವಿತೆಗಳ ಕಂತೆಯನ್ನು ರಾಜರತ್ನಂ ಅವರ ಕೈಯಲ್ಲಿ ಇಟ್ಟೆ. ಮರುದಿನ ನನ್ನನ್ನು ತುಂಬ ಪ್ರೀತಿಯಿಂದ ಕರೆದು ಕೂರಿಸಿಕೊಂಡು, 'ಪದ್ಯ ಬರೆಯುವುದು ಹೇಗೆ? ಇನ್ನಷ್ಟು ಚೆನ್ನಾಗಿ ಬರೆಯಬೇಕಾದರೆ ನಾನು ಏನೇನನ್ನು ಓದಬೇಕು?' ಇತ್ಯಾದಿಗಳನ್ನು ಹೇಳಿ ನನ್ನ ಕವಿತೆಗಳ ಕಂತೆಯಿಂದ ಅವರೇ ಒಂದು ಪದ್ಯವನ್ನು ಆರಿಸಿ ಅದರ ಒಂದು ಪ್ರತಿ ಮಾಡಿಸಿ ಆಗ ಮಾಸ್ತಿಯವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಜೀವನ' ಪತ್ರಿಕೆಗೆ ಕಳುಹಿಸಿಕೊಟ್ಟರು. ಒಂದೆರಡು ತಿಂಗಳಲ್ಲಿ ಅದು 'ಜೀವನ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿ ಅದರ ಗೌರವ ಪ್ರತಿ ನನಗೆ ತಲುಪಿತು. ಆ ಕವಿತೆಯ ಮೊದಲೆರಡು ಪದ್ಯಗಳು ಹೀಗಿವೆ:

ಕಡಲಿನ ಕತ್ತಲ ಗವಿಯಲ್ಲಿ
ಅಡಗಿಹವೆಷ್ಟೋ ರತ್ನಗಳು
ಘೋರಾರಣ್ಯದ ತರುಗಳಲಿ
ಅರಳಿಹವೆಷ್ಟೋ ಕುಸುಮಗಳು

ಎಸೆಯುವ ರನ್ನವ ಧರಿಸುವವರಾರು
ಕಡಲಿನ ಗವಿಯಿಂ ಹೊರತೆಗೆದು?
ಕುಸುಮದ ಕಂಪನು ಸೇವಿಪರಾರು
ತುಂಬಿದ ಕಾನನ ಮಧ್ಯದಲಿ?

ಇದು ಮೊಟ್ಟ ಮೊದಲು ಪ್ರಕಟವಾದ ನನ್ನ ಕವಿತೆ. ನನಗಾಗ ಹದಿನಾರೋ, ಹದಿನೇಳೋ ವಯಸ್ಸು. ಈ ಪದ್ಯ ಕೂಡ ಥಾಮಸ್ ಗ್ರೇ ಬರೆದ 'ಆ್ಯನ್ ಎಲಿಜಿ ರಿಟನ್ ಆನ್ ಎ ಕಂಟ್ರಿ ಚರ್ಚ್ ಯಾರ್ಡ್' ಎಂಬ ಉದ್ದನೆಯ ಕವಿತೆಯೊಳಗಿನ ಒಂದೆರಡು ಕವಿತೆಗಳ ಭಾವವನ್ನು ಹಿಡಿದು ಬರೆದದ್ದು. ರಾಜರತ್ನಂ ಹಾಗೂ ಮಾಸ್ತಿಯವರ ಪ್ರೀತಿ, ಹಾರೈಕೆಗಳು ನನ್ನ ಬದುಕಿನೊಳಗೆ ಬೆಸೆದುಕೊಂಡದ್ದು ಹೀಗೆ.

ನನ್ನ ವಿದ್ಯಾಭ್ಯಾಸಕ್ಕೆ ಕಲ್ಲು ಬಿದ್ದು, ಅನಂತರ ಮತ್ತೆ 1946ನೇ ಜೂನ್‌ನಲ್ಲಿ ಮಹಾರಾಜಾ ಕಾಲೇಜಿಗೆ ಸೇರಿದೆ, ಬಿ.ಎ., ಆನರ್ಸ್ ವಿದ್ಯಾರ್ಥಿಯಾಗಿ. ಹಾಗೆ ನಾನು ಬಿ.ಎ., ಆನರ್ಸ್ ತರಗತಿಗೆ ಸೇರಲು ಅರ್ಜಿ ಹಾಕುವುದರ ಮೂಲಕ ಇಪ್ಪತ್ತನೆಯ ಶತಮಾನದ ನವೋದಯ ಸಾಹಿತ್ಯ ಸಂದರ್ಭದ ಮಹಾ ಆಚಾರ್ಯರ ಮತ್ತು ಘನ ವಿದ್ವಾಂಸರ ಶಿಷ್ಯನಾಗುವ ಸುಯೋಗವೊಂದು ನನಗೆ ಪ್ರಾಪ್ತವಾಗುತ್ತದೆ ಎಂಬ ಯಾವ ಕಲ್ಪನೆಯೂ ನನಗಿರಲಿಲ್ಲ. ಏಕೆಂದರೆ ಅಂತಹ ಮೇಧಾವಿಗಳು ಇಲ್ಲಿ ಇರಬಹುದು ಎಂಬುದೂ ನನಗೆ ಗೊತ್ತಿರಲಿಲ್ಲ. ಅರ್ಜಿ ಸಲ್ಲಿಸುವಾಗಿನ ನನ್ನ ಅಂಕಪಟ್ಟಿಯಲ್ಲಿದ್ದ ಐಚ್ಛಿಕ ಕನ್ನಡದಲ್ಲಿ ಅರವತ್ತಕ್ಕೂ ಹೆಚ್ಚು ಅಂಕಗಳು ನನಗೆ ಬಂದಿದ್ದವೆನ್ನುವ ಸಂಗತಿಯೊಂದೇ ನಾನು ಕನ್ನಡ ಬಿ.ಎ., ಆನರ್ಸ್ ತರಗತಿಗೆ ಅರ್ಜಿ ಹಾಕುವುದರ ಹಿಂದಿನ ಮುಖ್ಯ ಪ್ರೇರಣೆಯಾಗಿತ್ತು.

ಆ ವರ್ಷ ಬಿ.ಎ., ಆನರ್ಸ್ ಕನ್ನಡ ತರಗತಿಗೆ ಸೇರಿದವರ ಸಂಖ್ಯೆ – ನನ್ನನ್ನೂ ಸೇರಿಸಿಕೊಂಡಂತೆ ಎಂಟು ಮಂದಿ. ಅದುವರೆಗಿನ ಇತಿಹಾಸದಲ್ಲಿ ಕನ್ನಡ ಆನರ್ಸ್ ತರಗತಿಯ ವಿದ್ಯಾರ್ಥಿಗಳ ಸಂಖ್ಯೆ ಹೀಗೆ ಎಂಟನ್ನು ಮುಟ್ಟಿದ್ದು ಅದೇ ಮೊದಲ ಸಲವಂತೆ! ಆಗ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದವರು ದಿವಂಗತ ಟಿ.ಎಸ್. ವೆಂಕಣ್ಣಯ್ಯನವರ ಪರಮ ಸ್ನೇಹಿತರೂ ಕನ್ನಡ ಮತ್ತು ಸಂಸ್ಕೃತ ಭಾಷಾ ಸಾಹಿತಿಗಳಲ್ಲಿ ಶ್ರೇಷ್ಠ ವಿದ್ವಾಂಸರೆಂದು ಹೆಸರು ಮಾಡಿದವರೂ ಆದ ಪ್ರೊಫೆಸರ್ ಎ.ಆರ್. ಕೃಷ್ಣಶಾಸ್ತ್ರಿಯವರು. ಇನ್ನುಳಿದ ಅಧ್ಯಾಪಕರೆಂದರೆ ಡಿ.ಎಲ್.ನರಸಿಂಹಾಚಾರ್ಯರು, ಕಾ.ವೆಂ. ರಾಘವಾಚಾರ್ಯರು. ವಿ.ಸೀತಾರಾಮಯ್ಯನವರು, ಎನ್. ಅನಂತರಂಗಾಚಾರ್ಯರು, ತ.ಸು.ಶಾಮರಾಯರು, ಎಸ್.ವಿ.ಸಂಪತ್., ಡಿ.ವಿ.ಶೇಷಗಿರಿರಾಯರು ಮತ್ತು ತೆಲುಗನ್ನು ಮೈನರ್ ವಿಷಯವನ್ನಾಗಿ ಆರಿಸಿಕೊಂಡ

12th_Kannada_Reader_1-2.indd 31 22-05-2019 14:20:00

ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದ ರಾಳ್ಳಪಳ್ಳಿ ಅನಂತಕೃಷ್ಣಶರ್ಮರು. ಇವರ ವ್ಯಕ್ತಿತ್ವ ಹಾಗೂ ಮಾತು ಅತ್ಯಂತ ಮಧುರವಾದದ್ದು.

ಪ್ರೊಫೆಸರ್ ಕೃಷ್ಣಶಾಸ್ತ್ರಿಗಳನ್ನು ಕಂಡರೆ ವಿದ್ಯಾರ್ಥಿಗಳಾದ ನಮಗೆಲ್ಲ ಒಂದು ಬಗೆಯ ಭಯ ಮಿಶ್ರಿತ ಗೌರವ, ಅವರು ಬೋಧಿಸುತ್ತಿದ್ದ ಭಾರತೀಯ ಅಲಂಕಾರ ಶಾಸ್ತ್ರ ಯಾಕೋ ಏನೋ ನನಗಂತೂ ಅರ್ಥವಾಗುವುದು ಕಷ್ಟವಾಗುತ್ತಿತ್ತು. ಕಚ್ಚಪಂಚೆಯ, ಮುಚ್ಚುಕೋಟಿನ, ಜರಿಪೇಟದ, ದುಂಡುಮುಖದ ಡಿ.ಎಲ್.ನರಸಿಂಹಾಚಾರ್ಯರು ತಮ್ಮ ದಿಗ್ಗಜ ಸಹಜವಾದ ನಡಿಗೆಯಿಂದ ತರಗತಿಯನ್ನು ಪ್ರವೇಶಿಸಿ ಕುರ್ಚಿಯ ತುಂಬಾ ಕೂತು, ಹಳಗನ್ನಡ ಕೃತಿಗಳನ್ನು ವ್ಯಾಖ್ಯಾನಿಸುತ್ತಿದ್ದ ಕ್ರಮ ತುಂಬಾ ಚೇತೋಹಾರಿಯಾಗಿರುತ್ತಿತ್ತು. ಅದರಲ್ಲೂ ಕನ್ನಡ ಶಬ್ದಗಳ ಮೂಲವನ್ನು ಕುರಿತು ವಿವಿಧ ಭಾಷಾ ಸಂದರ್ಭಗಳ ಹಿನ್ನೆಲೆಯಲ್ಲಿ ನಡೆಯಿಸುತ್ತಿದ್ದ ಅನ್ವೇಷಣೆಯ 'ಶಬ್ದವಿಹಾರ'ವಂತೂ ಅವರ ಅಗಾಧವಾದ ವಿದ್ವತ್ತಿಗೆ ಹಿಡಿದ ಕನ್ನಡಿಯಾಗಿತ್ತು. ಆಗಾಗ ಅವರು ನಮಗೆ ಹೇಳುತ್ತಿದ್ದ ಮಾತೆಂದರೆ, 'ಚೆನ್ನಾಗಿ ಮೇಯಬೇಕು, ಚೆನ್ನಾಗಿ ಮೇಯಬೇಕು; ಆಮೇಲೆ ನಿಧಾನವಾಗಿ ಮೆಲುಕು ಹಾಕಬೇಕು'. ವಿ.ಸೀತಾರಾಮಯ್ಯನವರದು ತುಂಬಾ ಲವಲವಿಕೆಯ ವ್ಯಕ್ತಿತ್ವ. ಅವರು ಓದಿ ಪಾಸ್ ಮಾಡಿದ್ದು ಎಕನಾಮಿಕ್ಸ್. ಅಧ್ಯಾಪಕರಾಗಿ ಪಾಠ ಹೇಳಿದ್ದು ಕನ್ನಡ! ತೆಳ್ಳನೆಯ ಮಕಮಲ್ಲಿನ ಪಂಚೆ, ಸೊಗಸಾದ ಮುಚ್ಚುಕೋಟು, ಮೈಸೂರು ಪೇಟ. ತರಗತಿಗಳಲ್ಲಿ ಅವರದು ನಿರರ್ಗಳ ವಾಗ್ಝರಿ. ಮುಕ್ಕಾಲು ಪಾಲು ಇಂಗ್ಲಿಷ್. ಕಾಲು ಪಾಲು ಕನ್ನಡ! ಹೀಗಾಗಿ ಕನ್ನಡವನ್ನು ಇಂಗ್ಲಿಷ್‌ನಲ್ಲಿ ಪಾಠ ಮಾಡುವ ಪ್ರೊಫೆಸರ್ ಎಂದೇ ಅವರು ಹೆಸರಾಗಿದ್ದರು. ಕಾ.ವೆಂ. ರಾಘವಾಚಾರ್ಯರು ಅಪ್ಪಟ ಖಾದೀ ವ್ರತದವರು. ಖಾದಿ ಜುಬ್ಬ, ಖಾದಿ ಪಂಚೆ. ಸ್ವತಃ ಪರಿಶ್ರಮದಿಂದ ಗ್ರೀಕ್ ಭಾಷೆಯನ್ನು ಕಲಿತು ಗ್ರೀಕ್ ಮೂಲದಿಂದಲೇ ನೇರವಾಗಿ ಕನ್ನಡಕ್ಕೆ ಕೆಲವು ಗ್ರೀಕ್ ನಾಟಕಗಳನ್ನು ಅನುವಾದ ಮಾಡಿದವರು. ಶಬ್ದಮಣಿದರ್ಪಣದಂತಹ ನಾನಾ ಕಠಿಣ ಗ್ರಂಥವನ್ನೂ ಮತ್ತು ಭಾಷಾ ಶಾಸ್ತ್ರವನ್ನೂ, ಆ ವಿಷಯಗಳ ಬಗೆಗೆ ರುಚಿ ಹುಟ್ಟುವಂತೆ ಬೋಧಿಸಿದವರು. ರಾಘವಾಚಾರ್ಯರು ಅಂದಿನ ನಮ್ಮಂತಹ ತರುಣರಿಗೆ ಬೇರೊಂದು ಕಾರಣದಿಂದಲೂ ಸ್ಮರಣೀಯರು. ಅದೆಂದರೆ; ಬೇಂದ್ರೆ, ಕಾರಂತ, ಶಂ.ಭಾ.ಜೋಷಿ ಇಂತಹ ಸಾಹಿತಿಗಳು ಮೈಸೂರಿಗೆ ಬಂದರೆ ರಾಘವಾಚಾರ್ಯರ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದುದು. ರಾಘವಾಚಾರ್ಯರಿಗೆ ಈ ಸಾಹಿತಗಳೊಂದಿಗೆ ಅಷ್ಟೊಂದು ಸ್ನೇಹ. ಹಾಗೆ ಕಾರಂತರೋ ಬೇಂದ್ರೆಯವರೋ ಬಂದರೆಂದರೆ ರಾಘವಾಚಾರ್ಯರು ಮೈಸೂರಿನ ಸಾಹಿತಿ ಮಿತ್ರರನ್ನೆಲ್ಲ ಕರೆದು ತಮ್ಮ ಮನೆಯಲ್ಲಿ ಭೂರಿ ಭೋಜನ ಕೂಟವನ್ನೇರ್ಪಡಿಸುತ್ತಿದ್ದರು. ಅಷ್ಟೇ ಅಲ್ಲ, ವಿದ್ಯಾರ್ಥಿಗಳಾದ ನಮ್ಮನ್ನು ಆಹ್ವಾನಿಸಿ ಅವರ ಮನೆಯಲ್ಲಿ ಸಾಹಿತಿಗಳೊಂದಿಗೆ ನಡೆಯುವ ಚರ್ಚೆಗಳನ್ನು ವೀಕ್ಷಿಸುವ ಮತ್ತು ಭೋಜನ ಕೂಟದಲ್ಲಿ ಭಾಗವಹಿಸುವ ಅವಕಾಶವನ್ನೂ ಕಲ್ಪಿಸುತ್ತಿದ್ದರು.

ಇನ್ನು ಎನ್.ಅನಂತರಂಗಾಚಾರ್ಯರು. ಇವರೂ ಕಚ್ಚೆ ಪಂಚೆಯ, ಜರಿ ರುಮಾಲಿನ ಆಕರ್ಷಕ ವ್ಯಕ್ತಿಗಳು. ರನ್ನನ ಗದಾಯುದ್ಧವನ್ನು ಸ್ವಾಭಿನಯವಾಗಿ ವಾಚಿಸುತ್ತಾ, ಅದರ ನಾಟ್ಯಮಯತೆಯನ್ನು ನಮ್ಮ ಮನಸ್ಸಿನಲ್ಲಿ ಮೂಡಿಸಿದ್ದಲ್ಲದೆ ಬಿ.ಎಂ.ಶ್ರೀಯವರ ಗದಾಯುದ್ಧ ನಾಟಕದ ರಂಗ ಪ್ರಯೋಗದ ಸಂದರ್ಭದಲ್ಲಿ ತಾವೇ ದುರ್ಯೋಧನನ ಪಾತ್ರವನ್ನು ವಹಿಸಿ ರಂಜಿಸಿದ್ದೂ ಉಂಟು. ಮಹಾರಾಜಾ ಕಾಲೇಜಿನಲ್ಲಿ ಗದಾಯುದ್ಧ ನಾಟಕದ ರಂಗ ಪ್ರಯೋಗ ಸಂದರ್ಭದಲ್ಲಿ ಅವರ ಬಲವಂತಕ್ಕೆ ನಾನು ಧರ್ಮರಾಯನ ಪಾತ್ರವನ್ನು ವಹಿಸಿ ಬಂದಂತಹ ನೆನಪು ನನ್ನ ಮನಸ್ಸಿನಲ್ಲಿ ಇನ್ನೂ ಉಳಿದಿದೆ(ತುಂಬ ಸಣಕಲಾದ ನಾನು ಈ ಪಾತ್ರ ವಹಿಸಿದ್ದನ್ನು ನೋಡಿದ ಕುವೆಂಪು ಅವರು ನನ್ನನ್ನು 'ರೇಶನ್ ಧರ್ಮರಾಯ' ಎಂದು ಹಾಸ್ಯ ಮಾಡಿದ್ದನ್ನು ಮರೆಯಲಾಗುತ್ತಿಲ್ಲ). ಮತ್ತೊಬ್ಬ ಅಧ್ಯಾಪಕರು ತ.ಸು.ಶಾಮರಾಯರು. ಅವರಂತೂ ಕುಮಾರವ್ಯಾಸನ ಸ್ಪೆಷಲಿಸ್ಟ್ ಎಂದೇ ಹೆಸರಾಗಿದ್ದರು. ಇವರೂ ಕಚ್ಚೆಪಂಚೆ ಷರಟಿನವರು. ಕುಮಾರವ್ಯಾಸನನ್ನು ಕುರಿತ ಇವರ ಪಾಠವನ್ನು ಕೇಳಲು ಬೇರೆ ಬೇರೆ ವಿಷಯಗಳ, ಅಷ್ಟೇ ಏಕೆ ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳೂ ಬಂದು ಇವರ ತರಗತಿಗಳಲ್ಲಿ ಕುಳಿತುಕೊಳ್ಳುತ್ತಿದ್ದರೆಂದು ಹೇಳಲಾಗಿದೆ.

ಕುಮಾರವ್ಯಾಸನನ್ನು ಕುರಿತು ಶಾಮರಾಯರ ಪಾಠ ನಡೆದ ಇಂಥದೊಂದು ದಿನ, ಮುಂದಿನ ಬೆಂಚಿನ ಮೇಲೆ ಕೂತು ತದೇಕ ಚಿತ್ತದಿಂದ ಆಲಿಸುತ್ತಿದ್ದೆ. ಇದ್ದಕ್ಕಿದ್ದ ಹಾಗೆ ತಲೆ ಸುತ್ತು ಬಂದಂತಾಗಿ, ಡೆಸ್ಕಿನ ಮೇಲೆ ತಲೆಯಿರಿಸಿ ಒರಗಿದೆ; ಕೊಂಚ ಹೊತ್ತಿನ

12th_Kannada_Reader_1-2.indd 32 22-05-2019 14:20:00

ಮೇಲೆ ಸ್ವಲ್ಪ ಸುಧಾರಿಸಿಕೊಂಡು ಮಂಕಾಗಿ ಕೂತ ನನ್ನನ್ನು ಶಾಮರಾಯರ ಕಣ್ಣು ಅವರ ಉಪನ್ಯಾಸದ ನಡುವೆಯೇ ಗಮನಿಸಿತೆಂದು ತೋರುತ್ತದೆ.

ತರಗತಿ ಮುಗಿದ ಕೂಡಲೇ ನನ್ನ ಕಡೆ ನೋಡಿ, 'ಏ, ಮಗೂ! ಏನ್ ಸಮಾಚಾರ? ಯಾಕೆ ಹೀಗಿದ್ದೀಯೇ? ಊಟ ಮಾಡಿದ್ದೀಯಾ ತಾನೇ?' ಎಂದರು. 'ಊಟ ಆಗಿದೆ ಸಾರ್. ಏನೋ ಸ್ವಲ್ಪ ತಲೆ ತಿರುಗಿದ ಹಾಗಾಯಿತು, ಅಷ್ಟೇ' ಎಂದೆ. 'ಎಲ್ಲಿ ಮಾಡಿದೆ? ಯಾವ ಹಾಸ್ಟಲು?' ಎಂದರು. 'ಹಾಸ್ಟಲಲ್ಲಿ ಎಲ್ಲೂ ಸೀಟು ಸಿಕ್ಕಿಲ್ಲ. ಹೋಟಲಲ್ಲಿ ಮಾಡಿದೆ' ಎಂದೆ. 'ಸುಳ್ಳು! ನೀನು ಊಟಾನೇ ಮಾಡಿಲ್ಲ ಎನ್ನೋದನ್ನು ನಿನ್ನಮುಖವೇ ಹೇಳುತ್ತೆ. ಬಾ ನನ್ನ ಹಿಂದೆ' ಎಂದರು. ಅವರ ಹಿಂದೆ ಹೊರಟೆ. ಓದಬೇಕೆಂದು ಹಠ ಹಿಡಿದು ಮಹಾರಾಜಾ ಕಾಲೇಜಿಗೇನೋ ಬಂದಿದ್ದೆ. ಆದರೆ ಅಶನ–ವಸತಿಗೆ? ಯಾವ ದೊಡ್ಡವರ ಶಿಫಾರಸ್ಸೂ ಇಲ್ಲದ ನನಗೆ ಯಾವ ಹಾಸ್ಟಲ್ಲಲ್ಲೂ ಸೀಟು ಸಿಕ್ಕಲಿಲ್ಲ. ಹೀಗಾಗಿ ನಾನು ನನ್ನಂತೆ ಇದ್ದ ಒಂದಿಬ್ಬರು ಸೇರಿ ಡಿ.ಸುಬ್ಬಯ್ಯ ರಸ್ತೆಯಲ್ಲೊಂದು ರೂಮು ಬಾಡಿಗೆಗೆ ಹಿಡಿದು ಒಂದಿಷ್ಟು ಅನ್ನ ಬೇಯಿಸಿಕೊಂಡು, ಹೋಟೆಲಿಂದ ಸಾರು ಕೊಂಡುಕೊಂಡು ಬಂದು ನಮ್ಮ ದಿನಗಳನ್ನು ನೂಕುತ್ತಿದ್ದೆವು. ಅವತ್ತು ಬೆಳಿಗ್ಗೆ ಶಾಮರಾಯರು ಊಹಿಸಿದಂತೆ ನನ್ನ ದೈನಂದಿನ ಕ್ರಮದಲ್ಲಿ ಸ್ವಲ್ಪ ಏರುಪೇರಾಗಿತ್ತು. ತರಗತಿಯಲ್ಲಿ ತಲೆ ಸುತ್ತು ಬಂತು ಅಷ್ಟೇ. ಶಾಮರಾಯರ ಹಿಂದೆ ಹೋಗಿ ತಲುಪಿದ್ದು ಅವರ ಮನೆಗೆ. 'ಲೇ, ನನ್ನ ಜೊತೆ ಇವನಿಗೂ ಊಟ ಹಾಕು' ಎಂದು ಅಡಿಗೆ ಮನೆಯಲ್ಲಿದ್ದ ತಮ್ಮ ಮಡದಿಗೆ ಕೇಳುವಂತೆ ಹೇಳಿದರು. ಮುಂದಿನ ಹದಿನೈದು ನಿಮಿಷಗಳಲ್ಲಿ ನಡೆದಿತ್ತು ನಮ್ಮ ಊಟ. 'ನಾಚಿಕೋಬೇಡ. ಈಟ್ ಶೇಮ್‌ಲೆಸ್ಲಿ. ಹಾಗಂದ್ರೇನು ಗೊತ್ತಾ? ಸಂಕೋಚವಿಲ್ಲದೆ ಊಟ ಮಾಡು ಅಂತ' ಅದನ್ನು ಅನುವಾದ ಮಾಡಿ ಬಾಯಿ ತುಂಬಾ ನಕ್ಕರು. ಅನಂತರ ನಿಧಾನವಾಗಿ ನನ್ನ ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿದರು.

ಒಂದು ಸಂಜೆ ಶಾಮರಾಯರು ನನ್ನನ್ನು ಕರೆದುಕೊಂಡು ಶ್ರೀ ಸುತ್ತೂರು ಮಠದ ಜಗದ್ಗುರುಗಳ ಬಳಿಗೆ ಹೋದರು. 'ಸ್ವಾಮೀಜಿ, ಈ ಹುಡುಗನಿಗೆ ನಿಮ್ಮ ಹಾಸ್ಟಲಿನಲ್ಲಿ ಅವಕಾಶ ಮಾಡಿ ಕೊಡಿ' ಎಂದು ಕೇಳಿಕೊಂಡರು. ತಮ್ಮ ವೈಯಕ್ತಿಕ ಕಾರಣಗಳಿಗಾಗಿ ಎಂದೂ ತಮ್ಮನ್ನು ಭೇಟಿಯಾಗದ ಶಾಮರಾಯರ ನಿಲುವನ್ನು ಬಲ್ಲ ಜಗದ್ಗುರುಗಳು ಕೊಂಚ ವಿನೋದದಿಂದ ಇವನು ಲಿಂಗಾಯಿತರ ಹುಡುಗ. ನೀವು ಬ್ರಾಹ್ಮಣರು. ಇವನಲ್ಲಿ ನಿಮಗೇಕೆ ಇಷ್ಟು ಆಸಕ್ತಿ?' ಎಂದರು. ಶಾಮರಾಯರು ಸ್ವಲ್ಪ ಕಟುವಾಗಿಯೇ ಹೇಳಿದರು: 'ಸ್ವಾಮೀಜಿ, ಇವನು ನನ್ನ ವಿದ್ಯಾರ್ಥಿ. ನನ್ನ ವಿದ್ಯಾರ್ಥಿಗಳು ನನ್ನ ಮಕ್ಕಳು. ಅವರು ಯಾವ ಜಾತಿಗೂ ಸೇರಿದವರಲ್ಲ. ಅವರದು ವಿದ್ಯಾರ್ಥಿಗಳ ಜಾತಿ. ನಾನು ಅವರ ಗುರು'. ಸ್ವಾಮೀಜಿಯವರ ಮುಖ ನಗುವಿನಿಂದ ಅರಳಿತು. ನನಗೆ ಸುತ್ತೂರು ವಿದ್ಯಾರ್ಥಿನಿಲಯದಲ್ಲಿ ಅಶನ–ವಸತಿಗಳ ಸೌಲಭ್ಯ ಲಭಿಸಿತು.

ನಾನು ಕಾಲೇಜಿಗೆ ಸೇರಿ, ಮೂರ್ನಾಲ್ಕು ತಿಂಗಳ ನಂತರ ಪ್ರೊಫೆಸರ್. ಎ.ಆರ್.ಕೃಷ್ಣಶಾಸ್ತ್ರಿಗಳು ನಿವೃತ್ತರಾಗಿ, ಅದುವರೆಗೂ ಬೆಂಗಳೂರಿನಲ್ಲಿದ್ದ ಕೆ.ವಿ.ಪುಟ್ಟಪ್ಪನವರು (ಕುವೆಂಪು) ಮಹಾರಾಜಾ ಕಾಲೇಜಿಗೆ ಪ್ರಾಧ್ಯಾಪಕರೂ ಮತ್ತು ಮುಖ್ಯಸ್ಥರೂ ಆಗಿ ಅಧಿಕಾರ ವಹಿಸಿಕೊಂಡರು. ಇಲ್ಲಿಂದ ಮುಂದೆ ಸುಮಾರು ಐದು ವರ್ಷಗಳ ಕಾಲ ಬಿ.ಎ., ಆನರ್ಸ್ ಮತ್ತು ಎಂ.ಎ., ತರಗತಿಗಳಲ್ಲಿ ಶ್ರೀ.ಕುವೆಂಪು ಅವರ ವಿದ್ಯಾರ್ಥಿಯಾಗುವ ಸುಯೋಗವೊಂದು ನನ್ನ ಪಾಲಿಗೆ ಲಭ್ಯವಾಯಿತು. ಅವರ ಆಗಮನದಿಂದ ಕನ್ನಡ ವಿಭಾಗದ ಚಹರೆಯೇ ಬದಲಾಯಿತು. ಮಹಾರಾಜಾ ಕಾಲೇಜಿನ ನಾಲ್ಕನೇ ನಂಬರಿನ ಕೊಠಡಿ ಮಹಾರಾಜ ಕಾಲೇಜಿನ ಆಕರ್ಷಣೆಯ ಕೇಂದ್ರವಾಯಿತು.

ಕುವೆಂಪು ಪ್ರಾಧ್ಯಾಪಕರಾಗಿದ್ದ ಕಾಲಮಾನದಲ್ಲಿ ಅವರ ಒಂಟಿಕೊಪ್ಪಲಿನ ಮನೆ 'ಉದಯರವಿ'ಯಿಂದ ನೇರವಾಗಿ ಮಹಾರಾಜಾ ಕಾಲೇಜಿಗೆ, ತಮ್ಮ ತರಗತಿಗಳಿದ್ದ ಸಮಯಕ್ಕೆ ಸರಿಯಾಗಿ ಬಂದು ಸದ್ದಿಲ್ಲದೆ ತಮ್ಮ ಕೊಠಡಿಯನ್ನು ಪ್ರವೇಶಿಸುತ್ತಿದ್ದರು. ಮತ್ತೆ ಅದ್ಯಾವಾಗಲೋ ನಿರ್ಗಮಿಸುತ್ತಿದ್ದರು. ಹೀಗಾಗಿ ಅವರನ್ನು ನೋಡಲೆಂದು ಮಹಾರಾಜಾ ಕಾಲೇಜಿನ ಕಾರಿಡಾರುಗಳಲ್ಲಿ ಬೇರೆ ಬೇರೆ ವಿಭಾಗದ ವಿದ್ಯಾರ್ಥಿಗಳು ಕಾದುಕೊಂಡು ನಿಂತದ್ದನ್ನು ನಾನು ಗಮನಿಸಿದ್ದೇನೆ. ಆದರೆ ಅವರ ವಿದ್ಯಾರ್ಥಿಗಳಾದ ನಮಗೆ ನಾಲ್ಕನೇ ನಂಬರಿನ ಕೊಠಡಿಯಲ್ಲಿ ಅವರೆದುರಿಗೆ ಕೂತು, ಅವರ ಭದ್ರಾಕೃತಿಯನ್ನು ನೋಡುವ ಮತ್ತು ಪಾಠವನ್ನು ಕೇಳುವ ಅವಕಾಶವಿತ್ತು. ಅವರ ಪಾಠವೆಂದರೆ ವಿವಿಧ ಸಾಹಿತ್ಯ ಪರಂಪರೆಗಳ ಹಾದಿಯಲ್ಲಿ ನಡೆಯುವ ಒಂದು ಪರ್ಯಟನವೆಂದೇ ಹೇಳಬಹುದು. ಅವರು

12th_Kannada_Reader_1-2.indd 33 22-05-2019 14:20:00

ನಮಗೆ ಮುಖ್ಯವಾಗಿ ಪಾಠ ಹೇಳಿದ್ದು ತೌಲನಿಕ ಕಾವ್ಯ ಮೀಮಾಂಸೆಯನ್ನು. ಅವರ ಬೋಧನೆ ಒಂದು ಬಗೆಯ ನವನವೋನ್ಮೇಷಶಾಲಿಯಾದ ಅನುಭವ ಪ್ರಪಂಚನ್ನು ಅನಾವರಣಗೊಳಿಸುವ ಸ್ವರೂಪದ್ದಾಗಿತ್ತು. ಹಾಗೆ ಪಾಠ ಮಾಡುವ ಅವರ ಎದುರಿಗೆ ಪೂರ್ವ ಸಿದ್ಧವಾದ ಯಾವುದೇ ತರಗತಿಯ ಟಿಪ್ಪಣಿಗಳೂ ಇರುತ್ತಿರಲಿಲ್ಲ. ಬದಲು ಅವರು ತಾವೇ ಕಾವ್ಯ ಚಿಂತನೆಯ ಮೂರ್ತ ರೂಪವೋ ಎಂಬಂತೆ ಕೂತು ತಮಗೆ ತಾವೇ ಮಾತನಾಡಿಕೊಳ್ಳುವಂತೆ ಅಥವಾ ಅಮೂರ್ತದಲ್ಲಿ ತೇಲಿ ಬರುವ ಹೊಳಹುಗಳಿಗೆ ಆಕಾರವನ್ನು ಕೊಡುವಂತೆ ಅನೇಕ ಪೂರ್ವ ಹಾಗೂ ಪಶ್ಚಿಮದ ಕವಿಗಳ ಮತ್ತು ಚಿಂತಕರ ವಿಚಾರ ಪಥಗಳಲ್ಲಿ ಸಂಚರಿಸುತ್ತಾ, ಜಾಗತಿಕ ಪ್ರಜ್ಞೆಯ ವಿಸ್ತಾರದಲ್ಲಿ ತಮ್ಮ ವಿದ್ಯಾರ್ಥಿಗಳ ಮನಸ್ಸು ಅರಳಿಕೊಳ್ಳಬೇಕೆಂದು ಸಂಕಲ್ಪ ಮಾಡಿಕೊಂಡವರಂತೆ ತೋರುತ್ತಿದ್ದರು. ಅವರ ಪಾಠವೆನ್ನುವುದು ಒಂದು ವ್ಯವಸ್ಥಿತ ತರ್ಕಬದ್ಧ ಪರಿಚಿತ ಪಥದಿಂದ ಆಚೆಯ ನೆಲೆಯಲ್ಲಿ ಸಂಚರಿಸುವ ಮಿಂಚು ಎಂದು ವರ್ಣಿಸುವುದು ಸೂಕ್ತವೆಂದು ತೋರುತ್ತದೆ. ಹೀಗಾಗಿ ನಮ್ಮ ಕೆಲಸವೇನಿದ್ದರೂ ನಮ್ಮ ನಮ್ಮ ಸಂಸ್ಕಾರಕ್ಕೆ ಅನುಗುಣವಾಗಿ ನಮಗೆ ದಕ್ಕಿದಷ್ಟನ್ನು ದಾಖಲು ಮಾಡಿಕೊಂಡು, ಆಮೇಲೆ ಒಂದು ವ್ಯವಸ್ಥೆಗೆ ತಂದುಕೊಳ್ಳುವುದು. ಅದೂ ಸುಲಭವಾದ ಕೆಲಸವೇನೂ ಆಗಿರಲಿಲ್ಲ.

ನನ್ನ ಹೈಸ್ಕೂಲಿನ ದಿನಗಳಿಂದಲೇ ಅದು ಹೇಗೋ ಪದ್ಯ ಬರೆಯುವ ಸೆಳೆತಕ್ಕೆ ಒಳಗಾದ ನನಗೆ ಮಹಾರಾಜ ಕಾಲೇಜಿನ ವಾತಾವರಣ ಒಂದು ಬಗೆಯ ವಸಂತ ಸ್ಪರ್ಷದಂತೆ ವರ್ತಿಸಿತೆಂದು ಹೇಳಬೇಕು. ಅದರಲ್ಲೂ ಕುವೆಂಪು ಅವರ ಸಾಹಿತ್ಯ ಮತ್ತು ವ್ಯಕ್ತಿತ್ವ ನನ್ನ ಕವಿತೆಗೆ ಸ್ಫೂರ್ತಿಯೂ ಮಾರ್ಗದರ್ಶಕವೂ ಆಯಿತು. ಸುತ್ತೂರು ಹಾಸ್ಟೆಲಿನ ನೆಮ್ಮದಿಯ ನೆಲೆಯಲ್ಲಿ ಕೂತು ಸಾಕಷ್ಟು ಪದ್ಯಗಳನ್ನು ಬರೆದೆ. ಹೀಗೆ ನಾನು ಬರೆದ ಕವಿತೆಗಳ ವಿಷಯ ನನ್ನ ಪ್ರಿಯ ಗುರು ತ.ಸು.ಶಾಮರಾಯರ ಕಣ್ಣಿಗೆ ಬೀಳುವುದು ತಡವಾಗಲಿಲ್ಲ. 'ಅದೇನ್ ಬರೆದಿದ್ದೀಯೋ ತಾರಯ್ಯ, ಕೇಳೋಣ' ಎಂದು ಅವರೆಂದದ್ದೇ ತಡ, ವಾರಕ್ಕೆ ಒಮ್ಮೆ ಅವರ ಮನೆಗೆ ಹೋಗಿ ಅವರ ಕಾರ್ಯಗೌರವವನ್ನೂ ಲೆಕ್ಕಿಸದೆ ಪದ್ಯಗಳನ್ನು ಓದುತ್ತಿದ್ದೆ. ಒಂದೊಂದು ಸಲ ಅವರ ಜೊತೆಗೆ ಸಂಚಾರ ಹೊರಟು ನಂಜನಗೂಡು ಮುಖ್ಯರಸ್ತೆಯಲ್ಲಿ ಎಡಗಡೆಗೆ ಒಂದಷ್ಟು ದೂರ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಪ್ರಶಸ್ತವಾದ ಬಂಡೆಯೊಂದರ ಮೇಲೆ ಆಸೀನರಾಗುತ್ತಿದ್ದೆವು. ಪಶ್ಚಿಮದಲ್ಲಿ ತೆಂಗಿನ ತೋಟದ ತುರುಗಲಿನಾಚೆ ದೂರದ ದಿಗಂತದಲ್ಲಿ ಸಂಜೆಯ ಸೂರ್ಯ ಥಳಥಳಿಸುವಾಗ, ಬಂಡೆಯ ಮೇಲೆ ಕುಳಿತು ಒಂದು ಚಿಟಕಿ ನಶ್ಯವನ್ನು ಮೂಗಿಗೆ ಏರಿಸಿ, 'ಸರಿ. ಶುರು ಮಾಡಯ್ಯ' ಎನ್ನುತ್ತಿದ್ದರು. ನಾನು ಆ ವಾರ ಬರೆದ ಪದ್ಯಗಳನ್ನು ಅವರಿಗೆ ಓದಿ ತೋರಿಸುತ್ತಿದ್ದೆ. ಅರ್ಧ ನಿಮೀಲಿತ ನಯನರಾಗಿ ಶಾಮರಾಯರು ತಲ್ಲೀನತೆಯಿಂದ ನನ್ನ ಎಂತೆಂತಹ ಕೆಟ್ಟ ಪದ್ಯಗಳನ್ನೂ, ಅವುಗಳಲ್ಲೇನೋ ಮಹಾವಿಶೇಷವಿದೆ ಎನ್ನುವಂತಹ ಮುಖ ಮುದ್ರೆಯಿಂದ ಕೇಳುತ್ತಿದ್ದ ಚಿತ್ರ ನನಗೆ ಇಂದಿಗೂ ಕಣ್ಣಿಗೆ ಕಟ್ಟಿದ ಹಾಗಿದೆ. 'ಎದೆ ತುಂಬಿ ಹಾಡಿದೆನು ಅಂದು ನಾನು' ಎಂಬ ನನ್ನದೊಂದು ಜನಪ್ರಿಯ ಕವಿತೆಯಿದೆಯಲ್ಲ, ಅದನ್ನು ನಾನು ಇದೇ ಕಾಲದಲ್ಲಿ ತ.ಸು.ಶಾಮರಾಯರನ್ನು ಉದ್ದೇಶಿಸಿಯೇ ಬರೆದದ್ದು. ನಾನು ಎದೆ ತುಂಬಿ ಬರೆದದ್ದನ್ನು ಮನಸ್ಸಿಟ್ಟು ಕೇಳಿದ ಮೊದಲಿಗರು ಅವರು.

ಶಾಮರಾಯರ ಅಕ್ಕರೆಯಲ್ಲಿ ರೂಪುಗೊಳ್ಳುತ್ತಿದ್ದ ನನ್ನ ಕವಿತೆ ನನಗೆ ಪ್ರಾಧ್ಯಾಪಕರಾಗಿದ್ದ ಕುವೆಂಪು ಅವರ ಗಮನಕ್ಕೆ ಬಂದದ್ದೂ ಒಂದು ಆಕಸ್ಮಿಕ. ನಾನು ಪದ್ಯ ಬರೆಯುತ್ತಿದ್ದರೂ, ಅಷ್ಟು ದೊಡ್ಡ ಕವಿಯಾದ ಕುವೆಂಪು ಅವರಿಗೆ ತೋರಿಸುವ ಧೈರ್ಯ ನನಗಿರಲಿಲ್ಲ. ಕುವೆಂಪು ಅವರನ್ನು ನೋಡುವುದು, ಅವರ ಮಾತುಗಳನ್ನು ಕೇಳುವುದು, ಬರೆದರೆ ಅವರ ಹಾಗೆಯೇ ಬರೆಯುವುದು... ಇತ್ಯಾದಿಗಳೇ ಸಾರ್ಥಕವಾದ ಕೆಲಸವಾಗಿದ್ದವು ನನ್ನ ಪಾಲಿಗೆ. ಕಿತ್ತು ತಿನ್ನುವ ಬಡತನ, ವೈಯಕ್ತಿಕವಾಗಿ ಹಲವಾರು ತಾಕಲಾಟಗಳು ಇಂತಹವುಗಳ ನಡುವೆಯೂ ಸೂರ್ಯೋದಯ ಚಂದ್ರೋದಯ, ಆದರ್ಶ, ಆಧ್ಯಾತ್ಮ ಇಂತಹವುಗಳೇ ನನ್ನ ಕವಿತೆಯ ಬಹುಮಟ್ಟಿನ ವಸ್ತುಗಳಾಗಿದ್ದವು. ಇದಕ್ಕೆ ಕಾರಣ ಅದು ನವೋದಯ ಉತ್ಕರ್ಷದ ಕಾಲ. ಕುವೆಂಪು, ಬೇಂದ್ರೆಯವರಂತಹವರ ಕವಿತೆ ಮತ್ತು ವ್ಯಕ್ತಿತ್ವಗಳು ತಮ್ಮ ಪ್ರಭಾವಗಳನ್ನು ಒಡ್ಡಿದ ಕಾಲ. ಒಂದು ಸಲ ನಾನು ಎರಡನೇ ಬಿ.ಎ., ಅನರ್ಸ್ ತರಗತಿಯಲ್ಲಿದ್ದ ಸಂದರ್ಭ ಎಂದು ಕಾಣುತ್ತದೆ. ಮಹಾರಾಜಾ ಕಾಲೇಜು ಕರ್ನಾಟಕ ಸಂಘ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಕವಿತಾ ಸ್ಪರ್ಧೆಯೊಂದಕ್ಕೆ ನಾನೊಂದು ಪದ್ಯವನ್ನು

12th_Kannada_Reader_1-2.indd 34 22-05-2019 14:20:00

ಕಳುಹಿಸಿಕೊಟ್ಟಿದ್ದೆ. ಆ ಸ್ಪರ್ಧೆಯಲ್ಲಿ ನನಗೆ ಮತ್ತು ಎ.ಕೆ. ರಾಮಾನುಜಂ ಅವರಿಗೆ (ಅವರು ಆಗ ಇಂಗ್ಲಿಷ್ ಬಿ.ಎ., ಆನರ್ಸ್ ತರಗತಿಯ ವಿದ್ಯಾರ್ಥಿ) ಈ ಕಾವ್ಯ ಸ್ಪರ್ಧೆಯ ಬಹುಮಾನಗಳು ಘೋಷಿತವಾದವು. ಹಾಗೆಯೇ ನನಗೆ ಒಂದು ಬಹುಮಾನ ಬಂದದ್ದು ನಾನು ಬರೆದ ಒಂದು 'ಭಯಂಕರ' ಪದ್ಯಕ್ಕೆ! ಕೆಲವು ತಿಂಗಳುಗಳ ಹಿಂದೆ ನಾನು ನನ್ನ ತರಗತಿಯ ಗೆಳೆಯರೂ, ಹಂಪೆ, ಬಾದಾಮಿ, ಪಟ್ಟದಕಲ್ಲು ಇತ್ಯಾದಿಗಳ ಕಡೆಗೆ ಪ್ರವಾಸ ಹೋಗಿದ್ದಾಗ ಒಂದು ಹುಣ್ಣಿಮೆಯ ರಾತ್ರಿ ತುಂಬು ಚಂದ್ರನನ್ನು ಹಠಾತ್ತನೆ ಅದೆಲ್ಲಿಂದಲೋ ಬಂದ ಕಾರ್ಮೋಡದ ಪಡೆಗಳು ಆಕ್ರಮಿಸಿಕೊಂಡದ್ದನ್ನು ಕಂಡ ಅನುಭವವನ್ನು ಕುರಿತದ್ದು ಆ ಪದ್ಯ. 'ಉಡುಗಣಗಳೊಡೆಯನಂಬರದ ಲಸಿತ ಲಕ್ಷ್ಯಸ್ತೋಮ ಹೇಮ ಧಾಮಾವ್ರತದಿ' ಎಂದು ಶುರುವಾಗುವ ಪದ್ಯ ಎಂದು ನನಗೆ ನೆನಪು. ಅದೃಷ್ಟವಶಾತ್ ಅದು ಎಲ್ಲೋ ಕಳೆದು ಹೋಯಿತು. ಮತ್ತೆ ಸಿಕ್ಕಲಿಲ್ಲ. ಅದು ಹಾಗಿರಲಿ, ಆ ಪದ್ಯಕ್ಕೆ ಬಂದ ಬಹುಮಾನವನ್ನು ಸ್ವೀಕರಿಸಲು ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಮಾರಂಭದ ದಿನ ವೇದಿಕೆಯ ಮೇಲೆ ಹೋದಾಗಲೇ ಕುವೆಂಪು ಅವರಿಗೆ ಗೊತ್ತಾದದ್ದು, ತಮ್ಮ ಈ ವಿದ್ಯಾರ್ಥಿ ಪದ್ಯ ಬರೆಯುತ್ತಾನೆ ಎನ್ನುವುದು. ಮರುದಿನ ತರಗತಿಯ ಪಾಠದ ನಂತರ ಕುವೆಂಪು ನನ್ನೊಬ್ಬನನ್ನು ಇರುವಂತೆ ಕೂರಿಸಿಕೊಂಡರು. ನನ್ನ ಪೂರ್ವೋತ್ತರಗಳನ್ನೆಲ್ಲ ವಿಚಾರಿಸಿಕೊಂಡರು. 'ಏನೇನು ಬರೆದಿದ್ದೀಯಾ? ಅದನ್ನೆಲ್ಲಾ ತಂದು ತೋರಿಸು' ಎಂದರು. ಒಂದೆರಡು ದಿನಗಳ ನಂತರ ನಾನು ಬರೆದ ಪದ್ಯಗಳ ಕಂತೆಯನ್ನು ತೆಗೆದುಕೊಂಡು ಹೋಗಿ ಅವರ ಕೈಗೆ ಕೊಟ್ಟೆ. 'ಅದ್ಯಾವುದು ಮೊನ್ನೆ ನಿನಗೆ ಬಹುಮಾನ ಬಂತಲ್ಲ? ಆ ಪದ್ಯ ಯಾವುದು?' ಎಂದರು. ನನ್ನ ಕವಿತೆಯ ಕಂತೆಯೊಳಗಿಂದ ಆ ಪದ್ಯವನ್ನು ತೆಗೆದು ತೋರಿಸಿದೆ. ಓದಿದರು. 'ಇದೇನಿದು? ಬೆಳದಿಂಗಳ ರಾತ್ರಿಯ ವರ್ಣನೆ ಇಷ್ಟೊಂದು ಭಯಂಕರವಾಗಿದೆಯಲ್ಲ?' ಎಂದರು. ನನಗೆ ಬಹುಮಾನವನ್ನು ತಂದುಕೊಟ್ಟ ಕವಿತೆ ಹೀಗೆ ಕೈ ಕೊಡುವುದೆಂದು ಊಹಿಸಿ ಕೂಡ ಇರಲಿಲ್ಲ. ನಾನು ನಾಚಿಕೆಯಿಂದ ಕುಸಿದು ಕುಗ್ಗಿದೆ. ಕುವೆಂಪು ನಕ್ಕರು. ಬೇರೆ ಇನ್ನೊಂದಷ್ಟು ಪದ್ಯಗಳ ಮೇಲೆ ಕಣ್ಣಾಡಿಸಿದರು. 'ಇವು ನಿಜವಾಗಿಯೂ ಚೆನ್ನಾಗಿವೆ. ಬರೀತಾ ಹೋಗಿ' ಎಂದರು. ನನಗೆ ಹೋದ ಜೀವ ಮರಳಿ ಬಂದಿತು. ಅವರು ಇಷ್ಟಪಟ್ಟ ಕೆಲವನ್ನು ತೋರಿಸಿ, 'ಕೆಲವನ್ನು ಪ್ರತಿ ಮಾಡಿ ಪ್ರಬುದ್ಧ ಸಂಪಾದಕರ ಕೈಗೆ ಕೊಡಿ. ಆಮೇಲೆ ನಾನು ಅವರ ಜೊತೆ ಮಾತನಾಡುತ್ತೇನೆ' ಎಂದರು. ಅನಂತರ ಮುಂದೆ ಎಷ್ಟೋ ಕಾಲ ನನ್ನ ಕವಿತೆಗಳು 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟವಾದವು. ಹಾಗೆ ಆ ಕಾಲದಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗುವುದು ಒಂದು ಪ್ರತಿಷ್ಠೆಯ ವಿಷಯವಾಗಿತ್ತು. ಮುಂದೆ ಅನತಿ ಕಾಲದಲ್ಲೇ ನಾನು ಬಿ.ಎ., ಆನರ್ಸ್ ಪರೀಕ್ಷೆಯಲ್ಲಿ ಪ್ರಥಮ ರ್ಯಾಂಕ್‌ನಲ್ಲಿ ತೇರ್ಗಡೆಯಾಗಿ ದಾವಣಗೆರೆಯ ಇಂಟರ್‌ಮೀಡಿಯೆಟ್ ಕಾಲೇಜಿಗೆ ಕನ್ನಡ ಅಧ್ಯಾಪಕನಾಗಿ 1949ನೇ ಜೂನ್ ತಿಂಗಳಲ್ಲಿ ನೇಮಕಗೊಂಡು ಅಲ್ಲಿಗೆ ಹೋದೆ.

ಅಲ್ಲಿ ನನಗೆ ಜೊತೆಯಾದವರು ಕಲಾವಿದರೂ ಸಾಹಿತ್ಯಾಸಕ್ತರೂ ಆದ ಗೆಳೆಯ ಪ್ರಭುಪ್ರಸಾದರು. ಅವರೂ ನಾನೂ ದಾವಣಗೆರೆಯ ಊರಾಚೆಯ ಬಟ್ಟ ಬಯಲಿನಲ್ಲಿ ದಿನವೂ ಸಂಜೆ ವಿಹಾರ ಹೊರಟು, ಆ ಬಟಾಬಯಲಿನ ನಡುವಣ ದಿಬ್ಬವೊಂದರ ಮೇಲೆ ಕೂತು, ಋತುಋತುವಿಗೂ ಬದಲಾಗುವ ಆ ಪರಿಸರದ ಸೊಗಸನ್ನು ತುಂಬಿಕೊಳ್ಳುತ್ತಿದ್ದೆವು. 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ' ಎಂಬ ಪದ್ಯ ಮೂಡಿದ್ದು ಆ ದಿನಗಳಲ್ಲೇ. ಈ ನಡುವೆ ಮೈಸೂರಿನಿಂದ ಶಾಮರಾಯರು ಪತ್ರ ಬರೆದು, 'ನಿನ್ನ ಎಲ್ಲಾ ಪದ್ಯಗಳನ್ನೂ ಕಾಪಿ ಮಾಡಿ ಕಳುಹಿಸು. ಈಗೊಂದು ಪ್ರಕಾಶನ ಶುರು ಮಾಡಿದ್ದೇವೆ. ಅದರ ಹೆಸರು "ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ". ಈ ಮಾಲೆಯಲ್ಲಿ ನಿನ್ನ ಕವನ ಸಂಗ್ರಹ ಪ್ರಕಟಿಸೋಣ' ಎಂದು ತಿಳಿಸಿದ್ದರು. ನನಗೋ ಆಶ್ಚರ್ಯ, ಆನಂದ ಹಾಗೂ ಸಂಭ್ರಮ. ನಾನೂ ಪ್ರಸಾದರೂ ಕೂತು ಒಂದಷ್ಟು ಪದ್ಯಗಳನ್ನು ಆರಿಸಿ 'ಸಾಮಗಾನ' ಎಂದು ಹೆಸರು ಕೊಟ್ಟು ಶಾಮರಾಯರಿಗೆ ಕಳುಹಿಸಿದೆವು. 1951ರಲ್ಲಿ ನನ್ನ ಮೊದಲ ಕವನ ಸಂಗ್ರಹ 'ಸಾಮಗಾನ' ಶ್ರೀ ಕುವೆಂಪು ಅವರ ಮುನ್ನುಡಿಯ ಸಮೇತ ಪ್ರಕಟವಾಗಿಯೇ ಬಿಟ್ಟಿತು.

ದಾವಣಗೆರೆಯಿಂದ ಮೈಸೂರಿಗೆ ವರ್ಗವಾಗಿ, ಎಂ.ಎ., ಓದಲು ಬಂದೆ. ಯುವರಾಜ ಕಾಲೇಜಿನಲ್ಲಿ ಅಧ್ಯಾಪಕ; ಮಹಾರಾಜಾ ಕಾಲೇಜಿನಲ್ಲಿ ಎಂ.ಎ., ವಿದ್ಯಾರ್ಥಿ. 1952ರಲ್ಲಿ ಎಂದು ಕಾಣುತ್ತದೆ. ಒಂದು ದಿನ ಪ್ರಜಾವಾಣಿಯಲ್ಲೋ, ಪ್ರಜಾಮತದಲ್ಲೋ ನೆನಪಿಲ್ಲ. ನನ್ನ ಮೊದಲ ಸಂಕಲನ ಸಾಮಗಾನದ ದೊಡ್ಡದೊಂದು ವಿಮರ್ಶೆ ಬಂದಿದೆ ಎಂದು ಯಾರೋ

12th_Kannada_Reader_1-2.indd 35 22-05-2019 14:20:00

ಹೇಳಿದರು. ಪತ್ರಿಕೆಯನ್ನು ದೊರಕಿಸಿಕೊಂಡು ನೋಡಿದೆ. ದೊಡ್ಡ ಅಕ್ಷರಗಳಲ್ಲಿ 'ಶಿವರುದ್ರಪ್ಪ–ಬಿಳಿಗಿರಿ'ಎಂಬ ಶೀರ್ಷಿಕೆ ಕಾಣಿಸಿತು. ಬಿಳಿಗಿರಿ ಆಗ ಎಂ.ಎ., ತರಗತಿಯಲ್ಲಿ ನನ್ನ ಕ್ಲಾಸ್‌ಮೇಟ್. ನನ್ನ – ಅವರ ಹೆಸರುಗಳ ಶೀರ್ಷಿಕೆಯ ಕೆಳಗೆ ನನ್ನ 'ಸಾಮಗಾನ' ಮತ್ತು ಬಿಳಿಗಿರಿಯವರ 'ನಂದನ' ಈ ಎರಡೂ ಪುಸ್ತಕಗಳ ವಿಸ್ತಾರವಾದ ವಿಮರ್ಶೆಗೆ ವಿಮರ್ಶಕರು ಕೊಟ್ಟ ಶೀರ್ಷಿಕೆಯಿಂದಲೇ ಅವರ ಉದ್ದೇಶ ಸ್ವಯಂ ಸ್ಪಷ್ಟವಾಗಿತ್ತು. ಮಾನ್ಯ ವಿಮರ್ಶಕರು ಅಂದಿನ ಸುಪ್ರಸಿದ್ಧ ಅಂಕಣ ಲೇಖನಕಾರರು. ಅವರ ಇಡೀ ಬರಹ ಪುಸ್ತಕ ವಿಮರ್ಶೆಯಾಗಿರದೆ ಒಬ್ಬ ಕವಿಯನ್ನು ಇನ್ನೊಬ್ಬ ಕವಿಯ ಮೇಲೆ ಎತ್ತಿ ಕಟ್ಟುವ ಧಾಟಿಯಲ್ಲಿತ್ತು. 'ಶಿವರುದ್ರಪ್ಪ ನಗರದಿಂದ ದೂರವಾದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಕೂತು ಆಕಾಶವನ್ನು ನೋಡುತ್ತಾ ಪದ್ಯ ಬರೆದವರು' ಎಂಬರ್ಥದ ಮಾತುಗಳನ್ನಾಡುವುದರ ಮೂಲಕ ನನ್ನ ಕವಿತೆ ಜೀವನದಿಂದ ದೂರವಾದದ್ದು, ಪಲಾಯನ ಪ್ರವೃತ್ತಿಯುಳ್ಳದ್ದು ಎಂಬುದನ್ನು ಸಾಧಿಸಿ ತೋರಿಸಿದ್ದರು. ಆದರೆ ಬಿಳಿಗಿರಿಯವರು (ಭದ್ರಾವತಿಯನ್ನೂ ಅಲ್ಲಿನ ಕಾರ್ಖಾನೆಗಳ ಚಿಮಣಿಗಳನ್ನೂ ಕೆಲವು ಪದ್ಯಗಳಲ್ಲಿ ವರ್ಣಿಸಿದ್ದರಿಂದಲೋ ಏನೋ) ನಿಜವಾದ ಕವಿಗಳೆಂದೂ, ಜೀವನವನ್ನು ಯಥಾವತ್ತಾಗಿ ಎದುರಿಸುವವರೆಂದೂ ಅರ್ಥ ಬರುವ ಮಾತುಗಳನ್ನು ಬರೆದಿದ್ದರು. ಆಗ ತಾನೇ ಕಾವ್ಯಲೋಕಕ್ಕೆ ಕಾಲಿರಿಸುತ್ತಿದ್ದ ಮೊದಲ ಕವಿಯ ಚೊಚ್ಚಲ ಕೃತಿಯನ್ನು ಕುರಿತು ಈ ಸುಪ್ರಸಿದ್ಧ ವಿಮರ್ಶಕರು, ಬರೆದ ವಿಮರ್ಶೆಯ ಧಾಟಿ ನನ್ನನ್ನು ತೀರಾ ಧೃತಿಗೆಡಿಸುವ ಸ್ಪಷ್ಟ ಉದ್ದೇಶದಿಂದ ಕೂಡಿತ್ತು. ಆಶ್ಚರ್ಯದ ಸಂಗತಿಯೆಂದರೆ ನನ್ನ ಸಹಪಾಠಿಯಾದ ಬಿಳಿಗಿರಿಯವರು ತಮಗೆ ದೊರೆತ ಈ ಪ್ರಶಂಸೆಯನ್ನು ತಮ್ಮ ಜೇಬಿಗೆ ಇಳಿಯಬಿಟ್ಟುಕೊಂಡು ಸಂತೋಷ ಪಡುವಷ್ಟು ಸಣ್ಣವರಾಗಿರಲಿಲ್ಲ. ಅವರು ಕೂಡಲೇ ಉಗ್ರವಾಗಿ ಆ ವಿಮರ್ಶೆಗೆ ಒಂದು ಪ್ರತಿಕ್ರಿಯೆಯನ್ನು ಬರೆದರು. ಅದೂ ಪದ್ಯ ರೂಪದಲ್ಲಿ. ಅದರ ಹೆಸರು 'ಕಾಮ್ರೇಡ್ ವಿಮರ್ಶಕ' ಇಬ್ಬರು ಸ್ನೇಹಿತರ ಕೃತಿಗಳನ್ನು ವಿಮರ್ಶೆಯ ನೆಪದಲ್ಲಿ ಎತ್ತಿಕೊಂಡು, ಒಬ್ಬರನ್ನು ಹೊಗಳಿ, ಇನ್ನೊಬ್ಬರನ್ನು ತೆಗಳುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರವೃತ್ತಿಯನ್ನು ಆ ಪದ್ಯದಲ್ಲಿ ತೀವ್ರವಾಗಿ ಅವರು ತರಾಟೆಗೆ ತೆಗೆದುಕೊಂಡಿದ್ದರು. ಇಂತಹ ಆರೋಗ್ಯಕರ ಪ್ರವೃತ್ತಿಯನ್ನು ಇವತ್ತು ಎಲ್ಲಿ ತರೋಣ.

ಬೆಂಗಳೂರು ವಿಶ್ವವಿದ್ಯಾಲಯದ ರೀಡರ್ ಹುದ್ದೆಗೆ(ಆಗ ರೀಡರ್ ಆದವರೇ ಮುಖ್ಯಸ್ಥರೂ ಕೂಡ) ನಾನು ಆಯ್ಕೆಯಾದ ಸಂದರ್ಶನದ ಸಂಗತಿ ಕೂಡ ಸ್ವಾರಸ್ಯವಾಗಿದೆ. ಸಂದರ್ಶನ ನಡೆದದ್ದು ಆಗಸ್ಟ್ ತಿಂಗಳ ಮಧ್ಯದ ಒಂದು ದಿನ. ಶ್ರೀ. ಎ.ಎಸ್.ಜಯರಾಮನ್ ಅಂದಿನ ತಾತ್ಕಾಲಿಕ ಕುಲಪತಿಯಾಗಿದ್ದರು. ಪ್ರೊಫೆಸರ್ ಮಾಳವಾಡರೂ, ಪ್ರೊಫೆಸರ್ ಡಿ.ಕೆ.ಭೀಮಸೇನರಾಯರೂ. ಸಂದರ್ಶಕ ಸಮಿತಿಯ ಪರಿಣತರು. ಅಂದು ಇಂಟರ್‌ವ್ಯೂಗೆ ಬಂದವರು ನನ್ನನ್ನೂ ಸೇರಿಸಿಕೊಂಡು ಏಳೆಂಟು ಜನ.

ಕರೆ ಬಂದಾಗ ಒಳಗೆ ಹೋದೆ. ನನ್ನ ಪ್ರವರಗಳನ್ನೆಲ್ಲ ಕೇಳಲಾಯಿತು. ನಾನು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಆದರ ಆಹ್ವಾನದ ಮೇಲೆ ಹೋಗಿದ್ದುದು, ವಿಭಾಗದ ಮುಖ್ಯಸ್ಥನಾಗಿ ಎರಡು ವರ್ಷಗಳು ನಾನು ಮಾಡಿದ್ದ ಕೆಲಸ ಹಾಗೂ ನಾನು ಪಡೆದುಕೊಂಡ ಅನುಭವ, ಇಲ್ಲಿ ಈ ಸಂದರ್ಭದಲ್ಲಿ ನನ್ನ ಬೆಂಬಲಕ್ಕೆ ನಿಂತವು. ಸಂದರ್ಶನದ ಸಮಯದಲ್ಲಿ ಪ್ರೊಫೆಸರ್ ಭೀಮಸೇನರಾಯರು ನನ್ನನ್ನು ಸುಲಭವಾಗಿ ಉರುಳಿಸುವ ವ್ಯಾಕರಣಗಳ ಬತ್ತಳಿಕೆಗೆ ಕೈ ಹಾಕಿದರು. ನಾನು ನನ್ನ ಗುರಾಣಿ ಮನವಿಯನ್ನು ಮುಂದೊಡ್ಡಿ, 'ದಯ ಮಾಡಿ ವ್ಯಾಕರಣ ಕುರಿತು ನನಗೆ ಪ್ರಶ್ನೆ ಹಾಕಬೇಡಿ. ನನ್ನ ಕ್ಷೇತ್ರ ಅದಲ್ಲ. ಸಾಹಿತ್ಯವನ್ನು ಕುರಿತು. ಅದು ಯಾವ ಕಾಲದ್ದೇ ಆಗಿರಲಿ– ಏನು ಬೇಕಾದರೂ ಕೇಳಿ, ನಾನು ತಯಾರು' ಎಂದೆ. ಅನಂತರ ಪ್ರೊಫೆಸರ್ ಮಾಳವಾಡರು ಹಲವಾರು ಉತ್ತರ ಪಡೆದುಕೊಂಡ ನಂತರ ತಾವು ತಂದಿದ್ದ ಷಡಕ್ಷರ ಕವಿಯ 'ಶಬರ ಶಂಕರ ವಿಲಾಸ' ಗ್ರಂಥವನ್ನು ತೆರೆದು ಅದರಲ್ಲಿನ ಒಂದು ಪದ್ಯವನ್ನು ತೋರಿಸಿ, ಅದರ ಅರ್ಥವನ್ನು ಹೇಳಿ ಎಂದರು. ಕೂಡಲೇ ನಾನು 'ಹೇಳುವುದಿಲ್ಲ' ಎಂದೆ. 'ಯಾಕೆ ಹೇಳುವುದಿಲ್ಲ?' ಎಂದರು ಮಾಳವಾಡರು. ನಾನೆಂದೆ 'ನೋಡಿ ಸಾರ್. ನಾನು ಒಬ್ಬ ಅಧ್ಯಾಪಕ. ಹದಿನೈದು ವರ್ಷಗಳಿಗೂ ಮೀರಿದ ಕಾಲದಲ್ಲಿ ಪಾಠ ಹೇಳಿದ್ದೇನೆ. ತರಗತಿಗೆ ಹೋಗುವ ಮುನ್ನ ಸಾಕಷ್ಟು ಪೂರ್ವ ಸಿದ್ಧತೆ ಮಾಡಿಕೊಂಡೇ ಪಾಠ ಹೇಳುವುದು ನನ್ನ ಪದ್ಧತಿ. ಹೀಗಿರುವಾಗ ಇದ್ದಕ್ಕಿದ್ದ ಹಾಗೆ ಯಾವುದೋ ಪದ್ಯವನ್ನು ತೋರಿಸಿ ಅದಕ್ಕೆ ಅರ್ಥ ಹೇಳು ಎನ್ನುತ್ತೀರಿ. ಇದರ ಮೇಲೆ ರೀಡರ್ ಅಂಥ ಹುದ್ದೆಗೆ ಬಂದ ನನ್ನನ್ನು, ಯಾವುದೋ

12th_Kannada_Reader_1-2.indd 36 22-05-2019 14:20:00

ಪದ್ಯವೊಂದರ ಅರ್ಥವನ್ನು ನಾನು ಹೇಳಬಲ್ಲೆನೋ, ಇಲ್ಲವೋ ಎಂದು ಶಂಕಿಸುತ್ತಿದ್ದೀರಿ. ಈ ಕಾರಣಗಳಿಂದ ನಾನು ಈ ಪದ್ಯಕ್ಕೆ ಅರ್ಥ ಹೇಳುವುದಿಲ್ಲ' ಎಂದೆ. ಕುಲಪತಿಗಳು ಕುತೂಹಲದಿಂದ, ರಿಜಿಸ್ಟ್ರಾರ್ ಮಲ್ಲಿಕಾರ್ಜುನಪ್ಪನವರು ಸ್ವಲ್ಪ ಗಾಬರಿಯಿಂದ ಸ್ವಲ್ಪ ಅನುಕಂಪದಿಂದ ನನ್ನ ಕಡೆ ನೋಡುತ್ತಿದ್ದರು. ಸ್ವಲ್ಪ ಸುಧಾರಿಸಿಕೊಂಡ ಮಾಳವಾಡರು, 'ಹೋಗಲಿ ಬಿಡಿ. ಅರ್ಥ ಹೇಳಬೇಡಿ. 'Please enlighten me about this poem' ಎಂದರು. ಆ ಪದ್ಯವನ್ನು ಓದಿ ನೋಡಿದೆ. ಅದೊಂದು ಬೆಳಕಿಲ್ಲದ ಪದ್ಯ. 'Sir, there is no light in this poem to enlighten you' ಎಂದೆ. ಕುಲಪತಿಗಳು ಮತ್ತು ರೆಜಿಸ್ಟ್ರಾರ್ ಎಲ್ಲರೂ ಗಟ್ಟಿಯಾಗಿ ನಕ್ಕರು. ವಾತಾವರಣ ತಿಳಿಯಾಯಿತು. ಕೂಡಲೇ ಮಲ್ಲಿಕಾರ್ಜುನಪ್ಪನವರು, 'ಶಿವರುದ್ರಪ್ಪನವರೇ, ನೀವು ಒಳ್ಳೆಯ ಕವಿ ಎಂದು ಹೆಸರು ಮಾಡಿದ್ದೀರಿ. ಯಾವುದಾದರೂ ನಿಮ್ಮದೊಂದು ಪದ್ಯ ಓದಿ. ಕೇಳೋಣ' ಎಂದರು. ಓದಿದೆ. ಜಯರಾಮನ್ ಅವರು ಇನ್ನೂ ಒಂದು ಓದಿ ಎಂದರು. ಸಂದರ್ಶನ ಹೋಗಿ ಕಾವ್ಯ ವಾಚನ ಗೋಷ್ಠಿಯಾಯಿತು. ಲೌಕಿಕವಾಗಿಯೂ ಕವಿತೆ ನನ್ನನ್ನು ಕಾಪಾಡಿತು.

ಈ ಸಂದರ್ಶನ ಫಲಿತಾಂಶವನ್ನು ತಿಳಿದ ಆಗಿನ ಕಾಲದ ದೊಡ್ಡ ಪಂಡಿತ ರತ್ನರೊಬ್ಬರು ಹೇಳಿದರಂತೆ : 'ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಡಿಪಾರ್ಟ್‌ಮೆಂಟ್ ಹಾಳಾಗಿ ಹೋಯಿತು. ಮಹಾಕವಿ ಷಡಕ್ಷರ ದೇವನ ಪದ್ಯಕ್ಕೆ ಅರ್ಥ ಹೇಳಲಾಗದಂತಹವರನ್ನು ಒಂದು ವಿಭಾಗದ ಮುಖ್ಯಸ್ಥರನ್ನಾಗಿ ಮಾಡಿದ ಮೇಲೆ ನಮ್ಮ ಶಿಕ್ಷಣದಲ್ಲಿ ಸ್ಟ್ಯಾಂಡರ್ಡ್ ಏನು ಉಳಿಯಿತು?'

ಕೃತಿ–ಕರ್ತೃ ವಿಚಾರ

ಜಿ.ಎಸ್.ಶಿವರುದ್ರಪ್ಪನವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ 1926ರಲ್ಲಿ ಜನಿಸಿದರು. ಇವರು ನವೋದಯ ಮತ್ತು ನವ್ಯ ಎರಡೂ ಸಂಪ್ರದಾಯಗಳಲ್ಲೂ ಕಾವ್ಯ ರಚಿಸಿದ ಕವಿಯೆನಿಸಿದ್ದಾರೆ. ಸೌಂದರ್ಯ ಪ್ರಜ್ಞೆ, ನವಜೀವನದ ಆದರ್ಶ ಮತ್ತು ವೈಚಾರಿಕತೆ ಶಿವರುದ್ರಪ್ಪನರ ಕವಿತೆಗಳ ಜೀವ ದ್ರವ್ಯ. ಮೈಸೂರು ಮತ್ತು



ಹೈದರಾಬಾದುಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನಿರ್ವಹಿಸಿದ ಸಾಂಸ್ಕೃತಿಕ ಆಧುನಿಕ ಕನ್ನಡದ ಅಭಿವೃದ್ಧಿಗೆ ಪ್ರೇರಕವಾಗಿವೆ.

ಸೌಂದರ್ಯ ಸಮೀಕ್ಷೆ ಶಿವರುದ್ರಪ್ಪನವರ ಮಹಾಪ್ರಬಂಧ ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯನ್ನು ಅತ್ಯಂತ ಪ್ರೌಢಶೈಲಿಯಲ್ಲಿ ನಿರೂಪಿಸುವ ಕೃತಿ. ವಿಮರ್ಶೆಯ ಪೂರ್ವ ಪಶ್ಚಿಮ, ಗತಿಬಿಂಬ, ಕಾವ್ಯಾರ್ಥ ಚಿಂತನ ಗ್ರಂಥಗಳು ಶಿವರುದ್ರಪ್ಪನವರ ವಿಮರ್ಶಾ ಪ್ರಜ್ಞೆಗೆ ನಿದರ್ಶನವಾಗಿದೆ. ಚೆಲುವು ಒಲವು, ದೇವಶಿಲ್ಪ, ಕಾರ್ತಿಕ, ದೀಪದ ಹೆಜ್ಜೆ, ಗೋಡೆ, ಪ್ರೀತಿ ಇಲ್ಲದ ಮೇಲೆ, ಚಕ್ರಗತಿ ಮುಂತಾದ 13 ಕವನ ಸಂಕಲನಗಳನ್ನು ಇವರು ರಚಿಸಿದ್ದಾರೆ. ಇವರ ಬರಹಗಳ ವೈವಿಧ್ಯತೆ ಹಾಗೂ ವ್ಯಾಪಕತೆಯನ್ನು ಈ ಕವನ ಸಂಕಲನಗಳಲ್ಲಿ ಕಾಣಬಹುದು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಸಂದಿವೆ. ಇವರು ದಾವಣಗೆರೆಯಲ್ಲಿ 1992ರಲ್ಲಿ ನಡೆದ 61ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಈ ಲೇಖನವನ್ನು ಇವರ 'ಸೌಂದರ್ಯ ಸಮೀಕ್ಷೆ' ಎನ್ನುವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

12th_Kannada_Reader_1-2.indd 37 22-05-2019 14:20:00

ಪದಗಳ ಅರ್ಥ

ವಾಚನ–ಓದುವುದು; ಅನಿರ್ವಚನೀಯ–ಮಾತುಗಳಲ್ಲಿ ಹೇಳಲಾಗದ, ವರ್ಣಿಸಲಾಗದ; ಭೋರ್ಗರೆಯುವ–ಧುಮ್ಮುಕ್ಕಿ ಸುರಿಯುವ, ಜೋರಾಗಿ ಹರಿಯುವ ಶಬ್ದ; ಉತ್ಕರ್ಷ–ಹೊಮ್ಮುವುದು, ಹೆಚ್ಚುವುದು; ಸುಯೋಗ–ಒಳ್ಳೆಯ ಯೋಗ; ಅಮೂರ್ತ–ರೂಪವಿಲ್ಲದ; ಶೀರ್ಷಿಕೆ–ತಲೆಬರಹ; ಪ್ರೇರಣೆ–ಸ್ಫೂರ್ತಿ; ಉಪಚಾರ–ಸತ್ಕರಿಸು, ಆತಿಥ್ಯ; ಚಳವಳಿ–ಆಂದೋಲನ, ವ್ಯಾಖ್ಯಾನ–ವಿವರಣೆ; ನಿರರ್ಗಳ–ಓತಪ್ರೋತ, ಒಂದೇ ಸಮನೆ; ಆಕರ್ಷಕ–ಮನ ಸೆಳೆಯುವಂತಹ, ಸುಂದರವಾದ; ಚಹರೆ–ಗುರುತು; ಪರ್ಯಟನೆ–ಪ್ರಯಾಣ, ಪ್ರವಾಸ; ಅನಾವರಣ–ಪ್ರಕಟ, ಹೊರ ತೋರುವಂತೆ ಮಾಡುವುದು; ಪಥ–ದಾರಿ, ಹಾದಿ; ಹಠಾತ್ತನೆ–ದಿಢೀರನೆ, ಇದ್ದಕ್ಕಿದ್ದಂತೆ; ದಿಬ್ಬ–ಎತ್ತರದ ಪ್ರದೇಶ, ದಿಣ್ಣೆ; ಯಥಾವತ್ತಾಗಿ–ಅದೇ ರೀತಿಯಲ್ಲಿ, ಮೊದಲಿದ್ದಂತೆಯೇ; ಧೃತಿಗೆಡು–ಧೈರ್ಯಗೆಡು, ಎದೆಗುಂದು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲೇಖಕರಿಗೆ ಸಾಹಿತ್ಯದ ಬಗ್ಗೆ ಆಸಕ್ತಿ ಹುಟ್ಟಿಸಿದ ಪ್ರಸಂಗಗಳಾವುವು ?
2. ಲೇಖಕರ ಪ್ರಥಮ ಕವನ ಸಂಗ್ರಹ ಯಾವುದು ?
3. ಹಾಸ್ಟೆಲಿನ ವಾರ್ಡನ್ ಜಿ.ಎಸ್.ಎಸ್. ಅವರ ಬೆನ್ನು ತಟ್ಟಲು ಕಾರಣವೇನು?
4. ಜಿ.ಎಸ್.ಎಸ್.ರನ್ನು ಪ್ರಭಾವಿತಗೊಳಿಸಿದ ಇಂಗ್ಲಿಷ್ ಕವಿಗಳು ಯಾರು ಯಾರು?
5. ಕನ್ನಡವನ್ನು ಇಂಗ್ಲಿಷಿನಲ್ಲಿ ಪಾಠ ಮಾಡಿದ ಪ್ರೊಫೆಸರ್ ಯಾರು ?
6. ರೇಷನ್ ಧರ್ಮರಾಯ ಎಂದವರು ಯಾರು ?
7. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಯಾರು ಪ್ರಾರಂಭಿಸಿದರು?
8. ಜಿ.ಎಸ್.ಎಸ್.ರ ಕಾವ್ಯ ನಿರ್ಮಿತಿಗೆ ಪ್ರಥಮ ಸ್ಫೂರ್ತಿ ಯಾರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಜಿ.ಪಿ.ರಾಜರತ್ನಂ ಅವರನ್ನು ಪರಿಚಯಿಸಿ.
2. ಸಿದ್ಧಗಂಗಾ ಮಠದ ಬಗ್ಗೆ ಲೇಖಕರ ಅಭಿಪ್ರಾಯವೇನು ?
3. ಸಾಹಿತಿ ರಾಘವಾಚಾರ್ಯರನ್ನು ಪರಿಚಯಿಸಿ.
4. ಕುಮಾರವ್ಯಾಸನ ಸ್ಪೆಷಲಿಸ್ಟ್ ಯಾರು? ಅವರ ವಿಶೇಷತೆಗಳೇನು ?
5. ಮಹಾರಾಜಾ ಕಾಲೇಜು ಆಕರ್ಷಣೀಯ ಕೇಂದ್ರವಾಗಲು ಕಾರಣವೇನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸರ್ಕಾರದ ಮೆಮೋಗೆ ಜಿ.ಪಿ.ರಾಜರತ್ನಂ ಅವರು ಹೇಗೆ ಪ್ರತಿಕ್ರಿಯಿಸಿದರು ?
2. ಜಿ.ಎಸ್.ಎಸ್.ರ ಬಿ.ಎ., ಆನರ್ಸ್ ಕನ್ನಡ ವಿಭಾಗವನ್ನು ಪರಿಚಯಿಸಿ.
3. ತ.ಸು.ಶಾಮರಾಯರು ಮತ್ತು ಜಿ.ಎಸ್.ಎಸ್.ರ ನಡುವಿನ ಒಡನಾಟವನ್ನು ವಿವರಿಸಿ?
4. 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ' ಎನ್ನುವ ಕವನದ ರಚನೆಯ ಸಂದರ್ಭವನ್ನು ತಿಳಿಸಿ.
5. ಜಿ.ಎಸ್.ಎಸ್.ರವರ ಸಾಮಗಾನಕ್ಕೆ ಬಂದ ವಿಮರ್ಶೆ ಹೇಗಿತ್ತು?

ಭಾಷಾಭ್ಯಾಸ

1. ಕೆಳಗಿನ ಪದಗಳ ವ್ಯಾಕರಣ ವಿಶೇಷತೆಯನ್ನು ತಿಳಿಸಿ

ಕಂತುಕಂತಾಗಿ, ಮೂಲೆಮೂಲೆಗಳಲ್ಲಿ, ಮೊಟ್ಟಮೊದಲು.

12th_Kannada_Reader_1-2.indd 38 22-05-2019 14:20:00

2. **ಕೆಳಗಿನ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.**
ಕಾವ್ಯ, ಸ್ನೇಹ, ಶ್ರೀ, ವಿನೋದ, ವಿಸ್ತಾರ, ಕವಿ, ಅಕ್ಷರ.

3. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.**
ಕಾವ್ಯಾಸಕ್ತಿ, ದೋಣಿಯಲ್ಲಿ, ಇರುವೆಯೊಂದು, ಊರೂರು, ಋಷ್ಯಾಶ್ರಮ, ಇತ್ಯಾದಿ, ಘೋರಾರಣ್ಯ, ನವೋದಯ, ಹಳಗನ್ನಡ, ಪೂರ್ವೋತ್ತರ, ಜಗದ್ಗುರು, ಭದ್ರಾಕೃತಿ, ದಿಗಂತ, ವಾರ್ಷಿಕೋತ್ಸವ.

4. **ಕೆಳಗಿನ ಪದಗಳನ್ನು ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**
ಮರ್ಮರಗಳು, ಮುನ್ನುಡಿ, ಮುಕ್ಕಾಲು, ಕಾರ್ಮೋಡ, ಒಂದಷ್ಟು.

5. **ಕೆಳಗಿನ ನುಡಿಗಟ್ಟಗಳ ಅರ್ಥ ಬರೆದು, ಸ್ವಂತ ವಾಕ್ಯಗಳನ್ನು ರಚಿಸಿ.**
ಹಿಗ್ಗಿಹೀರೇಕಾಯಾಗಿ, ಅಲ್ಲೋಲಕಲ್ಲೋಲ, ಕಸಿವಿಸಿ, ಏರುಪೇರಾಗಿತ್ತು, ಅನಾವರಣಗೊಳಿಸು, ಕಣ್ಣಿಗೆ ಕಟ್ಟಿದ ಹಾಗೆ, ಪ್ರತಿಷ್ಠೆಯ ವಿಷಯ, ಬಟಾಬಯಲು.

6. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
ಆಸಕ್ತಿ, ಆಗಮನ, ಮೂರ್ತ, ಪರಿಚಿತ, ಉತ್ಕರ್ಷ.

ಚಟುವಟಿಕೆ

1. ಪುಸ್ತಕಾಲಯಕ್ಕೆ ಭೇಟಿ ನೀಡಿ ಖ್ಯಾತ ಕನ್ನಡ ಕವಿಗಳ ಆತ್ಮಚರಿತ್ರೆಗಳನ್ನು ಓದಿರಿ.
2. ವಿದ್ಯಾರ್ಥಿಗಳಾದ ನಾವು ದಿನನಿತ್ಯ ದಿನಚರಿಯನ್ನು ಬರೆದಿಡುವ ಪರಿಪಾಠವನ್ನು ಬೆಳೆಸಿಕೊಳ್ಳೋಣ. ಮುಂದೆ ನಾವೂ ನಮ್ಮ ಆತ್ಮಚರಿತ್ರೆಗಳನ್ನು ಬರೆದುಕೊಳ್ಳುವ ಮಟ್ಟಿಗೆ ನಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳೋಣ.

ವನಸುಮ.... ಡಿ.ವಿ.ಜಿ



ವನಸುಮದೊಲೆನ್ನ ಜೀ..ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ - ಹೇ ದೇವ॥ಪ॥
ಜನಕೆ ಸಂತಸವೀವ..ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ॥
ಕಾನನದಿ ಮಲ್ಲಿಗೆಯು..ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ..ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ ॥
ಉಪಕಾರಿ ನಾನು ಎ..ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು..ವಿಪುಲಾಶ್ರಯವನೀವ
ಸುಫಲಸುಮಭರಿತ ಪಾ
ದಪದಂತೆ ನೈಜಮಾದೊಳ್ವಿಂ ಬಾಳ್ವವೊಲು ॥

12th_Kannada_Reader_1-2.indd 39 22-05-2019 14:20:00

ಉಪಪಠ್ಯ

ಘಟಕ ಎರಡು

ಮಗು ಕಲಿಸಿದ ಪಾಠ

– ತಿರುಮಲೆ ರಾಜಮ್ಮ



ಹುಟ್ಟುತ್ತಲೇ ಯಾರೂ ಕೆಟ್ಟವರಾಗಿರುವುದಿಲ್ಲ. ಸಂದರ್ಭಗಳು ಅವರನ್ನು ಕೆಟ್ಟವರನ್ನಾಗಿ ಮಾಡಿರುತ್ತವೆ. ಅಂತಹವರಿಗೆ ಬದಲಾಗುವ ಅವಕಾಶಗಳನ್ನು ಮಾಡಿಕೊಟ್ಟಾಗ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಪರಿವರ್ತನೆಗೊಳ್ಳುತ್ತಾರೆ. ಪರಿಶುದ್ಧ ಮನಸ್ಸಿನ ವ್ಯಕ್ತಿಯ ಒಡನಾಟ ಯಾವಾಗಲೂ ಸಂತೋಷವನ್ನು ತರುತ್ತದೆ. ಅದಕ್ಕೇ ಹೇಳುವುದು ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂದು. ಪ್ರಸ್ತುತ ಪಾಠದಲ್ಲಿ ಸಜ್ಜನ ನಡವಳಿಕೆಗಳಿಂದ ಕಳ್ಳರ ಮನಸ್ಸು ಪರಿವರ್ತನೆಗೊಂಡ ಒಂದು ಸನ್ನಿವೇಶವನ್ನು ಇಲ್ಲಿ ನೀಡಲಾಗಿದೆ. ಅಂತಹ ಸಜ್ಜನ ನಡವಳಿಕೆಗಳನ್ನು ನಾವು ರೂಢಿಸಿಕೊಳ್ಳಬೇಕು.



12th_Kannada_Reader_1-2.indd 40 22-05-2019 14:20:01

ಕೇವಲ ಅನಾಗರಿಕರಾಗಿ ತಾವು ಮನುಷ್ಯರೆಂಬ ಅರಿವೇ ಇಲ್ಲದೆ ಮೃಗಗಳಂತೆ ಕಾಡುಮೇಡುಗಳಲ್ಲಿ, ಬೆಟ್ಟಗುಡ್ಡ ಗುಹೆಗಳಲ್ಲಿರುತ್ತಾ ಬದುಕುತ್ತಿದ್ದ ಕಾಡುಜನರ ಗುಂಪೊಂದಿತ್ತು... ನಿಂತಲ್ಲಿ ನಿಲ್ಲದೆ ತಿರುಗುವುದು, ಎಲ್ಲಿ ಏನು ಸಿಕ್ಕಿದರದನ್ನು ಜೀವಧಾರಣ ಮಾಡುವುದು ಇದು ಅವರ ಪದ್ಧತಿ. ಅವರು ಮಾಂಸಾಹಾರಿಗಳು, ನರಭಕ್ಷಕರು. ಸಮಯ ಹೊಂಚಿದ್ದು ಯಾರನ್ನಾದರೂ ಎತ್ತಿಕೊಂಡು ಹೋಗಿ ಒಬ್ಬೊಬ್ಬರಾಗಿ ಹಾಗೆಯೇ ಆ ದೇಹವನ್ನು ಕಚ್ಚಿ ತಿನ್ನುವಂತಹ ಪಿಶಾಚ ಪ್ರಕೃತಿಯ ಆ ಜನಕ್ಕೆ ಮನುಷ್ಯರಿಗೂ ಮೃಗಗಳಿಗೂ ವ್ಯತ್ಯಾಸವೇನೋ ಅದೂ ಸಹ ತಿಳಿಯದು. ನೋವು ಅಂದರೇನೋ ಆ ಕಲ್ಪನೆಗೆ ಆಸ್ಪದವೇ ಇಲ್ಲ. ಒಂದೊಂದು ಸಲ ಅವರು ಊರುಗಳ ಕಡೆಗೂ ಬರುವುದುಂಟು. ಒಂದೆರಡು ದಿನಕ್ಕಿಂತ ಹೆಚ್ಚಾಗಿ ಅವರು ಎಲ್ಲಿಯೂ ನಿಲ್ಲುವುದಿಲ್ಲ. ಆ ಗುಂಪಿಗೆ ಒಬ್ಬ ಯಜಮಾನ. ಅವನು ಹೇಳಿದಂತೆ ಇನ್ನೆಲ್ಲರೂ ನಡೆದುಕೊಳ್ಳಬೇಕು.

ಒಂದು ಸಲ ನಾಲ್ಕೈದು ಜನ ಒಟ್ಟಿಗೆ ಸಣ್ಣದೊಂದು ಊರಿಗೆ ಬಂದರು... ಒಬ್ಬೊಬ್ಬರೂ ಒಂದೊಂದು ಹಾದಿ ಹಿಡಿದು ಹೋದರು. ಅದರಲ್ಲಿ ಒಬ್ಬನು ಹಿಡಿದು ಹೊರಟ ದಾರಿ ನೇರವಾಗಿ ಊರೊಳಕ್ಕೆ ಸಾಗಿತ್ತು. ಅವನು ಊರೊಳಗೆ ಅಲ್ಲಲ್ಲಿ ಸುತ್ತಾಡಿ ಒಂದು ಸಂದಿಗೆ ತಿರುಗಿದ. ಅಲ್ಲಿ ಎರಡು ಕಡೆಗೂ ಕೆಲವು ಮನೆಗಳಿದ್ದವು. ಬಡವರ ಮನೆಗಳು.

ಒಂದು ಮನೆಯ ಬಾಗಿಲು ಸ್ವಲ್ಪ ಓರೆ ಮಾಡಿತ್ತು. ಒಬ್ಬ ಹೆಣ್ಣು ಮಗಳು, ಮಗುವನ್ನು ಮಡಿಲಲ್ಲಿಟ್ಟುಕೊಂಡು ಹಾಲುಣಿಸುತ್ತಿದ್ದಳು. ಮಗು ಹಾಗೇ ನಿದ್ದೆ ಮಾಡಿತು. ಅದು ಪಡಸಾಲೆ. ಅಲ್ಲಿಯೇ ಒಂದು ಪಕ್ಕಕ್ಕೆ ತೊಟ್ಟಿಲು. ಮಗುವನ್ನು ಆಕೆ ತೊಟ್ಟಿಲಲ್ಲಿ ಮಲಗಿಸಿ, ಹೊದಿಸಿ ಏನೋ ನೆನೆಸಿಕೊಂಡು ಒಳಗೆ ಹೋದಳು. ದೂರದಿಂದ ಹೊಂಚಿ ನೋಡುತ್ತಿದ್ದ ಆ ಒಬ್ಬನು ಕೂಡಲೇ ಒಳಗೆ ನುಗ್ಗಿ ಆ ಮಗುವನ್ನು ಬಟ್ಟೆಯಲ್ಲಿ ಸುತ್ತಿ ಎತ್ತಿಕೊಂಡು ಓಡಿದ. ಬಾಗಿಲನ್ನಿಕ್ಕಲು ಬಂದ ತಾಯಿ, ಮಗು ನಿದ್ದೆ ಮಾಡುತ್ತಿದೆ ಎಂಬ ನಂಬಿಕೆಯಿಂದ ತೊಟ್ಟಿಲು ಕಡೆ ನೋಡದೆ, ಮನೆಗೆಲಸಗಳಿಗೆ ಒಳಕ್ಕೆ ಹೋದಳು.

ಊರ ಹೊರಗೆ ಮನುಷ್ಯ ಸಂಚಾರ ಇಲ್ಲದ ಒಂದು ಕಡೆ, ಆ ಗುಂಪಿನ ಯಜಮಾನ ತನ್ನವರಿಗಾಗಿ ಕಾಯುತ್ತ ಇದ್ದಾನೆ. ಮೂರು ಕಡೆ ಹೋಗಿದ್ದವರು ಬರಿಗೈಯಲ್ಲಿ ಬಂದರು. ನಾಲ್ಕನೆಯವನು ಒಂದು ಬಟ್ಟೆ ಸುತ್ತಿದ ವಸ್ತುವಿನೊಂದಿಗೆ ಬಂದು ಅದನ್ನು ಯಜಮಾನನ ಮುಂದೆ ಒಪ್ಪಿಸಿದ. ಯಜಮಾನ ಅದನ್ನು ಬಿಚ್ಚಿ ನೋಡಿದ. ಎಳೆಯ ಮಗು. ಅವರಿಗಾದ ಸಂತೋಷಕ್ಕೆ ಪಾರವೇ ಇಲ್ಲ. ಅದು ಅಂದಿನ ಅವರ ಸಮಾರಾಧನೆಯ ಸಂತೋಷ. ಎಂತಹ ಒಳ್ಳೆ ತಿನಿಸನ್ನು ತಂದೆಯೋ ಎಂದು ಅದನ್ನು ತಂದವನನ್ನು ಎಲ್ಲರೂ ಹೊಗಳಿದರು. ಮೊದಲು ಯಜಮಾನ ಅವನಿಗಿಷ್ಟವಾದ ಭಾಗವನ್ನು ಕಚ್ಚಬೇಕು. ಕಿವಿಯೋ, ಮೂಗೋ, ಕೈಯ್ಯೋ, ಏನೋ ಒಂದು ಅವನು ತೀರ್ಮಾನಿಸಿ, ಅವನಿಷ್ಟ ಪೂರ್ತಿಯಾದ ಮೇಲೆ ಇತರರ ಸರದಿ. ಅದರಂತೆ ಅವನು ಆ ಮಗುವನ್ನು ಎರಡು ಕೈಗಳಲ್ಲೂ ಎತ್ತಿಕೊಂಡು ದಿಟ್ಟಿಸಿ ನೋಡಿದ. ಆ ಮಗು ಮುದ್ದಾಗಿತ್ತು. ಆಗ ಅವನ ಕೈ ಸೋಕಿ ತಾನೇ ಎಚ್ಚರಗೊಂಡಿತು. ಕಣ್ಣು ಬಿಟ್ಟಿತು. ಅದರ ಅಗಲವಾದ ನೀಳನೇತ್ರಗಳು ಫಳಫಳ ಹೊಳೆಯುತ್ತಿದ್ದವು. ಮೋಹಕವಾದ ಆ ಮಗುವಿನ ಮುಖವನ್ನು ಅವನು ಹಾಗೆಯೇ ದಿಟ್ಟಿಸಿ ನೋಡುತ್ತಿದ್ದ. ಮಗು ಅವನ ಮುಖವನ್ನು ಹಾಗೆಯೇ ನೋಡಿತು. ಆ ಕ್ರೂರ ಮುಖವನ್ನು ನೋಡಿ ಗಾಬರಿಯಿಂದ ಚೀತ್ಕಾರ ಮಾಡುವ ಬದಲು ಆ ಮಗು ಕಿಲಕಿಲ ನಕ್ಕಿತು. ಅದನ್ನು ಕಂಡು ಅವನಿಗಾಶ್ಚರ್ಯವಾಯಿತು. ಹಿಂದಿನ ಎಷ್ಟೋ ಸಂದರ್ಭಗಳ ಅನುಭವಕ್ಕೆ ಈ ಸಂದರ್ಭ ತೀರ ವಿರುದ್ಧವಾಗಿ ಕಂಡಿತು. ಎಲಾ! ಇದೇನು ? ಎಂದು ಅವನು ಭ್ರಮಿತನಾಗಿ ನುಡಿದು ಮಗುವನ್ನು ಅರಿಯಲಾಗದ ತವಕದಿಂದ ನೋಡತೊಡಗಿದ. ಮಗುವೂ ಎವೆಯಿಕ್ಕದೆ ಅವನನ್ನು ನೋಡಿ ಪುನಃ ಪಕಪಕ ನಕ್ಕಿತು. ಅದನ್ನು ಕಂಡು ಅವನಿಗೆ ತಡೆಯಲಾಗದ ಏನೋ ಒಂದು ಬಗೆಯ ಸಂಕಟವಾಯಿತು. ಆ ಕಣ್ಣುಗಳನ್ನೂ ಮುದ್ದು ಮುಖವನ್ನೂ ನಿರ್ಮಲವಾದ ಎಳೆ ನಗೆಯನ್ನೂ ಎಷ್ಟು ನೋಡಿದರೂ ಸಾಲದು ಎಂದು ಅನ್ನಿಸಿತು. ಅವನು ತನ್ನ ಕೆಲಸವನ್ನೇ ಅಲ್ಲದೆ ತನ್ನನ್ನೇ ಮರೆತ. ಆ ಸ್ಥಿತಿಯಲ್ಲಿ ಅವನ ಪ್ರಯತ್ನ ಇಲ್ಲದೆಯೇ ಅವನ ಕೈ ಮಗುವಿನ ಗಲ್ಲವನ್ನು ಮುಟ್ಟಿತು. ಆ ಸ್ಪರ್ಷದಿಂದ ಅವನಿಗೆ ಎಂದೂ ಇಲ್ಲದ ಸುಖಾನುಭವ ಆಯಿತು. ಮಗು ನಗುತ್ತಲೇ ಇತ್ತು. ಆ ನಗೆ ಏನೋ ಒಂದು ಸೂಚನೆ ಮಾಡಿದಂತೆ ತೋರಿತು. ಅವನು 'ಇದೇನಪ್ಪಾ, ನನಗೆ ಏನೇನೋ ಆಗುತ್ತಾ ಇದೆಯಲ್ಲ! ಅಬ್ಬಾ! ಇದು ಎಂಥಾ ಮಗು! ನಗುನಗುತ್ತಾ ನನಗೆ ಏನೇನೋ ತಿಳಿಸುತ್ತಿದೆ. ಕಣ್ಣಿಂದ ಏನೇನೋ ತೋರಿಸುತ್ತಿದೆ. ಅಬ್ಬಬ್ಬಾ! ನನ್ನ ಕೈಲಾಗದು.

12th_Kannada_Reader_1-2.indd 41 22-05-2019 14:20:01

ಇದನ್ನು ಮುಟ್ಟಿದರೆ ಹಾಳಾಗಿ ಹೋದೇನು' ಎಂದು ಸುಬ್ಬು ಹೇಳಿದ. ದುಃಖ ತಡೀಲಾರದೆ, 'ಎಲೋ! ಈ ಮಗೂನ ಎಲ್ಲಿಂದ ತಂದೆ?' ಎಂದು ಕೇಳಿದ. ಮಗುವನ್ನು ತಂದವನು, 'ಅಲ್ಲೊಂದು ಮನೇಲಿ' ಎಂದ. ಯಜಮಾನ, 'ಮಗು ಒಂದೇ ಇತ್ತೇನೋ?' ಎಂದು ಕೇಳಿದ. ಅದಕ್ಕೆ ಅವನು, 'ಅದರಮ್ಮ ಎದೆಯುಣಿಸಿ ತೊಟ್ಟಿಲಲ್ಲಿಟ್ಟು ಒಳಕ್ಕೆ ಹೋದಾಗ ಎತ್ತಿಕೊಂಡು ಓಡಿ ಬಂದೆ' ಎಂದ ಮಾತಿಗೆ ಯಜಮಾನನ ಕಣ್ಣಲ್ಲಿ ನೀರು ತುಂಬಿತು. 'ಅಯ್ಯೋ! ಆ ತಾಯಿ ಕಣ್ಣಲ್ಲೂ ನೀರು ಸುರೀತಿದೆಯೇನೋ! ಅದಕ್ಕೇ ನನಗೂ ಗೊತ್ತಾಗಲಿ ಅಂತ ಹೀಗೆ ಕಣ್ಣೀರು ಬರುತ್ತಿದೆ. ಅಪ್ಪ! ಈ ಮಗೂನ ಎಲ್ಲಿಂದ ತಂದೆಯೋ ಅಲ್ಲೇ ಬಿಟ್ಟು ಬಾ' ಎನ್ನುತ್ತಾ ಅವನು ನಡುಗುವ ಕೈಯಿಂದ ಪುನಃ ಆ ಮಗುವಿನ ಕೆನ್ನೆಗಳನ್ನು ಸವರಿ, 'ಹೋಗಮ್ಮಾ ಕಂದಾ! ನಿನ್ನ ಅಮ್ಮನ ಹತ್ತಿರ' ಎಂದು ಬಟ್ಟೆಯಲ್ಲಿ ಭದ್ರವಾಗಿ ಮಗುವನ್ನು ಸುತ್ತಿ ಅವನ ಕೈಗೆ ಕೊಟ್ಟು ಕಳುಹಿಸಿದ.

ಅವನು ಮಗುವನ್ನೆತ್ತಿಕೊಂಡು ಅದರ ಮನೆಯ ಹತ್ತಿರ ಬಂದವನು ಮನೆಯೊಳಗೆ ಬಹಳ ಜನ ತುಂಬಿ ಏನೋ ಗಲಭೆಯಾಗುತ್ತಿದ್ದುದನ್ನು ಗಮನಿಸಿದ. ಯಾರೂ ಕಾಣದಂತೆ ಅವನು ಮಗುವನ್ನು ಮನೆಯ ಮುಂದಿನ ಜಗಲಿಯ ಮೇಲೆ ಮಲಗಿಸಿ ಅಲ್ಲಿಂದ ಮಾಯವಾದ. ಅಷ್ಟು ಹೊತ್ತೂ ನಗುತ್ತಿದ್ದ ಮಗು ಅಳುವುದಕ್ಕೆ ಮೊದಲು ಮಾಡಿತು. ಆ ಅಳುವಿನ ದನಿ ಕೇಳಿ ಮನೆಯಿಂದೆಲ್ಲರೂ ಹೊರಗೆ ಬಂದರು. ಎಲ್ಲರಿಗೂ ಪರಮಾಶ್ಚರ್ಯವಾಯಿತು. ಆ ತಾಯಿ ಮಗುವನ್ನೆತ್ತಿ ಎದೆಗವಚಿಕೊಂಡು ಆನಂದ ಭಾಷ್ಪಗಳನ್ನು ಸುರಿಸಿದಳು.

ಜಗಲಿಯ ಮೇಲೆ ಮಗುವನ್ನಿಟ್ಟು ಓಡಿದವನು ತನ್ನವರ ಬಳಿಗೆ ಬಂದ. ಯಜಮಾನನ ಮೈ ನಡುಗುತ್ತಿತ್ತು. ದನಿಯೂ ನಡುಗುತ್ತಿತ್ತು. ಅವನು ಎಲ್ಲರನ್ನೂ ಹತ್ತಿರ ಕೂರಿಸಿಕೊಂಡು ಕೆಲವು ಮಾತುಗಳನ್ನಾಡಿದ. ಅವನ ಮುಖ ಎಂದೂ ಕಾಣದ ಹೊಸ ಕಳೆಯನ್ನು ಪಡೆದಿತ್ತು. ಹೀಗೆಂದು ಹೇಳಲಾಗದ ಒಂದು ಬಗೆಯ ಸಂಕಟ. ಯಾವುದೋ ಭಯ ಅವನನ್ನು ಮುತ್ತಿಕೊಂಡಿತು. ಅವನಿಗೇನಾಯಿತೋ, ಹೀಗೇಕೆ ನಡುಗುವುದನೋ ಅದನ್ನು ತಿಳಿಯಲಾರದೆ ಬೆರಗಾಗಿ ಅವರೆಲ್ಲ ಸುಮ್ಮನೆ ಅವನನ್ನು ನೋಡುತ್ತಾ ಆ ಮಾತುಗಳನ್ನು ಕೇಳುತ್ತಿದ್ದರು. 'ಏನ್ರೋ! ಎಂದಾದರೂ ನಮಗೆ ಮೈ ನಡುಗೋದು, ಕಣ್ಣಲ್ಲಿ ನೀರು ಬರೋದು ಗೊತ್ತಿತ್ತೇ?' ಎಂದು ಅವರನ್ನು ಪ್ರಶ್ನಿಸಿದ ಯಜಮಾನ. ಇಲ್ಲ ಇಲ್ಲ ಎಂದು ಅವರಿಂದ ಉತ್ತರ ಬಂತು. ಅವನು, 'ನೋಡಿಪ್ಪಾ! ಒಂದು ಸಲ ನೀವು ಒಬ್ಬ ಮುದುಕನನ್ನು ಹಿಡಿದು ತಂದಿರಿ. ಅದನ್ನು ಮರೆತಿಲ್ಲ ತಾನೇ?' ಎಂದ. 'ಹೌದೌದು...' ಎಂದರು ಅವರೆಲ್ಲರೂ. 'ಆತ ಏನೇನೆಲ್ಲ ಅಂದನೋ ಅದೆಲ್ಲ ಈಗ ನಿಜವೇ ಆಯಿತಲ್ಲ! ಮನುಷ್ಯರಾಗಿ ಇಂಥಾ ಪಾಪ ಮಾಡೋದೇ?' ಎಂದ. ಆಮೇಲೆ 'ಅಯ್ಯೋ ದೇವರೇ! ನಿನ್ನ ದಯೆ ಏನಾಯ್ತು?' ಎಂದು ಗೋಳಾಡಿದ. 'ಹಾಳಾದ ನಮ್ಮ ಕೈಗಳು ಹಾಗೇ ಮುರಿದು ಹೋಗಬಾರದಾಗಿತ್ತೇ? ಅಯ್ಯೋ, ಏನೇನೆಲ್ಲಾ ಮಾಡಿದೆವೋ! ಮಾಡಬಾರದ್ದನ್ನೆಲ್ಲ ಮಾಡಿದೆವಪ್ಪ! ನಮ್ಮ ಕಣ್ಣು ಆಗ ಹಾಗೇ ಇಂಗಿ ಹೋಗಬಾರದಾಗಿತ್ತೇ! ಆತ ಆಡಿದ್ದು ಆಗ. ಅದೆಲ್ಲಾ ಈಗ ಮಗು ನಕ್ಕಾಗ ಕಿವಿಗೆ ಕೇಳಿಸಿತು. ಆ ಮಗು, ಎಲೋ ನೀನು ಮನುಷ್ಯನಾ ಎಂದು ಹೇಳಿತು. ಅವತ್ತು ಪಾಪ ಅಂತ ಕೇಳಿದ ಮಾತು ಈಗ ಈ ಪಾಪದ ಕಿವಿಯೊಳಗೆ ನಿನ್ನದು ಪಾಪ ಎಂದು ಊದಿ ಹೋಯಿತಲ್ಲ! ಹೌದಪ್ಪಾ! ನಮ್ಮದು ಪಾಪ. ಆ ದೇವರು ಆಗ ಬರಲಿಲ್ಲ. ಈಗ ಮಗುವಾಗಿ ಬಂದಂತಾಯಿತು. ಮನುಷ್ಯರಿಗೆ ಒಂದು ಭಯ ಬೇಕು. ಹಾಗೇ ದಯೇನೂ ಬೇಕು ಅಂತ ಈಗ ಗೊತ್ತಾಗುತ್ತಿದೆ. ನಾವು ಮನುಷ್ಯರು. ನಮ್ಮನ್ನು ನಾವೇ ಕಿತ್ತು ತಿನ್ನುವುದೇ? ಬೇಡಪ್ಪಾ, ಬೇಡ. ಈ ಬದುಕು ಇನ್ನು ಸಾಕು. ಇನ್ನು ಮೇಲೆ ಯಾರ ಜೀವ ತೆಗೆಯೋದೂ ಬೇಡ. ಏನಾರೂ ಸಿಕ್ಕರೆ ತಿನ್ನೋಣ. ಹರಿಯೋ ನೀರು ಕುಡಿಯೋಣ. ಏನೂ ಸಿಕ್ಕಲಿಲ್ಲ ಎಂದಾದರೆ ಹಾಗೇ ಹಸಿವನ್ನು ತಡೆಯೋಣ. ನಿಮ್ಮಿಷ್ಟ. ನೀವೆಲ್ಲಿ ಬೇಕಾದರೂ ಹೋಗಿ. ಮನುಷ್ಯರನ್ನು ಮಾತ್ರ ಕಿತ್ತು ತಿನ್ನಬೇಡಿ. ನನ್ನ ಜೊತೆಯಲ್ಲಿರಬೇಕಾದರೆ ನಾನಿರುವಂತೆಯೇ ನೀವೂ ಇರಬೇಕು' ಎಂದು ಯಜಮಾನ ಎದ್ದು ಮುಂದೆ ಹೊರಡಲುವಾದ. ಅವನ ಅನುಚರರೆಲ್ಲ ಮಾತಿಲ್ಲದೆ ಅವನನ್ನೇ ಹಿಂಬಾಲಿಸಿದರು.

ಕೃತಿ–ಕರ್ತೃ ವಿಚಾರ

ತಿರುಮಲೆ ರಾಜಮ್ಮ ಅವರು ತುಮಕೂರಿನಲ್ಲಿ 20.11.1900ರಲ್ಲಿ ಜನಿಸಿದರು. ಇವರು ಕಲಿತದ್ದು ಮಾಧ್ಯಮಿಕ ಶಾಲೆಯವರೆಗೆ. ಇವರ ಕಾವ್ಯ ನಾಮ

12th_Kannada_Reader_1-2.indd 42 22-05-2019 14:20:01

ಭಾರತಿ. ಸಂಗೀತ ಮತ್ತು ವೀಣೆಯಲ್ಲಿ ಪರಿಣತರು. ರಾಷ್ಟ್ರಭಕ್ತಿ, ರಾಷ್ಟ್ರ ಶಕ್ತಿ ಎಂಬುವು ಇವರ ದೇಶಭಕ್ತಿ ಗೀತೆಗಳು. ಜ್ವಾಲಾಮುಖಿ, ವೇದನ–ನಿವೇದನ ಇವರ ನೀಳ್ಗವಿತೆಗಳು. ಸುಖಮಾರ್ಗ, ತಪಸ್ವಿನಿ, ಮಹಾಸತಿ, ವಾತ್ಸಲ್ಯ, ತರಂಗ ಲೀಲಾ, ದುಂದುಭಿ, ಉನ್ಮತ್ತ ಭಾಮಿನಿ ಇವು ನಾಟಕಗಳು. ದೃಢ ಪ್ರತಿಜ್ಞೆ ಎಂಬುದು ಅನುವಾದಿತ ನಾಟಕ. ಇವರಿಗೆ 1968ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು.

ಪದಗಳ ಅರ್ಥ

ಜೀವಧಾರಣ–ಬದುಕುವುದು, ಬದುಕುವುದಕ್ಕಾಗಿ ತೆಗೆದುಕೊಳ್ಳುವ ಆಹಾರ; ಪಿಶಾಚ ಪ್ರಕೃತಿ–ಕ್ರೂರ ಸ್ವಭಾವ; ನರಭಕ್ಷಕ–ಮನುಷ್ಯರನ್ನು ತಿನ್ನುವವರು; ಆಸ್ಪದ–ಅವಕಾಶ, ಸಾಧ್ಯತೆ; ಪಡಸಾಲೆ–ನಡುಮನೆ; ಸಮಾರಾಧನೆ–ಹಬ್ಬದ ಊಟ, ವಿಶೇಷ ಊಟ; ಸರದಿ–ಕ್ರಮ, ಪದ್ಧತಿ; ಛೀತ್ಕಾರ–ಕಿರುಚುವಿಕೆ; ಭ್ರಮಿತ–ಭ್ರಮೆಗೊಂಡು, ಗೊಂದಲಗೊಂಡು; ತವಕ–ಕುತೂಹಲ, ಕಾತರ; ಎವೆಯಿಕ್ಕದೆ–ಕಣ್ಣು ಮಿಟುಕಿಸದೆ, ರೆಪ್ಪೆ ಬಡಿಯದೆ; ಕಿವಿಯಲ್ಲಿ ಊದು–ಹೇಳು; ಆನಂದ ಭಾಷ್ಪ–ಸಂತೋಷದ ಕಣ್ಣೀರು; ಬೆರಗಾಗು–ಆಶ್ಚರ್ಯಪಡು; ಅನುಚರರು–ಹಿಂಬಾಲಕರು; ಜಗಲಿ–ಮನೆಯ ಮುಂದೆ ಕುಳಿತುಕೊಳ್ಳುವುದಕ್ಕಾಗಿ ಇರುವ ಎತ್ತರದ ಸ್ಥಳ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಕಾಡು ಜನರ ಗುಂಪಿನ ಯಜಮಾನ ಯಾರು ?
2. ಊರ ಕಡೆಗೆ ಬಂದ ಮನುಷ್ಯ ಏನನ್ನು ಹೊಂಚಿ ನೋಡುತ್ತಿದ್ದ ?
3. ಗುಡಿಸಲಿಗೆ ನುಗ್ಗಿದವನು ಮಗುವನ್ನು ಹೇಗೆ ಎತ್ತಿಕೊಂಡು ಓಡಿದ ?
4. ಮಗುವನ್ನು ಕದ್ದು ತಂದವನಿಗೆ ಯಜಮಾನ ಏನು ಮಾಡುವಂತೆ ಹೇಳಿದ ?
5. ಮಗುವಿನ ಕಳ್ಳನು ಮಗುವನ್ನು ಮನೆಯ ಮುಂದಿನ ಜಗಲಿಯಲ್ಲಿ ಮಲಗಿಸಿ ಹೋದದ್ದೇಕೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಕಾಡು ಜನರ ಜೀವನ ಪದ್ಧತಿ ಹೇಗಿತ್ತು ?
2. ಕಾಡು ಜನರು ತಂದ ಆಹಾರವನ್ನು ಹೇಗೆ ಹಂಚಿಕೊಳ್ಳುತ್ತಿದ್ದರು ?
3. ಗುಂಪಿನ ಯಜಮಾನನ ಕಣ್ಣಿನಲ್ಲಿ ನೀರು ಬರಲು ಕಾರಣವೇನು ?
4. ತಮ್ಮಿಂದ ಆದ ಪಾಪಕ್ಕಾಗಿ ಗುಂಪಿನ ಯಜಮಾನನು ಪಶ್ಚಾತ್ತಾಪ ಪಟ್ಟದ್ದು ಹೇಗೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಗುವನ್ನು ಕದ್ದು ತಂದವನಿಗೂ, ಸುಬ್ಬನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ?
2. ತಮ್ಮ ಆಹಾರಕ್ಕಾಗಿ ತಂದಿದ್ದ ಮಗುವನ್ನು ಗುಂಪಿನ ಯಜಮಾನನು ಹಿಂದಿರುಗಿಸಲು ಕಾರಣವೇನು?
3. ಮಗುವನ್ನು ಕದ್ದು ತಂದ ಪ್ರಸಂಗವನ್ನೂ, ಅದರ ಪರಿಣಾಮವನ್ನೂ ವಿವರಿಸಿ?



12th_Kannada_Reader_1-2.indd 43 22-05-2019 14:20:01

ವ್ಯಾಕರಣ

ಘಟಕ ಎರಡು

ನಾಮಪದಗಳು

ಪದ: ಶಬ್ದದ ಮೂಲ ರೂಪಕ್ಕೆ ಪ್ರಕೃತಿ ಎಂದೂ, ಪ್ರಕೃತಿಯ ಮುಂದೆ ಸೇರುವ ವರ್ಣಗಳಿಗೆ ಪ್ರತ್ಯಯಗಳೆಂದೂ ಹೆಸರು. ಪ್ರಕೃತಿಯೂ ಪ್ರತ್ಯಯವೂ ಸೇರಿದರೆ ಪದವೆನಿಸುತ್ತದೆ.

ನಾಮಪ್ರಕೃತಿ: ನಾಮ ಪದದ ಮೂಲ ರೂಪಕ್ಕೆ ನಾಮ ಪ್ರಕೃತಿ ಎಂದು ಹೆಸರು. ಇದನ್ನು ಪ್ರಾತಿಪದಿಕ ಎಂದೂ ಕರೆಯುವರು. ಉದಾಹರಣೆಗೆ,

ನಾಮಪ್ರಕೃತಿ	+	ವಿಭಕ್ತಿ ಪ್ರತ್ಯಯ	=	ನಾಮಪದ.
ಮನೆ	+	ಅ	=	ಮನೆಯ

ನಾಮಪದ: ನಾಮಪ್ರಕೃತಿಗೆ ಪ್ರತ್ಯಯವು ಸೇರಿದಾಗ ಅದು ನಾಮಪದವಾಗುತ್ತದೆ. ನಾಮಪದ ಎಂದರೆ ಒಬ್ಬ ವ್ಯಕ್ತಿಯ ಹೆಸರನ್ನೋ ಒಂದು ಪದಾರ್ಥದ ಹೆಸರನ್ನೋ ಒಂದು ಪ್ರಾಣಿಯ ಹೆಸರನ್ನೋ ಸ್ಥಳದ ಹೆಸರನ್ನೋ ತಿಳಿಸುವ ಶಬ್ದ.

ನಾಮಪದಗಳಲ್ಲಿ ಸಹಜನಾಮಗಳು ಮತ್ತು ಸಾಧಿತ ನಾಮಗಳು ಎಂದು ಮುಖ್ಯವಾಗಿ ಎರಡು ವಿಧಗಳಿವೆ.

ಸಹಜನಾಮಗಳು

1. **ವಸ್ತುವಾಚಕಗಳು :** ವಸ್ತುವಿನ ಹೆಸರು ಹೇಳುವ ಶಬ್ದಗಳೆಲ್ಲ ವಸ್ತುವಾಚಕ ನಾಮಗಳು. ಇವುಗಳಲ್ಲಿಮೂರು ವಿಧ. ರೂಢ ನಾಮ, ಅಂಕಿತ ನಾಮ ಹಾಗೂ ಅನ್ವರ್ಥನಾಮ.

   ರೂಢನಾಮ : ರೂಢಿಯಿಂದ ಬಂದವುಗಳು ರೂಢನಾಮಗಳು. ರೂಢಿಯಿಂದ ಬಂದ ಹೆಸರುಗಳು ಎಂದು ಅರ್ಥ. ಉದಾಹರಣೆಗೆ, ಗಂಡಸು, ಹೆಂಗಸು, ಪರ್ವತ, ಮರ, ಬೆಟ್ಟ.

   ಅಂಕಿತ ನಾಮ : ವ್ಯವಹಾರದ ಅನುಕೂಲಕ್ಕಾಗಿ ಇಟ್ಟುಕೊಂಡ ಹೆಸರುಗಳು ಅಂಕಿತನಾಮಗಳು. ಉದಾಹರಣೆಗೆ ಬೆಂಗಳೂರು, ಮೈಸೂರು, ರೇಖಾ, ಹಿಮಾಲಯ ಇತ್ಯಾದಿಗಳು.

   ಅನ್ವರ್ಥ ನಾಮ : ವಸ್ತುವಿನ, ವ್ಯಕ್ತಿಯ ಲಕ್ಷಣಕ್ಕನುಗುಣವಾಗಿ ಬರುವ ಹೆಸರುಗಳು ಅನ್ವರ್ಥನಾಮಗಳು. ಉದಾಹರಣೆಗೆ, ವಿದ್ಯಾರ್ಥಿ, ಕುಂಟ, ಕಿವುಡ, ಚಾಲಕ, ಹೆಳವ, ಇತ್ಯಾದಿ.

2. **ಗುಣವಾಚಕಗಳು :** ವಸ್ತುಗಳು ಅಥವಾ ವ್ಯಕ್ತಿಯ ಗುಣವನ್ನು ಹೇಳುವ ಶಬ್ದಗಳು ಗುಣವಾಚಕಗಳು. ಉದಾಹರಣೆಗೆ ಒಳ್ಳೆಯ ಹುಡುಗಿ. ಇಲ್ಲಿ ಒಳ್ಳೆಯ ಎಂಬುದು ವಿಶೇಷವಾಗಿರುವ ಗುಣವಾಚಕ. ಅಂತೆಯೇ, ಕರಿಯ, ಕೆಂಪುಕೋತಿ ಇತ್ಯಾದಿ.

3. **ಸಂಖ್ಯಾವಾಚಗಳು :** ಸಂಖ್ಯೆಗಳನ್ನು ತಿಳಿಸುವ ಶಬ್ದಗಳೇ ಸಂಖ್ಯಾವಾಚಕಗಳು. ಉದಾಹರಣೆಗೆ ಒಂದು, ಹತ್ತು ನೂರು. ಒಬ್ಬ, ಐವರು. ಇತ್ಯಾದಿ.

4. **ಪರಿಮಾಣ(ಪ್ರಮಾಣ) ವಾಚಕಗಳು :** ವಸ್ತುಗಳ ಸಾಮಾನ್ಯ ಅಳತೆ ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು ಪರಿಮಾಣ ವಾಚಕಗಳೆಂದು ಹೇಳುವರು. ಉದಾಹರಣೆಗೆ, ಹಲವು, ಕೆಲವು, ಅಷ್ಟು ಇಷ್ಟು ಇತ್ಯಾದಿ.

12th_Kannada_Reader_1-2.indd 44 22-05-2019 14:20:01

5. **ದಿಗ್ವಾಚಕಗಳು** : ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳನ್ನೆಲ್ಲ ದಿಗ್ವಾಚಕ ನಾಮಗಳೆಂದು ಕರೆಯುವರು. ಉದಾಹರಣೆಗೆ ಉತ್ತರ, ದಕ್ಷಿಣ, ಮೂಡಣ, ತೆಂಕಣ, ಕೆಳಗೆ ಮೇಲೆ ಇತ್ಯಾದಿ.

6. **ಭಾವವಾಚಕಗಳು** : ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೇ ಭಾವವಾಚಕಗಳು. ಉದಾಹರಣೆಗೆ, ನೋಟ, ಬಿಳುಪು ಇತ್ಯಾದಿ.

ಸರ್ವನಾಮಗಳು

ನಾಮಪದಗಳ ಬದಲಾಗಿ ಉಪಯೋಗಿಸುವ ಪದಗಳೇ ಸರ್ವನಾಮಗಳು. ಒಂದು ನಾಮಪದದ ಸ್ಥಾನದಲ್ಲಿ ಬರುವ ಶಬ್ದಕ್ಕೂ ಒಂದು ವಸ್ತುವಿನ ಅಥವಾ ವಿಷಯದ ಹೆಸರು ಹೇಳದೆಯೇ ಅದನ್ನು ಸೂಚಿಸುವ ಶಬ್ದಕ್ಕೂ ಸರ್ವನಾಮವೆಂದು ಹೆಸರು. ಇದೂ ಸಹ ನಾಮಪದದ ಒಂದು ಬಗೆ. ಉದಾಹರಣೆಗೆ, ರಾಮಣ್ಣ ಪೇಟೆಯಿಂದ ಮನೆಗೆ ಬಂದನು. ಅವನು ತುಂಬ ಬಳಲಿದ್ದಂತೆ ತೋರುತ್ತಿತ್ತು. ಹೀಗೆ ನಾಮಪದಗಳಿಗೆ ಬದಲಾಗಿ ಅವನು, ಅವಳು, ನೀನು, ನೀವು, ಅದು, ಅವು, ನಾನು ಮುಂತಾದ ಶಬ್ದಗಳನ್ನು ಬಳಸುತ್ತೇವೆ.

ಪುರುಷವಾಚಕ ಸರ್ವನಾಮಗಳು

ಪ್ರಥಮ ಪುರುಷ :

ಪುಲ್ಲಿಂಗ : ಅವನು, ಅವರು.
ಸ್ತ್ರೀಲಿಂಗ : ಅವಳು, ಅವರು.
ನಪುಂಸಕ ಲಿಂಗ : ಅದು, ಅವು

ಮಧ್ಯಮ ಪುರುಷ :

ನೀನು, ನೀವು.

ಉತ್ತಮ ಪುರುಷ :

ನಾನು, ನಾವು.

ಪ್ರಶ್ನಾರ್ಥಕ ಸರ್ವನಾಮಗಳು:

ಯಾವುದು, ಏನು, ಯಾವಾಗ, ಯಾವನು, ಏತಕ್ಕೆ, ಹೇಗೆ ಇತ್ಯಾದಿಗಳು.

ಆತ್ಮಾರ್ಥಕ ಸರ್ವನಾಮಗಳು:

ತಾನು, ತಾವು, ತನ್ನ ಇತ್ಯಾದಿ.


ಉಳ್ಳವರು ಶಿವಾಲಯ ಮಾಡುವರಯ್ಯ।
ನಾನೇನ ಮಾಡಲಿ ಬಡವನಯ್ಯಾ॥

ಎನ್ನ ಕಾಲೇ ಕಂಬವು ದೇಹವೇ ದೇಗುಲ।
ಶಿರವೇ ಹೊನ್ನ ಕಳಶವಯ್ಯ॥

ಸ್ಥಾವರಕಳಿವುಂಟು ಜಂಗಮಕೆ ಅಳಿವಿಲ್ಲ।
ಅಯ್ಯಾ ಕೇಳಯ್ಯ ಕೂಡಲಸಂಗಮ ದೇವ॥

—ಬಸವಣ್ಣ

12th_Kannada_Reader_1-2.indd 45 22-05-2019 14:20:01

ಘಟಕ ಮೂರು

3. ನಾಗರಿಕತೆ/ಕಸುಬು/ವಾಣಿಜ್ಯ







ಕಾವ್ಯ ಕಣಜ	:	ಸಂತೆ	– ಸಿದ್ಧಲಿಂಗಯ್ಯ
ಗದ್ಯ ವಿಹಾರ	:	ಡಾಂಬರು ಬಂದುದು	– ದೇವನೂರು ಮಹಾದೇವ
ಉಪಪಠ್ಯ	:	ಕೃಷಿ ಸಂಸ್ಕೃತಿ ಮತ್ತು ಜಾಗತೀಕರಣ	– ಸಿ.ಎಚ್.ಹನುಮಂತರಾಯ
ವ್ಯಾಕರಣ	:	ಲಿಂಗ–ವಚನ–ವಿಭಕ್ತಿ	

12th_Kannada_Reader_3-5.indd 46 22-05-2019 14:31:12

ಕಾವ್ಯ ಕಣಜ

ಘಟಕ ಮೂರು

ಸಂತೆ

– ಸಿದ್ಧಲಿಂಗಯ್ಯ



ಹಣದ ಆವಿಷ್ಕಾರವು ಮಾನವ ಜಗತ್ತಿನಲ್ಲಿ ಅನೇಕ ಬದಲಾವಣೆಯನ್ನು ಉಂಟು ಮಾಡಿದೆ. ಜೀವನ ನಿರ್ವಹಣೆಗೆ ಸಹಕಾರಿಯಾಗಿ ರೂಪುದಾಳಿದ ವಾಣಿಜ್ಯ ಇಂದು ಹಲವು ರೂಪಗಳನ್ನು ತಾಳಿ ನಿಂತಿದೆ. ಎಲ್ಲವನ್ನೂ ಲಾಭದಾಯಕ ಸರಕನ್ನಾಗಿ ಪರಿವರ್ತಿಸುವ ದಂಧೆ ವಾಣಿಜ್ಯೀಕರಣ ಇಂದು ದೈತ್ಯಾಕಾರನ್ನು ತಾಳಿ ಮನುಷ್ಯನು ಅದರ ಕೈಗೊಂಬೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ದೇವ ಮಾನವರೆಲ್ಲ ಮಾರಾಟವಾಗುವರು



12th_Kannada_Reader_3-5.indd 47 22-05-2019 14:31:12

ದೇವ ಮಾನವರೆಲ್ಲ ಮಾರಾಟವಾಗುವರು
ಪಡುವಣದ ಏಳೂರ ಸಂತೆಯಲ್ಲಿ
ಒಂದು ಹೊರೆ ಕಟ್ಟಿಗೆಯೇ ಅಂದು ಸಾಕಾಗಿತ್ತು
ಇಂದು ಇದು ಆತ್ಮಗಳ ಮಾರುಕಟ್ಟೆ
ಪ್ರೀತಿ ವಾತ್ಸಲ್ಯಗಳ ನೀತಿ ಮಮಕಾರಗಳ
ಮಾರಾಟಕಿಟ್ಟವರು ಹಲವು ಜನರು
ಹುಸಿ ನಗೆಯ ಬೀರುವರು ಕೈಸನ್ನೆ ಮಾಡುವರು
ಪಂಚಭೂತಗಳನ್ನು ಕೊಳ್ಳುವವರು
ಮೌಲ್ಯ ಆದರ್ಶಗಳ ಅಂಗಡಿಯ ಸಾಲಿನಲಿ
ನ್ಯಾಯ ಬೇಕೇ ಎಂಬ ದೊಡ್ಡ ಕೂಗು
ಜಾತಿ ಜಾಗಟೆಯನ್ನು ಬಾರಿಸುವ ಜಾಗಟೆಯಲ್ಲಿ
ದೇಶಭಕ್ತಿಯದೊಂದು ಸಣ್ಣ ಸೋಗು
ಹೆಸರು ಗುರುತುಗಳಿಲ್ಲ ಯಾರಿಗೂ ಮುಖವಿಲ್ಲ
ಎಲ್ಲರೂ ಒಂದೊಂದು ಹಣದ ಥೈಲಿ
ಹಣವ ಪಾವತಿ ಮಾಡಿ ಅಳಬಹುದು ನಗಬಹುದು
ಕನಸು ಬೀಳುವುದಿಲ್ಲ ಬರಿಗೈಯಲಿ
ಹಂಗಿನರಮನೆಯಿಂದ ಪಾರಿವಾಳವು ಹಾರಿ
ತುಂಬೆ ಹೂವರಳಿ ಫಲ ಕೊಡಲಿ ನಿಂಬೆ
ಮೂಡಿ ಕಾಮನ ಬಿಲ್ಲು ಜಗವೆದ್ದು ಕುಣಿದು
ಹಬ್ಬವಾಗಲಿ ನೀಲಿ ಮುಗಿಲಿನಲ್ಲಿ

12th_Kannada_Reader_3-5.indd 48 22-05-2019 14:31:13

ಕವಿ–ಕಾವ್ಯ ಪರಿಚಯ



ಡಾ. ಸಿದ್ಧಲಿಂಗಯ್ಯ

ಡಾ. ಸಿದ್ಧಲಿಂಗಯ್ಯನವರು ದಲಿತ ಕವಿ ಎಂದೇ ಪ್ರಸಿದ್ಧರಾಗಿದ್ದಾರೆ. ಇವು ಹಲವು ಕ್ಷೇತ್ರಗಳಲ್ಲಿ ಪರಿಣತರಾಗಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ಪ್ರಥಮ ಕೃತಿ ಹೊಲೆ ಮಾದಿಗರ ಹಾಡು. ಸಾವಿರಾರು ನದಿಗಳು, ಕಪ್ಪು ಕಾಡಿನ ಹಾಡು ಮೊದಲಾದ ಕವನ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. 'ಗ್ರಾಮದೇವತೆಗಳು' ಇವರ ಪಿಎಚ್.ಡಿ., ಪ್ರಬಂಧ. ಜಾನಪದ ಸಂಶೋಧನೆ, ವಿಚಾರ, ವಿಮರ್ಶೆ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಸದನದಲ್ಲಿ ಸಿದ್ಧಲಿಂಗಯ್ಯ' ಎಂಬುದು ಅವರನ್ನು ಕುರಿತು ಬಂದ ಇತ್ತೀಚಿನ ಕೃತಿ. ಮೆರವಣಿಗೆ ಅವರ ಸಮಗ್ರ ಕಾವ್ಯ ಸಂಕಲನ. ಬಡವರ ನಗುವಿನ ಶಕ್ತಿ ಇವರ ಸಾಹಿತ್ಯವನ್ನು ಕುರಿತ ವಿಮರ್ಶಾ ಲೇಖನಗಳ ಸಂಕಲನ.

ಸಾರಾಂಶ

ಈ ಕವಿತೆಯಲ್ಲಿ ಜೀವನದಲ್ಲಿ ಎಲ್ಲವೂ ವ್ಯವಹಾರಿಕವಾಗಿದೆ, ಇದರಲ್ಲಿ ಮಾರುಕಟ್ಟೆ ಯಾವುದು, ಮಾರಾಟಗಾರರು ಯಾರು, ಸರಕುಗಳು ಯಾವುವು, ಕೊಳ್ಳುವವರು ಯಾರು, ಹಣ ಹೇಗೆ ಎಲ್ಲ ವಸ್ತುಗಳನ್ನೂ ಕೊಂಡುಕೊಳ್ಳುತ್ತಿದೆ ಎಂಬುದನ್ನೆಲ್ಲ ಹೇಳಿದ್ದಾರೆ. ಎಲ್ಲವನ್ನೂ ವ್ಯಾಪಾರೀ ಮನೋಭಾವದಿಂದಲೇ ನೋಡುವವರು ದೇವರು, ಪ್ರೀತಿ, ವಾತ್ಸಲ್ಯ, ಮೌಲ್ಯ, ಆದರ್ಶಗಳನ್ನು ಹಣದ ಮೂಲಕ ಬೆಲೆ ಕಟ್ಟುತ್ತಾರೆಂದು ಇಲ್ಲಿ ತಿಳಿಸಿದ್ದಾರೆ. ಈ ವಿವರಗಳನ್ನು ನೀಡುವಾಗ 'ಸಂತೆ'ಯ ಪರಿಕಲ್ಪನೆಯಲ್ಲಿ ಆಗಿರುವ ಮುಖ್ಯವಾದ ಪಲ್ಲಟವನ್ನು ನಿರೂಪಿಸಿದ್ದಾರೆ. ಮುಂದೆ ಆಗಬೇಕಾಗಿರುವುದನ್ನೂ ಹೇಳುತ್ತಾರೆ. ಮನುಷ್ಯ ಸಂಬಂಧಗಳ ವ್ಯಾಪ್ತಿ ವಿಸ್ತಾರಗೊಂಡು ಅದು ಜಾಗತಿಕ ಸ್ವರೂಪವನ್ನು ತಲುಪಿದ್ದೇ ತಡ, ಅವನ ಸಂಬಂಧಗಳು ನಡೆನುಡಿ ಮೌಲ್ಯ ಆದರ್ಶಗಳು ಎಲ್ಲಕ್ಕೂ ಮಾರುಕಟ್ಟೆಯ ಸೋಂಕು ತಗುಲಿದೆ ಎಂಬುದನ್ನು ವ್ಯಂಗ್ಯ ವಿಡಂಬನೆಗಳ ಮೂಲಕ ತಿಳಿಸಿದ್ದಾರೆ.

ಪದಗಳ ಅರ್ಥ

ಪಡುವಣ–ಪಶ್ಚಿಮ ದಿಕ್ಕು, ಪಾಶ್ಚಿಮಾತ್ಯ ದೇಶಗಳು; ಪಂಚಭೂತಗಳು–ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ; ಸೋಗು–ವೇಷ, ನಟನೆ; ಥೈಲಿ–ಹಣದ ಚೀಲ; ಹಂಗು–ಋಣ, ದಾಕ್ಷಿಣ್ಯ; ಮುಗಿಲು–ಮೋಡ;

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ

1. ದೇವ ಮಾನವರು ಎಲ್ಲಿ ಮಾರಾಟವಾಗುವರು?
2. ಜನರು ಯಾವುದನ್ನು ಮಾರಾಟಕ್ಕಿಟ್ಟಿದ್ದಾರೆ?
3. ಜಾತಿ ಜಾಗಟೆಯಲ್ಲಿ ಯಾವುದನ್ನು ಸಣ್ಣ ಸೋಗು ಎಂದು ಹೇಳಿದ್ದಾರೆ?
4. ಕನಸು ಬೀಳುವುದಿಲ್ಲ ಬರಿಗೈಯಲಿ ಎಂದು ಏಕೆ ಹೇಳಿದ್ದಾರೆ?
5. ಹಬ್ಬವಾಗಲಿ ನೀಲಿ ಮುಗಿಲಿನಲ್ಲಿ ಎಂದು ಕವಿ ಏಕೆ ಹೇಳಿದ್ದಾರೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ದೇವಮಾನವರು ಮಾರಾಟವಾಗುವುದು ಎಂದರೇನು? ಅದನ್ನು ಸಮಕಾಲೀನ ಸಂದರ್ಭದಲ್ಲಿ ಗುರುತಿಸುವುದು ಹೇಗೆ?
2. ಪ್ರೀತಿ ವಾತ್ಸಲ್ಯಗಳ ನೀತಿ ಮಮಕಾರಗಳ ಮಾರಾಟಕ್ಕಿಟ್ಟವರು ಹಲವು ಜನರು–ಈ ಮಾತು ಯಾವ ಬಗೆಯ ಜೀವನ ಶೈಲಿಯನ್ನು ತಿಳಿಸುತ್ತದೆ?

12th_Kannada_Reader_3-5.indd 49 22-05-2019 14:31:13

3. ಪಂಚಭೂತಗಳನ್ನು ಕೊಳ್ಳುವವರು – ಇದು ಯಾವ ಬಗೆಯ ಗ್ರಾಹಕ ಸಂಸ್ಕೃತಿಯನ್ನು ಸೂಚಿಸುತ್ತದೆ?
4. ಜಾತಿ ಜಾಗಟೆ – ಈ ರೂಪಕದ ಔಚಿತ್ಯವೇನು?
5. ಎಲ್ಲರೂ ಒಂದೊಂದು ಹಣದ ಥೈಲಿ – ಈ ಮಾತಿನ ಇಂಗಿತವನ್ನು ಹೇಗೆ ವಿವರಿಸಬಹುದು?
6. ಜನರು ಹೇಗೆ ಬದಲಾವಣೆಯಾಗಬೇಕೆಂದು ಕವಿ ತಿಳಿಸಿದ್ದಾರೆ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. 'ಸಂತೆ' ಕವಿತೆಯಲ್ಲಿ ಕವಿಯು ಮಾರುಕಟ್ಟೆಯ ಮೂಲಕ ಸಂಸ್ಕೃತಿ ಹೇಗೆ ಬದಲಾಗಿದೆ ಎಂದು ತಿಳಿಸಿದ್ದಾರೆ?

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಒಂದೊಂದು, ಏಳೂರು, ಮಾರಾಟಕ್ಕಿಟ್ಟವರು, ಹೂವರಳಿ, ಬರಿಗೈಯಲಿ.

2. ಕೆಳಗಿನ ಪದಗಳನ್ನು ವಿಂಗಡಿಸಿ ಬರೆದು ಸಮಾಸವನ್ನು ಹೆಸರಿಸಿ

ಅರಮನೆ, ದೇವಮಾನವ, ಪ್ರೀತಿವಾತ್ಸಲ್ಯ, ಪಂಚಭೂತಗಳು, ದೇಶಭಕ್ತಿ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ದೇವ, ಪಡುವಣ, ಪ್ರೀತಿ, ನ್ಯಾಯ, ದೊಡ್ಡ, ಅಳು.

ಚಟುವಟಿಕೆ

1. ನಿಮ್ಮೂರಿನ ಸಂತೆಗೆ ಭೇಟಿ ನೀಡಿ ಅಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳನ್ನೂ ಗಮನಿಸಿರಿ.
2. ಸಾಧ್ಯವಾದಲ್ಲಿ ನೀವೂ ಕೂಡ ಸಂತೆಯಲ್ಲೊಂದು ಅಂಗಡಿಯನ್ನು ಹಾಕಿ, ನೇರವಾಗಿ ಅನುಭವ ಪಡೆಯಿರಿ.



12th_Kannada_Reader_3-5.indd 50 22-05-2019 14:31:13

ಗದ್ಯ ವಿಹಾರ

ಘಟಕ ಮೂರು

ಡಾಂಬರು ಬಂದುದು

–ದೇವನೂರು ಮಹಾದೇವ



ಪರಂಪರಾಗತ ವ್ಯವಸ್ಥೆಯ ಚೌಕಟ್ಟಿನಿಂದ ಆಧುನಿಕತೆಗೆ ಹಿಗ್ಗಿ ಕೊಳ್ಳುವ ಸಂಕ್ರಮಣಾವಸ್ಥೆಯ ಸಾಮಾಜಿಕ ಸಂದರ್ಭವನ್ನು ಈ ಕಥೆ ಧ್ವನಿಪೂರ್ಣವಾಗಿ ಸಂವಹಿಸುತ್ತದೆ. ಹಳೆಯ ವ್ಯವಸ್ಥೆಗೂ, ಹೊಸ ವಿಚಾರಗಳಿಗೂ ನಡೆಯುವ ಸಂಘರ್ಷವನ್ನು ಈ ಕಥೆ ಧ್ವನಿಸುತ್ತದೆ. ನಂಜನಗೂಡಿನ ಕನ್ನಡ ಭಾಷೆಯ ಪ್ರಾದೇಶಿಕತೆ ಈ ಕಥೆಯ ವೈಶಿಷ್ಟ್ಯ.



12th_Kannada_Reader_3-5.indd 51 22-05-2019 14:31:13

ಊರಿಂದ ಬಂಡಿ ಮಾತ್ರವೇ ಓಡಾಡಲು ಲಾಯಕ್ಕಾದ ಓಣಿ ಥರ ಹೊಂಟ ಹಾದಿ. ಮೂರು ಮೈಲಿ ಹೋಗಿ ಬಸ್ಸು ಓಡಾಡುವ ದೊಡ್ಡ ರಸ್ತೆಗೆ ಸೇರಿಕೊಳ್ಳುತ್ತದೆ. ದೊಡ್ಡ ರಸ್ತೆಯಿಂದ ಅದೇ ಹಾದಿ ಹಿಡಿದು ಹಿಂದಕ್ಕೆ ಬಂದರೆ ಕಳ್ಳಿ ಕೌಚಿಕೊಂಡ ಅದು ಗವ್ವನೆ ಊರವರೆಗೂ ಬಂದು ದೆವ್ವ ನಿಂತ ಅರಳಿ ಮರಗಳ ಬಳಸಿ ಮುಂದೆ ಮೂರು ಸೆಲೆಯಾಗಿ ಒಡೆದುಕೊಂಡು ಊರೊಳಕ್ಕೆ ಧಾವಿಸುತ್ತದೆ. ಹಿಂಗೆ ಸೆಲೆ ಹೊಂಟ ಬೀದಿಯ ಅಕ್ಕಪಕ್ಕ ಒತ್ತೊತ್ತು ಹಟ್ಟಿಗಳು ತಕ್ಕೈಸಿಕೊಂಡಿದ್ದು, ಉಸಿರಾಡಲು ಅಡಚಣೆ ಮಾಡುವಂತೆ ಮೊದಲ ನೋಟಕ್ಕೆ ಗಕ್ಕ ಕಾಣಬರುತ್ತದೆ.

ಅದು ಯಾವುದಕ್ಕೂ ಹೇಳಿಕೊಳ್ಳುವಂಥ ಹಳ್ಳಿಯಲ್ಲ. ಎಣಿಸಿದರೆ ಹೆಚ್ಚೆಂದರೆ ಎಂಭತ್ತು ಮನೆಗಳು ಇದ್ದೀತು. ಎಲ್ಲ ಕಡೆ ಇರುವಂತೆ ಅಲ್ಲಿ ಒಂದು ತುಂಡು ಹೋಟಲ್ಲೂ ಇಲ್ಲ. ಇದ ಹಿಡಿದೇ ಊರ ಊಹಿಸಬಹುದು ಮತ್ತು ಅಲ್ಲೇ ನಂಜನಗೂಡಲ್ಲೋ, ಮೈಸೂರಲ್ಲೋ ಎಸ್ಸೆಲ್ಸಿ ಹತ್ತಿ ಬಂದ ನಾಕಾರು ಜನರೂ ಉಂಟು. ಲಕುಮಾ, ರಾಜಪ್ಪ, ಮಾದು, ಶಂಭು ಇವು ಅವರ ಹೆಸರುಗಳು.

ಮುಂದಣ ಕಥೆಗೂ ಮೇಲಿನ ಹೆಸರುಗಳಿಗೂ ಸಂಬಂಧ ಹಿಂಗಿದೆ : ಈ ಹೆಸರುಗಳಿಗೂ ಪಟೇಲರಿಗೂ ಅಷ್ಟಕ್ಕಷ್ಟೆ. ಇಂದು ಹುಟ್ಟಿದ ಈ ತುಂಡುಗಳು ತಮ್ಮ ಎದುರು ತಲೆ ಎತ್ತಿ ತಿರುಗುವುದನ್ನು ಜನರು ಹೆಂಗೆ ಸಹಿಸುವರು? ತಾವು ಕಂಡ ಹಾಗೆ ತಮ್ಮ ಅಪ್ಪನ ಕಾಲದಿಂದಲೂ ಆಗಿದ್ದಿಲ್ಲ. ಆ ಮಕ್ಕಳು ಮೇಲು ಜಾತಿ ಕೀಳು ಜಾತಿ ಎನ್ನದೆ ಒಂದೇ ಹೊಟ್ಟೆಯಿಂದ ಬಿದ್ದಂತೆ ಒಗ್ಗಟ್ಟಾಗಿ ಬಾಳುತ್ತಿದ್ದರು.

ಇಂಥ ಸಂದರ್ಭದಲ್ಲಿ ಊರ ರೋಡಿಗೆ ಆರ್ಡರು ಬಂತು. ಪಟೇಲರ ಮೈಯ್ಯಿ ಇದ್ದಷ್ಟೂ ಹಿಗ್ಗಿತು. ಕಿಚ್ಚು ಹತ್ತಿಕೊಂಡಂತೆ ಊರಿಗೆ ಸುದ್ದಿ ಹಿಡಿಯಿತು. ಈ ಸಂದರ್ಭದಲ್ಲಿ ಏಳೆಂಟು ವರ್ಷಗಳ ಕೆಳಗೆ ಊರಿಗೆ ಮಿನಿಸ್ಟರು ಬಂದಿದ್ದನ್ನೂ ಪಟೇಲರೇ ಕೈಗೆ ನಿಂಬೆ ಹಣ್ಣು ಕೊಟ್ಟು ಹಾರ ಹಾಕಿ 'ತಮ್ಮ ಊರೂ ಒಂದು ಊರು ಅನ್ನಿಸಿಕೊಳ್ಳಬೇಕಾದರೆ ಒಂದು ರೋಡು ಅನ್ನುವುದಾದರೂ ಇರಬೇಕೆಂದೂ, ಮಾಸ್ವಾಮಿಯವರು ಮನಸ್ಸು ಮಾಡಬೇಕೆ'ಂದೂ ಬಿನ್ನೈಸಿಕೊಂಡಿದ್ದನ್ನು ನೆನೆಸಿಕೊಳ್ಳಬಹುದು. ಇದೇ ಪಟೇಲರು ನಂಜನಗೂಡಿಗೆ ಹೋಗಿ ಸಂಜೆ ಮಾಡಿಕೊಂಡು ಊರಿಗೆ ಬಂದರು. ಬರುತ್ತಾ ನಮ್ಮ ಪಟೇಲರೇ ರೋಡಿಗೆ ಕಂಟ್ರಾಕ್ಟರೆಂದೂ, ಇನ್ನು ತಿಂಗಳಾನುಗಟ್ಟಲೆ ಯಾರೂ ಕೆಲಸಕ್ಕೆ ಕೈಯಿ ಬಾಯಿ ನೋಡುವಂತಿಲ್ಲವೆಂದೂ ಮತ್ತು ಸರ್ಕಾರಿ ದುಡ್ಡಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತಗೊಳಿಸುವರೆಂದೂ ಯಾರ ಹಟ್ಟಿ ಬಾಗಿಲು ತೆಗೆದರೂ ಸುದ್ದಿಯಾಯಿತು.

ಅದೆಲ್ಲಾ ಆಗಿ ಈಗ್ಗೆ ಬಹಳ ದಿನಗಳು ತಿಳಿಯದಂತೆ ಕಳೆದಿವೆ. ಈಗ ಊರ ಮುಂದಲು ಒಂದು ರಣರಂಗವೆ. ಹಿಂದೆ ನೋಡಿದಷ್ಟೂ ಎತ್ತರಕ್ಕೆ ಹಬ್ಬುತ್ತಿದ್ದ ಅರಳಿ ಮರಗಳು ಈಗ ನೆಲ ಕಂಡಿವೆ. ಹಿಂದೆ ಸೆಟೆದು ನಿಂತ ಅರಳಿ ಮರಗಳ ಮರೆಯಲ್ಲಿ ಊರ ಕಂಡವರಿಗೆ ಈಗ ಊರು ಬಿಕೋ ಅನ್ನಿಸಲೇ ಬೇಕು. ಅವು ಇದ್ದವು ಅನ್ನುವುದಕ್ಕೆ ಎಲ್ಲೂ ಎಳ್ಳಷ್ಟೂ ಸುಳಿವು ಕಾಣದು. ಅವು ಇದ್ದಂತ ಸ್ಥಳಗಳಲ್ಲಿ ಈಗ ಮಿಷನ್ನು ಓಡಾಡುತ್ತಿವೆ. ಆಳೆತ್ತರದ ಕಲ್ಲು ಚಕ್ರದ ಮಿಷನ್ನುಗಳು ಹೊಗೆ ಬಿಟ್ಟು ಓಡಾಡುವ ಚಂದಕ್ಕೆ ಪಳ್ಳಿ ಹೈಕಳೇನು, ಗಂಡಸು ಯಮ್ಮ ಅನ್ನದೆ ನೋಡುತ್ತಾ ತಮ್ಮ ಮರೆಯುವುದೂ ಉಂಟು. ಅಲ್ಲಿ ಎದ್ದೇಳುವ ಸದ್ದು, ಊರ ಮೀರಿ ಆಚೆಗೂ ಹೋಗುವುದು. ದೂರದಿಂದ ನೋಡಿದ ಯಾವ ಮಗನಿಗೂ ಅಲ್ಲೋಲ ಕಲ್ಲೋಲ ಆಗುತ್ತಿರುವಂತೆ ಕಾಣಬೇಕು. ಹತ್ತಿರ ಬಂದರೆ ಅದೇ ಊರಿನ ಜನರು, ಅವರೇ ಮಾತಾಡಿಸಿದರೆ ಅವರೇ ಎಂದು ತಿಳಿಯಬಹುದು ಹೊರತು ಗುರುತು ಹತ್ತದಷ್ಟು ಅವರ ಯಾಸ ವರಸೆ ಬದಲಿಸಿ ಬಿಟ್ಟಿದೆ– ನೆಲಕ್ಕಂಟಿಕೊಂಡು ಕಪ್ಪಾಗಿರುವ ಟಾರಿಗಂಟಿಕೊಂಡು ಅವರು ಮೂಡಿದಂತೆ, ಚಲಿಸಿದಂತೆ.

ಒಕ್ಕಡೆ ಕುಂತು ಹತ್ತಾರು ಯಮ್ಮ ತಲೆಗೆ ಸೆರಗು ಸುತ್ತಿಕೊಂಡು ಜಲ್ಲಿಕಲ್ಲು ಚಚ್ಚುತ್ತಿರುವರು. ಗುಂಪಲ್ಲೇ ಒಬ್ಬಳು ಸಣ್ಣ ದನಿ ಎತ್ತರಿಸಿ 'ಸುವ್ವೀ ಬಾ ಚನ್ನ ಬಸವಯ್ಯ' ಮೊಳಗಿಸುತ್ತಿರುವಳು. ಉಳಿದವರ ಕುಮ್ಮಕ್ಕು ಕೊಡುವ ಸೊಲ್ಲು, ಅದ ಮೀರಿಸಿಕೊಂಡು ದೂರದಲ್ಲಿ ಕೆಲಸ ಮಾಡುವವರ ಆಚೆಗೂ ಕೇಳಿಸುವಂತೆ. ಕೆಲಸ ಮಾಡುವವರಲ್ಲಿ ಕೆಲಸ

12th_Kannada_Reader_3-5.indd 52 22-05-2019 14:31:14

ಮಾಡುತ್ತಾ ಫರ್ಲಾಂಗು ಉದ್ದ ಲವಲವಿಕೆ ತುಂಬಿದೆ. ಅಳತೆ ಮಾಡುವುದು, ಹದ ಅಗೆಯುವುದು, ಅಗೆದು ಸಮ ಮಾಡುವುದು, ಸಮ ಮಾಡಿ ನೀರು ಸಿಂಪಡಿಸುವುದು, ನೀರು ಸಿಂಪಡಿಸಿ ಹದ ಮಾಡಿದ ಜಲ್ಲಿ ಟಾರ ಕೈ ಬಂಡಿಯಿಂದ ಎಳೆದು ತಂದು ಸುರಿಯುವುದು, ಸುರಿದುದ ಹರಡುವುದು, ಒಕ್ಕಡೆ ಹಿಂದಕ್ಕೂ ಮುಂದಕ್ಕೂ ಹೋಗುವ ಬರುವ ಮಿಷನ್ನು, ಸಮ ಮಾಡುವ ದಗ್‌ದಗ್ ಮಿಷನ್ನು, ಬೆಂಕಿ ಉಗುಳುತ್ತಾ ಜೆಲ್ಲಿ, ಟಾರು, ಮರಳು ಒಕ್ಕೂಡಿಸುವ ಮಿಷನ್ನು. ಯಾವುಯಾವುದಕ್ಕೂ ಮಿಷನ್ನು... ಎಷ್ಟಂತ ಹೇಳುವುದು. ಎಲ್ಲವೂ ಕಪ್ಪು ಕಪ್ಪಗೆ ಯಾಸ ತಾಳಿ ಮೇಲೇಳುತ್ತಿವೆ.

ಅಳತೆ ಮಾಡುವಲ್ಲಿ ಪಟೇಲರು ಕೈ ಕಟ್ಟಿ ನಿಂತಿರುವರು. ತಕ್ಷಣವೇ ಹಿಂದಕ್ಕೆ ತಿರುಗುವರು. ಕೊಂಚ ಮುಂದಕ್ಕೆ ಬರುವರು. ಕೆಲಸ ಆಗುತ್ತಿದೆ ಎಂದು ಅವರ ಮುಖ ನೋಡಿದರೆ ಒಂದು ಕೂಸೂ ಹೇಳಬೇಕು.

ಹೈಕಳು ಎಂದರೆ ಎಲ್ಲಾ ಊರಿನವೂ ಒಂದೇ. ಪಳ್ಳಿ ಬಿಟ್ಟ ಮೇಲೆ ಅವು ಇಲ್ಲಿ ಜಮಾಯಿಸುತ್ತವೆ. ದೊಡ್ಡವರು ಗದರಿಸಿದಾಗ, ದೂರ ಹೋಗುತ್ತವೆ. ಅವರು ಎತ್ತಗೋ ತಿರುಗಿದಾಗ ಮತ್ತದೇ. ಒಟ್ಟಲ್ಲಿ ಹೈಕಳೆಲ್ಲಾ ಸಂಜೆ ಮಾಡುವುದು, ಟಾರು ಕಾಯಿಸುವಲ್ಲೇ. ಕತ್ತಲು ಇಳಿದು ಶಾಣೆ ಹೊತ್ತಾದರೂ ಹಟ್ಟಿ ಮುಟ್ಟವು. ದೊಡ್ಡವರೇ ಊರ ಮುಂದಲಿಗೆ ಬಂದು ಅವಕ್ಕೆ ನಾಕು ಬಡಿದಾದರೂ ತಂತಮ್ಮ ಜೊತೆ ಕರಕೊಂಡು ಹೋಗಬೇಕು. ಬಂದವರೂ ರೋಡು ಆಗುವ ಅದ್ಭುತವ ಚಣೊತ್ತಾರೂ ನೋಡದೆ ಹೋಗರು. ಹಟ್ಟಿ ಕಡೆ ತಿರುಗಲು ಹೈಕಳ ಕೈ ಹಿಡಿದರೆ ಅವುಗಳ ಕೈ ಟಾರು ದೊಡ್ಡವರಿಗೂ ಮೆತ್ತಿಕೊಳ್ಳುವುದು. ರಂಗಪ್ಪ ಎಂಬಾತ ತನ್ನ ಮಗನ ಕರೆದೊಯ್ಯಲು ಬಂದಾಗ ಹಂಗೇ ಆಯಿತು. ಅವ ರೇಗಿ ಮಗನಿಗೆ, 'ಮೇಷ್ಟ್ರ ಕಲಿಸಿ ಕೊಡೋದು ಇದಾ?' ಎಂದು ನಾಕು ಬಿಗಿದ. ಅದು ದೊಡ್ಡಗೆ ಬಾಯಿ ತೆರೆದು ಅಳಲು ಶುರು ಮಾಡಿ ನಿಲ್ಲಿಸಲೇ ಇಲ್ಲ. ರಂಗಪ್ಪಗೆ ಸಹನೆ ಮೀರಿ ಬಾಯಿಗೂ ಒಂದೇಟು ಕೊಟ್ಟಾಗ ಆ ಹೈದ ಅಳು ಜೋರು ಮಾಡುತ್ತಾ ತನ್ನ ಎರಡು ಕೈಯನ್ನೂ ಬಾಯಿಗೆ ತಂದುಕೊಂಡಿತು. ಕೈಗಳ ಟಾರು ಬಾಯಿಗೆ ಬಂದು ಬಾಯಿ ಬಿಡದಂತಾಗಿ ಅಳು ನಿಂತಿತು. ಹೀಗೆ ಇಂಥವು. ಸಂಜೆ ಆಗುತ್ತೆ.

ಮತ್ತೂ ಅಂದರೆ ಯಮ್ಮ ಕೆಲಸ ಬಿಟ್ಟು ಏಳುವಾಗ ಟಾರನ್ನು ಉಂಡೆ ಮಾಡಿ ಕೈಗೆ ತಕ್ಕೊಳ್ಳುವುದು ರೂಢಿ. ಯಾರೋ ಒಬ್ಬಳು ತೂತು ಮಡಕೆಗೆ ಟಾರು ಮೆತ್ತಿ ಸುರಿಯುವುದು ಏಕ್‌ದಂ ನಿಂತು ಹೋಯ್ತಂತೆ. ಇದಾದ ಮೇಲೆ ಎಂಥದು ಊರ ಯಾವ ಮೂಲೇಲಿ ಆದರೂ ಅಲ್ಲಿಗೆ ಟಾರು ಹೋಗುತ್ತದೆ ಅಥವಾ ತಂದಿಟ್ಟಿರುವ ಮನೆಯಿಂದ ಈಸಿಕೊಳ್ಳುವಂತೆ ಚಲಾವಣೆ ಇದೆ.

ದೊಡ್ಡ ಮಿಷನ್ನು ನಡೆಸುವ ಒಬ್ಬಾತ ಸೆಳಕಿನವನು ಅಲ್ಲುಂಟು. ಅವ ಕೈಲಿಡಿದು ಬಂದಿದ್ದ ಪೇಪರಲ್ಲಿ ತಮ್ಮ ಊರ ಸುದ್ದಿ ಬಂದಿದೆಯಂತೆ. ನಿಜವೇ ಎಂದು ಗುಲ್ಲು ಎದ್ದು ಯಾರು ಯಾವ ಕೆಲಸಕ್ಕೂ ಕೈ ಹಾಕದೆ ಸೆಳಕಿನವನ ಸುತ್ತಲೂ ಗುಂಪುಗೂಡಿದರು. ಪಟೇಲರು ತುಂಬವೇ ಬಿಜಿ ಆಗಿದ್ದರು. ಬಂದಿದ್ದ ಊರ ಸುದ್ದಿ ಹಿಂಗಿತ್ತು:

'ಸ್ವಾಮಿ, ನಮ್ಮೂರಿಗೆ ರೋಡು ಆಗಬೇಕೆಂದು ದೊಡ್ಡ ಮನಸ್ಸು ಮಾಡಿ ಸರ್ಕಾರ ನಡೆಸಿ ಕೊಡುತ್ತಿರುವುದೂ, ಈಗ ರೋಡು ಆಗುತ್ತಿರುವುದೂ ಸರಿಯಷ್ಟೆ. ಈ ರೋಡಿನ ಕಂಟ್ರಾಕ್ಟರಾದ ಪಟೇಲರು ಸರ್ಕಾರಿ ದುಡ್ಡಲ್ಲಿ ಮಿಗಿಸಿ ದೇವಸ್ಥಾನ ಊರ್ಜಿತಗೊಳಿಸುತ್ತಾರೆಂದು ತಿಳಿದು ಬಂದಿದೆ. ಏನೇ ಆಗಲಿ ಇದು ಸರ್ಕಾರಿ ಹಣದ ದುರುಪಯೋಗ. ಇಂತಹುದು ಆಗದಂತೆ ತಡೆಗಟ್ಟಬೇಕೆಂದು ನಾವು ಸಂಬಂಧಪಟ್ಟವರಲ್ಲಿ ಪ್ರಾರ್ಥಿಸುತ್ತೇವೆ'

– ನೊಂದವರು.

ಅಂದು ರೋಡಿನ ಕೆಲಸ ನಡೆಯಿತು ಅಂತ, ನಡೆಯಲಿಲ್ಲ ಅಂತ ಕರಾರುವಾಕ್ಕು ಹೇಳಲು ಬರುವುದಿಲ್ಲ. ನಡೆದರೂ ನಡೆಯದಂತೆ ನಡೆಯಿತು ಅನ್ನಬಹುದೇ? ಎಂತೆಂಥದೋ ಆಗಬೇಕಾದ್ದು ಎಂತೆಂಥದೋ ಆಗ ತೊಡಗಿದೆ. ಏನಾಗುತ್ತೋ ಅಂತ ಊರ ಬೀದಿ ಒಳಗ ಭಯ ಹರಿದಾಡಿತು. ಸಂಜೆ ಆಗುತ್ತಾ ಆಗುತ್ತಾ ಅದು ಹೆಚ್ಚು ಹೆಚ್ಚು ದಪ್ಪ ಆಗುತ್ತಿತ್ತು. ನ್ಯಾಯಕ್ಕೆ ಮನೆಗೊಂದಾಳು ಚಾವಡಿಗೆ ಬರಬೇಕೆಂದು ಪಟೇಲರು ತಮ್ಮಟೆ ಬಡಿಸಿ ಸಾರಿಸಿದರು.

12th_Kannada_Reader_3-5.indd 53 22-05-2019 14:31:14

ಈಗಈಗಷ್ಟೇ ಕತ್ತಲು ನಿಧಾನ ನೆಲಕ್ಕೆ ಇಳಿಯುತ್ತಿದ್ದುದು ಈಗ ತಾನೇ ಪೂರ್ತಾ ಅಗತಕೊಂಡಿದೆ. ಹೊರಗ ನಡೆದಾಡಿದರ ಒಬ್ಬರ ಮೊಖ ಒಬ್ಬರಿಗೆ ಕಾಣದಷ್ಟು ಗವ್ವ. ಹಟ್ಟಿ ಕಿಂಡಿಗಳಿಂದ ಮಂಕುದೀಪದ ಬೆಳಕು ಹೊರಕ್ಕೆ ನೆಸೆದು ಕತ್ತಲೊಳಗಾಗುತ್ತಿತ್ತು.

ಚಾವಡಿ ಒಳಗ ಲಾಟೀನು ದೊಡ್ಡತಗೆ ಹೊಗೆ ಬೆಳಕು ಕುಕ್ಕುತ ಅದೆ. ಆಗಲೇ ನಾಲ್ಕಾರು ಉಂಡಾಡಿಗಳು ತಮಗೆ ಯಾವುದೂ ಸಂಬಂಧ ಇಲ್ಲದವರಂತೆ ಯಾಸ ಹಾಕಿ ಮಲಗಿ ಬಿಟ್ಟವರೆ. ಅಲ್ಲಿಗೆ ಒಬ್ಬರಾಗಿ, ಇಬ್ಬರಾಗಿ ಜನ ಕೂಡಿಕೊಳ್ಳುತ್ತಿದೆ. ಹೆಚ್ಚು ಹೆಚ್ಚು ಕೂಡಿದಂತೆ ಗಲಗು ಗದ್ದಲ ಹೆಚ್ಚಾಗುತ್ತಿದೆ.

ಚಣೊತ್ತು ಕಳೆದ ಮೇಲೆ ಅಲ್ಲಿಂದ ಹಾಹೋ... ಹೊಹೋ... ಎದ್ದು ಊರ ಮುಳುಗಿಸತೊಡಗಿತು. ಪಟೇಲರು ನಡುಮಧ್ಯೆ ಕುಂತವರೆ. ಲಾಟೀನು ಬೆಳಕು ನೇರ ಅವರ ಮೊಕಕ್ಕೇ ಬೀಳುತ್ತಿತ್ತು. ಅವರ ಮೊಕದಲ್ಲಿ ತೆಳ್ಳಗೆ ಬೆವರಾಡುವುದನ್ನೂ, ಹಣೆಯ ನೆರಿಗೆ ಎದ್ದು ಮಾಯವಾಗಿ ಹೋಗುವ ಬಗೆಯನ್ನೂ ಕಾಣಬಹುದು. ದೂರದ ಮೂಲೆಯಲ್ಲಿ ಕುಂತವರು ಯಾರ್ಯಾರು ಅಂತ ಬೀಡಿ ಹಚ್ಚಿದಾಗ ಆ ಬೆಳಕಲ್ಲಿ ಗುರುತಿಸಬಹುದು ಅಂಥ ಕಿಕ್ಕಿರಿದಷ್ಟು ಜನರು.

ಒಬ್ಬ : ಸುರು ಮಾಡ್ರಪ್ಪೋ

ಇನ್ನೊಬ್ಬ : ಎಲ್ಲರ್ಗೂ ಗೊತ್ತಿರೋದೇ ಅದು. ಇನ್ನೇನ್ನ ಸುರು ಮಾಡೋದು, ಪೂಜಾ ಮಾಡೋದ ಬಿಟ್ಟು?

ರಾಜಪ್ಪ : ಏನಣ್ಣ ಹಂಗಂದ್ರ ಅರ್ಥ?

ಮತ್ತೊಬ್ಬ : ಅರ್ಥಗಿರ್ಥ ನಿಮಗ್ತಾನಿಯಪ್ಪ ಗೊತ್ತು. ನಾವೇನ ಇಸ್ಕೋಲ್ಗೋಗಿ ಮಂಟಾಗಿದ್ದವ?

ಶಾನುಭೋಗರು : ವಸಿ ಸುಮ್ಕಿರ್ರಯ್ಯ. ಮಾತಾಡಿ ಪಟೇಲ್ರೇ ನೀವು.

ಪಟೇಲರು : ಮಾತಾಡೋದು ಏನಿದ್ದದು ಹೇಳಿ?

ಶಾನುಭೋಗರು : ಕಾಗ್ದ ಬರ್ದು ಊರ್ನ ಮಾನ ತೆಗೆದವರು ನೀವುಗಳೇ ಅಂತ ಎಲ್ಲರ್ಗೂ ಗೊತ್ತು. ಅದ ಒಪ್ಪೋ ಥರ ಅವ್ರಿ ತಾನೇ ನೀವುಗಳು?(ಲಕುಮಾ, ರಾಜಪ್ಪ, ಶಂಭು, ಮಾದು ಕಡೆ ಶಾನುಭೋಗರು ನೋಡುವರು. ಹೌದು ಎಂಬಂತೆ ಅವ್ರು ತಲೆ ಆಡಿಸುವರು. ಹೊರಗೆ ಇದ್ದವರ ಎದೆಗೆ ಗುದ್ದುವಂತೆ ಗದ್ದಲ ಎದ್ದು ಹೊರಬರುವುದು).

ಪಟೇಲರು : ಅದ್ರಲ್ಲೇನ್ರಯ್ಯಾ ನೀವುಗಳು ಅನ್ಯಾಯ ಕಂಡದ್ದು? (ಪಟೇಲರ ಮಾತುಗಳಷ್ಟೇ ಒಡೆದು ಕೇಳಿಸುವುದು. ಯಾರೂ ತುಟಿಪಿಟಿಕ್ಕೆನ್ನುವುದಿಲ್ಲ.

ರಾಜಪ್ಪ : ಯಾವ ಹಣಾನೋ ಯಾವುದಕ್ಕೋ ಹಾಕದ್ರ ಇನ್ನೇನಾಗೋದು? (ಸದ್ದು ಏಳುವುದು. ಶಾನುಭೋಗರು ಕೈಯಾಡಿಸುವರು. ಸದ್ದು ನಿಧಾನ ಕಮ್ಮಿಯಾಗುವುದು).

ಪಟೇಲರು : ನಾ ಯಾನ ನನ್ನ ಇರೋ ಮಕ್ಳಳ್ಗಾಗಿ ಹಣ ತಿಂದ್ನೋ? ಊರ್ಗಾಗಿ ದೇವರ ಕೆಲಸಕ್ಕಾಗಿ ಹಂಗ ಮಾಡ್ದನೋ?

ಮಾದು : ನೀವು ಯಾಕಾರೂ ಮಾಡಿ ಸ್ವಾಮಿ. ಆದ್ರ ಮಾಡೋ ಅಂತದ್ಕ ಮಾಡ್ನಿಲ್ಲ. (ಸದ್ದು ಏಳುವುದು, ಮುನ್ನಿಗಿಂತ ಜೋರಾಗೇ. ಯಥಾಪ್ರಕಾರ ಶಾನುಭೋಗರು ಈ ಸಲ ಒಂದಿಬ್ಬರು ಎದ್ದು ನಿಲ್ಲುವರು).

ಒಬ್ಬ : ನಿಮ್ಗ ದೇವ್ರು ದಿಂಡ್ರು ಹಿರೀಕರು ಅಂತ ಒಬ್ರೂ ಇಲ್ವಾ?

ಇನ್ನೊಬ್ಬ : ಇದ್ರ ಈ ಯಾಪಾರ ಮಾಡ್ತಾ ಇದ್ವಾ ಅವು ?

ಮತ್ತೊಬ್ಬ : ಸಾಕು ಸುಮ್ಕಿರ್ರಪ್ಪೋ. ತಲೆಗೊಂದು ಮಾತ್ಯಾಕೊ?

12th_Kannada_Reader_3-5.indd 54 22-05-2019 14:31:14

ಮಗದೊಬ್ಬ: ಹಿಡ್ಕಂಡು ನಾಕ ಬಡೀರುಡ, ಸರಿಯಾಯ್ತದ. ಕೇಮಿಲ್ದೆ ಮಾತಾಡಿ ಇನ್ನೂವಿ ರಾಜಪ್ಪ, ಶಂಭು.

ಶಂಭು ಅಪ್ಪ: ಯಾರಪ್ಪಾ ಅವ ? ಬಡೀರಿ ಬನ್ನಿ ಮತ್ತ. ಅದ್ನೂ ನೋಡವು. ನಿಮ್ಮ ಮೂಗ್ನ ನ್ಯಾರಕ ನಿಮ್ಗ ಸರಿ.

ಪಟೇಲರು : (ದನಿಯೆತ್ತರಿಸಿ) ನೀವುಗಳು ಮಾಡಿದ್ದೇ ಬೋ ಸರಿ ಕಣ್ರಯ್ಯೋ.

ಶಂಭು : ನೀವು ಮಾಡಿದ್ದೇ ನಿಮ್ಗೆ ಸರಿ. ಅದಕ್ಯಾಕ ಮಾತು?

ಪಟೇಲರು : ಅದೇನ್ರಲಾ? ಅಷ್ಟು ಧಿಮಾಕ್ನ ಮಾತ ಆಡ್ತಾ ಅವ್ರಿ. ಅಷ್ಟು ಸದರ ಬಿದ್ದೋಗಿದ್ದನಾ ನಾನು?

ಎಂದು ಪಟೇಲರು ಕೈ ಬಿಗಿ ಹಿಡಿದುಕೊಂಡು ತಟಕ್ಕ ಎದ್ದು ನಿಂತರು. ಆ ರಭಸಕ್ಕೆ ಲಾಟೀನಿಗೆ ತಲೆ ಬಡಿದು, ಗಾಜು ಒಡೆದು ಟಳಟಳ ನೆಲಕ್ಕೆ ಉದುರಿತು. ಲಾಟೀನ ಬೆಳಕು ಹಾರಾಡಿ ಹಾರಾಡಿ ಕೊನೆಗೆ ಜೀವ ಹೋಗಿ ಕತ್ತಲು ಅಮರಿಕೊಂಡಿತು. ಆ ಕ್ಷಣವೇ ಹಾ ಹೊ ದಬ್ ದಬ್ ಬೈಗಳು ತುಂಬಿಕೊಂಡವು. ಆದಷ್ಟು ಬೇಗ ಚಾವಡಿಯಿಂದ ಕಿತ್ತುಕೊಂಡು ಹೊರಕ್ಕೆ ಹೋಗಿ ಬಿಡಲು ಎಲ್ಲಾ ಹವಣಿಸಿದರು. ಹಿಂಗೆ ಚಣೊತ್ತು ನಡೆದು ಅಲ್ಲಿಂದ ಆಮೇಲೆ ಎಲ್ಲ ನಿಂತು ಹೋಯಿತು. ಊರ ಹಟ್ಟಿ ದಾರಂದಗಳು ಮುಚ್ಚಿಕೊಂಡು ಬಿಟ್ಟವು.

ಅಷ್ಟೆಲ್ಲಾ ಆದದ್ದು ಅಷ್ಟಕ್ಕೇ ನಿಲ್ಲಲಿಲ್ಲ. ಟಾರಿನ ಡ್ರಮ್ಮುಗಳನ್ನು ಕಾಯಿಸಿ ಊರ ಮುಂದಲೂ ಇಟ್ಟಿದ್ದು ಸರಿಯಷ್ಟೆ. ಬೆಳಿಗ್ಗೆ ನೋಡಲು ಅವಾವೂ ಒಂದೂ ಅಲ್ಲಿ ಇರಲಿಲ್ಲ. ಅವು ಹೋದ ದಿಕ್ಕು ಹಿಡಿದು ಹೋಗಿ ನೋಡಿದರೆ ಅವು ಊರಾಚೆಗಿನ ಒಂದು ಗುಂಡಿಯ ಸುತ್ತ ಇರೋ ತಮ್ಮ ಬಾಯಿಯ ಇದ್ದಷ್ಟೂ ಅಗಲಿಸಿಕೊಂಡು ಒಳಗಿನ ಟಾರನ್ನು ಹಿಂಟುಹಿಂಟಾಗಿ ಕಪ್ಪಗೆ ಗುಂಡಿಗೆ ಕಕ್ಕುತ್ತಾ ಬಿದ್ದಿದ್ದವು. ಮೇಲಿಂದ ಬಿಸಿಲು ಏರುತ್ತಾ ಏರುತ್ತಾ ಗುಂಡಿಗೆ ಟಾರು ಇಳಿಯುತ್ತಾ ಇಳಿಯುತ್ತಾ ಡ್ರಮ್ಮುಗಳ ಕಡೆಗೆ ಟಾರು ನಿಧಾನ ಚಾಚಿಕೊಳ್ಳುವುದು ನಡೆದಿತ್ತು. ಸುತ್ತ ನೋಡುತ್ತಾ ನಿಂತವರು ನೋಡುತ್ತಲೇ ನಿಂತರು. ನೋಡದವರು ನೋಡಲು ಹಿಂಡು ಹಿಂಡು ಬಂದರು. ನೋಡಿ ನೋಡಿ ಕಣ್ಣಿಗೆ ಕಪ್ಪು ಹಿಡಿಯಲು ಕಾಲು ತೆಗೆಯುವರು. ಯಾರ ಬಾಯಲ್ಲೂ ಮಾತಿಲ್ಲ.

ಪಟೇಲರ ಬಾಯಲ್ಲೂ ಮಾತಿಲ್ಲ. ಒಬ್ಬ ಪಟೇಲರಿಗೆ, 'ನೀವು ಹೂ ಅನ್ನಬೇಕಿತ್ತು. ಮಕ್ಕಳಿಗೆ ರಾತ್ರೀನೇ ಹುಟ್ಟಿದ ದಿನ ಕಾಣಿಸಬಹುದಿತ್ತು' ಅಂದನು. ಪಟೇಲರು ಅದಕ್ಕೂ ಅವುಡು ಕಚ್ಚಿದರು. ಮಾತಾಡಲಿಲ್ಲ. ಪೋಲೀಸು ಸ್ಟೇಷನ್ನಿಗೆ ಅಲ್ಲಿಂದಲೇ ಹಾಗೇ ಹೋದರು. ಬಂದದ್ದು ಸಂಜೆಯಲ್ಲೇ. ನಾಳೆ ಮೊಬ್ಬಿಗೆ ಪೋಲೀಸಿನವರು ಬಂದು ಮಹಜರು ಮಾಡಿಕೊಂಡು ಹೋಗುವರೆಂದೂ, ಮುಂದಣ ಕಥೆ ಹೇಗಾಗುವುದೆಂದು ಯಾರಿಗೂ ತಿಳಿಯದೆಂದೂ ತಿಳಿದು ಬಂತು. ಹಿಂಗೆ ಒಂದರ ಮೇಲೊಂದು ಬಿದ್ದು ಕಪ್ಪಗೆ ಹಿಗ್ಗುತ್ತಾ ಹೋಗುತ್ತಿದ್ದ ಇಂಥದಕ್ಕೆ ಕೂಡಿಕೊಳ್ಳಲು ಊರಿಗೆ ಕತ್ತಲು ಹಿಡಿಯುವುದನ್ನೇ ಕಾಯುತ್ತಾ ಮತ್ತೊಂದು ಕಾದು ಕುಳಿತಿತ್ತು. ಮುಸ್ಸಂಜೆಗೆ ಎಲ್ಲರ ಹಟ್ಟಿ ದಾರಂದಗಳೂ ಮುಚ್ಚಿ ಬೀದಿ ಒಳಗ ನರಪಿಳ್ಳೆಯ ಸುಳಿವಿಲ್ಲದಿದ್ದರೂ ರಂಗಪ್ಪನ ಹೈದ ಮಾತ್ರ ಹಟ್ಟಿ ಕಂಡಿರಲಿಲ್ಲ. ಪಳ್ಳಿಗೆ ಮಧ್ಯಾಹ್ನ ಉಂಡು ಹೋದುದಂತೆ. ಮೇಷ್ಟರನ್ನು ಕೇಳಿದರು. ಹಟ್ಟಿ ಕಡೆ ಹೊಂಟುದ ತಾವು ಖುದ್ದು ಕಂಡೆವೆಂದರು. ಹೊಂಟ ಕಡೆ ಹೊಂಟೇ ಬಿಡುವ ಬೆಪ್ಪು ಹೈದ ಅದು. ಲಾಟೀನು ಈಸಿಕೊಂಡು ಹಟ್ಟಿ ಹಟ್ಟಿ ತಟ್ಟಿ ಬಂದೂ ಆಯ್ತು. ಅಂವ ಆಡುವ ಗೆಣೆಕಾರರ ಕೇಳಿಯಾಯ್ತು. ಎಲ್ಲರೂ ಕಂಡಿದ್ದೆವು ಅನ್ನುವವರೇ. ಯಾವ ಕೇರಿ ಯಾವ ಬೀದಿಯನ್ನೂ ಬಿಡಲಿಲ್ಲ. ಹಿಂಗೆ ಎಷ್ಟೊತ್ತು ಆಯ್ತೋ. ಆ ಹೈದನ ಅವ್ವನ ಅಳು ಸದ್ದಡಗಿದ ಊರಲ್ಲಿ ರಾಗವಾದ ಸದ್ದಾಗಿ ಸಮರಾತ್ರಿ ಮೀರಿಯೂ ಇತ್ತು.

ಮೊಬ್ಬಿಗೇ ಪೋಲೀಸು ವ್ಯಾನು ಕಷ್ಟಪಟ್ಟುಕೊಂಡು ಊರ ಮುಂದು ಬಂದು ನಿಂತಿತು. ನೋಡ ಬಂದವನಿಗೆ ಪಟೇಲರ ಕರೆತರುವಂತೆ ಇನ್ಸ್‌ಪೆಕ್ಟರು ಕಳಿಸಿದರು. ಪಟೇಲರು ದಡಬಡಾಯಿಸಿಕೊಂಡು ಬಂದು ನಿಂತರು. ಎಲ್ಲರೂ ಉರಾಚೆಗಿನ ಟಾರು ಗುಂಡಿ ಹತ್ತಿರ ಬಂದು ನೋಡಿ, ನೋಡಿದಾಕ್ಷಣ ಚಕ್ಕ ನಿಂತು ಬಿಟ್ಟರು. ರಂಗಪ್ಪನ

12th_Kannada_Reader_3-5.indd 55 22-05-2019 14:31:14

ಹೈದನ ಕಾಲನ್ನು ಗುಂಡಿಗೆ ಇಳಿದಿದ್ದ ಟಾರು ಹಿಡಿದುಕೊಂಡಿತ್ತು. ಎರಡೂ ಕೈಗಳನ್ನು ಟಾರಿನ ಡ್ರಮ್ಮು ಕಚ್ಚಿಕೊಂಡಿತ್ತು. ಮೈಯ್ಯಿ ಕೈಯ್ಯಿ ಮೊಖ ಅನ್ನದೆ ಟಾರು ಟಾರಾಗಿತ್ತು. ಮತ್ತೂ ಹತ್ತಿರದಿಂದ ನೋಡಿದರೆ ಹೈದನ ಮೈಯೊಳಗೆ ಇನ್ನೂ ಜೀವ ಆಡುತ್ತಿತ್ತು.

ಕೃತಿ–ಕರ್ತೃ ವಿಚಾರ



– ದೇವನೂರು ಮಹಾದೇವ

ದೇವನೂರು ಮಹಾದೇವ(1948) ಅವರು ಬಂಡಾಯ ಮನೋಧರ್ಮದ ಮೂಲಕ ಕನ್ನಡ ಕಥಾ ಪರಂಪರೆಗೆ ಹೊಸ ಆಯಾಮ ಒದಗಿಸಿದವರು. ಚಾಮರಾಜ ನಗರ ಜಿಲ್ಲೆಯ ದೇವನೂರು ಗ್ರಾಮದವರು. ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತರಾಗಿದ್ದಾರೆ. ಒಡಲಾಳ, ಕುಸುಮಬಾಲೆ ಮತ್ತು ದ್ಯಾವನೂರು – ಇವರು ಇವರ ಪ್ರಮುಖ ಕೃತಿಗಳು. ಅಮೇರಿಕೆಯ ಅಯೋವಾ ವಿಶ್ವವಿದ್ಯಾಲಯದಲ್ಲಿ ನಡೆದ ಇಂಟರ್‌ನ್ಯಾಷನಲ್ ರೈಟಿಂಗ್ ಪ್ರೋಗ್ರಾಂ(1989)ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದರು. ದೇವನೂರರು ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಯನ್ನೂ ಪಡೆದಿದ್ದಾರೆ. ಕುಸುಮ ಬಾಲೆ ಕೃತಿಗೆ 1990ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವೂ ಇವರಿಗೆ ಲಭಿಸಿದೆ. ಇವರ ಕೃತಿಗಳು ಇತರ ಭಾರತೀಯ ಭಾಷೆಗಳಿಗೂ ಅನುವಾದವಾಗಿವೆ. ನವ್ಯೋತ್ತರ ಸಾಹಿತ್ಯದ ದಲಿತ ಲೇಖಕರಲ್ಲಿ ಇವರು ಗಮನಾರ್ಹರಾಗಿದ್ದಾರೆ.

ಪದಗಳ ಅರ್ಥ

ಗವ್ವ–ಕಗ್ಗತ್ತಲು; ಯಾಸ–ವೇಷ; ವರಸೆ–ರೀತಿ, ವಿಧಾನ; ಅದ–ತಗ್ಗು, ಹಳ್ಳ; ಸೆಳಕಿನವ–ಆಕರ್ಷಕ ವ್ಯಕ್ತಿ; ಅಗತ–ವ್ಯಾಪಿಸು; ನೆಸೆದು–ಚಾಚು; ದೊಡ್ಡತೆಗೆ–ದೊಡ್ಡದಾಗಿ; ಮಂಟಾಕು–ಮಣ್ಣು ಹೊರು, ಓದದೇ ಇರುವುದು; ಬಡೀರುಡ–ಬಡಿಯಿರಿ, ಹೊಡೆಯಿರಿ; ಕೇಮು–ಕೆಲಸ; ಹಟ್ಟಿದಾರಂದ–ಹಟ್ಟಿಯ ಬಾಗಿಲು; ಹಿಂಟುಹಿಂಟು–ಅಂಟುಅಂಟು; ಪಳ್ಳಿ–ಶಾಲೆ; ಯಮ್ಮ–ಹೆಂಗಸರು; ಒಕ್ಕಡೆ–ಒಂದು ಕಡೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಎಸ್ಸೆಸ್ಸೆಲ್ಸಿ ಹತ್ತಿ ಬಂದ ನಾಕಾರು ಜನರು ಯಾರು ಯಾರು ?
2. ಊರ ರೋಡಿನ ಸುದ್ದಿ ಹೇಗೆ ಹರಡಿತು ?
3. ನಾಗರಿಕತೆಯಿಂದ ಊರು ಬಿಕೋ ಎನ್ನಲು ಕಾರಣವೇನು ?
4. ಪಟೇಲರು ತಮ್ಮಟೆ ಬಡಿಸಿ ಊರಲ್ಲಿ ಏನೆಂದು ಸಾರಿಸಿದರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಊರಿಗೆ ಮಿನಿಷ್ಟರು ಬಂದಾಗ ಪಟೇಲರು ಏನೆಂದು ಬಿನ್ನೈಸಿಕೊಂಡರು ?
2. ಹಳ್ಳಿ ಜನರ ವರಸೆ ಬದಲಾದದ್ದು ಹೇಗೆ ?
3. ರಂಗಪ್ಪನಿಗೆ ಸಹನೆ ಮೀರಲು ಕಾರಣವೇನು ? ಅದರ ಪರಿಣಾಮವೇನು
4. ಪಟೇಲರ ಮೇಲೆ ಜನರು ಹೊರಿಸಿದ ಆರೋಪ ಯಾವುದು ?
5. ಟಾರಿನ ಡ್ರಮ್ಮುಗಳು ಎಲ್ಲಿ ಬಿದ್ದಿದ್ದವು ? ಏಕೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ನೊಂದವರು ಯಾರಿಗೆ ಏನೆಂದು ದೂರು ಕೊಟ್ಟರು? ವಿವರಿಸಿ.

12th_Kannada_Reader_3-5.indd 56 22-05-2019 14:31:14

2. ಪಟೇಲರ ಕೋಪಕ್ಕೆ ಕಾರಣವೇನು? ಅದರ ಪರಿಣಾಮವೇನು ?
3. ರೋಡಿಗೆ ಟಾರು ಹಾಕುವಾಗ ಹೈಕಳು ಹೇಗೆ ನಡೆದುಕೊಳ್ಳುತ್ತಾರೆ? ವಿವರಿಸಿ.
4. ಚಾವಡಿಯಲ್ಲಿ ನಡೆದ ವಿಚಾರಣೆಯನ್ನು ಸಂಗ್ರಹಿಸಿ.
5. ಡಾಂಬರು ಬಂದುದು ಕಥೆಯ ಸ್ವಾರಸ್ಯವನ್ನು ಸಂಗ್ರಹಿಸಿರಿ.

ಭಾಷಾಭ್ಯಾಸ

1. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
ಊರಿಂದ, ನೆಲೆಯಾಗಿ, ನೆಲಕ್ಕಂಟಿಕೊಂಡು, ತಂತಮ್ಮ, ಗುಂಪುಗೂಡಿ, ಕೈಯಾಡಿಸು.

2. **ಈ ಕೆಳಕಂಡ ಪದಗಳ ಗ್ರಾಂಥಿಕ ರೂಪ ಬರೆಯಿರಿ.**
ಯಾಸ, ಬಡಿಯಿರಿ, ಹೆಂಗ, ಯಮ್ಮ, ಮೂಗ್ನ.

ಚಟುವಟಿಕೆ

1. ಪ್ರಸಿದ್ಧ ಪುಸ್ತಕಾಲಯಗಳಿಗೆ ಭೇಟಿ ನೀಡಿ ಶ್ರೇಷ್ಠ ಕವಿಗಳ ಕಥೆ ಕಾದಂಬರಿಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಿರಿ.
2. ನಿಮ್ಮ ಜೀವನದಲ್ಲಿ ಕಂಡುಕೊಂಡ ಉತ್ತಮ ಅನುಭವಗಳ ಕುರಿತು ಕಥೆ, ಕವಿತೆಗಳನ್ನು ಬರೆಯಿರಿ.



12th_Kannada_Reader_3-5.indd 57 22-05-2019 14:31:14

ಉಪಪಠ್ಯ

ಘಟಕ ಮೂರು

ಕೃಷಿ ಸಂಸ್ಕೃತಿ ಮತ್ತು ಜಾಗತೀಕರಣ

– ಸಿ.ಹೆಚ್. ಹನುಮಂತರಾಯ



ಗಡಿಬಿಡಿಯ ಬಾಳಿನಲ್ಲಿ ಕೈಗಾರಿಕೀಕರಣ, ಖಾಸಗೀಕರಣ, ಕಂಪ್ಯೂಟರೀಕರಣ ಮತ್ತು ಜಾಗತೀಕರಣಗಳು ಮನುಷ್ಯನನ್ನು ಬಿಗಿದಪ್ಪಿಕೊಂಡಿವೆ. ಮಾನವೀಯತೆಯ ಮೂಲ ಜಲವೇ ಬತ್ತಿ ಹೋಗುತ್ತಿರುವ ಅಪಾಯ ಎದುರಾಗುತ್ತಿದೆ. ಅಂತಃಕರಣವಿಲ್ಲದ ಬದುಕು ಮರುಭೂಮಿಯಾಗುತ್ತಿದೆ. ದೇಶೀ ಸಂಸ್ಕೃತಿಯನ್ನು ಜಾಗತೀಕರಣದ ಭೂತ ಮುಕ್ಕುತ್ತಿದೆ. ಭೂಮಿಯನ್ನೇ ನಂಬಿಕೊಂಡಿದ್ದ ರೈತರು ಖಾಸಗೀಕರಣದ ಸಂಕೋಲೆಯಲ್ಲಿ ಸಿಲುಕಿ ತೊಳಲುತ್ತಿದ್ದಾರೆ. ಭೂಮಿತಾಯಿಯ ಮಕ್ಕಳು ಅನಾಥರಾಗಿ ಬದುಕುತ್ತಿದ್ದಾರೆ. ಉಳ್ಳವರು ಮತ್ತು ಇಲ್ಲದವರ ನಡುವೆ ಕಂದಕ ನಿರ್ಮಾಣವಾಗಿದೆ.



12th_Kannada_Reader_3-5.indd 58 22-05-2019 14:31:15

ಬಹುಕಾಲದಿಂದ ನಮ್ಮ ರೈತ ಚಳವಳಿಗಳನ್ನು ಅವಗಾಹಿಸುತ್ತಾ ಬಂದವನು ನಾನು. ಸ್ವಾತಂತ್ರ್ಯ ಚಳವಳಿಗೆ ಈ ದೇಶದ ರೈತರು ನೀಡಿದ ಕಾಣಿಕೆ ಅವಿಸ್ಮರಣೀಯವಾದುದು. ಅವರ ತ್ಯಾಗ, ಬಲಿದಾನಗಳಿಲ್ಲದೇ ಹೋಗಿದ್ದರೆ ಸ್ವಾತಂತ್ರ್ಯ ಕನಸಾಗಿ ಉಳಿಯುತ್ತಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ.

ಶಾಲಾ ಪಠ್ಯ ಕ್ರಮಗಳಲ್ಲಿ 1857ರ ಸಿಪಾಯಿ ದಂಗೆಯ ಬಗ್ಗೆ ಓದಿದ್ದು ಇನ್ನೂ ನೆನಪಿದೆ. ನಿಜವಾಗಿಯೂ ಅದನ್ನು ರೈತ ದಂಗೆ ಎಂದೇ ಕರೆಯಬೇಕು ಎನ್ನಿಸುತ್ತದೆ. ಏಕೆಂದರೆ ಆ ದಂಗೆಯು ಸ್ಫೋಟಗೊಳ್ಳುವುದಕ್ಕೆ ಕ್ರಾಂತಿಕಾರಕ ವಾತಾವರಣವನ್ನು ರೈತರು ತಮ್ಮ ಚಳವಳಿಗಳ ಮೂಲಕ ಸೃಷ್ಟಿ ಮಾಡಿದ್ದರು. ಬ್ರಿಟೀಷರು ರೈತರಿಂದ ತೆರಿಗೆ ವಸೂಲಿ ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ಯಾವ ಅನುಕೂಲಗಳನ್ನು ಒದಗಿಸುತ್ತಿರಲಿಲ್ಲ. ಕೆರೆ ಬಾವಿಗಳ ಸಂರಕ್ಷಣೆ ಮತ್ತು ನಿರ್ಮಾಣ ಕಾರ್ಯಗಳು ಸ್ಥಗಿತಗೊಂಡವೆನ್ನುವಷ್ಟು ಕ್ಷೀಣಗೊಂಡವು. ರೈತರ ಹಳೆಯ ತೆರಿಗೆ ಪದ್ಧತಿಯ ಪ್ರಕಾರ, ಬೆಳೆದ ಬೆಳೆಯಲ್ಲಿ ಒಂದಷ್ಟು ಭಾಗವನ್ನು ಕೊಡಬೇಕೆನ್ನುವ ನಿಯಮವಿತ್ತು. ಈಗ ಬರ ಬಿದ್ದು ಬೆಳೆ ಬಾರದಿದ್ದರೆ ಆ ವರ್ಷವೂ ತೆರಿಗೆ ಪಾವತಿಸಬೇಕಾಯಿತು. ಬ್ರಿಟೀಷರು ತಂದ ಹೊಸ ನಮೂನೆಯ ಜಮೀನ್ದಾರಿ ಪದ್ಧತಿಯಿಂದ ರೈತರು ಹಣದ ರೂಪದಲ್ಲಿ ತೆರಿಗೆ ಪಾವತಿಸಬೇಕಾಯಿತು. ಬೆಳೆ ಬೆಳೆಯಲಿ, ಬೆಳೆಯಾಗದಿರಲಿ ತೆರಿಗೆ ಕಡ್ಡಾಯವಾಯಿತು. ತೆರಿಗೆ ಪಾವತಿಸದ ರೈತನ ಜಮೀನನ್ನು ಬ್ರಿಟೀಷರಿಂದ ನೇಮಕಗೊಂಡಿದ್ದ ಜಮೀನ್ದಾರ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದ. ಹೀಗಾಗಿ ತಮ್ಮ ಜಮೀನುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ರೈತರು ಸಾಲ ಮಾಡಬೇಕಾಯಿತು. ಆ ಮೊದಲು ಇಲ್ಲದಿದ್ದ ಸಾಲ ನೀಡುವ ಸಾಹುಕಾರರ ವರ್ಗವೊಂದು ಹಳ್ಳಿ ಹೋಬಳಿಗಳಲ್ಲಿ ತಲೆಯೆತ್ತಿತು. ಸಾಲ ಮಾಡಿ ಕೃಷಿ ಮಾಡುವ ಪದ್ಧತಿ ರೈತರಿಗೆ ಅಪರಿಚಿತ ಎನ್ನುವಂತಿತ್ತು. ಸಾಲ ನೀಡಿದ ಸಾಹುಕಾರರು ಸಿಕ್ಕಾಪಟ್ಟೆ ಬಡ್ಡಿ ಹಾಕಿ ರೈತರನ್ನು ಸುಲಿಯುತ್ತಿದ್ದರು.

ಇದೆಲ್ಲದರ ಪರಿಣಾಮವಾಗಿ ಹತ್ತೊಂಭತ್ತನೇ ಶತಮಾನದ ಪೂರ್ವಾರ್ಧದಲ್ಲಿ ಮಾನವ ನಿರ್ಮಿತ ಬರಗಳು ಉಂಟಾಗತೊಡಗಿದವು. 1500ರಿಂದ 1857ರಷ್ಟು ಹೊತ್ತಿಗೆ ಸುಮಾರು ಇಪ್ಪತ್ತಕ್ಕೂ ಮಿಕ್ಕ ಬರಗಳು ಕಾಣಿಸಿಕೊಂಡವು. ರೈತರು ಎರೆ ಮಣ್ಣನ್ನು ತಿಂದು ಹೊಟ್ಟೆ ತುಂಬಿಸಿಕೊಂಡ ಸುದ್ದಿಗಳೂ ಹರಡಿದ್ದವು. ಆ ಕಾಲಕ್ಕೆ ಹಸಿವಿನಿಂದ ಸಾಯುವ ರೈತರ ದೇಹಗಳನ್ನು ಅಂತ್ಯಕ್ರಿಯೆ ಮಾಡಲು ಆಗದಂತಹ ಸ್ಥಿತಿ ಉಂಟಾಗಿತ್ತು. ಶವಗಳನ್ನು ನಾಯಿ ನರಿಗಳು ತಿನ್ನುತ್ತಿದ್ದವು. ಮಾನವ ಅಸ್ಥಿಪಂಜರಗಳು ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದವು. ಈಗಿನ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಬರವನ್ನು ಡೋಂಗಿ ಬರ ಎಂದು ಕರೆದರು. ಬ್ರಿಟೀಷರ ದರೋಡೆಕೋರ ನೀತಿಗಳ ವಿರುದ್ಧ ಉತ್ತರ ಪ್ರದೇಶದಲ್ಲಿ ಒಂದೆಡೆ ರೈತರು ಸಿಡಿದೆದ್ದಾಗ ಅವರ ಮೇಲೆ ಗೋಲಿಬಾರ್ ಮಾಡುವಂತೆ ಬ್ರಿಟೀಷ್ ಅಧಿಕಾರಿಗಳು ಭಾರತೀಯ ಸೈನಿಕರಿಗೆ ಆದೇಶಿಸಿದ್ದರು. ಆದರೆ ಸೈನಿಕರು ಗುಂಡುಗಳನ್ನು ರೈತರ ಮೇಲೆ ಹಾರಿಸಲು ನಿರಾಕರಿಸಿದರು. ಆಗ ಬ್ರಿಟೀಷ್ ಸೈನಿಕರು ಮತ್ತು ಭಾರತೀಯ ಸೈನಿಕರು ಸ್ಫೋಟಗೊಳ್ಳಲು ಕಾರಣವಾಯಿತು. ರೈತರು ಮತ್ತು ಭಾರತೀಯ ಸೈನಿಕರ ಸಖ್ಯಕ್ಕೆ ಇದು ದಾರಿ ಮಾಡಿಕೊಟ್ಟಿತು.

1857ರ ದಂಗೆಯಲ್ಲಿ ಒಂದೂವರೆ ಲಕ್ಷ ಭಾರತೀಯರು ಕೊಲ್ಲಲ್ಪಟ್ಟರು. ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ರೈತರೇ ಆಗಿದ್ದರು. ಸ್ವಾತಂತ್ರ್ಯ ಸಂಗ್ರಾಮದ ದ್ವಿತೀಯ ಘಟ್ಟದಲ್ಲಿ ಬ್ರಿಟೀಷ್ ಸರ್ಕಾರಕ್ಕೆ ತೆರಿಗೆ ಕೊಡಬಾರದು ಎಂದು ಗಾಂಧೀಜಿ ಕರೆ ಕೊಟ್ಟರು. ಈ ಕರೆಗೆ ರೈತರು ಓಗೊಟ್ಟಿದ್ದರಿಂದ ಸ್ವಾತಂತ್ರ್ಯ ಚಳವಳಿ ಹಳ್ಳಿಹಳ್ಳಿಗಳಿಗೆ ವ್ಯಾಪಿಸಲು ಸಾಧ್ಯವಾಯಿತು.

ಸ್ವಾತಂತ್ರ್ಯವು ರೈತರ ಕೈಗೆ ಸಿಗದೆ ಬಂಡವಾಳಶಾಹಿಗಳ ಕೈಗೆ ಸಿಕ್ಕಿತು. ಜಮೀನ್ದಾರೀ ಪದ್ಧತಿಯನ್ನು ಮೂಲೋತ್ಪಾಟನೆ ಮಾಡದೆ ಪಾಳೇಗಾರರನ್ನೆಲ್ಲ ಹಾಗೇ ಉಳಿಸಿಕೊಳ್ಳಲಾಯಿತು. ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲೀಕರು ಮತ್ತು ಇಂಡಸ್ಟ್ರಿಗಳ ಕಚ್ಚಾ ಮಾಲಿಗೆ ಬೇಕೆಂದು ಲಕ್ಷಾಂತರ ಎಕರೆ ಜಮೀನುಗಳನ್ನು ಲಪಟಾಯಿಸಿಕೊಂಡರು. ಸ್ವಾತಂತ್ರ್ಯಕ್ಕಾಗಿ ಸೆಣಸಿದ ಸಾಮಾನ್ಯ ರೈತರ ಬದುಕು ದುಸ್ತರವಾಯಿತು.

ಹೀಗೆ ಸ್ವಾತಂತ್ರ್ಯಾ ನಂತರದ ಪರಿಸ್ಥಿತಿಯಲ್ಲಿ ಭಾರತದ ರೈತ ಹಳೆಯ ಜಮೀನ್ದಾರರು ಮತ್ತು ಬಂಡವಾಳಶಾಹಿ ಜಮೀನ್ದಾರರು ಈ ಇಬ್ಬರಿಂದಲೂ

12th_Kannada_Reader_3-5.indd 59 22-05-2019 14:31:15

ಶೋಷಣೆಗೆ ಒಳಗಾಗಬೇಕಾಯಿತು. ನಮ್ಮ ಹಸಿರು ಕ್ರಾಂತಿ ಶ್ರೀಮಂತ ರೈತರ ಉದಯಕ್ಕೆ ಸಹಾಯಕವಾಯಿತು. ಕೃಷಿ ರಂಗದಲ್ಲಿ ಬಡ ಹಾಗೂ ಕೂಲಿಕಾರ ರೈತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಮಲ್ಟಿಪಲ್ ಆಗತೊಡಗಿತು.

ಮಧ್ಯಮ ಮತ್ತು ಶ್ರೀಮಂತ ರೈತರ ಬೇಡಿಕೆಗಳನ್ನು ಪ್ರಧಾನವಾಗಿಸಿಕೊಂಡ ರೈತ ಹೋರಾಟಗಳು ವಿಶೇಷವಾಗಿ ಎಪ್ಪತ್ತರ ದಶಕದಲ್ಲಿ ಭುಗಿಲೇಳತೊಡಗಿದವು. ರೈತರು ಸರಕಾರಗಳನ್ನು ನಡುಗಿಸತೊಡಗಿದರು. ಕರ್ನಾಟಕದಲ್ಲಿ ಕಾಗೋಡು ರೈತ ಹೋರಾಟವು ಅಭೂತಪೂರ್ವ ನೆಲೆಗಟ್ಟನ್ನು ಒದಗಿಸಿಕೊಟ್ಟಿತು. ದಾಂಡೇಲಿಯಲ್ಲಿ ಹಳಿಯಾಳ ರೈತ ಹೋರಾಟವು ನಡೆಯಿತು. ನರಗುಂದ ಮತ್ತು ಶಿವಮೊಗ್ಗ ರೈತ ಚಳವಳಿಗಳು ನಡೆದವು. ಶಿವಮೊಗ್ಗ ರೈತ ಚಳವಳಿ ಮುಂದೆ ಹೋಳಾಗಿ ಒಡೆಯುತ್ತಾ ಹೋದದ್ದು ಈಗ ಇತಿಹಾಸ.

ನಮ್ಮ ಕೃಷಿರಂಗದಲ್ಲಿ ಹೊತ್ತಿ ಉರಿಯುತ್ತಿರುವ ಹಲವಾರು ಸಮಸ್ಯೆಗಳಿಗೆ ಜಾಗತೀಕರಣವೇ ಮೂಲ ಕಾರಣ ಎನ್ನುವ ಅಂಶ ಮೊದಮೊದಲಿಗೆ ರೈತರಿಗೆ ಅರ್ಥವಾಗಲಿಲ್ಲ. ಇಂದಿಗೂ ಈ ವಿಷಯ ಬಡ ರೈತ ಹಾಗೂ ಕೂಲಿಕಾರರಿಗೆ ಅರ್ಥವಾಗಿಲ್ಲ ಎನ್ನುವ ಮಾತು ಬೇರೆ. ನಮ್ಮ ಬಂಡವಾಳಶಾಹಿ ಜಮೀನ್ದಾರರು ಮತ್ತು ಶ್ರೀಮಂತ ರೈತರಿಗೆ ಜಾಗತೀಕರಣದ ಬಿಸಿ ತಡವಾಗಿಯಾದರೂ ಹತ್ತಿತ್ತು. ಜಾಗತೀಕರಣವು ಇಂದು ಇಡೀ ವಿಶ್ವದ ದೇಶಗಳಲ್ಲಿ ತನ್ನನ್ನು ಹೊಗಳುವ ವರ್ಗವೊಂದನ್ನು ಸೃಷ್ಟಿಸಿದೆ. ಈ ದೇಶದ ಬಂಡವಾಳಶಾಹಿಗಳು ಸಾಮ್ರಾಜ್ಯಶಾಹಿಗಳೊಂದಿಗೆ ಸ್ಪರ್ಧಿಸಲಾಗದೆ ಸೋತು ಒತ್ತಾಯದ ಹಸ್ತಲಾಘವ ಮಾಡಿದರು. ಇದರ ಪರಿಣಾಮವಾಗಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಪಾಲುದಾರಿಕೆ ಉದ್ಯಮಗಳನ್ನು ಆರಂಭಿಸಿದವು. ಇದನ್ನೇ ನವ ವಸಾಹತುವಾದದ ಪರಿಪೂರ್ಣ ರೂಪ ಎನ್ನುವುದು. ಸಾಮ್ರಾಜ್ಯಶಾಹಿಗಳು ವಿವಿಧ ದೇಶಗಳನ್ನು ರಾಜಕೀಯವಾಗಿ ಆಕ್ರಮಿಸಿಕೊಂಡು ತಮ್ಮದೇ ಸರಕಾರ ಸ್ಥಾಪಿಸಿ ಆರ್ಥಿಕ ಕೊಳ್ಳೆ ಹೊಡೆಯುತ್ತಿದ್ದ ಕಾಲವು ಎರಡನೇ ಜಾಗತಿಕ ಯುದ್ಧದ ಕಾಲದಲ್ಲಿ ಕುಸಿಯತೊಡಗಿತು. ಸಾಮ್ರಾಜ್ಯಶಾಹಿಗಳೊಳಗಿನ ಪರಸ್ಪರ ಕಿತ್ತಾಟವು ಜಾಗತಿಕ ಯುದ್ಧದಲ್ಲಿ ಪರ್ಯವಸಾನಗೊಂಡಿತು. ಅದೇ ಸಂದರ್ಭದಲ್ಲಿ ವಸಾಹತು ದೇಶಗಳಲ್ಲಿ ದೇಶೀಯ ವಿಮೋಚನಾ ಚಳವಳಿಗಳು ಹುಟ್ಟಿಕೊಂಡವು. ಇದರಿಂದಾಗಿ ಸಾಮ್ರಾಜ್ಯಶಾಹಿಗಳಿಗೆ ತಮ್ಮ ವಸಾಹತು ಆಡಳಿತವನ್ನು ಮುಂದುವರೆಸಲು ಅಸಾಧ್ಯವಾಯಿತು. ಪರಿಣಾಮವಾಗಿ ಎರಡನೇ ಜಾಗತಿಕ ಯುದ್ಧದ ನಂತರ ಹಲವಾರು ವಸಾಹತು ದೇಶಗಳು ಸ್ವತಂತ್ರಗೊಳ್ಳುವಂತಾಯಿತು.

ಸ್ವಾತಂತ್ರ್ಯ ಪಡೆದ ಕೆಲವು ರಾಷ್ಟ್ರಗಳು ಸಾಮ್ರಾಜ್ಯಶಾಹಿಗಳ ಶತಮಾನಗಳ ಸತತ ಲೂಟಿಯಿಂದ ಪಾರಾಗಿ ಆರ್ಥಿಕವಾಗಿ ಸುಭದ್ರವಾಗಿದ್ದವು. ಹೀಗಾಗಿ ಅವು ಸಾಮ್ರಾಜ್ಯಶಾಹಿಗಳ ಆರ್ಥಿಕ ಶೋಷಣೆಗೆ ಕೊರಳೊಡ್ಡಬೇಕಾಯಿತು. ತಮ್ಮ ವಸಾಹತುಶಾಹಿ ಸುಲಿಗೆಯಿಂದ ಸಂಪತ್ತು, ಕೇಂದ್ರೀಕರಿಸಿಟ್ಟುಕೊಂಡು ಸಾಮ್ರಾಜ್ಯಶಾಹಿಗಳು ಮೂರನೇ ಜಗತ್ತಿನ ಬಡ ರಾಷ್ಟ್ರಗಳನ್ನು ಸಾಲದ ಮೂಲಕ ಬಲೆಗೆ ಹಾಕಿಕೊಳ್ಳತೊಡಗಿದವು. ಸಾಲ ಕೇಳಲು ಹೋದ ರಾಷ್ಟ್ರಗಳಿಗೆ ಹತ್ತು ಹಲವು ಷರತ್ತುಗಳನ್ನು(ಸಾಲಕ್ಕೆ ಸಂಬಂಧಪಡದ) ಹೇರತೊಡಗಿದವು; ಬಡರಾಷ್ಟ್ರಗಳ ಯೋಜನೆಗಳಿಗೆ ದಿಕ್ಸೂಚಿಯಾಗತೊಡಗಿದವು. ಮಹಿಳೆ ಮತ್ತು ಶಿಶುಕಲ್ಯಾಣ, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣಗಳಂತಹ ಯೋಜನೆಗಳಿಗಾಗಿ ಹಣ ವ್ಯಯಿಸಬಾರದೆನ್ನುವ ನಿರ್ಬಂಧಗಳನ್ನು ಹೇರತೊಡಗಿದವು. ಬಡ ರಾಷ್ಟ್ರಗಳು ಅನುತ್ಪಾದಕವಾಗಿಯೇ ಮುಂದುವರೆದು ಕೇವಲ ಖರೀದಿದಾರರಾಗಬೇಕೆನ್ನುವುದು ಸಾಮ್ರಾಜ್ಯಶಾಹಿಗಳ ಇರಾದೆ. ಸಾಮ್ರಾಜ್ಯಶಾಹಿಗಳ ಉತ್ಪಾದನೆಗಳನ್ನು ಬಿಕರಿ ಮಾಡುವ ರೀಟೇಲ್ ಷಾಪ್‌ಗಳಂತಾದವು ಬಡ ರಾಷ್ಟ್ರಗಳು. ಜಾಗತಿಕ ಉತ್ಪನ್ನಗಳ ಗುಣ ನಿಯಂತ್ರಣದ ಸೋಗನ್ನು ಹಾಕಿಕೊಂಡು ಸಾಮ್ರಾಜ್ಯಶಾಹಿ ಪ್ರತ್ಯಕ್ಷವಾಯಿತು. ಪೇಟೆಂಟ್ ಕಾನೂನನ್ನು ತಂದಿತು. ಭಾರತದಲ್ಲಿ ಬೆಳೆಯುವ ಬಾಸುಮತಿ ಅಕ್ಕಿ, ಬೇವಿನ ಔಷಧಿ ಗುಣಗಳು, ಅರಿಶಿಣದ ಔಷಧಿ ಗುಣ ಇತ್ಯಾದಿಗಳು ತನ್ನ ಸಂಶೋಧನೆಗಳು ಎಂದು ಪೇಟೆಂಟ್ ಮಾಡಿಸಿಕೊಳ್ಳಲಾರಂಭಿಸಿದವು. ಸಾಮ್ರಾಜ್ಯಶಾಹಿ ಕಂಪನಿಗಳು ಅತ್ಯವಶ್ಯಕ ಔಷಧಿಗಳ ಮೇಲೆ ತನ್ನ ಏಕಸ್ವಾಮ್ಯವನ್ನು ಘೋಷಿಸಿ ಇನ್ನು ಮುಂದೆ ಇಲ್ಲಿ ನಮ್ಮ ಪರವಾನಗಿ ಇಲ್ಲದೆ ಏನನ್ನೂ

12th_Kannada_Reader_3-5.indd 60 22-05-2019 14:31:15

ತಯಾರಿಸಕೂಡದು ಎಂದು ಹೇಳತೊಡಗಿದವು. ಏಡ್ಸ್‌ನಂತಹ ವಿನಾಶಕಾರಿ ರೋಗಕ್ಕೆ ಬೇಕಾಗುವ ಮದ್ದುಗಳನ್ನು ಬಡ ರಾಷ್ಟ್ರಗಳು ಕಡಿಮೆ ವೆಚ್ಚದಲ್ಲಿ ತಯಾರಿಸುವುದು ದುಸ್ತರವಾಯಿತು. ಹೀಗಾಗಿ ಪೇಟೆಂಟ್‌ಗಳು ಏಡ್ಸ್ ರೋಗಿಗಳನ್ನು ನುಂಗ ತೊಡಗಿದವು. ಮೂರನೇ ಜಗತ್ತಿನ ರಾಷ್ಟ್ರಗಳ ಜನರು ಔಷಧ ಪಡೆಯುವ ಹಕ್ಕಿನಿಂದ ವಂಚಿತರಾಗಬೇಕಾಯಿತು.

ಮುಕ್ತ ಮಾರುಕಟ್ಟೆಯಲ್ಲಿ ದಿಗ್ವಿಜಯ ಸಾಧಿಸಲು ಸಾಮ್ರಾಜ್ಯಶಾಹಿಗಳು ಸಸ್ಯಾಹಾರಿ ದನಗಳನ್ನು ಸಹ ಮಾಂಸಾಹಾರಿಗಳನ್ನಾಗಿ ಪರಿವರ್ತಿಸಿ ಬಿಟ್ಟರು. ಹಲವಾರು ರಾಸಾಯನಿಕಗಳಿಂದ ಕೂಡಿದ ಆಹಾರ ನೀಡಿ ಕುರಿಗಳನ್ನು ದಿಢೀರ್ ಬೆಳವಣಿಗೆಗೆ ಒಳಪಡಿಸುವ ಪ್ರಯೋಗ ನಡೆಸಿದರು. ಅಕಾಲಿಕವಾಗಿ ಬಾತುಕೊಂಡು ಕೊಬ್ಬಿ ಬೆಳೆದ ಕುರಿಗಳು ನೋಡಲು ಮಾತ್ರ ಗೂಳಿಗಳಂತೆ ಕಂಡವು. ಆದರೆ ಅವುಗಳಿಗೆ ರೋಗನಿರೋಧಕ ಶಕ್ತಿಯೇ ಇರಲಿಲ್ಲ. ಗುರುತಿಸಲಾಗದ ವಿಚಿತ್ರ ರೋಗಗಳಿಗೆ ಬಲಿಯಾಗಿ ಕುರಿಗಳು ಸಾಯತೊಡಗಿದವು. ಈ ರೀತಿ ರೋಗ ಬಂದು ಸತ್ತ ಕುರಿಗಳನ್ನು ಮೇವಿನೊಂದಿಗೆ ರುಬ್ಬಿ ಆಕಳು ಎಮ್ಮೆಗಳಿಗೆ ಬೇಕಾಗುವ ಆಹಾರವನ್ನು ತಯಾರಿಸಿ ಮೂರನೇ ಜಗತ್ತಿನ ರಾಷ್ಟ್ರಗಳ ಮಾರುಕಟ್ಟೆಗೆ ರಫ್ತು ಮಾಡಿದರು. ಮೂರನೇ ಜಗತ್ತಿನ ರಾಷ್ಟ್ರಗಳ ಸರಕಾರಗಳು ಸಾಮ್ರಾಜ್ಯಶಾಹಿಗಳ ಒತ್ತಾಯಗಳಿಗೆ ಮಣಿದು ಕೃಷಿವಿರೋಧೀ ನೀತಿಗಳನ್ನು ಅನುಸರಿಸತೊಡಗಿದ್ದರಿಂದ ಬಡವರ ಆಹಾರ ಧಾನ್ಯ ಬಳಕೆಯಲ್ಲಿ ಕುಸಿತವುಂಟಾಯಿತು.

ನಮ್ಮ ಕರ್ನಾಟಕ ರಾಜ್ಯ ಭೂಸುಧಾರಣಾ ಕಾಯ್ದೆಯ ಪ್ರಕಾರ ರೈತ ಅಥವಾ ರೈತಕೂಲಿಕಾರರಲ್ಲದವರು ಕೃಷಿ ಜಮೀನುಗಳನ್ನು ಖರೀದಿಸುವಂತಿಲ್ಲ. ಹಲವಾರು ವ್ಯಾಪಾರಿಗಳು, ಸಾಲ ಲೇವಾದೇವಿಗಾರರು, ಸರಕಾರಕ್ಕೆ ಆದಾಯ ತೆರಿಗೆಯನ್ನು ವಂಚಿಸಲು ಜಮೀನುಗಳನ್ನು ಖರೀದಿಸಿ ತಮ್ಮ ವ್ಯಾಪಾರೀ ಮೂಲದಿಂದ ಬಂದ ಆದಾಯವನ್ನು ಕೃಷಿ ಮೂಲದಿಂದ ಬಂದ ಆದಾಯವೆಂದು ತೋರಿಸುವ ಪ್ರಕರಣಗಳು ನಮ್ಮಲ್ಲಿವೆ.

ಭೂಮಿ ರೈತನಿಗೆ ಉತ್ಪಾದನಾ ಸಾಧನ ಮಾತ್ರವಲ್ಲ, ಅವನ ಬದುಕೂ ಆಗಿದೆ. ರೈತನ ಬದುಕಿನ ವ್ಯವಸ್ಥೆಯ ಮೇಲೆ ನಡೆದ ದಾಳಿ ಇದಾಗಿದೆ. ಎಕರೆಗೆ ಆರೇಳು ಲಕ್ಷ ಸಿಕ್ಕೊಡನೆ ರೈತನ ಬದುಕು ಉಜ್ವಲಗೊಂಡಿತೆಂದು ತಿಳಿಯುವುದು ತಪ್ಪು. ಅವನೇ ಮಾರಿಕೊಂಡ ಜಮೀನು ಬಹುರಾಷ್ಟ್ರೀಯ ಕಂಪನಿಯಿಂದ ಲೇಔಟ್ ಮಾಡಿಸಲ್ಪಟ್ಟಾಗ ಅಷ್ಟು ಮೊತ್ತಕ್ಕೆ 30 × 40 ಸೈಟ್ ಸಹ ರೈತನಿಗೆ ಸಿಕ್ಕುವುದಿಲ್ಲ. ವ್ಯಾಪಾರದ ತಿಳಿವಳಿಕೆ ಲೇವಾದೇವಿ ಚಾಣಾಕ್ಷತೆ ಇರದ ರೈತ ಆ ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿ ಅಂತಿಮವಾಗಿ ನೆಲೆ ರಹಿತನಾಗುವ ಸಾಧ್ಯತೆಗಳೇ ಹೆಚ್ಚು.

ಜಾಗತೀಕರಣದ ಭಾಗವಾಗಿ ನಮ್ಮ ದೇಶಕ್ಕೆ ಖಾದ್ಯ ತಯಾರಿಕಾ ಕಂಪನಿಗಳು, ಹೋಟೆಲ್‌ಗಳು ದಾಳಿಯಿಟ್ಟವು. ವಿದೇಶಗಳಲ್ಲಿ ಈ ಹೋಟೆಲ್‌ಗಳು ಆರೋಗ್ಯಪ್ರಿಯರ ತಿರಸ್ಕಾರಕ್ಕೆ ಗುರಿಯಾಗಿದ್ದವು. ಅಮೇರಿಕಾದ ಸಂಸತ್ತು ಇಂತಹ ಹೋಟೆಲ್‌ಗಳು ತಯಾರಿಸುವ ಖಾದ್ಯಗಳ ಗುಣಮಟ್ಟವನ್ನು ಪರೀಕ್ಷಿಸಲು ಸಮಿತಿಯೊಂದನ್ನು ರಚಿಸಿತ್ತು. ಆ ಸಮಿತಿಯ ಮೂಲಕ ಈ ಕಂಪನಿಗಳು ಖಾದ್ಯ ತಯಾರಿಕೆಗೆ ಬಳಸುವ ಕುರಿ ಕೋಳಿಗಳಿಗೆ ವಿಶೇಷ ರಾಸಾಯನಿಕಗಳ ಆಹಾರ ತಿನ್ನಿಸಿ ಬೆಳೆಸಲಾಗುತ್ತಿದ್ದ ಅಂಶ ಬೆಳಕಿಗೆ ಬಂದಿತು. ಈ ರೀತಿ ಬೆಳೆಸುವ ಪ್ರಾಣಿಗಳ ಮಾಂಸ ಹೆಚ್ಚು ರುಚಿಕರವಾಗಲೆಂದು, ದಿಢೀರ್ ಉಬ್ಬಿಕೊಂಡು ಬೆಳೆಯಲೆಂದು ಅಪಾಯಕಾರಿ ರಾಸಾಯನಿಕಗಳನ್ನು ಬಳಸಲಾಗುತ್ತಿರುವ ಅಂಶವೂ ಬೆಳಕಿಗೆ ಬಂತು.

ಇಂತಹ ಪ್ರಾಣಿಗಳನ್ನು ತಿನ್ನುವುದರಿಂದ ಕರುಳಿನ ಕ್ಯಾನ್ಸರ್, ಜ್ವರ, ಮಕ್ಕಳಲ್ಲಿ ಮತ್ತು ವಯಸ್ಕರಲ್ಲಿ ಲೈಂಗಿಕ ಬದಲಾವಣೆಗಳು, ನಪುಂಸಕತ್ವ, ಮಕ್ಕಳಲ್ಲಿ ಅಕಾಲಿಕ ಹರೆಯ ಬರುವಿಕೆ ಮುಂತಾದ ಸಮಸ್ಯೆಗಳು ತಲೆದೋರುವುವು ಎಂದು ಅಮೇರಿಕಾದ ತಜ್ಞರು ತಮ್ಮ ಅಧ್ಯಯನದಿಂದ ತೋರಿಸಿಕೊಟ್ಟರು. ಇಂತಹ ವಿಷಪೂರಿತ ಮಾಂಸಭಕ್ಷಣೆಯಿಂದ ಅಮೇರಿಕನ್ನರು ಹೃದಯ ರೋಗಗಳಿಗೆ ಬಲಿಯಾಗುವುದನ್ನೂ ಪತ್ತೆ ಹಚ್ಚಿದರು. ರಾಸಾಯನಿಕಗಳನ್ನು ಭಕ್ಷಿಸಿ ಬೆಳೆಯುವ ಹಂತದಲ್ಲಿಯೇ ಪ್ರಾಣಿಗಳಿಗೆ ಕ್ಯಾನ್ಸರ್, ಲ್ಯುಕೋಸಿನ್, ಹಂದಿ ಜ್ವರ ಇತ್ಯಾದಿ ರೋಗಗಳು ಬರಲಾರಂಭಿಸುತ್ತವೆ.

12th_Kannada_Reader_3-5.indd 61 22-05-2019 14:31:15

ಈ ರೋಗಗಳನ್ನು ತಡೆಗಟ್ಟಲಿಕ್ಕಾಗಿ ಮಾರಣಾಂತಿಕ ರೋಗ ನಿರೋಧಕ ಔಷಧಿಗಳನ್ನು ಬಳಸಲಾಗುತ್ತದೆ. ಈ ರಾಸಾಯನಿಕಗಳು ಆ ಪ್ರಾಣಿಗಳ ದೇಹದಲ್ಲಿಯೇ ಡೆಪಾಸಿಟ್ ಆಗಿದ್ದು ಮಾಂಸದಲ್ಲಿಯೂ ಇರುತ್ತವೆ. ಮಾಂಸ ಬೇಯುವ ಶಾಖದ ಪ್ರಮಾಣಕ್ಕೆ ಈ ರಾಸಾಯನಿಕಗಳು ಹಾಳಾಗದೆ ಖಾದ್ಯಗಳ ಮೂಲಕ ಮನುಷ್ಯನ ದೇಹಕ್ಕೆ ರವಾನೆಗೊಳ್ಳುತ್ತವೆ.

ಈ ಸಂಗತಿಗಳು ಬಯಲಾದ ಮೇಲೆ ಅಮೇರಿಕನ್ನರು ಇಂತಹ ಹೋಟೆಲ್ಲುಗಳನ್ನು ಜಂಕ್‌ಫುಡ್ ಹೋಟೆಲುಗಳೆಂದು ಹೀಯಾಳಿಸಲಾರಂಭಿಸಿದರು. ಈ ಹೋಟೆಲ್ಲುಗಳನ್ನು ನಡೆಸುವ ಕಂಪೆನಿಗಳು ಸ್ವದೇಶದಲ್ಲಿ ತಾತ್ಸಾರಕ್ಕೆ ಒಳಗಾಗಿದ್ದರೂ ತಮ್ಮ ಶಾಖೆಗಳನ್ನು ಜಗತ್ತಿನ ನೂರಾರು ದೇಶಗಳಲ್ಲಿ ವಿಸ್ತರಿಸುವುದನ್ನು ಮಾತ್ರ ಬಿಡಲಿಲ್ಲ.

ಕೃತಿ–ಕರ್ತೃ ವಿಚಾರ

ಸಿ.ಎಚ್.ಹನುಮಂತರಾಯ : ಬೆಂಗಳೂರು ಗ್ರಾಮಾಂತರ ತಾಲೂಕಿನ ಚಿಕ್ಕಬೆಳವಂಗಲದ ರೈತ ಕುಟುಂಬದಲ್ಲಿ ಜನಿಸಿದ ಸಿ.ಎಚ್. ಹನುಮಂತರಾಯರು ಕನ್ನಡ ನಾಡುನುಡಿಯ ಬಗ್ಗೆ ಪ್ರೀತಿ ಕಾಳಜಿಯನ್ನಿಟ್ಟುಕೊಂಡಿದ್ದಾರೆ. ಬಿ.ಎ., ಆನರ್ಸ್ ಹಾಗೂ ಎಲ್‌ಎಲ್‌ಬಿ ಪದವಿಯನ್ನು ಗಳಿಸಿರುವ ಇವರು ಬೆಂಗಳೂರಿನ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ವಕೀಲ ವೃತ್ತಿಯಲ್ಲಿ ಹೆಸರು ಗಳಿಸಿರುವ ಇವರು ರೈತ ಪರ ಮತ್ತು ಕನ್ನಡ ಪರ ಹೋರಾಟಗಾರರ ವಿರುದ್ಧ ಹಾಕಿದ ಪ್ರಕರಣಗಳಲ್ಲಿ ಅವರ ಪರ ವಕಾಲತ್ತು ವಹಿಸಿದ್ದಾರೆ. ನ್ಯಾಯಾಲಯಗಳಲ್ಲಿ ಕನ್ನಡದಲ್ಲೇ ವಾದ ಮಂಡಿಸುವ ಕೌಶಲ್ಯ ಇವರಿಗೆ ಒಲಿದಿದೆ. ಹಲವಾರು ಕಾನೂನು ಕಾಲೇಜುಗಳಲ್ಲಿ ಗೌರವ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ 'ವಕೀಲನೊಬ್ಬನ ವಗೈರೆಗಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ರಾಜ್ಯ ಸರ್ಕಾರ ಇವರಿಗೆ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇಷ್ಟೆಲ್ಲ ವಾಸ್ತವ ಸಂಗತಿಗಳ ಹಿನ್ನೆಲೆಯಲ್ಲಿ ನಾವೆಲ್ಲ ಹೆಮ್ಮೆ ಪಡುವ ವಿಚಾರವೊಂದು ಉಳಿದೇ ಉಳಿಯುತ್ತದೆ. ಅದೆಂದರೆ ಭಾರತೀಯರು ಸಾವಿರಾರು ಸಂಖ್ಯೆಯಲ್ಲಿ ಹಲವು ದೇಶಗಳಲ್ಲಿ ಮೆಚ್ಚುಗೆ ಪಡೆಯುವಂತಹ ಖಾದ್ಯಗಳನ್ನು ತಯಾರಿಸಿ ಕೊಡುತ್ತಿದ್ದಾರೆ. ಯಾವೊಂದು ಹೊರದೇಶವೂ ಈವರೆಗೆ ಒಂದೂ ವ್ಯತಿರಿಕ್ತ ಅಭಿಪ್ರಾಯವನ್ನು ಕೊಡಲಾಗಿಲ್ಲ. ಈ ಬಾಬತ್ತಲ್ಲೂ ವಿಷವನ್ನುಂಡು ಅಮೃತವನ್ನುಣ ಬಡಿಸುವ ನಮ್ಮ ರೈತ ಸಂಸ್ಕೃತಿಗೆ ನಾವು ಬದ್ಧವಾಗಿಯೇ ಇದ್ದೇವೆ.

ಪದಗಳ ಅರ್ಥ

ಸಿಪಾಯಿ–ಸೈನಿಕ; ಮೂಲೋತ್ಪಾಟನೆ–ಬೇರು ಸಹಿತ ಕೀಳು; ಮುಟ್ಟುಗೋಲು(ಸಾಲ ವಸೂಲಿ ಮತ್ತಿತರ ಕಾರಣಗಳಿಗಾಗಿ) ಒಬ್ಬರ ಸ್ವತ್ತನ್ನು ಸರ್ಕಾರ ಅಥವಾ ನ್ಯಾಯಾಲಯ ಮುಂತಾದವುಗಳ ಆದೇಶದಂತೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದು; ಪಾಳೇಗಾರ–ಒಂದು ಪ್ರಾಂತ್ಯದ ಸರ್ವಾಧಿಕಾರಿ; ದುಸ್ತರ–ಕಷ್ಟ; ಬಿಕರಿ–ಮಾರಾಟ; ರೀಟೇಲ್ ಷಾಪ್–ಚಿಲ್ಲರೆ ಅಂಗಡಿ; ಇರಾದೆ–ಉದ್ದೇಶ; ಸೋಗು–ವೇಶ; ಬಾತು–ಊದು, ದಪ್ಪವಾಗು; ಉಜ್ವಲ–ಪ್ರಕಾಶಮಾನ; ಲೇವಾದೇವಿ–ವ್ಯವಹಾರ; ಡೆಪಾಸಿಟ್–ಶೇಖರಣೆ, ಠೇವಣಿ; ರವಾನೆ–ಸೇರು; ತಾತ್ಸಾರ–ತಿರಸ್ಕಾರ; ಬಾಬತ್ತು–ವಿಷಯ, ಸಂಗತಿ.



12th_Kannada_Reader_3-5.indd 62 22-05-2019 14:31:15

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲೇಖಕರು ಸಿಪಾಯಿ ದಂಗೆಯನ್ನು ಏನೆಂದು ಕರೆದಿದ್ದಾರೆ ?
2. ರೈತರು ಯಾವ ತೆರಿಗೆಯನ್ನು ಪಾವತಿಸಬೇಕಾಯಿತು ?
3. ಬ್ರಿಟೀಷ್ ಸರಕಾರಕ್ಕೆ ತೆರಿಗೆ ಕಟ್ಟಬಾರದೆಂದು ಯಾರು ಹೇಳಿದರು ?
4. ರೈತರ ಬದಲಿಗೆ ಸ್ವಾತಂತ್ರ್ಯವು ಯಾರ ಕೈಗೆ ಸಿಕ್ಕಿತು ?
5. ಶ್ರೀಮಂತ ರೈತರ ಉದಯಕ್ಕೆ ಯಾವುದು ಸಹಾಯಕವಾಯಿತು ?
6. ದೇಶಗಳಲ್ಲಿ ಯಾವ ರೀತಿಯ ಚಳವಳಿ ಹುಟ್ಟಿಕೊಂಡವು ?
7. ಜಂಕ್‌ಫುಡ್ ಹೋಟೆಲ್‌ಗಳೆಂದು ಹೀಯಾಳಿಸಿವರು ಯಾರು ?
8. ರೈತರನ್ನು ಶೋಷಣೆ ಮಾಡಿದವರು ಯಾರು ?
9. ರೈತ ಚಳವಳಿಗಳು ಎಲ್ಲೆಲ್ಲಿ ನಡೆದವು ?
10. ಸಾಲ ಕೇಳಲು ಹೋದ ಬಡ ರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?
11. ಕೃಷಿ ಜಮೀನನ್ನು ಯಾರು ಖರೀದಿಸುವಂತಿಲ್ಲ ?
12. ರಾಸಾಯನಿಕಗಳನ್ನು ತಿಂದು ಬೆಳೆಯುವ ಪ್ರಾಣಿಗಳಿಗೆ ಯಾವ ರೋಗಗಳು ಬರುತ್ತವೆ.

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸಿಪಾಯಿ ದಂಗೆಯನ್ನು ರೈತರ ದಂಗೆಯೆಂದು ಲೇಖಕರು ಏಕೆ ಕರೆದಿದ್ದಾರೆ?
2. ಹತ್ತೊಂಬತ್ತನೆಯ ಶತಮಾನದಲ್ಲುಂಟಾದ ಬರದ ಪರಿಣಾಮಗಳೇನು ?
3. ರೈತ ಚಳವಳಿಗಳ ಬಗ್ಗೆ ಬರೆಯಿರಿ ?
4. ಭೂಸುಧಾರಣಾ ಕಾಯ್ದೆ ಎಂದರೇನು ? ಅದರ ಪರಿಣಾಮಗಳೇನು ?
5. ನಮ್ಮ ಆರೋಗ್ಯದ ಮೇಲೆ ವಿದೇಶೀ ಹೋಟೆಲ್‌ಗಳು ನಡೆಸಿದ ದಾಳಿಗಳೇನು?

ಚಟುವಟಿಕೆ

1. ನೀವು ಕೂಡ ನಿಮ್ಮ ಸ್ವಂತ ಜಮೀನಿನಲ್ಲಿ ಬೇಸಾಯವನ್ನು ಹೆತ್ತವರ ಜೊತೆಯಲ್ಲಿ ಮಾಡಿರಿ. ಮರದಿಂದ ಮಳೆ ಎಂಬ ವಿವರವನ್ನು ಅರಿತು ಹತ್ತು ಹಲವು ರೀತಿಯ ಫಲ/ಮರಗಳನ್ನು ನೆಟ್ಟು ಮುಂದಿನ ಪೀಳಿಗೆಗೆ ದಾರಿದೀಪವಾಗಿರಿ.



12th_Kannada_Reader_3-5.indd 63 22-05-2019 14:31:15

ಘಟಕ ಮೂರು

ಲಿಂಗ–ವಚನ–ವಿಭಕ್ತಿ

ಒಂದು ನಾಮ ಪದದಲ್ಲಿ ಲಿಂಗ, ವಚನ, ವಿಭಕ್ತಿಗಳೆಂಬ ಮೂರು ಅಂಶಗಳಿರುತ್ತವೆ. ಉದಾಹರಣೆಗೆ 'ದೇಶದಿಂದ' ಎಂಬ ನಾಮಪದವನ್ನು ಬಿಡಿಸಿ ಬರೆದರೆ ದೇಶ+ಇಂದ – ಎಂದಾಗುತ್ತದೆ. ಇವುಗಳಲ್ಲಿ, 'ದೇಶ' ಎಂಬುದು ನಪುಂಸಕ ಲಿಂಗ ಹಾಗೂ ಅದು ಒಂದೇ ಒಂದು ದೇಶವನ್ನು ಸೂಚಿಸುವುದರಿಂದ ಅದು ಏಕವಚನವಾಗುತ್ತದೆ. ಇಲ್ಲಿ 'ಇಂದ' ಎಂಬುದು ವಿಭಕ್ತಿ ಪ್ರತ್ಯಯವಾಗಿದೆ. ಈ ಕುರಿತಂತೆ ಕೆಲವೊಂದು ಅಂಶಗಳನ್ನು ವಿವರವಾಗಿ ತಿಳಿದುಕೊಳ್ಳೋಣ.

ಲಿಂಗ

ಒಂದು ನಾಮಪ್ರಕೃತಿಯನ್ನು ಲಿಂಗವೆಂದು ಕರೆಯುತ್ತಾರೆ. ಕನ್ನಡದಲ್ಲಿ ಪ್ರಮುಖವಾಗಿ ಮೂರು ವಿಧಗಳಿವೆ. ಅವುಗಳನ್ನು ಪುಲ್ಲಿಂಗ ಸ್ತ್ರೀಲಿಂಗ ಹಾಗೂ ನಪುಂಸಕ ಲಿಂಗಗಳೆಂದು ಕರೆಯುವರು.

1. ಪುಲ್ಲಿಂಗ

ಪುರುಷರನ್ನು ಕುರಿತು ಹೇಳುವ ಲಿಂಗವನ್ನು ಪುಲ್ಲಿಂಗವೆನ್ನುವರು. ಉದಾಹರಣೆಗೆ: ರಮೇಶ, ಅಪ್ಪ, ದೇವ, ಅವನು ಇತ್ಯಾದಿ.

2. ಸ್ತ್ರೀಲಿಂಗ

ಸ್ತ್ರೀಯರನ್ನು ಕುರಿತು ಹೇಳುವ ಲಿಂಗವನ್ನು ಸ್ತ್ರೀಲಿಂಗವೆನ್ನುವರು. ಉದಾಹರಣೆಗೆ : ಗೀತಾ, ಅಜ್ಜಿ, ದೇವಿ, ಅಮ್ಮ, ತಂಗಿ, ಅವಳು ಇತ್ಯಾದಿ.

3. ನಪುಂಸಕಲಿಂಗ

ಪುಲ್ಲಿಂಗವೂ ಅಲ್ಲದ, ಸ್ತ್ರೀಲಿಂಗವೂ ಅಲ್ಲದ ಲಿಂಗಗಳನ್ನು ನಪುಂಸಕ ಲಿಂಗ ಎನ್ನುವರು. ಉದಾಹರಣೆಗೆ : ಗಿಡ, ನದಿ, ಮರ, ಗುಡ್ಡ, ಕುದುರೆ, ಕುರ್ಚಿ, ಅದು ಇತ್ಯಾದಿ. ಇವುಗಳಲ್ಲದೆ ಲಿಂಗಗಳಲ್ಲಿ ಇನ್ನೂ ಕೆಲವು ವಿಧಗಳಿವೆಯೆಂದು ವ್ಯಾಕರಣಶಾಸ್ತ್ರಕಾರರು ಹೇಳುತ್ತಾರೆ. ಅವುಗಳು : ಪುನ್ನಪುಂಸಕ ಲಿಂಗ, ಸ್ತ್ರೀನಪುಂಸಕ ಲಿಂಗ ಹಾಗೂ ನಿತ್ಯನಪುಂಸಕ ಲಿಂಗಗಳು.

1. ಪುನ್ನಪುಂಸಕ ಲಿಂಗ : ಕೆಲವು ನಾಮಪದಗಳನ್ನು ಸಂದರ್ಭಕ್ಕನುಗುಣವಾಗಿ ಪುಲ್ಲಿಂಗವಾಗಿಯೂ, ನಪುಂಸಕಲಿಂಗವಾಗಿಯೂ ಬಳಸುತ್ತೇವೆ. ಅವುಗಳನ್ನು ಪುನ್ನಪುಂಸಕ ಲಿಂಗ ಎನ್ನುವರು. ಉದಾಹರಣೆಗೆ : ಚಂದ್ರ ಮೂಡಿದನು(ಪುಲ್ಲಿಂಗ); ಚಂದ್ರ ಮೂಡಿತು(ಪುನ್ನಪುಂಸಕಲಿಂಗ).

2. ಸ್ತ್ರೀನಪುಂಸಕಲಿಂಗ : ಕೆಲವು ನಾಮಪದಗಳನ್ನು ಸಂದರ್ಭಕ್ಕನುಗುಣವಾಗಿ ಸ್ತ್ರೀಲಿಂಗವಾಗಿಯೂ ನಪುಂಸಕಲಿಂಗವಾಗಿಯೂ ಬಳಸುತ್ತೇವೆ. ಅವುಗಳನ್ನು ಸ್ತ್ರೀನಪುಂಸಕಲಿಂಗವೆನ್ನುವರು. ಉದಾಹರಣೆಗೆ : ಗಂಗೆ ಹರಿಯುತ್ತಾಳೆ(ಸ್ತ್ರೀಲಿಂಗ); ಗಂಗೆ ಹರಿಯಿತು(ಸ್ತ್ರೀನಪುಂಸಕಲಿಂಗ).

3. ನಿತ್ಯ ನಪುಂಸಕಲಿಂಗ : ಕೆಲವು ನಾಮಪದಗಳನ್ನು ಯಾವುದೇ ಸಂದರ್ಭದಲ್ಲಿಯೂ ನಪುಂಸಕಲಿಂಗವಾಗಿ ಮಾತ್ರವೇ ಬಳಸುತ್ತೇವೆ. ಅಂತಹ ಪದಗಳನ್ನು ನಿತ್ಯ ನಪುಂಸಕ ಲಿಂಗವೆಂದು ಕರೆಯಲಾಗುವುದು. ಉದಾಹರಣೆಗೆ : 'ಮಗು' ನಕ್ಕಿತು, 'ದಂಡು' ಬಂತು; 'ಜನ' ಆಗಮಿಸಿತು... ಇತ್ಯಾದಿ.

ವಚನ

ವಚನ ಎಂದರೆ ಮಾತು. ಆದರೆ ವ್ಯಾಕರಣದಲ್ಲಿ ಇದು 'ಸಂಖ್ಯೆ' ಎಂಬರ್ಥವನ್ನು ನೀಡುತ್ತದೆ. ಕನ್ನಡದಲ್ಲಿ ಎರಡು ಬಗೆಯ ವಚನಗಳಿವೆ. 1. ಏಕವಚನ. 2. ಬಹುವಚನ.

1. ಏಕವಚನ

ಒಬ್ಬ ವ್ಯಕ್ತಿ, ಒಂದು ವಸ್ತು, ಒಂದು ಸ್ಥಳವನ್ನು ಸೂಚಿಸುವುದನ್ನು ಏಕವಚನವೆನ್ನುವರು. ಉದಾಹರಣೆಗೆ ರಾಜ, ಹಣ್ಣು, ಮನೆ, ಹಳ್ಳಿ, ಗಿಡ, ತಾಯಿ, ನದಿ ಇತ್ಯಾದಿ.

2. ಬಹುವಚನ

ಒಂದಕ್ಕಿಂತ ಹೆಚ್ಚು ವ್ಯಕ್ತಿ, ವಸ್ತು, ಸ್ಥಳವನ್ನು ಸೂಚಿಸುವುದನ್ನು ಬಹುವಚನ ಎನ್ನುವರು ಉದಾಹರಣೆಗೆ ರಾಜರು, ಹಣ್ಣುಗಳು, ಮನೆಗಳು,

12th_Kannada_Reader_3-5.indd 64 22-05-2019 14:31:15

ಹಳ್ಳಿಗಳು, ತಾಯಂದಿರು, ನದಿಗಳು ಇತ್ಯಾದಿ.

ಏಕವಚನಕ್ಕೆ ಕೆಲವು ಪ್ರತ್ಯಯಗಳು ಸೇರಿ ಬಹುವಚನಗಳಾಗುತ್ತವೆ. ಹಾಗೆ ಸೇರುವ ಪ್ರತ್ಯಯಗಳನ್ನು 'ಬಹುವಚನ' ಪ್ರತ್ಯಯಗಳೆಂದು **ದ**ವು, ರು, ಕ್ಕಳ್, ಗಳು, ಅಂದಿರು ಇತ್ಯಾದಿ.
ಅದು–ಅವು; ಹುಡುಗ–ಹುಡುಗರು; ಮಗು–ಮಕ್ಕಳು; ಕಲ್ಲು–ಕಲ್ಲುಗಳು; ತಮ್ಮ–ತಮ್ಮಂದಿರು ಇತ್ಯಾದಿ.
ಕನ್ನಡ ಭಾಷೆಯಲ್ಲಿ ದ್ವಿವಚನ ಪ್ರಯೋಗ ಬಹಳ ವಿರಳ. ಕಿವಿಗಳು, ಕಾಲುಗಳು, ಕಣ್ಣುಗಳು ಇತ್ಯಾದಿ ಪದಗಳು ಮಾತ್ರ ದ್ವಿವಚನಗಳಾಗುತ್ತವೆ ಎಂದು ತಿಳಿದುಕೊಳ್ಳಿರಿ.

ವಿಭಕ್ತಿ ಪ್ರತ್ಯಯಗಳು

ನಾಮಪ್ರಕೃತಿಗಳ ಮೇಲೆ ಕರ್ತೃ, ಕರ್ಮ, ಹರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣ ಎಂಬ ಏಳು ಕಾರಕಾರ್ಥಗಳಲ್ಲಿ ಸೇರುವ ಏಳು ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳೆಂದು ಹೆಸರು. ಉದಾಹರಣೆಗೆ ಮರದಲ್ಲಿ ಎಂಬ ಪದದಲ್ಲಿ ಮರ+ದ+ಅಲ್ಲಿ – ಎಂಬ ಮೂರು ಅರ್ಥವತ್ತಾದ ಕನಿಷ್ಠತಮ ಘಟಕಗಳಿವೆ. ಮರ=ನಾಮಪ್ರಕೃತಿ; ದ=ಪ್ರಾತಿಪದಿಕ ರಚಕ(ನಾಮಪ್ರಕೃತಿಗೆ ಪ್ರತ್ಯಯಗಳನ್ನು ನೇರವಾಗಿ ಹಚ್ಚಲು ಸಾಧ್ಯವಿಲ್ಲದ ಕಡೆ ಮಾತ್ರ ಇಂತಹ ಪ್ರಾತಿಪದಿಕ ರಚಕಗಳ ಬಳಕೆಯಾಗುತ್ತದೆ); ಅಲ್ಲಿ=ವಿಭಕ್ತಿ ಪ್ರತ್ಯಯ.

ಈ ಕೆಳಗಿನ ಪಟ್ಟಿಯಲ್ಲಿ ಪೂರ್ಣ ವಿವರವನ್ನು ನೀಡಲಾಗಿದೆ.

ಪ್ರಥಮಾ ವಿಭಕ್ತಿಯಲ್ಲಿ 'ಉ' ಪ್ರತ್ಯಯದ ಅವಶ್ಯಕತೆಯಿಲ್ಲ. ಆದರೂ ಬಳಕೆಯಲ್ಲಿ ಬಂದಿರುವುದರಿಂದ ಅದನ್ನು ಆವರಣದಲ್ಲಿ ಕೊಡಲಾಗಿದೆ.

ವಿಭಕ್ತಿ ಪಲ್ಲಟ

ನಾಮ ಪ್ರಕೃತಿಗೆ ಸೇರಬೇಕಾದ ವಿಭಕ್ತಿ ಪ್ರತ್ಯಯಗಳಿಗೆ ಬದಲಾಗಿ ಬೇರೊಂದು ವಿಭಕ್ತಿ ಪ್ರತ್ಯಯವನ್ನು ಸೇರಿಸುವುದೂ ಉಂಟು. ಹಾಗೆ ಒಂದು ವಿಭಕ್ತಿ ಪ್ರತ್ಯಯದ ಸ್ಥಾನದಲ್ಲಿ ಬೇರೊಂದು ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದರೆ ಅದಕ್ಕೆ ವಿಭಕ್ತಿ ಪಲ್ಲಟ ಎಂದು ಹೆಸರು.
ಉದಾಹರಣೆಗೆ : ದ್ವಿತೀಯಾ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿ ಪ್ರತ್ಯಯವನ್ನು ಸೇರಿಸುವುದುಂಟು.
ಉದಾ :ಅವನು ಮರವನ್ನು ಹತ್ತಿದನು(ದ್ವಿತೀಯಾ);
ಅವನು ಮರಕ್ಕೆ ಹತ್ತಿದನು(ಚತುರ್ಥೀ)
ಷಷ್ಠೀ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯನ್ನು ಸೇರಿಸುವುದುಂಟು.
ಉದಾ :ಮನೆಯ ಯಜಮಾನ(ಷಷ್ಠೀ)
ಮನೆಗೆ ಯಜಮಾನ(ಚತುರ್ಥೀ)
ಸಪ್ತಮೀ ವಿಭಕ್ತಿಯ ಸ್ಥಾನದಲ್ಲಿ ಚತುರ್ಥೀ ವಿಭಕ್ತಿಯನ್ನು ಸೇರಿಸುವುದುಂಟು. ಉದಾ : ಹಳ್ಳದಲ್ಲಿ ಬಿದ್ದನು(ಸಪ್ತಮೀ)
ಹಳ್ಳಕ್ಕೆ ಬಿದ್ದನು(ಚತುರ್ಥೀ)

ವಿಭಕ್ತಿಗಳು	ವಿಭಕ್ತಿ ಪ್ರತ್ಯಯಗಳು	ಕಾರಕಾರ್ಥ	ಏಕವಚನ	ಬಹುವಚನ
ಪ್ರಥಮಾ	ಉ	ಕರ್ತೃ	ರಾಮ (ರಾಮನು)	ರಾಮರು
ದ್ವಿತೀಯಾ	ಅನ್ನು	ಕರ್ಮ	ರಾಮನನ್ನು	ರಾಮರನ್ನು
ತೃತೀಯಾ	ಇಂದ	ಕರಣ	ರಾಮನಿಂದ	ರಾಮರಿಂದ
ಚತುರ್ಥಿ	ಗೆ, ಕ್ಕೆ, ಇಕ್ಕೆ	ಸಂಪ್ರದಾನ	ರಾಮನಿಗೆ	ರಾಮರಿಗೆ
ಪಂಚಮೀ	ದೆಸೆಯಿಂದ	ಅಪಾದಾನ	ರಾಮನ ದೆಸೆಯಿಂದ	ರಾಮರ ದೆಸೆಯಿಂದ
ಷಷ್ಠೀ	ಅ	ಸಂಬಂಧ	ರಾಮನ	ರಾಮರ
ಸಪ್ತಮೀ	ಅಲ್ಲಿ	ಅಧಿಕರಣ	ರಾಮನಲ್ಲಿ	ರಾಮರಲ್ಲಿ

12th_Kannada_Reader_3-5.indd 65 22-05-2019 14:31:15

ಘಟಕ ನಾಲ್ಕು

4. ಕಲೆ/ನವೀನತೆ/ಸೌಂದರ್ಯಮೀಮಾಂಸೆ







ಕಾವ್ಯ ಕಣಜ	:	ನೆಲೆಸುಗೆ ನಿನ್ನ ವಕ್ಷದೊಳ್	– ಪಂಪ
ಗದ್ಯ ವಿಹಾರ	:	ಕೆರೆಗೆ ಹಾರ	– ತೀ.ನಂ.ಶ್ರೀ.
ಉಪಪಠ್ಯ	:	ತೊಗಲುಗೊಂಬೆಯಾಟ	– ಗೊ.ರು.ಚನ್ನಬಸಪ್ಪ
ವ್ಯಾಕರಣ	:	ಕಾಲ, ಅವ್ಯಯ, ತದ್ಧಿತಾಂತ–ಕೃದಂತ	

12th_Kannada_Reader_3-5.indd 66 22-05-2019 14:31:15

ಕಾವ್ಯ ಕಣಜ

ಘಟಕ ನಾಲ್ಕು

ನೆಲಸುಗೆ ನಿನ್ನ ವಕ್ಷದೊಳ್

– ಪಂಪ



ಅಯೋಧ್ಯೆಯ ಚಕ್ರವರ್ತಿಯಾದ ಭರತನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಅದು ದಿಗ್ವಿಜಯದ ಸೂಚನೆ ಎಂದು ಅರಿತ ಭರತ ಆ ರತ್ನದ ನೆರವಿನಿಂದ ಸಮಸ್ತ ಭೂಮಂಡಲವನ್ನೆಲ್ಲ ಗೆಲ್ಲುತ್ತಾನೆ. ಆತ ಗೆಲುವಿನ ಸಂಭ್ರಮದಲ್ಲಿದ್ದಾಗ ಅಯೋಧ್ಯಾ ನಗರದ ಹೆಬ್ಬಾಗಿಲಿನಲ್ಲೇ ಚಕ್ರರತ್ನವು ನಿಂತು ಬಿಡುತ್ತದೆ. ಭರತನು ತನ್ನ ತಮ್ಮಂದಿರಿಗೆ ತನಗೆ ವಿನಯ ತೋರಿಸುವಂತೆ ಸಂದೇಶ ಕಳುಹಿಸುತ್ತಾನೆ. ಬಾಹುಬಲಿಯನ್ನು ಹೊರತುಪಡಿಸಿ ಉಳಿದೆಲ್ಲಾ ಸೋದರರೂ ಭೂಮಿಗಾಗಿ ಅಣ್ಣನೊಂದಿಗೆ ಹೋರಾಡಲು ಇಚ್ಛಿಸದೆ ತಮ್ಮ ರಾಜ್ಯಗಳನ್ನು ಅಣ್ಣನಿಗೆ ಒಪ್ಪಿಸಿ ತಪೋನಿರತರಾಗುತ್ತಾರೆ. ಆದರೆ ಬಾಹುಬಲಿಯು ಕ್ಷಾತ್ರಧರ್ಮವನ್ನು ಗಟ್ಟಿಯಾಗಿ ಹಿಡಿದು ಅಣ್ಣನೊಂದಿಗೆ ಸೆಣಸುವ ಸನ್ನಿವೇಶವು ಇಲ್ಲಿ ವರ್ಣಿತವಾಗಿದೆ.



12th_Kannada_Reader_3-5.indd 67 22-05-2019 14:31:15

ಬಾಹುಬಲಿ ತನ್ನ ದಕ್ಷಿಣ
ಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್
ಸಾಹಸ ರಸಿಕಂ ಕಂಡೀ
ಸಾಹಸಮಂ ನೆಗಟ್ಟಿನೆನ್ನೊಳಂ ಭರತೇಶಂ (1)
ಕಳೆದಿಡುವುದೇ ಕಷ್ಟಂ ಭೂ
ತಳ ರಾಜ್ಯ ವಿಮೋಹಮಚಿರರುಚಿ ಸಂಚಳಮಿಂ
ತಳವುಗಿಡಿಸಿದುದು ಮನುಕುಲ
ತಿಳಕನುಮಂ ಕಳಮಹೀಶರುಟಿದವರಳವೇ (2)
ಸೋದರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು
ತ್ಪಾದಿಸುವುದು ಕೋಪಮನಳ
ವೀ ದೊರೆತೆನೆ ತೊಡವ್ರ್ದೆಂತು ರಾಜ್ಯಶ್ರೀಯೊಳ್ (3)
ಪಾತಕಿಯೊಳ್ ಲಕ್ಷ್ಮಿಯೊಳತಿ
ಕಾತರಕಾಪುರುಷ ಗಣನೆಯೊಳ್ ನೆರೆಯಲ್ಕಿಂ
ತೀತನೆ ಬಗೆಗಾಂ ಪುರುತನು
ಜಾತರ ಬಗೆದುದನೆ ಬಗೆವೆನಳಿಪಂ ಬಗೆಯೆಂ (4)
ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವಿಂ
ತೆನೆಯೆನೆ ವಿಷಯ ಸುಖಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್ (5)
ಕಿವಿ ಮೆಯ್ ಕಣ್ ನಾಲಗೆ ಮೂ
ಗಿವು ಶಬ್ದ ಸ್ಪರ್ಷ ರೂಪ ರಸ ಗಂಧ ಸಮು
ದ್ಭವ ಸುಖದೊಳ್ ತೊಡವ್ರ್ದೆ ಸುಖ
ಮವಿಲ್ಲದಂದಿಲ್ಲದರ್ಕತೀಂದ್ರಿಯಮೆ ಸುಖಂ (6)

12th_Kannada_Reader_3-5.indd 68 22-05-2019 14:31:15

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದೀ
ದಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತ ಸುರಸಮುದಯಮಂ (7)
ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಟೆ ಮುಳಿಸಂ ನೀ
ನೆಂದಿಂಗಂ ಬಿಸುಡೀ ತ
ಮ್ಮಂದಿರೊಳಿಂತಿಂತು ಕಡ್ಡರಪ್ಪುದು ಪೆಂಪೇ (8)
ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟ ಖಡ್ಗ
ಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ
ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೇನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ಟಿ
ಮಾಸದೇ (9)
ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ಟಿ ದೋಷಮಂ ತಪದೊಳ್ ನೀ
ಗುವೆನ ಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ (10)
ವಚನ - ಎಂದು ಬಾಹುಬಲಿ ಕುಮಾರಂ ತಪಶ್ಚರಣ
ನಿಶ್ಚಯಮನನಾದಂ.

12th_Kannada_Reader_3-5.indd 69 22-05-2019 14:31:16

ಕವಿ–ಕಾವ್ಯ ಪರಿಚಯ



ಕನ್ನಡದ ಆದಿಕವಿ **ಪಂಪ**

ಪಂಪ (ಕ್ರಿ.ಶ. **901**) ಕನ್ನಡದ ಆದಿಕವಿ, ಅಗ್ರಕವಿ. ನಾಡೋಜ ಎಂಬುದು ಈತನಿಗಿದ್ದ ಬಿರುದುಗಳಲ್ಲಿ ಒಂದು. ಈತನ ಪೂರ್ವಿಕರು ಈಗಿನ ಆಂಧ್ರಪ್ರದೇಶದ ವೆಂಗಿಮಂಡಲದ ವೆಂಗಿಪಳುವಿನಲ್ಲಿ ನೆಲೆಸಿದ್ದರು. ತಂದೆ: ಭೀಮಪಯ್ಯ; ತಾಯಿ: ಅಬ್ಬಣಬ್ಬೆ. ದೇವೇಂದ್ರ ಮುನೀಂದ್ರರು ಈತನ ಗುರುಗಳು. ಇವನು ವೇಮುಲವಾಡ ಚಾಲುಕ್ಯ ವಂಶದ ಅರಸನಾದ ಅರಿಕೇಸರಿಯ ಆಸ್ಥಾನದಲ್ಲಿ ಕವಿಯೂ ಕಲಿಯೂ ಆಗಿ ಖ್ಯಾತಿ ಪಡೆದಿದ್ದನು.

ಪಂಪನ ಕಾವ್ಯಗಳು ಎರಡು : 'ಆದಿ ಪುರಾಣಂ' ಮತ್ತು 'ವಿಕ್ರಮಾರ್ಜುನ ವಿಜಯಂ'. ಆದಿಪುರಾಣವು ಮೊದಲನೇ ತೀರ್ಥಂಕರನಾದ ಪುರುದೇವ ಅಥವಾ ವೃಷಭದೇವನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ರಚಿತವಾದ ಜೈನಪುರಾಣ ಕಾವ್ಯ. ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ರಚಿಸಿದ ಪೂರ್ವಪುರಾಣ ಇದರ ಆಕರ ಗ್ರಂಥ.

ಆದಿಪುರಾಣವು ಧಾರ್ಮಿಕ ಕಾವ್ಯವಾದರೆ, ವಿಕ್ರಮಾರ್ಜುನ ವಿಜಯವು ಲೌಕಿಕ ಕಾವ್ಯ. ವ್ಯಾಸಭಾರತದಿಂದ ಪ್ರಭಾವಿತವಾದ ಒಂದು ಐತಿಹಾಸಿಕ ಮಹಾಕಾವ್ಯ. ಕವಿಯು ಇದರಲ್ಲಿ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಮಹಾಭಾರತದ ಅರ್ಜುನನೊಂದಿಗೆ ಸಮೀಕರಿಸಿ ಕಾವ್ಯ ರಚಿಸಿದ್ದಾನೆ. ಪಂಪನ ಈ ಎರಡೂ ಚಂಪೂ ಕೃತಿಗಳು ಕನ್ನಡ ಸಾಹಿತ್ಯ ಪರಂಪರೆಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟಿವೆ. ಈ ಕಾವ್ಯಭಾಗವನ್ನು ಪಂಪನ ಆದಿಪುರಾಣದಿಂದ ಆರಿಸಿಕೊಳ್ಳಲಾಗಿದೆ.

ಅಯೋಧ್ಯೆಯ ಚಕ್ರವರ್ತಿ ಭರತನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಹಾಗೆ ಹುಟ್ಟುವುದು ದಿಗ್ವಿಜಯವನ್ನು ಕೈಗೊಳ್ಳಬೇಕೆಂಬುದರ ಸೂಚನೆ. ಅದರಂತೆ ಭರತನು ಚಕ್ರರತ್ನವನ್ನು ಮುಂದಿಟ್ಟುಕೊಂಡು ಸಮಸ್ತ ಭೂಮಂಡಲವನ್ನೂ ಗೆಲ್ಲುತ್ತಾನೆ. ಗೆಲುವಿನ ಸಂಭ್ರಮದಲ್ಲಿ ಅಯೋಧ್ಯಾ ನಗರವನ್ನು ಪ್ರವೇಶಿಸುವಾಗ ಚಕ್ರರತ್ನವು ಹೆಬ್ಬಾಗಿಲಿನಲ್ಲೇ ನಿಂತು ಬಿಡುತ್ತದೆ. ತನ್ನ ತಮ್ಮಂದಿರನ್ನು ಗೆಲ್ಲುವ ತನಕ ಚಕ್ರರತ್ನ ಪುರಪ್ರವೇಶ ಮಾಡುವುದಿಲ್ಲವೆಂದು ಪುರೋಹಿತರು ಹೇಳುತ್ತಾರೆ. ಆಗ ಭರತನು ತನಗೆ ವಿನಯವನ್ನು ತೋರಿಸುವಂತೆ ತಮ್ಮಂದಿರಿಗೆ ಸಂದೇಶ ಕಳುಹಿಸುತ್ತಾನೆ. ಬಾಹುಬಲಿಯನ್ನು ಹೊರತು ಪಡಿಸಿ ಉಳಿದೆಲ್ಲ ಸೋದರರು ಭೂಮಿಗಾಗಿ ಅಣ್ಣನೊಂದಿಗೆ ಹೋರಾಡಲು ಇಷ್ಟಪಡದೆ ತಮ್ಮ ತಮ್ಮ ರಾಜ್ಯಗಳನ್ನು ಅಣ್ಣನಿಗೆ ಒಪ್ಪಿಸಿ ತಪೋನಿರತರಾಗುತ್ತಾರೆ. ಆದರೆ ಬಾಹುಬಲಿ ಮಾತ್ರ ಕ್ಷಾತ್ರವೃತ್ತಿಯನ್ನು ಗಟ್ಟಿಯಾಗಿ ಹಿಡಿದು ಅಣ್ಣನೊಂದಿಗೆ ಯುದ್ಧ ಮಾಡಲು ನಿಶ್ಚಯಿಸುತ್ತಾನೆ. ದೃಷ್ಟಿಯುದ್ಧ, ಜಲಯುದ್ಧ ಮತ್ತು ಮಲ್ಲಯುದ್ಧಗಳಲ್ಲಿ ಅವನನ್ನು ಸೋಲಿಸುತ್ತಾನೆ. ಇಡೀ ಭೂಮಂಡಲವನ್ನು ಗೆದ್ದ ಭರತ ಚಕ್ರವರ್ತಿ ತನ್ನ ತಮ್ಮನ ಎದುರಿನಲ್ಲಿ ಸೋತು ಅಪಮಾನಿತನಾಗಿ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗಿಸುತ್ತಾನೆ.

ಆದರೆ ಚಕ್ರರತ್ನವು ಬಾಹುಬಲಿಯ ಶಿರಸ್ಸನ್ನು ಛೇದಿಸದೆ, ಅವನಿಗೆ ಪ್ರದಕ್ಷಿಣೆ ಬಂದು ಅವನ ಬಲಭುಜದ ಪಕ್ಕದಲ್ಲಿ ನಿಂತುಕೊಳ್ಳುತ್ತದೆ. ಅಧಿಕಾರ ಮತ್ತು ಐಶ್ವರ್ಯಗಳು ಮಾನವೀಯ ಸಂಬಂಧಗಳನ್ನು ಛಿದ್ರಗೊಳಿಸುತ್ತವೆ ಎಂದರಿತ ಬಾಹುಬಲಿ, ತನ್ನಲ್ಲಿ ಅಪರಾಧ ಪ್ರಜ್ಞೆ ಜಾಗೃತವಾಗಲು ವೈರಾಗ್ಯಪರವಶನಾಗಿ ತಪಸ್ಸಿಗೆ ಹೋಗಲು ನಿರ್ಧರಿಸುತ್ತಾನೆ. ಈ ಸಂದರ್ಭದಲ್ಲಿ ವ್ಯಕ್ತವಾದ ಬಾಹುಬಲಿಯ ನಿಲುವನ್ನು ಪ್ರಸ್ತುತ ಕಾವ್ಯಭಾಗದಲ್ಲಿ ಕಾಣಬಹುದಾಗಿದೆ.

12th_Kannada_Reader_3-5.indd 70 22-05-2019 14:31:16

ಪದಗಳ ಅರ್ಥ

1. ದಕ್ಷಿಣ ಬಾಹು–ಬಲಭುಜ; ಕೆಲ–ಪಕ್ಕ, ಸಮೀಪ; ಸಾಹಸ ರಥಿಕಂ–ಸಾಹಸದಲ್ಲಿ ಆಸಕ್ತಿ ಹೊಂದಿದವನು; ನೆಗಟ್ಸ್–ಪ್ರಸಿದ್ಧಿ, ತೊಡಗು, ಮಾಡು.
2. ಕಳೆದಿಡು–ಬಿಟ್ಟುಬಿಡು; ವಿಮೋಹ–ವ್ಯಾಮೋಹ, ಅತಿಯಾದ ಪ್ರೀತಿ; ಅಚಿರ–ಚಿರವಲ್ಲದುದು, ನಶ್ವರವಾದುದು; ರುಚಿ–ಆಸಕ್ತಿ, ವ್ಯಾಮೋಹ; ಸಂಚಳ–ಚಂಚಲ; ಅಳವು–ಸಾಮರ್ಥ್ಯ, ಶಕ್ತಿ; ಕಿಡು–ಕೆಡು, ನಾಶ; ಮನುಕುಲತಿಲಕ–ಮಾನವ ಕುಲಕ್ಕೇ ತಿಲಕ ಪ್ರಾಯನಾಗಿರುವವನು, ಶ್ರೇಷ್ಠನಾದವನು(ಭರತ); ಖಳ–ದುಷ್ಟ, ನೀಚ; ಅಳವೇ–ವಶವೇ(ಮನುಕುಲ ತಿಲಕನಾದ ಭರತ ಚಕ್ರವರ್ತಿಯ ಮನಸ್ಸನ್ನೇ ಚಂಚಲಗೊಳಿಸಿದ ಈ ರಾಜ್ಯ ಮೋಹ ದುಷ್ಟರಾದ ರಾಜರನ್ನು ಬಿಟ್ಟೀತೇ? ಎಂಬ ಭಾವ).
3. ಕಾದಿಸು–ಹೋರಾಟ ಮಾಡುವಂತೆ ಮಾಡು; ಉತ್ಪಾದಿಸು–ಉಂಟು ಮಾಡು, ಸೃಷ್ಟಿಸು; ಅಳವು–ಶಕ್ತಿ; ದೊರೆತೆನೆ–ಸರಿಸಮಾನವೆಂದು; ತೊಡರ್ವುದು–ತೊಡಗುವುದು, ಜೊತೆ ಸೇರುವುದು(ಕಲಹ ಪ್ರಿಯಳಾದ ರಾಜ್ಯಲಕ್ಷ್ಮಿಯ ಜೊತೆಗೆ ಹೊಂದಿಕೊಂಡು ಹೋಗುವುದು ಹೇಗೆ ಎಂಬ ಭಾವ).
4. ಪಾತಕಿ–ಪಾಪಿ; ಕಾತರ–ಆಸಕ್ತಿಯಿಂದ ಕಾಯುವುದು, ನಿರೀಕ್ಷಿಸುವುದು; ಕಾಪುರುಷ–ಹೀನ ಮನುಷ್ಯ; ಗಣನೆ–ಲೆಕ್ಕ; ನೆರೆ–ಜೊತೆಗೂಡು, ಸೇರು; ಬಗೆ–ಮನಸ್ಸು; ಪುರುತನುಜಾತರು–ಪುರುದೇವನ ಮಕ್ಕಳು; ಅಳಿಪು–ಅತಿಯಾಸೆ; ಬಗೆಗೆ–ಯೋಚಿಸಲಿ(ಭರತು ಕಾತರ ಸ್ವಭಾವದ ಸಾಮನ್ಯನಂತೆ ರಾಜ್ಯಲಕ್ಷ್ಮಿಯನ್ನು ಸೇರಲು ಯೋಚಿಸಲಿ, ಆದರೆ ತಾನು ಮಾತ್ರ ಪುರು ತನಯರನ್ನು ಅನುಸರಿಸುವುದಾಗಿ, ಎಂದರೆ ತನ್ನ ಇತರ ಸೋದರರಂತೆ ಜಿನದೀಕ್ಷೆ ಪಡೆಯುವುದಾಗಿ ನಿರ್ಧರಿಸಿದನು ಎಂಬ ಭಾವ).
5. ಇನಿ–ಮಧುರ, ಸಿಹಿ; ನಂಜು–ವಿಷ; ಪನಿ–ಹನಿ; ಮುಳಿ–ಸಿಟ್ಟು; ವಿಷಯಸುಖ–ಇಂದ್ರಿಯ ಸುಖ; ಆಸ್ವಾದನೆ–ರುಚಿ ನೋಡುವುದು; ಲಂಪಟ–ಪಂಚೇಂದ್ರಿಯ ಸುಖಗಳ ಗೀಳು ಉಳ್ಳವನು, ವಿಷಯಾಸಕ್ತ(ಇಂದ್ರಿಯ ಸುಖಗಳು ಮೊದಲು ಸವಿಯಾಗಿ ಕಂಡರೂ ಅನಂತರದಲ್ಲಿ ಅವು ವ್ಯಕ್ತಿಯನ್ನು ಸರ್ವನಾಶ ಮಾಡುತ್ತವೆ. ಹೀಗಿದ್ದರೂ ನರಪಶುಗಳು ಏಕೆ ಕಾಮಾಸಕ್ತರಾಗುತ್ತಾರೆ ಎಂಬ ಭಾವ).
6. ಸಮುದ್ಭವ–ಹುಟ್ಟಿದ; ಅತೀಂದ್ರಿಯ–ಪಂಚೇಂದ್ರಿಯಗಳಿಗೆ ನಿಲುಕದ(ಕಣ್ಣು ಕಿವಿ ಮೂಗು ನಾಲಿಗೆ ಚರ್ಮ – ಈ ಪಂಚೇಂದ್ರಿಯಗಳು ಅನುಕ್ರಮವಾಗಿ ಆಕಾರ, ಶಬ್ದ, ವಾಸನೆ, ರಸ, ಸ್ಪರ್ಷ ವಿಷಯಗಳತ್ತ ತೊಡಗುವುದು ಸಹಜ. ಆದರೆ ಇವುಗಳನ್ನು ಹೊರತು ಪಡಿಸಿ ಪಡೆಯುವ ಇಂದ್ರಿಯಾತೀತವಾದ ಸುಖವೇ ಶ್ರೇಷ್ಠವಾದುದು ಎಂಬ ಭಾವ).
7. ಒಡಲು–ಶರೀರ, ದೇಹ; ಪಡೆಮಾತು–ಜನಜನಿತವಾದ, ಪ್ರಚಲಿತದಲ್ಲಿರುವ ಮಾತು; ವೆಱಯ್ಯಗಿದಪುದು(ಮೆಯ್+ಅಗಿದಪುದು)–ಮೈ ನಡುಗುವುದು; ಈಗಡೆ–ಈಗಲೇ; ಸಮುದಯ–ಸಮುದಾಯ, ಸಮೂಹ, ಸಮಾಜ.
8. ಚಕ್ರೇಶ–ಚಕ್ರವರ್ತಿ, ಭರತೇಶ; ಸಿಗ್ಗು–ನಾಚಿಕೆ; ಉಟೆ–ಬಿಡು; ಬಿಸುಡು–ಬಿಟ್ಟುಬಿಡು, ತಿರಸ್ಕರಿಸು; ಕಡ್ಡ–ವೈರತ್ವ, ದ್ವೇಷ; ಪೆಂಪು–ಹಿರಿಮೆ, ಕೀರ್ತಿ.
9. ವಕ್ಷ–ಎದೆ; ನಿಶ್ಚಳ–ಸ್ಥಿರ, ಶಾಶ್ವತ; ಭಟ ಖಡ್ಗ ಮಂಡಲೋತ್ಪಲ ವನ–ಯೋಧರ ಖಡ್ಗಗಳೆಂಬ ಕೆನ್ನೈದಿಲೆಯ ವನ; ಭಟ–ಸೈನಿಕ; ವಿಭ್ರಮ–ವಿಹರಿಸುವ, ಸುತ್ತುವ; ಭ್ರಮರಿ–ಹೆಣ್ಣು ದುಂಬಿ; ಇದೇವುದು–ಇದೇನು ಮಹಾ?; ಆಟಿಸು–ಅಪೇಕ್ಷಿಸು, ಕಾಮಿಸು; ನೆಗಟ್ತಿ–ಕೀರ್ತಿ, ಯಶಸ್ಸು; ಮಾಸು–ಮಸುಕಾಗು, ಕಳಂಕವುಂಟಾಗು. (ಯುದ್ಧವೀರರ ಖಡ್ಗಗಳೆಂಬ ಕೆನ್ನೈದಿಲೆಯ ಕೊಳದಲ್ಲಿ ಹೂವಿಂದ ಹೂವಿಗೆ ದುಂಬಿಯಂತೆ ಸದಾ ಸಂಚರಿಸುವ ಚಂಚಲೆಯಾದ, ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವವಳಾದ ರಾಜ್ಯವೆನ್ನುವ ಲಕ್ಷ್ಮಿಯು ಶಾಶ್ವತವಾಗಿ ನಿನ್ನ ಎದೆಯ ಮೇಲೆ ನೆಲೆಸಲಿ. ನನ್ನದಾಗಿರುವ ಸಮಸ್ತ ಸಾಮ್ರಾಜ್ಯವನ್ನೂ ನಿನಗೆ ಒಪ್ಪಿಸುತ್ತೇನೆ. ಇದು ದೊಡ್ಡ ವಿಷಯವೇನಲ್ಲ. ನೀನು ಮೆಚ್ಚಿದ ಹೆಣ್ಣನ್ನು ಆಳುವ ಭೂಮಿಯನ್ನು ತಮ್ಮನಾದ ನಾನು ಕಾಮಿಸಬಾರದು. ಕಾಮಿಸಿದ್ದೇ ಆದರೆ ನನ್ನ ಹೆಸರಿಗೆ ಕಳಂಕ ಬರುತ್ತದೆ ಅಲ್ಲವೇ? 'ಇದೇವುದಣ್ಣ' ಎಂಬ ಮಾತಿನಲ್ಲಿ ತಮ್ಮನಾದವನು ಅಣ್ಣನಿಗೆ ರಾಜ್ಯವನ್ನು ಬಿಟ್ಟು ಕೊಡುವಲ್ಲಿ ಯಾವ ಮಹಾ ತ್ಯಾಗವಿದೆ ಎಂಬ ಭಾವ ಧ್ವನಿತವಾಗಿದೆ).
10. ಅವಧರಿಸದೆ–ಮನಸ್ಸಿಗೆ ತಂದುಕೊಳ್ಳದೆ, ಯೋಚಿಸದೆ, ಕಿವಿಗೊಟ್ಟು ಕೇಳದೆ; ಅಸದಾಗ್ರಹ–ಕೆಟ್ಟ ಕೋಪ; ದುರ್ವಿಳಸನ–ಕೆಟ್ಟನಡತೆ, ಅವಿನಯ ವರ್ತನೆ (ಪೂರ್ವಾಪರ ವಿಮರ್ಶೆ ಮಾಡದೆ

12th_Kannada_Reader_3-5.indd 71 22-05-2019 14:31:16

ತಾನು ಅಣ್ಣನಲ್ಲಿ ಅವಿಧೇಯತೆಯಿಂದ ಮಾಡಿದ ದೋಷವನ್ನು ತಪಸ್ಸನ್ನಾಚರಿಸುವುದರ ಮೂಲಕ ಪರಿಹರಿಸಿಕೊಳ್ಳುವೆನು ಎಂಬ ಭಾವ).

ವಚನ: ತಪಸ್+ಚರಣ–ತಪಸ್ಸಿನ ಆಚರಣೆ; ನಿಶ್ಚಯ ಮನನಾದಂ–ದೃಢ ನಿರ್ಧಾರತೆಗೆದುಕೊಂಡವನಾದನು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಾಹಸ ರಸಿಕನು ಯಾರು ?
2. ಯಾವುದನ್ನು ಕಳೆದಿಡುವುದು ಕಷ್ಟ ಎಂದು ಬಾಹುಬಲಿ ಹೇಳುತ್ತಾನೆ ?
3. ಬಾಹುಬಲಿ ತಾನು ಯಾರನ್ನು ಅನುಸರಿಸಬೇಕೆಂದು ನಿರ್ಧರಿಸುತ್ತಾನೆ ?
4. ಲಂಪಟರು ಯಾರು ?
5. ಬಾಹುಬಲಿಯು ನಿಜವಾದ ಸುಖ ಯಾವುದೆಂದು ಭಾವಿಸುತ್ತಾನೆ?
6. ತನ್ನ ಮೈ ಯಾವುದಕ್ಕೆ ನಡುಗುತ್ತದೆ ಎಂದು ಬಾಹುಬಲಿ ಹೇಳುತ್ತಾನೆ?
7. ರಾಜ್ಯಮೋಹ ತೊರೆದ ಬಾಹುಬಲಿ ಏನು ಮಾಡಲು ನಿರ್ಧರಿಸಿದನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ರಾಜ್ಯ ಲಕ್ಷ್ಮಿಯ ಸ್ವಭಾವವನ್ನು ಬಾಹುಬಲಿಯು ಹೇಗೆ ತಿಳಿಸಿದ್ದಾನೆ ?
2. ವಿಷಯ ಸುಖವನ್ನು ಬಾಹುಬಲಿ ಹೇಗೆ ತಿಳಿಸುತ್ತಾನೆ?
3. ಪಂಚೇಂದ್ರಿಯಗಳು ಹಾಗು ಅವುಗಳ ವಿಷಯಗಳು ಯಾವುವು ?
4. ಬಾಹುಬಲಿ ಅಣ್ಣನಲ್ಲಿ ಕೇಳಿಕೊಳ್ಳುವುದೇನು ?
5. ಭರತನಲ್ಲಿ ಬಾಹುಬಲಿಯು ಏನೆಂದು ಕ್ಷಮೆ ಕೇಳುವನು

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಬಾಹುಬಲಿಯು 'ಅತೀಂದ್ರಿಯಮೆ ಸುಖಂ' ಎಂದು ನಿರ್ಧರಿಸಿಲು ಕಾರಣವೇನು?
2. ಬಾಹುಬಲಿಯು ತಪಸ್ಸಿಗೆ ಹೋಗಲು ನಿಶ್ಚಯಿಸಿದ್ದು ಏಕೆ ? ವಿವರಿಸಿ.
3. ಅವಿನಯದಿಂದ ಉಂಟಾದ ದೋಷವನ್ನು ಪರಿಹರಿಸಿಕೊಳ್ಳಲು ಬಾಹುಬಲಿಯು ಏನು ಮಾಡಲು ನಿಶ್ಚಯಿಸುತ್ತಾನೆ ?
4. ಅಣ್ಣನನ್ನು ಬಾಹುಬಲಿ ಹೇಗೆ ಸಮಾಧಾನ ಪಡಿಸಿದನು ?
5. ಬಾಹುಬಲಿಯ ವ್ಯಕ್ತಿತ್ವವನ್ನು ಚಿತ್ರಿಸಿ.

IV. ಟಿಪ್ಪಣಿ ಬರೆಯಿರಿ.

1. ಚಕ್ರರತ್ನ : ಜೈನ ಪರಿಭಾಷೆಯ ಚತುರ್ದಶ ರತ್ನಗಳಲ್ಲಿ ಒಂದು. ಚಕ್ರವರ್ತಿ ಪದವಿಯ ಸೂಚಕವಾಗಿ ಆಯುಧಾಗಾರದಲ್ಲಿ ಉದಯಿಸುವ, ಚಕ್ರವರ್ತಿಯ ದಂಡಯಾತ್ರೆಯಲ್ಲಿ ಮಾರ್ಗದರ್ಶಕವಾದ ಈ ರತ್ನ ನಿಂತಲ್ಲಿ ಶತ್ರುವಿನ ಸೂಚನೆಯಾಗುತ್ತದೆ. ಚಕ್ರವರ್ತಿಯ ಆಜ್ಞೆಯಂತೆ ಇದು ಶತ್ರು ಸಂಹಾರದೊಡನೆ ಮಾರ್ಗದಲ್ಲಿ ಮುಂದುವರೆಯುತ್ತದೆ.

ಭಾಷಾಭ್ಯಾಸ

1. ಈ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಲಕ್ಷ್ಮಿ, ಪನಿ, ಖಡ್ಗ, ಸಿರಿ, ಭೂಮಿ.

2. ಈ ಪದಗಳಿಗೆ ವಿರುದ್ಧ ಪದ ಬರೆಯಿರಿ.

ದಕ್ಷಿಣ, ಪಾಪಿ, ಸುರ, ನಿಶ್ಚಳ, ವಿನಯ, ಸದಾಗ್ರಹ.

3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಸುಖಾಸ್ವಾದನ, ಎಂದಿಂತು, ನೀನೊಲಿದ, ಅತೀಂದ್ರಿಯ, ಮೊದಲೊಳ್.

4. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಬಾಹುಬಲ, ಸಾಹಸ, ಸೋದರ, ಶಬ್ದ, ಎರಗು, ನಿಶ್ಚಯ.

ಚಟುವಟಿಕೆ

1. ಮಹಾಕವಿ ಪಂಪನ ಆದಿಪುರಾಣ ಕಾವ್ಯದ ಕಥೆಯನ್ನು ಓದಿ ತಿಳಿದುಕೊಳ್ಳಿ.
2. ಭರತ–ಬಾಹುಬಲಿಯರ ಕಥೆಯನ್ನು ನಾಟಕ ರೂಪದಲ್ಲಿ ಸಿದ್ಧಪಡಿಸಿ, ತರಗತಿಯಲ್ಲಿ ಅಭಿನಯಿಸಿ

12th_Kannada_Reader_3-5.indd 72 22-05-2019 14:31:16

ಗದ್ಯ ವಿಹಾರ

ಘಟಕ ನಾಲ್ಕು

ಕೆರೆಗೆ ಹಾರ

– ತೀ.ನಂ.ಶ್ರೀ.



ಪ್ರಾಚೀನ ಕಾಲದಿಂದಲೂ ಕನ್ನಡಿಗರು ಧೈರ್ಯ ಸಾಹಸಗಳಿಂದ ಮೆರೆದವರು. ಅದರಂತೆ ಕನ್ನಡಿಗರ ತ್ಯಾಗ ಕೂಡ ಹಿರಿದಾದುದು. ಕನ್ನಡತಿ ಸಹ ಧೈರ್ಯ ಸಾಹಸಗಳಂತೆ ತ್ಯಾಗವನ್ನೂ ಮೆರೆದಿದ್ದಾಳೆ. ಗರತಿಯಾಗಿ ಬಾಳುತ್ತ ಕಲ್ಯಾಣ ಕಾರ್ಯಕ್ಕೆ ತನ್ನ ಪ್ರಾಣವನ್ನು ತೆತ್ತಿದ್ದಾಳೆ.

'ಕೆರೆಗೆ ಹಾರ' ಈ ಜನಪದ ಗೀತ, ಗ್ರಾಮೀಣ ತರುಣಿಯ ತ್ಯಾಗದ ಕಥೆಯನ್ನು ಕರುಳು ಮಿಡಿಯುವಂತೆ ಹೇಳಿದ ಮಹಾಗಾಥೆ. ಕೆರೆಗೆ ತಾನು ಆಹಾರವಾಗಿ ಲೋಕಕಲ್ಯಾಣ ಮಾಡಿದ ಯುವತಿಯ ಕಥೆಯನ್ನು ನವಿರಾಗಿ ಲೇಖಕರು ವಿಶ್ಲೇಷಿಸಿದ್ದಾರೆ. ಸಣ್ಣ ಸೊಸೆ ಭಾಗೀರಥಿಯ ಮಹಾತ್ಯಾಗ ಅಮರವಾದುದು.



12th_Kannada_Reader_3-5.indd 73 22-05-2019 14:31:16

ಯಾವ ಗಣಿಯಲ್ಲಿ ಎಂಥ ಮಣಿ ಅಡಗಿರುವುದೋ! ಹಳ್ಳಿಯವರ ಹಾಡುಗಳನ್ನು ಕುರಿತು ಸುಶಿಕ್ಷಿತರಲ್ಲಿ ಮೊದಲಿಗೆ ಅನಾದರವೂ ತಿರಸ್ಕಾರವೂ ಇದ್ದುವು. ಅಕ್ಷರ ಕಲಿಯದವರು, ನಾಗರಿಕ ಜೀವನವನ್ನು ತಿಳಿಯದವರು, ವ್ಯಾಕರಣಬದ್ಧವಾಗಿ ಮಾತಾಡಲು ಅರಿಯದವರು – ಇಂಥವರು ತಮ್ಮ ಹೃದಯವನ್ನು ಹಗುರು ಮಾಡಿಕೊಳ್ಳುವುದಕ್ಕಾಗಿ ಆಗಾಗ ಹಾಡಿಕೊಂಡ ಹಾಡುಗಳಲ್ಲಿ ಏನು ತಿರುಳಿದ್ದೀತೆಂದು ವಿದ್ವಾಂಸರು ಅಸಡ್ಡೆ ಮಾಡುತ್ತಿದ್ದ ಕಾಲವೊಂದಿತ್ತು. ಆದರೆ ಆ ಭಾವ ಈಗ ಬಲುಮಟ್ಟಿಗೆ ತೊಲಗಿದೆ. ಪ್ರೌಢಿಮೆಯುಳ್ಳವರು ಕೂಡ ಈ ಹಾಡುಗಳ ರುಚಿಯನ್ನು ಮನಗಾಣುತ್ತಿದ್ದಾರೆ. ಸಹೃದಯರಾದ ವಿಮರ್ಶಕರ ನಿರೀಕ್ಷೆಗೂ ಮೀರಿ ಬಗೆಯನ್ನು ಸೂರೆಗೊಳ್ಳುವ ಕೃತಿಗಳು ಈ ಕ್ಷೇತ್ರದಲ್ಲಿ ಹಲವು ಬಾರಿ ದೊರೆಯುತ್ತವೆ. ಅಂಥವನ್ನು ಸಂಧಿಸಿದಾಗ, 'ಇದು ಹಳ್ಳಿಯ ಹಾಡು; ಗುಣವನ್ನು ಗ್ರಹಿಸಬೇಕು' ಎಂಬ ಕೃಪಾದೃಷ್ಟಿ ತೊಲಗಿ, 'ಇದು ಒಳ್ಳೆಯ ಕಾವ್ಯ, ಉತ್ತಮೋತ್ತಮ ಕಾವ್ಯ; ಇದರ ರಸವನ್ನು ಸವಿದು, ಹೃದಯವನ್ನು ಸಂಸ್ಕರಿಸಿಕೊಳ್ಳಬೇಕು' ಎಂಬ ನಮ್ರಬುದ್ಧಿ ಮೊಳೆಯುತ್ತದೆ.

ಇಂಥ ಒಂದು ಹಾಡನ್ನು ಹದಿನೈದು ಹದಿನಾರು ವರ್ಷಗಳ ಕೆಳಗೆ 'ಜಯ ಕರ್ನಾಟಕ'ದಲ್ಲಿ ನಾನು ಓದಿದೆನು. ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು ಹಳ್ಳಿಯ ಕಡೆ ಕೇಳಿ ಸಂಗ್ರಹಿಸಿದ 'ಕೆರೆಗೆ ಹಾರ' ಎಂಬ ಕೋಲಾಟದ ಪದವೇ ಅದು. ಈ ಹಾಡನ್ನು ಓದುತ್ತಾ ಓದುತ್ತಾ ನಮ್ಮ ಕಾವ್ಯಾಕಾಶದಲ್ಲಿ ಹೊಳಪಿನ ನಕ್ಷತ್ರವೊಂದನ್ನು ಹೊಸದಾಗಿ ಕಂಡಂತೆ ನನಗೆ ಅನುಭವವಾಯಿತು. ನಾನೊಬ್ಬನೇ ಅದನ್ನು ಸವಿದು ತೃಪ್ತಿ ಪಡದೆ, ಮಿಕ್ಕ ಕನ್ನಡಿಗರಿಗೂ ಅದರ ಸೊಗಸನ್ನು ಸಾರಿ ಹೇಳಬೇಕೆಂಬ ಆಸೆಯುಂಟಾಯಿತು. ಉತ್ತರ ಕರ್ನಾಟಕದ ಹಳ್ಳಿಯ ಜನ ಇದನ್ನು ಹೇಗೆ ಹಾಡುತ್ತಾರೋ ಕೇಳಿ ಅರಿತುಕೊಳ್ಳುವ ಭಾಗ್ಯ ನನಗಿನ್ನೂ ಒದಗಿಲ್ಲ. ಇನ್ನು ಮುಂದೆ ಕೇಳಿದರೂ ನನ್ನ ಒಣ ದನಿಯಲ್ಲಿ ಅದರ ಪಲುಕುಗಳನ್ನು ತರಬಲ್ಲ ಶಕ್ತಿಯೂ ಇಲ್ಲ. ರಾಗವಿಲ್ಲದೆ ಪದ್ಯಗಳನ್ನು ಓದುವ ಧಾಟಿಯೊಂದು ಉಂಟಷ್ಟೆ. ಆ ಬಗೆಯಲ್ಲಿ ಈ ಕವನವನ್ನು ಮೈಸೂರು ದೇಶದ ಸಭೆಗಳಲ್ಲಿ ಆಗಾಗ ಓದಿ ವಿವರಿಸಿದ್ದೇನೆ. ಹುಡುಗರು ದೊಡ್ಡವರು ಹೆಂಗಸರು ಗಂಡಸರು ಸಾಮಾನ್ಯರು ವಿದ್ವಾಂಸರು – ಎಲ್ಲರ ಮೇಲೂ ಇದು ಉಂಟು ಮಾಡಿದ ಗಾಢ ಪರಿಣಾಮವನ್ನು ಕಂಡು ಈ ಕೃತಿರತ್ನದ ಮಹಿಮೆ ದಿನದಿನಕ್ಕೆ ಹೆಚ್ಚಾಗಿ ನನಗೆ ಮನದಟ್ಟಾಗಿದೆ. ಇದನ್ನು ಕುರಿತು ನಾಲ್ಕು ಮಾತು ಹೇಳಿ ಪರಿಚಯ ಮಾಡಿಕೊಡಬೇಕೆನ್ನುವುದೇ ಇಲ್ಲಿ ನನ್ನ ಉದ್ದೇಶ.

ಊರಿನ ಹಿತಕ್ಕಾಗಿ ನಾಡಿನ ಕ್ಷೇಮಕ್ಕಾಗಿ ಕೆಲಸಗಳನ್ನು ಕೈಕೊಂಡಾಗ ಅಡ್ಡಿತಡೆಗಳು ಒದಗುವುದು ಸಹಜ. ದನಕರುಗಳಿಗೂ ಪೈರು ಪಚ್ಚೆಗಳಿಗೂ ನೀರು ಒದಗಲೆಂದು ಬಲುವೆಚ್ಚದಿಂದ ಕೆರೆಯನ್ನು ಕಟ್ಟಿಸಿದರೆ ನೀರೇ ಬೀಳದಿರಬಹುದು. ಪ್ರಜೆಗಳು ಸುರಕ್ಷಿತವಾಗಿರಲೆಂದು ಕೋಟೆಯನ್ನು ಎಬ್ಬಿಸಿದರೆ ಗೋಡೆಯೇ ಭದ್ರವಾಗಿ ನಿಲ್ಲದಿರಬಹುದು. ಇಂಥ ಸಂದರ್ಭದಲ್ಲಿ ನಮ್ಮ ಹಿಂದಿನವರು ಇಲ್ಲೇನೋ ದೈವಿಕವಾದ ಕಾರಣವಿರಬೇಕೆಂದು ನಂಬಿ ಜೋಯಿಸರನ್ನು ವಿಚಾರಿಸುತ್ತಿದ್ದರು. ಗ್ರಹಶಾಂತಿಯನ್ನೋ, ಭೂತಬಲಿಯಿನ್ನೋ ನಡೆಸಿ ಮುಂದುವರೆಯುತ್ತಿದ್ದರು. ಅಂತೂ ಊರೊಟ್ಟಿನ ಹಿತಕ್ಕಾಗಿ ಆಗಿನ ಬಲ್ಲವರು ಹೇಳಿದ ತ್ಯಾಗ ಕಾರ್ಯವನ್ನು ಅದು ಎಷ್ಟೇ ಕಠಿಣವಾಗಿದ್ದರೂ ಕೈಗೊಳ್ಳಲು ಅವರು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಇಂಥ ಒಂದು ಸನ್ನಿವೇಶವೇ 'ಕೆರೆಗೆ ಹಾರ' ಕಥೆಯ ಹಿನ್ನೆಲೆ.

ಕಲ್ಲನ ಕೇರಿ ಮಲ್ಲನಗೌಡಾ ಕೆರೆಯೊಂದ ಕಟ್ಟಿಸ್ಯಾನು
ಕೆರೆಯೊಂದು ಕಟ್ಟಿಸ್ಯಾನು ಸೆರೆ ಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗಿ ತಗಸ್ಯಾರು
ಹೊತ್ತಿಗಿ ತಗಸ್ಯಾರು ಜೋಯಿಸ ಕೇಳ್ಯಾರು

ಹಳ್ಳಿಯ ಹಾಡಿನ ಒಂದು ವಿಶಿಷ್ಟ ರೀತಿಯ ಪುನರುಕ್ತಿ ಪ್ರಾರಂಭದಲ್ಲೇ ಗೋಚರವಾಗುತ್ತದೆ. ಅನೇಕ ಹೇಳಿಕೆಗಳು ಎರಡೆರಡು ಸಲ ಬಂದು ವಿಷಯವನ್ನು ಕೇಳುವವರ ಮನಸ್ಸಿನಲ್ಲಿ ಚೆನ್ನಾಗಿ ಹದಿಯುತ್ತವೆ. 'ಹೊತ್ತಿಗೆ'ಯನ್ನು ತೆಗೆಯಿಸಿ ಪ್ರಶ್ನೆ ಮಾಡಿದಾಗ ಜೋಯಿಸರು ಏನು ಹೇಳಿದರು ? 'ಇದು ದೇವರ ಕಾಟ, ದೆವ್ವದ ಕಾಟ ಯಾವುದೂ ಅಲ್ಲ, "ಹಿರಿಸೊಸಿ ಮಲ್ಲವ್ವನ ಹಾರವ ಕೊಡಬೇಕು". ಆಕೆಯನ್ನು

12th_Kannada_Reader_3-5.indd 74 22-05-2019 14:31:16

ಆಹಾರವಾಗಿ ಒಪ್ಪಿಸಿದರೆ ಕೆರೆಯಲ್ಲಿ ನೀರು ಬೀಳುತ್ತದೆ' ಎಂದರು. ಗೌಡನ ಮನೆಯಲ್ಲಿ ಆಲೋಚನೆಗಿಟ್ಟುಕೊಂಡಿತು. ಹಿರಿಯ ಸೊಸೆಯನ್ನು ಹಾರವಾಗಿ ಕೊಟ್ಟರೆ ಹೇಗೆ? ಮನೆತನದ ಹಿರಿಯ ಸಂತತಿ ಮುಂದುವರೆಯಬೇಡವೇ? ಬಲಿಯನ್ನಂತೂ ಕೊಡಲೇ ಬೇಕು, ಇಲ್ಲವಾದರೆ ಕೈ ಹಿಡಿದ ಧರ್ಮ ಕಾರ್ಯ ಕೆಟ್ಟು ಹೋಗುತ್ತದೆ. ಹಾಗಾದರೆ –

ಕಡೆ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು
ಹಾರ ಕೊಡಬೇಕಂತ ಮಾತಾತು ಮನೆಯಾಗ
ಅಂತೂ ಹೀಗೆ ನಿಷ್ಕರ್ಷೆಯಾಯಿತು. ಬಳಿಕ –
ಸಣ್ಣ ಸೊಸಿ ಭಾಗೀರತಿ ತವರ ಮನೆಗೆ ಹೊಂಟಾಳು
ಅತ್ತೆವ್ವಾ ನಾ ನಮ್ಮ ತವರ ಮನೆಗೆ ಹೋಗತೀನು
ಸರ್ರನೆ ಹೋಗವ್ವಾ ಭರ್ರನೆ ಬಾರವ್ವಾ

ಕಥೆಯಲ್ಲಿ ನಡುವಣ ಎಷ್ಟೊಂದು ವಿಷಯವನ್ನು ಜಾಣನಾದ ಕವಿ ನಮ್ಮ ಊಹೆಗೇ ಬಿಡುತ್ತಾನೆ. ಮನೆಯಲ್ಲಿ ಆದ ಮಾತುಕಥೆ ಕೊನೆಯ ಸೊಸೆ ಭಾಗೀರಥಿಯ ಕಿವಿಗೆ ಬೀಳದಿರುತ್ತದೆಯೇ? ಅವಳ ಸಂಗಡ ಹಿರಿಯರು ನೇರವಾಗಿ ಪ್ರಸ್ತಾವಿಸಲಾರರು; ಇವಳೂ ಎದುರಿಗೆ ನಿಂತು ಪ್ರಶ್ನಿಸಲಾರಳು. ಹಾಗೆ ಮಾಡುವುದು ಹಿರಿಯ ಸಂಪ್ರದಾಯಕ್ಕೆ ವಿರೋಧ. ಆದರೆ ತಾನು ಜೀವ ಒಪ್ಪಿಸಿಕೊಡಬೇಕಾದ ಸಂದರ್ಭ ಬಂದಾಗ ಈ ಎಳೆಯಳ ಮನಸ್ಸಿನಲ್ಲಿ ಕಳವಳ ಹುಟ್ಟಿ ತವರು ಮನೆಗೆ ಒಮ್ಮೆ ಹೋಗಿ ಬರಬೇಕೆಂದು ಆಸೆ ಚಿಮ್ಮುವುದು ಅತಿ ಸಹಜವಲ್ಲವೆ! ಅತ್ತೆ ಮಾವಂದಿರು ಕೆಟ್ಟವರೇನಲ್ಲ. ಅವಳ ಹೃದಯದ ವೇದನೆಯನ್ನು ಅರಿಯಬಲ್ಲರು. ಆದರೆ ಅವರು ತಾನೇ ಏನು ಮಾಡಿಯಾರು? 'ತ್ಯಜೇತ್ ಕುಲಾರ್ಥೇ ಪುರುಷಂ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್!' ಅವರ ಕೈ ಕಟ್ಟಿ ಹೋಗಿದೆ. ಸೊಸೆ ತವರೂರಿಗೆ ಹೋಗಿ ಬರಲು ಒಪ್ಪಿಗೆ ಕೊಟ್ಟು ಸರ್ರನೆ ಹೋಗಿ ಭರ್ರನೆ ಬಾರವ್ವ ಎಂದು ಹೇಳಿ ಕಳಿಸಿದರು.

ಸಣ್ಣ ಸೊಸಿ ಭಾಗೀರತಿ ತವರು ಮನೆಗೆ ಹೋದಾಳು

ಮನೆ ಮುಂದೆ ಹೋಗುದಕ ಅವರಪ್ಪ ಬಂದಾನು
'ಎಂದಿಲ್ಲದೆ ಭಾಗೀರತಿ ಇಂದ್ಯಾಕ ಬಂದೆವ್ವ
ಬಾಡಿದ ಮಾರ್ಯಾಕ ಕಣ್ಣಾಗ ನೀರ್ಯಾಕ ?'

ಭಾಗೀರಥಿಗೆ ವಿಷಯವನ್ನು ನೇರವಾಗಿ ಬಿಡಿಸಿ ಹೇಳಲು ಬಾಯಿ ಬರಲಿಲ್ಲ. ಪ್ರಕಾರಾಂತರವಾಗಿ, ನಮ್ಮ ಮಾವ ಅತ್ತೆ ನನ್ನನ್ನು ಬೇರೆ ಇಡತಾರಂತೆ ಎಂದು ಉತ್ತರ ಕೊಟ್ಟಳು. 'ಇಟ್ಟರೆ ಇಡಲೇಳು ಹೊಲ ಮನಿ ಕೊಡತೇನು' ಎಂದು ತಂದೆ ದಿಟ್ಟತನದಿಂದ ಭರವಸೆ ಕೊಟ್ಟನು. ಮಗಳ ಸಂಕೋಚ ತುಂಬಿದ ಸುಕುಮಾರವಾದ ಹೃದಯ ಅವನಿಗೆ ಅರ್ಥವಾಗಲಿಲ್ಲ. ಅವನ ದರ್ಪದ ನಿಸೂರಗಾರಿಕೆ ಇವಳಿಗೂ ಸರಿ ತೋರಲಿಲ್ಲ. ಅವಳು ತನ್ನ ಮನಸ್ಸನ್ನು ಬಿಚ್ಚಿ ಹೇಳದೆ 'ಹೊಲ ಮನಿ ಒಯ್ದು ಹೊಳೆದಂಡ್ಯಾಗಾಕಪ್ಪ' ಎಂಬ ನೋವಿನ ಬೇಸರದ ಉದ್ಗಾರವನ್ನು ಹೊರಗೆಡಹಿ ಮುಂದುವರಿದು ತಾಯನ್ನು ಸಂಧಿಸಿದಳು. ಅಲ್ಲೂ ಅದೇ ಬಗೆಯ ಪ್ರಶ್ನೆ. 'ನಮ್ಮತ್ತೆ ನಮ್ಮಾವ ಬ್ಯಾರೆ ಇಡತಾರಂತೆ' ಎಂಬ ಇವಳ ಅದೇ ಉತ್ತರ. ತಂದೆ ಹೊಲಮನೆ ಕೊಡುತ್ತೇನೆ ಎಂದನು; ತಾಯಿ 'ಓಲೆಯ ಜೋಡು ಕೊಡುತ್ತೇನೆ' ಎಂದು ಸಮಾಧಾನ ಹೇಳಿದಳು. ಭಾಗೀರಥಿಗೆ ನೆಮ್ಮದಿ ದೊರೆಯಲಿಲ್ಲ. 'ವಾಲೀಯ ಜೋಡೊಯ್ದು ಒಲಿಯಾಗ ಹಾಕವ್ವ' ಎಂದು ಮಾತು ಮುಗಿಸಿದಳು. ಬಳಿಕ ಅಕ್ಕನ ಸಂಗಡವೂ ಇದೇ ಮಾತಾಗಿ, 'ನಿನ್ನ ರಕ್ಷಣೆಗೆ ನನ್ನ ಮಕ್ಕಳನ್ನು ಕಳಿಸುತ್ತೇನೆ' ಎಂದು ಆಶ್ವಾಸನೆ ಪಡೆದಳು. ಹೊಲ ಮನೆ ಬೆಳ್ಳಿ ಬಂಗಾರ ಇದನ್ನೆಲ್ಲ ಅಕ್ಕ ಹೇಗೆ ಕೊಟ್ಟಾಳು! ಆದ ಕಾರಣ, ಮಕ್ಕಳನ್ನು ಜೊತೆಗೆ ಕಳಿಸುತ್ತೇನೆ ಎಂದು ತನ್ನ ಕೈಯಲ್ಲಾಗುವುದನ್ನು ಹೇಳಿದಳು(ಪಾಪ! ಚಿಕ್ಕ ಪ್ರಾಯದ ಭಾಗೀರಥಿಗೆ ಇನ್ನೂ ಒಂದು ಮಗು ಕೂಡ ಆಗಿರಲಿಲ್ಲವೆಂದು ತೋರುತ್ತದೆ). ಜೊತೆಗೆ ಮಕ್ಕಳಿದ್ದ ಮಾತ್ರಕ್ಕೆ ದುಃಖ ಕಳೆದೀತೇ? ಭಾಗೀರಥಿಯ ತಂದೆ ತಾಯಿ ಅಕ್ಕ ಎಲ್ಲರೂ ಪ್ರೀತಿವಂತರೇ. ಆದರೆ ಈ ನವಿರು ಮನಸ್ಸಿನ ತುಸು ಮಾತಿನ ತರಳೆಯ ಒಳ ಹೃದಯವನ್ನು ಹೊಕ್ಕು ಅದರ ತಳಮಳವನ್ನು ಅರಿಯಲು ಅವರಿಗೆ ಸಾಧ್ಯವಾಗಲಿಲ್ಲ. ಅಂತೂ ತವರುಮನೆಯಲ್ಲಿ ಭಾಗೀರಥಿಗೆ ಸಮಾಧಾನ ದೊರೆಯಲಿಲ್ಲ. ಅವಳ ಸಮಸ್ಯೆ ಹರಿಯಲಿಲ್ಲ.

ಸಣ್ಣ ಸೊಸಿ ಭಾಗೀರತಿ ತವರು ಮನಿಯ ಬಿಟ್ಟು
ತವರು ಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು
ತಲೆ ಬಾಗಿಲದಾಗ ಗೆಳತಿನ್ನ ಕಂಡಳು

12th_Kannada_Reader_3-5.indd 75 22-05-2019 14:31:16

'ಎಂದಿಲ್ಲದ ಭಾಗೀರತಿ ಇಂದ್ಯಾಕ ಈ ಅಳುವು' ಎಂದು ಗೆಳತಿ ಕೇಳುತ್ತಾಳೆ. ಅದಕ್ಕೆ ಭಾಗೀರಥಿ ಅಂಜುತ್ತಾ ಅಳುಕುತ್ತಾ 'ಹೇಳಲೆ ಗೆಳತಿ, ಹೇಳಲೆ ಗೆಳತಿ' ಎನ್ನುತ್ತಾಳೆ. 'ಅಂಜಬೇಡ ಗೆಳತಿ, ಅಳುಕಬೇಡ ಗೆಳತಿ!' ಎಂಬುದು ಗೆಳತಿಯ ಧೈರ್ಯದ ಆಶ್ವಾಸನ. ಅಕ್ಕನ ಮಾತು ಹಾಗಿರಲಿ, ತಾಯಿತಂದೆಗಳಲ್ಲಿ ಕೂಡ ಕಾಣದಿದ್ದ ಆತ್ಮೀಯತೆಯನ್ನೂ ನಿರಾವರಣ ಭಾವವನ್ನೂ ಭಾಗೀರಥಿ ಗೆಳತಿಯಲ್ಲಿ ಕಂಡಳು. ತನ್ನ ಹೃದಯವನ್ನು ಮೊದಲ ಬಾರಿ ಇವಳೆದುರಿಗೆ ತೆರೆದು, ನೇರವಾದ ಮಾತಿನಲ್ಲಿ, 'ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡತಾರಂತ!' ಎಂದು ಇದ್ದ ವಿಷಯವನ್ನು ಇದ್ದ ಹಾಗೆ ಹೊರಗೆಡಹುತ್ತಾಳೆ. ಇವಳ ಆ ನಂಬಿಕೆಗೆ ಶ್ರದ್ಧೆಗೆ ಈ ಗೆಳತಿ ಎಷ್ಟೊಂದು ಅರ್ಹಳು! 'ಕೊಟ್ರೆ ಕೊಡಲೇಳು ಇಟ್ಹಾಂಗ ಇರಬೇಕು!' ಎಂಬುದೇ ಅವಳ ನಿರ್ಧಾರವಾದ ಬುದ್ಧಿವಾದ. ಇದು ಕಷ್ಟವಚನವಾಗಿ ತೋರಬಹುದು. ಆದರೆ ಆಗಿನ ಸನ್ನಿವೇಶದಲ್ಲಿ ಅದೊಂದೇ ಭಾಗೀರಥಿಗೆ ಕರ್ತವ್ಯ. ಭಾಗೀರಥಿಯ ಮನಸ್ಸಿನ ಒಳತೋಟಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡವಳು ಈ ಗೆಳತಿಯೊಬ್ಬಳೇ. ಈ ತರಳೆಯ ದುಗುಡವನ್ನು ಅಣಗಿಸಿ, ನಿಶ್ಚಯವನ್ನು ನೆಲೆಗೊಳಿಸಿ ಮುಂದಿನ ದಾರಿಯನ್ನು ಸ್ಪಷ್ಟೋಕ್ತಿಯಲ್ಲಿ ಆಕೆ ತೋರಿಸಿಕೊಟ್ಟಳು. ಗೆಳತಿಗೆ ಭಾಗೀರಥಿಯಲ್ಲಿ ಅವ್ಯಾಜವಾದ ಪ್ರೇಮವೂ ಅವಳ ಶ್ರೇಯಸ್ಸಿನಲ್ಲಿ ಅಪರಿಮಿತವಾದ ಆಕಾಂಕ್ಷೆಯೂ ಇದ್ದ ಕಾರಣದಿಂದಲೇ ಅವಳು ಹೀಗೆ ಖಂಡಿತವಾಗಿ ಹೇಳಲು ಸಾಧ್ಯವಾಯಿತು. ಅಂತೂ ಭಾಗೀರಥಿಯ ಮನಸ್ಸಿನ ಹೊಯ್ದಾಟ ನಿಂತಿತು. ಬಲಿದಾನಕ್ಕಾಗಿ ಎದೆಯನ್ನು ಗಟ್ಟಿ ಮಾಡಿಕೊಂಡು ಈ ಸಣ್ಣ ಸೊಸೆ ಅತ್ತೆಯ ಮನೆಗೆ ಹಿಂದಿರುಗಿದಳು. 'ಸರ್ರನೆ ಹೋದಳು ಭರ್ರನೆ ಬಂದಳು!'

ನಡುವಣ ಸಂಗತಿಗಳನ್ನು ಎಂದಿನಂತೆ ನಮ್ಮ ಊಹೆಗೇ ಕವಿ ಬಿಡುತ್ತಾನೆ. ಮುಂದಿನ ದೃಶ್ಯ ಆ ಮಹಾತ್ಯಾಗದ ದಿನದ್ದು. ಗಂಗವ್ವನ ಪೂಜೆಗಾಗಿ ಏರ್ಪಾಡು ನಡೆಯುತ್ತಿದೆ :

ಬ್ಯಾಳಿಯ ಹಸ ಮಾಡ್ತ ಬಿಟ್ಟಾಳು ಕಣ್ಣೀರ
'ಎಂದಿಲ್ಲದ ಭಾಗೀರಥಿ ಇಂದ್ಯಾಕ ಕಣ್ಣೀರು'
'ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ'

ಕವಿ ಎಷ್ಟೊಂದು ಸಂಗ್ರಹವಾಗಿ, ಆದರೆ ಸಮಗ್ರವಾಗಿ ವಿಷಯವನ್ನು ತಿಳಿಸಬಲ್ಲ! ಸಂಭಾಷಣೆ ಮಾವನಿಗೂ ಸೊಸೆಗೂ ನಡೆದಿದೆಯೆಂದೂ, ಭಾಗೀರಥಿಯ ಮನಸ್ಸು ಗಟ್ಟಿಯಾದರೂ ಮುಂದೆ ಕಾದಿರುವ ಸಾವನ್ನು ನೆನೆದು ಕಣ್ಣೀರು ಸಹಜವಾಗಿ ಉಕ್ಕುತ್ತಿದೆಯೆಂದೂ, ಆಕೆಯಲ್ಲಿ ಕನಿಕರಗೊಂಡು, ನೇರವಾಗಿ ಸಮಾಧಾನವನ್ನೇನೂ ಹೇಳಲರಿಯದೆ ಮಾವನು ಹೀಗೆ ಅಶರಣನಾಗಿ ಮಾತಾಡುತ್ತಿದ್ದಾನೆಂದೂ, ಧೀರೆ ಭಾಗೀರಥಿ ಏನೋ ನೆವ ಹೇಳಿ ತನ್ನ ಮನೋದಾರ್ಢ್ಯವನ್ನು ಸ್ಥಿರಪಡಿಸಿಕೊಳ್ಳುತ್ತಿದ್ದಾಳೆಂದೂ ಮೂರೇ ಸಾಲಿನಲ್ಲಿ ಎಷ್ಟು ಚೆನ್ನಾಗಿ ಕವಿ ಸೂಚಿಸಿದ್ದಾನೆ. ಅತ್ತೆಯೂ ಹೀಗೆಯೇ ಪ್ರಶ್ನೆ ಕೇಳುತ್ತಾಳೆ. ಅಕ್ಕಿಯೊಳಗಿನ ಹರಳು ಬಂದು ಕಣ್ಣಿಗೆ ಬಿತ್ತೆಂದು ಸೊಸೆ ಮಾತನ್ನು ತೇಲಿಸುತ್ತಾಳೆ. ಆ ದಿನ ದೊಡ್ಡ ಹಬ್ಬದ ಅಡಿಗೆ. ಜಳಕಕ್ಕಾಗಿ ಹತ್ತು ಕೊಪ್ಪರಿಗೆ ನೀರು ಉಕ್ಕಿ ಮರಳುತ್ತಿದೆ. ನಿಂಗವ್ವ ನೀಲವ್ವ ಮೊದಲಾದ ದೊಡ್ಡ ಸೊಸೆಯರನ್ನೆಲ್ಲಾ ಕ್ರಮವಾಗಿ ಕರೆದು, ನೀನು ಜಳಕ ಮಾಡು, ನೀನು ಜಳಕ ಮಾಡು ಎಂದು ಹಿರಿಯರು ಹೇಳುತ್ತಿದ್ದಾರೆ. ಆದರೆ ಆ ದಿನ ನೀರೆರೆದುಕೊಂಡು ಸಿಂಗರಿಸಿಕೊಂಡು ತನ್ನಲ್ಲಿಗೆ ಬಂದವರನ್ನೇ ಗಂಗಾದೇವಿ ಆರಿಸಿಕೊಳ್ಳುವಳೆಂದು ಎಲ್ಲರೂ ಬಲ್ಲರು. ಆದ ಕಾರಣ ಹಿರಿಯ ಸೊಸೆಯರೆಲ್ಲ ಹಿಂಜರಿದರು : 'ನಿಂಗವ್ವ – ನಾವೊಲ್ಲೆ; ನೀಲವ್ವ – ನಾವೊಲ್ಲೆ; ಗಂಗವ್ವ – ನಾವೊಲ್ಲೆ; ಗವುರವ್ವ – ನಾವೊಲ್ಲೆ'

ಸಣ್ಣ ಸೊಸಿ ಬಾಗವ್ವ ನೀನರೆ ಜಳಕ ಮಾಡ
ಸಣ್ಣ ಸೊಸಿ ಭಾಗೀರತಿ ಜಳಕನ ಮಾಡ್ಯಾಳು
ಜಳಕನ ಮಾಡ್ಯಾಳು ಬಂಗಾರ ಬುಟ್ಟಿ ತುಂಬ್ಯಾಳು
ಬಂಗಾರ ಬುಟ್ಟಿ ತುಂಬ್ಯಾಳು ಸಿಂಗಾರ ಸಿಂಬಿ ಮಾಡ್ಯಾಳು
ಸಿಂಗಾರ ಸಿಂಬಿ ಮಾಡ್ಯಾಳು ಮುಂದ ಮುಂದ ಹೊಂಟಾಳು
ಮುಂದ ಮುಂದ ಭಾಗೀರಥಿ ಹಿಂದ್ಹಿಂದ ಎಲ್ಲರೂ!

ಸರಿ, ಇನ್ನೂ ಬಯಲಾಗಿಯೇ ಒಣಗಿದ್ದ ಕೆರೆಯ ಅಂಗಳದಲ್ಲಿ ಪೂಜೆಯಾಯಿತು; ನೈವೇದ್ಯವಾಯಿತು; ಊಟವಾಯಿತು; ಪಾತ್ರೆ ಪದಾರ್ಥಗಳನ್ನು ಕಟ್ಟಿಕೊಂಡರು: ಹಿಂದಕ್ಕೆ ಹೊರಟರು. ಹೊರಟು ಬರುವಾಗ ಉದ್ದೇಶಪೂರ್ವಕವಾಗಿಯೇ ಇರಬೇಕು,

12th_Kannada_Reader_3-5.indd 76 22-05-2019 14:31:16

ಬಂಗಾರದ ಬಟ್ಟಲನ್ನು ಕೆರೆಯಲ್ಲೇ ಮರೆತು ಬಿಟ್ಟು ಬಂದರು. ಸ್ವಲ್ಪ ದೂರ ಎಲ್ಲರೂ ನಡೆದ ಮೇಲೆ ಜ್ಞಾಪಿಸಿಕೊಂಡು, 'ಗಂಗವ್ವ ನೀ ಹೋಗ, ಗೌರವ್ವ ನೀ ಹೋಗ' ಎಂದು ಮುಂತಾಗಿ ಒಬ್ಬೊಬ್ಬ ಸೊಸೆಗೂ ಬಟ್ಟಲನ್ನು ತರಲು ಹೇಳಿದರು. ಆದರೆ ಈ ದಿನ ಸೊಸೆಯರೆಲ್ಲ ಜಳಕವನ್ನು ಒಲ್ಲೆ ಎಂದಂತೆಯೇ ಈ ಕೆಲಸವನ್ನೂ ಒಲ್ಲದೇ ಹೋದರು.

ಸಣ್ಣ ಸೊಸಿ ಭಾಗೀರತಿ ನೀ ತರ ಹೋಗವ್ವ
ಸಣ್ಣ ಸೊಸಿ ಭಾಗೀರತಿ ಬಿರಿಬಿರಿ ನಡೆದಳು
ಬಿರಿಬಿರಿ ಹೋದಳು ಬಂಗಾರದ ಬಟ್ಲ ತಗೊಂಡಳು
ಒಂದು ಮೆಟ್ಲೇರುದಕ ಪಾದಕ ಬಂದಾಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣುಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಳು ಗಂಗಿ
ನಾಕು ಮೆಟ್ಲೇರುದಕ ನಡುಮಟ ಬಂದಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರಿಗ್ಹಾರವಾದಳು

ಆಯಿತು. ಈ ಧೀರೆಯಾದ ಕುಲಪಾಲಿಕೆಯನ್ನು ಗಂಗವ್ವ ಮೃದುವಾಗಿ ತನ್ನ ಮಡಿಲಿನಲ್ಲಿ ಸೇರಿಸಿಕೊಂಡಳು. ಬಲಿ ಸಮರ್ಪಣೆ ಎಷ್ಟು ನಯವಾಗಿ ನಡೆಯಿತೋ ಬಲಿಸ್ವೀಕಾರವೂ ಅಷ್ಟೇ ನಯವಾಗಿ ನೆರವೇರಿತು.

ಇಷ್ಟೆಲ್ಲಾ ಆಗುವಾಗ ಭಾಗೀರತಿಯ ಗಂಡ ಏನು ಮಾಡುತ್ತಿದ್ದ? ಅವನು 'ಬೇಕು ಬೇಡ' ಎನ್ನಲೇ ಇಲ್ಲವೇ? ನಮ್ಮ ನೊಂದ ಕರುಳಿನ ಪ್ರಶ್ನೆಯನ್ನು ಕವಿ ಬಲ್ಲ, ಮುಂದಿನ ಸಂಗತಿಯನ್ನು ಈಗ ಎತ್ತಿಕೊಳ್ಳುತ್ತಾನೆ. ಭಾಗೀರಥಿಯ ಗಂಡ ಊರಿನಲ್ಲಿರಲಿಲ್ಲ. 'ಗಂಡ ಮಾದೇವರಾಯ ದಂಡಿನಾಗೈದಾನು' ಎಷ್ಟು ದೂರದಲ್ಲಿದ್ದನೋ, ಊರು ಬಿಟ್ಟು ಎಷ್ಟು ದಿನವಾಗಿತ್ತೋ! ದಂಡಿನಲ್ಲಿದ್ದವನಿಗೆ ತನ್ನ ಮಡದಿಯ ಜಲಸಮಾಧಿಯ ವೃತ್ತಾಂತ ಕನಸಿನ ರೂಪದಲ್ಲಿ ಅರಿವಾಯಿತು 'ಕಂಡನು ಕೆಟ್ಟ ಕನಸ!'

ಸೆಲ್ಯ ಸುಟ್ಹಾಂಗಾತು ಕೋಲು ಮುರಿದ್ಹಾಂಗಾತು
ಕಟ್ಟಿಸಿದ ಮಾಲೆಲ್ಲಾ ತಟ್ಟನೆ ಬಿದ್ಹಾಂಗಾತು
ಅಹ, ಮಡದಿ ಮಡಿದ ಮೇಲೆ, ಕಟ್ಟಿಸಿದ
ಮಹಲು ಕುಸಿದು ಬಿದ್ದ ಹಾಗೆಯೇ ತಾನೇ!
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಒತ್ತರ ಬಂದಾನ ಮನಿಗೆ

ಮಾದೇವರಾಯನ ಆತಂಕವನ್ನೂ, ತವಕವನ್ನೂ ಅವನು ಬತ್ತಲೆಗುದರಿ ಹತ್ತಿದ್ದು ಎಷ್ಟು ಗಾಢವಾಗಿ ವ್ಯಕ್ತಪಡಿಸುತ್ತದೆ! ಕುದುರೆಗೆ ಜೀನು ಹಾಕುವಷ್ಟು ಕಾಲ ವಿಳಂಬ ಮಾಡಲೂ ಅವನ ಹೃದಯ ಒಪ್ಪಲಿಲ್ಲ. ಕನಸು ಕಂಡವನೇ ದಿಗಿಲುಗೊಂಡು ಕುದುರೆಯ ಬರಿಬೆನ್ನಿಗೆ ಹಾರಿ ಒಂದೇ ಸಮನೆ ನಾಗಾಲೋಟದಲ್ಲಿ ತನ್ನ ಊರಿಗೆ ಬಂದಿದ್ದಾನೆ.

ಬಂದ ಮಾದೇವನ ತಂದೆ ತಾಯಿ ನೋಡಿದರು
'ಗಂಗವ್ವ ನೀರ ಕೊಡ, ಗವರವ್ವ ನೀರ ಕೊಡ'
'ಗಂಗವ್ವ ನೀರ ಕೊಡುದ್ಯಾಕ, ಗವರವ್ವ ನೀರ
ಕೊಡುದ್ಯಾಕ
ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳವ್ವ'
'ನಿನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ'

ಹೊರಗಿನಿಂದ ಮನೆಗೆ ಬಂದ ಗಂಡನಿಗೆ ಕೈಕಾಲು ತೊಳೆದುಕೊಳ್ಳಲು ನೀರನ್ನು ಅವನ ಹೆಂಡತಿ ಕೊಡತಕ್ಕದ್ದು ಸಂಪ್ರದಾಯ. ನೀರು ಕೊಡುವಂತೆ ತನ್ನ ಅತ್ತಿಗೆಯರಿಗೆ ತಾಯಿ ಹೇಳುತ್ತಲೂ, ಮಾದೇವರಾಯನ ಆತಂಕ ಇಮ್ಮಡಿಸಿತು. ತನ್ನ ಹೆಂಡತಿ ಕೊಡದಿರುವಂತೆ ಎಲ್ಲಿಗೆ ಹೋಗಿದ್ದಾಳೆ ಎಂದು ಧೈರ್ಯ ಮಾಡಿ ಕೇಳಿದನು. ಉತ್ತರ ಕೊಡಲು ತಾಯಿಗೆ ಬಾಯಿಲ್ಲ. ತವರಿಗೆ ಹೋಗಿದ್ದಾಳೆ ಎಂದು ಪ್ರಕಾರಾಂತವಾಗಿ ಹೇಳಿದಳು. ದಿಟ, ಭಾಗೀರಥಿಯನ್ನು ಹಿರಿಯ ತವರಿಗೇ ಕಳಿಸಿ ಬಿಟ್ಟಿದ್ದಾರೆ!

ಮಾದೇವರಾಯ ಹಾಗಿಂದ ಹಾಗೆಯೇ ಬತ್ತಲೆ ಕುದುರೆಯ ಮೇಲೆ ಅತ್ತೆಯ ಮನೆಗೆ ಹೋದನು. ಅಲ್ಲಿ ನೀರು ಕೊಡಲು ನಿಂಬೆವ್ವ ನೀಲವ್ವರಿಗೆ ಅತ್ತೆ ಹೇಳಿದಳು(ಈ ವೇಳೆಗೆ ತವರು ಮನೆಗೂ ಭಾಗೀರಥಿಯ ಕೊನೆಯ ವರ್ತಮಾನ ಮುಟ್ಟಿ ಗತ್ಯಂತರವಿಲ್ಲದೆ ಅವರೂ ಸಮಾಧಾನಗೊಂಡಿದ್ದಂತೆ ತೋರುತ್ತದೆ). ನನ್ನ ಮಡದಿ ಎಲ್ಲಿ ಎಂದು ಹಿಂದಿನಂತೆ ಇಲ್ಲೂ ಕೇಳಿದ್ದಕ್ಕೆ, 'ನಿನ್ನ ಮಡದಿ ಭಾಗೀರತಿ ಗೆಣತಿ ಮನೆಗೆ ಹೋಗ್ಯಾಳಪ್ಪ' ಎಂದು ಅತ್ತೆಯಿಂದ ಉತ್ತರ ಬಂದಿತು. ಸರಿ, ಗೆಳತಿಯ ಮನೆಯಲ್ಲಿ, 'ಬಾಳವ್ವ ನೀರ ಕೊಡ ಬಸವ್ವ ನೀರ ಕೊಡ' ಎಂಬ ಮಾತು ಕೇಳಿ ಮತ್ತೆ ಅದೇ ಪ್ರಶ್ನೆ ಹಾಕುತ್ತಾನೆ. ಆಗ ಭಾಗೀರಥಿಯ ಅತ್ತೆಗಾಗಲಿ ತಾಯಿಗಾಗಲಿ ಇಲ್ಲದ

12th_Kannada_Reader_3-5.indd 77 22-05-2019 14:31:16

ಧೈರ್ಯದಿಂದ, ಸರಳತೆಯಿಂದ ಗೆಳತಿ ಅವನಿಗೆ ಉತ್ತರ ಕೊಡುತ್ತಾಳೆ:

'ನಿನ್ನ ಮಡದಿ ಭಾಗೀರತಿಯ ಏನು ಹೇಳಲಿ ಸೂರಿ

ನಿಮ್ಮಪ್ಪ ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತ'
ಸಂದೇಹ ದೃಢವಾಯಿತು. ಹೃದಯ ಬರಿದಾಯಿತು.

ಆಗ ಮಾದೇವರಾಯ ಎನು ಮಾಡಬೇಕು? ತಂದೆತಾಯಿಗಳನ್ನು ನಿಷ್ಠುರಪಡಿಸಲಾದೀತೇ? ಕಾಂತೆಯ ಅಗಲಿಕೆಯನ್ನು ಸಹಿಸಿಕೊಳ್ಳಲಾದೀತೇ? ತನ್ನ ಎದೆಯಲ್ಲಿ ಧಗಧಗಿಸುತ್ತಿದ್ದ ಬೆಂಕಿಯನ್ನು ನಂದಿಸಲು ಅವನಿಗೆ ಈಗ ಒಂದೇ ದಾರಿ ತೋರಿತು.

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನು ಹೌಹಾರಿ
ಕೆರೆಯ ದಂಡೆಗೆ ಬಂದು ಕಣ್ಣೀರು ಇಟ್ಟಾನು
ಕಣ್ಣೀರು ಇಟ್ಟಾನು ನಿಟ್ಟುಸಿರು ಬಿಟ್ಟಾನು
'ಸಾವಿರ ವರಹ ಕೊಟ್ಟರು ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ
ಮುನ್ನೂರು ವರಹಾ ಕೊಟ್ಟು ಮುತ್ತಿನೋಲೆ
ಮಾಡಿಸಿದ್ದೆ
ಮುತ್ತಿನೋಲೆ ಇಟಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ
ಇಷ್ಟು ಮಾತಾಡಿ ಮಾದೇವ ಬಿಟ್ಟಾನು ಕಣ್ಣೀರು
ಬಿಟ್ಟಾನು ಕಣ್ಣೀರ ಹಾರಿದ ಕೆರೆ ನೀರಾಗ!
ಅಲ್ಲಿಗೆ ಕಥೆ ಮುಗಿಯಿತು...!

ಮಾದೇವರಾಯ ಇನ್ನೇನು ಮಾಡಬಹುದಾಗಿತ್ತು? ಅವನ ಪ್ರೇಮ ಬೇರೆ ಯಾವ ದಾರಿಯನ್ನು ಹಿಡಿಯಬಹುದಾಗಿತ್ತು! ಮಡದಿಯ ಬಲಿದಾನದಿಂದ ನೀರು ತುಂಬಿ ತುಳುಕುತ್ತಿದ್ದ ಕೆರೆಯೊಳಕ್ಕೆ ಹಾರಿ ಅವಳನ್ನು ಮತ್ತೆ ಕೂಡಿದನು. ಹೃದಯದ ಬೇಗೆಯನ್ನು ತಂಪಿಸಿಕೊಂಡನು. ಅವನ ಈ ಕೊನೆ ಎಷ್ಟು ಅನಿರೀಕ್ಷಿತವೋ ಅಷ್ಟೇ ಅನಿವಾರ್ಯ.

'ಕೆರೆಗೆ ಹಾರ'ದ ಉದ್ದಕ್ಕೂ ಅಷ್ಟೇ. ಪದ್ಯದ ಒಂದೊಂದು ಸಾಲಿನಲ್ಲೂ ಕ್ರಿಯೆಯ ಒಂದೊಂದು ಹೆಜ್ಜೆಯಲ್ಲೂ ಮಹಾಕೃತಿಯಲ್ಲಿ ಮಾತ್ರ ಕಾಣಬರುವ ಅನಿವಾರ್ಯತೆ ಇದೆ. ಆಗಿನ ಸಾಮಾಜಿಕ ಸಂಪ್ರದಾಯದಲ್ಲಿ ಆ ಸಂಸ್ಕಾರವಂತರ ಬಾಳಿನಲ್ಲಿ ಕಥೆ ಹೀಗೆಯೇ ಸಾಗಿರಬೇಕಲ್ಲವೇ. ಇವರೆಲ್ಲರ ನುಡಿ ಎಷ್ಟು ಮಿತ, ನಡೆ ಎಷ್ಟು ನಯ! ಭಾಗೀರಥಿಯ ಮನೋದಾರ್ಢ್ಯ ಎಷ್ಟು ಉದಾತ್ತ! ಮಾದೇವರಾಯನ ಪ್ರೇಮ ಎಷ್ಟು ಅಪರಿಮಿತ! ಇನ್ನೊಂದು ವಿಷಯ, ಇಲ್ಲಿಯ ಬಾಳಿನಲ್ಲಿ ಗೆಳತಿಗೆ ದೊರೆತಿರುವ ಅಪೂರ್ವ ಸ್ಥಾನವನ್ನು ನೋಡಿ ಕರುಳಿನ ಬಾಂಧವ್ಯಕ್ಕಿಂತಲೂ ಈಕೆಯ ಸ್ನೇಹ ಭಾಗೀರಥಿಯ ಹೃದಯಕ್ಕೆ ಹೆಚ್ಚು ಹತ್ತಿರವಾಗಿದೆ. ಬಂಧುಗಳು ಬಾಯಿಬಿಟ್ಟು ಹೇಳಲಾರದ್ದನ್ನು ಈ ಗೆಳತಿ ಹೇಳಬಲ್ಲಳು. ಅವರಿಂದ ದೊರೆಯದ ಸಮಾಧಾನವನ್ನು ಈಕೆ ಕೊಡಬಲ್ಲಳು.

ಈ ಕೃತಿಯ ಸೊಗಸುಗಳಲ್ಲಿ ಯಾವುದನ್ನು ವರ್ಣಿಸುವುದು, ಯಾವುದನ್ನು ಬಿಡುವುದು! ಜೀವರತ್ನಕ್ಕೆ ಇಷ್ಟೆಲ್ಲ ಪ್ರಶಂಸೆಯ ಹಂಗು ತಾನೆ ಏಕೆ? ಅದು ಸ್ವಯಂಪ್ರಕಾಶದಿಂದ ಬೆಳಗಬಲ್ಲದು. ಈ ಕೃತಿಯನ್ನು ಕಟ್ಟಿದ ಹಳ್ಳಿಯ ಅಜ್ಞಾತ ವ್ಯಕ್ತಿ ಒಬ್ಬ ಶ್ರೇಷ್ಠ ಕವಿ. 'ಕೆರೆಗೆ ಹಾರ' ಕನ್ನಡ ಕಾವ್ಯಶ್ರೀಯ ಕಂಠದ ಹಾರ!

ಕೃತಿ–ಕರ್ತೃ ವಿಚಾರ



– ತೀ.ನಂ.ಶ್ರೀಕಂಠಯ್ಯ

ಈ ಪಾಠವನ್ನು ತೀ.ನಂ.ಶ್ರೀಕಂಠಯ್ಯ ಅವರ 'ಸಮಾಲೋಕನ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ತೀ.ನಂ.ಶ್ರೀ.ಯವರು 1906ರಲ್ಲಿ ತೀರ್ಥಪುರದಲ್ಲಿ ಜನಿಸಿದರು. ಅವರು ಕನ್ನಡ ಹಿರಿಮೆ ಗರಿಮೆಗಳನ್ನು ಹೆಚ್ಚಿಸಿದ ಮಹಾವಿದ್ವಾಂಸರು. ಅವರು ಕನ್ನಡದ ಪ್ರಖ್ಯಾತ ಭಾಷಾಶಾಸ್ತ್ರಜ್ಞರು, ವಿಮರ್ಶಕರು ಹಾಗೂ ಸಂಶೋಧಕರು. ಅಮಲ್ದಾರಿಕೆಯ ಅಧಿಕಾರ ವಹಿಸಿದರೂ ಕನ್ನಡ ನುಡಿಯ ಬಗ್ಗೆ ಅಪಾರವಾದ

12th_Kannada_Reader_3-5.indd 78 22-05-2019 14:31:16

ಪ್ರೇಮವಿದ್ದ ಅವರು ಕನ್ನಡದ ಕೆಚ್ಚಿನಿಂದ ಕನ್ನಡ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸಿದರು. 'ಭಾರತೀಯ ಕಾವ್ಯ ಮೀಮಾಂಸೆ' ಎಂಬುದು ಇವರ ಅತ್ಯುತ್ತಮ ಕೃತಿ. 'ಕನ್ನಡ ಮಾಧ್ಯಮಿಕ ವ್ಯಾಕರಣ' ಎಂಬುದು ಕನ್ನಡದ ವಿದ್ಯಾರ್ಥಿಗಳಿಗೆ ವ್ಯಾಕರಣವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಹಾಯಕವಾಗಿದೆ. ನಂಟರು, ಮುದ್ರಾರಾಕ್ಷಸ, ಒಲುಮೆ, ಕಾವ್ಯಸಮೀಕ್ಷೆ, ಕಾವ್ಯಾನುಭವ ಮುಂತಾದುವು ಇವರ ಅತ್ಯಂತ ಪ್ರಸಿದ್ಧವಾದ ಕೃತಿಗಳು. ತೀ.ನಂ.ಶ್ರೀ.ಯವರು 1966ರಲ್ಲಿ ಕೊಲ್ಕೊತ್ತಾದಲ್ಲಿ ನಿಧನರಾದರು.

ಈ ಪಾಠದಲ್ಲಿ ಕನ್ನಡ ನಾಡಿನ ಗರತಿಯ ತ್ಯಾಗಮಯ ಜೀವನವನ್ನು ನಿರೂಪಿಸುವ ಜಾನಪದ ಹಾಡನ್ನು ಅತ್ಯಂತ ಹೃದಯಂಗಮವಾಗಿ ವರ್ಣಿಸಿದ್ದಾರೆ.

ಪದಗಳ ಅರ್ಥ

ತೆತ್ತಿದ್ದಾಳೆ–ಅರ್ಪಿಸಿದ್ದಾಳೆ, ನೀಡಿದ್ದಾಳೆ; ಗಾಥೆ–ಕಥೆ, ಚರಿತ್ರೆ; ನವಿರಾಗಿ–ನಾಜೂಕಾಗಿ, ಸುಂದರವಾಗಿ; ಬಗೆ–ಮನಸ್ಸು; ಪಲುಕು–ಮಿಡಿತ, ಧ್ವನಿಯ ಬಳುಕು; ಹಾರ–ಆಹಾರ, ಬಲಿ; ಹದಿ–ಅಡಿಪಾಯ ಹಾಕು, ನೆಡು; ಹೊತ್ತಿಗೆ–ಪುಸ್ತಕ; ನಿಷ್ಕರ್ಷೆ–ನಿಶ್ಚಯ, ನಿರ್ಣಯ; ನವಿರು ಮನಸ್ಸು–ಮೃದು ಮನಸ್ಸು; ನಿಸೂರಗಾರಿಕೆ–ಅಹಂಕಾರ, ಸ್ವೈರ ವೃತ್ತಿ; ನಿರಾವರಣ–ತೆರೆದ; ತರಳೆ–ಹೆಣ್ಣು, ತರುಣಿ; ಜಳಕ–ಸ್ನಾನ; ಸಿಂಬಿ–ಸುರುಳಿ ಸುತ್ತು; ಅಶರಣ–ದಿಕ್ಕಿಲ್ಲದ, ಶರಣಾಗತಿಯಿಲ್ಲದ; ಜೀನು–ತಡಿ, ಕುದುರೆಗೆ ಸವಾರಿ ಮಾಡಲು ಬಳಸುವ ಉಪಕರಣ; ಗೆಣತಿ–ಗೆಳತಿ; ಸೆಲ್ಯ–ಶಲ್ಯ, ಉತ್ತರೀಯ, ಮೇಲುಹೊದಿಕೆ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. 'ಕೆರೆಗೆ ಹಾರ' ಹಾಡನ್ನು ಓದುತ್ತಾ ಲೇಖಕರಿಗೆ ಯಾವ ಅನುಭವವಾಯಿತು?
2. 'ಕೆರೆಗೆ ಹಾರ' ಕಥೆಯ ಹಿನ್ನೆಲೆಯೇನು ?
3. ಕೆರೆಗೆ ಯಾರನ್ನು ಹಾರ ಕೊಡಬೇಕೆಂದು ನಿಷ್ಕರ್ಷೆಯಾಯಿತು ?
4. ತಂದೆ ತಾಯಿ ಭಾಗೀರಥಿಗೆ ಯಾವ ಭರವಸೆಯನ್ನು ಕೊಟ್ಟರು ?
5. ಗೆಳತಿಯಲ್ಲಿ ಭಾಗೀರಥಿ ಯಾವ ಭಾವವನ್ನು ಕಂಡಳು ?
6. ಭಾಗೀರಥಿ ತನ್ನ ತಂದೆ ತಾಯಿಗಳ ಬಳಿ ಏನು ಹೇಳಿದಳು ?
7. ಮಾದೇವರಾಯನ ಆತಂಕ ಏಕೆ ಇಮ್ಮಡಿಸಿತು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಕೆರೆಗೆ ಭಾಗೀರಥಿಯನ್ನೇ ಹಾರ ಕೊಡಬೇಕೆಂದು ಏಕೆ ನಿಶ್ಚಯಿಸಿದರು ?
2. ಭಾಗೀರಥಿ ಹೇಗೆ ಕೆರೆಗೆ ಹಾರವಾದಳು ?
3. ಮಾದೇವರಾಯನು ಯಾವ ಕೆಟ್ಟ ಕನಸನ್ನು ಕಂಡನು?
4. 'ಕೆರೆಗೆ ಹಾರ' ಕನ್ನಡ ಕಾವ್ಯ ಶ್ರೀಯ ಕಂಠದ ಹಾರ ಹೇಗೆ ?

ಭಾಷಾಭ್ಯಾಸ

1. ಕೆಳಗಿನ ಗ್ರಾಮ್ಯ ಪದಗಳನ್ನು ಶುದ್ಧ ರೂಪದಲ್ಲಿ ಬರೆಯಿರಿ.

ಕಟ್ಟಿಸ್ಯಾನು, ಹೊಂಟಾಳು, ನೀರ್ಯಾಕ, ಬ್ಯಾಳ್ಯಾಗಿನ ಹಳ್ಳು, ಮೆಟ್ಲೇರುದಕ, ಎಲ್ಲಿಗೋಗ್ಯಾಳವ್ವ.

2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಹಗುರ, ನಮ್ರತೆ, ತೃಪ್ತಿ, ಸುರಕ್ಷಿತ, ಸಾಧ್ಯ, ಕಾರಣ, ಪರಿಮಿತ, ಸಹಜ.

3. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಅಕ್ಕಿಯೊಳಗಿನ, ಗತ್ಯಂತರ, ಮನಗಾಣು, ಊರೊಟ್ಟಿನ, ನೀರಿಲ್ಲ, ಕಾವ್ಯಾಕಾಶ.

4. ಈ ಪದಗಳನ್ನು ಬಿಡಿಸಿ ಬರೆದು ಸಮಾಸದ ಹೆಸರನ್ನು ಬರೆಯಿರಿ.

ಕೃಪಾದೃಷ್ಟಿ, ಮನಗಾಣು, ಸೂರೆಗೊಳ್ಳು, ಮುತ್ತಿನೋಲೆ, ಸೂರ್ಯೋದಯ.

12th_Kannada_Reader_3-5.indd 79 22-05-2019 14:31:16

ಚಟುವಟಿಕೆ

1. 'ಕೆರೆಗೆ ಹಾರ' ಎಂಬ ಈ ಜನಪದ ಹಾಡನ್ನು ಗದ್ಯದಲ್ಲಿ ಸಂಗ್ರಹಿಸಿ ಬರೆಯಿರಿ.
2. 'ಕೆರೆಗೆ ಹಾರ' ಎಂಬ ಈ ಜನಪದ ಕಥೆಯನ್ನು ತರಗತಿಯಲ್ಲಿ ಅಭಿನಯಪೂರ್ವಕವಾಗಿ ನಟಿಸಿ ತೋರಿಸಿ.
3. 'ಕೆರೆಗೆ ಹಾರ'ದ ಕಥೆಯಂತಹ ಇತರ ಜನಪದ ಕಥೆಗಳನ್ನು ಸಂಗ್ರಹಿಸಿ.





12th_Kannada_Reader_3-5.indd 80 22-05-2019 14:31:16

ಉಪಪಠ್ಯ

ಘಟಕ ನಾಲ್ಕು

ತೊಗಲು ಗೊಂಬೆಯಾಟ

–ಸಂಪಾದಕರು : ಗೊ.ರು.ಚನ್ನಬಸಪ್ಪ



ಜನಪದ ಹಾಡು ಕುಣಿತಗಳ ಮೂಲ ನಮ್ಮ ಅನಕ್ಷರಸ್ಥ ಗ್ರಾಮೀಣರ ಅಂತರಂಗ. ಅವು, ಲೋಕಕ್ಕೆ ಅನ್ನ ಬೆಳೆದು ಕೊಡುವ ಗ್ರಾಮೀಣರ ಅಂಗಣದಲ್ಲಿ ಹುಟ್ಟುತ್ತವೆ. ನಮ್ಮ ಜನಪದ ಬದುಕಿಗೆ ಹುಟ್ಟಿದ ಪರಿಸರವೇ ಶಾಲೆ; ಪಟ್ಟ ಅನುಭವವೇ ಗುರು!

ಗ್ರಾಮೀಣರು ತಮ್ಮ ಸಮಸ್ತ ಬದುಕಿಗೂ ಕಾರಣ ಕರ್ತೃವಾದ ದೈವೀಶಕ್ತಿಯನ್ನು ಮೊದಲಿನಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ. ಆ ಆರಾಧ್ಯ ವಸ್ತುವಿನ ಪೂಜೆಯಲ್ಲಿ ನೆಮ್ಮದಿಯನ್ನೂ ಕಂಡುಕೊಳ್ಳುತ್ತಾ ಬಂದಿದ್ದಾರೆ. ಆದುದರಿಂದಲೇ ದೇವರ ಪೂಜೆ ಅಥವಾ ಸೇವೆ ಅವರ ನಿತ್ಯದ ಕೆಲಸದ ಒಂದು ಅಂಗವಾಯಿತು. ತಮ್ಮ ಬದುಕಿನ ಎಲ್ಲಾ ಆಗುಹೋಗುಗಳಿಗೂ ಕಾರಣನಾಗಿರುವ ಆ ಅಸದೃಶ ಶಕ್ತಿಯನ್ನು ಸಂತೃಪ್ತಿ ಪಡಿಸುವುದರ ಮೂಲಕ ಆತ್ಮಾನಂದ ಪಡೆಯುವುದು ಅವರ ಪರಮಗುರಿ. ಇಂತಹುದೇ ಒಂದು ಗ್ರಾಮೀಣ ಕಲೆ ತೊಗಲುಗೊಂಬೆಯಾಟವಾಗಿದೆ!



12th_Kannada_Reader_3-5.indd 81 22-05-2019 14:31:17

ಕರ್ನಾಟಕದ ಗೊಂಬೆಯಾಟದ ಪ್ರಕಾರಗಳಲ್ಲಿ ತೊಗಲುಗೊಂಬೆಗೆ ವಿಶಿಷ್ಟ ಸ್ಥಾನವಿದೆ. ಇದು 'ಸಿಳ್ಳೆಕ್ಯಾತ' ಎಂಬ ಜನರಲ್ಲಿ ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಉದ್ಯೋಗಿ ಕಲೆ. ಈ ಸಿಳ್ಳೆಕ್ಯಾತ ಅಥವಾ ಕಿಳ್ಳೆಕ್ಯಾತ ಜನಾಂಗದವರು ಮೂಲತಃ ರತ್ನಗಿರಿ ಜಿಲ್ಲೆಗೆ ಸೇರಿದವರು. ಈ ಜನರ ಗುಂಪಿನವರೆಂದು ಹೇಳಲಾಗುವ ಬೆಸ್ತರು ಈಗಲೂ ಕರಾವಳಿಯಲ್ಲಿರುವರೆಂದೂ, ಅವರು ಜೀವನೋಪಾಯಕ್ಕೆ ಯಕ್ಷಗಾನವನ್ನು ಕಲಿತು ತೊಗಲು ಗೊಂಬೆಯಾಟಗಳನ್ನು ಪ್ರದರ್ಶಿಸುತ್ತಿರುವರೆಂದೂ ತಿಳಿದು ಬರುತ್ತದೆ.

ಈ ಜನರು ಕೆಲವು ಕಡೆ ತಮ್ಮನ್ನು ಕಟಬರೆಂದೂ ಹೇಳಿಕೊಳ್ಳುತ್ತಾರೆ. ಇವರು ಮರಾಠಿ ಮಿಶ್ರಿತ ಕನ್ನಡದಲ್ಲಿ ಮಾತಾಡುತ್ತಾರೆ. ಒಳನಾಡಿನ ಕಟಬರದು ಹೊಳೆ ಹಳ್ಳಗಳಲ್ಲಿ ಮೀನು ಹಿಡಿಯುವ ಕೆಲಸ. ಅದಕ್ಕಾಗಿ 'ಗೊಡಬು' ಎಂಬ ಮಟ್ಟಿಯನ್ನೂ, ಹುರಿನೂಲಿನ ಬಲೆಯನ್ನೂ ಬಳಸುತ್ತಾರೆ. ಅವರದು ಕ್ಷತ್ರಿಯ ಕುಲವಂತೆ!

ತೊಗಲುಗೊಂಬೆಯಾಟಕ್ಕೆ ಮತ್ತೊಂದು ಹೆಸರು 'ಚಕ್ಕಳ ಬೊಂಬೆಯಾಟ'. ತೊಗಲು ಗೊಂಬೆಯಾಡಿಸುವವರನ್ನು ಕಿಳ್ಳೆಕ್ಯಾತರು, ಸಿಳ್ಳೆಕ್ಯಾತರು, ಗೊಂಬೆರಾಮರು, ಗೊಂಬೆಯೋರು – ಹೀಗೆ ಹಲವಾರು ರೀತಿಯಲ್ಲಿ ಕರೆಯುತ್ತಾರೆ. ತೆಲುಗು ದೇಶದಲ್ಲಿ ಇವರನ್ನು 'ಬೊಮ್ಮಲಾಟವಾಳ್ಳು' ಎಂದು ಕರೆಯುತ್ತಾರೆ.

ಕಿಳ್ಳೆಕ್ಯಾತರ ಮನೆಮಾತು ಮರಾಠಿ. ಮಹಾರಾಷ್ಟ್ರದ ಕಡೆಯಿಂದ ವಲಸೆ ಬಂದ ಜನ ಇವರು ಎಂಬುದಕ್ಕೆ ಸಾಕಷ್ಟು ಆಧಾರಗಳು ಸಿಗುತ್ತವೆ. ಕೆಲವು ಅರೆ ಚಾರಿತ್ರಿಕ ಐತಿಹ್ಯಗಳೂ ದೊರೆಯುತ್ತವೆ. ಇವರು ಮಹಾರಾಷ್ಟ್ರದ ಕೊಲ್ಲಾಪುರ ಅಥವಾ ಸತಾರಾ ಪ್ರಾಂತ್ಯಗಳಿಂದ ವಲಸೆ ಬಂದ ಅಲೆಮಾರಿ ಜನಾಂಗ ಎಂದು ಕಂಡು ಬರುತ್ತದೆ. ವಲಸೆ ಬರಲು ಕಾರಣವೇನೇ ಇರಲಿ, ಇವರು ಬಂದ ಕಡೆಯೇ ಹೊಂದಿಕೊಂಡಿರುವುದಂತೂ ನಿಜ. ಯಾವುದೇ ಜನಾಂಗವಾಗಲಿ ಒಂದು ಕಡೆ ವಲಸೆ ಬಂದ ಮೇಲೆ ಅಲ್ಲಿನ ಭಾಷೆಯನ್ನು ಕಲಿಯುವುದು ಅನಿವಾರ್ಯವಾಗುತ್ತದೆ. ಹಾಗೆಯೇ ಇವರೂ ಸಹ ಕನ್ನಡ ನಾಡಿಗೆ ವಲಸೆ ಬಂದ ಮೇಲೆ ಕನ್ನಡ ಕಲಿತಿದ್ದಾರೆ.

ಹೀಗೆ ವಲಸೆ ಬಂದ ಪೂರ್ವಿಕರು ಸ್ಥಳೀಯ ದೇವ ದೇವತೆಗಳನ್ನೇ ತಮ್ಮ ದೇವ–ದೇವತೆಗಳನ್ನಾಗಿ ಮಾಡಿಕೊಂಡರು. ಆಯಾ ಸ್ಥಳದಲ್ಲಿರುವ ಹನುಮಂತರಾಯ, ಮಾರಮ್ಮ, ರಾಮಯ್ಯ, ಕರಿಯಮ್ಮ, ಕಾಳಮ್ಮ ಇವರುಗಳೇ ಸಿಳ್ಳೆಕ್ಯಾತರ ಮನೆದೇವರುಗಳಾದರು. ಅದರಂತೆ ಹುಟ್ಟುವ ಮಕ್ಕಳಿಗೂ ದೇವರ ಹೆಸರುಗಳನ್ನೇ ಇಡುತ್ತಾ ಬಂದರು. ಉದಾಹರಣೆ : ಹನುಮಂತರಾಯ, ರಾಮಯ್ಯ, ಕರಿಯಮ್ಮ, ಮಾರಮ್ಮ ಇತ್ಯಾದಿಯಾಗಿ.

ತೊಗಲುಗೊಂಬೆಯಾಟ, ಉದ್ಯೋಗಿ ಕಲೆಯಾದ್ದರಿಂದ ಇವರು ಒಂದು ಕಡೆ ನೆಲೆಸಲು ಸಾಧ್ಯವಾಗುವುದಿಲ್ಲ. ಪೂರ್ವಿಕರು ಅಲ್ಪಸ್ವಲ್ಪ ಆಸ್ತಿಪಾಸ್ತಿ ಮಾಡಿದ್ದರೂ ಎಲ್ಲೋ ಕೆಲವರನ್ನು ಬಿಟ್ಟು ಉಳಿದವರೆಲ್ಲಾ ಅಲೆಯುತ್ತಿರುತ್ತಾರೆ. ಹೀಗೆ ಊರಿಂದ ಊರಿಗೆ ಅಲೆದರೂ ಗೊತ್ತು ಗುರಿಯಿಲ್ಲದೆ ಅಲೆಯುವುದಿಲ್ಲ. ಒಬ್ಬೊಬ್ಬರಿಗೆ ಇಂತಿಷ್ಟು ಎಲ್ಲೆ ಎಂದು ನಿಗದಿ ಮಾಡಿಕೊಂಡು, ಸಾಮಾನ್ಯವಾಗಿ ಆ ಎಲ್ಲೆಯಲ್ಲೇ ಅವರು ಪ್ರದರ್ಶನ ನೀಡುತ್ತಾರೆ.

ದಕ್ಷಿಣ ಕರ್ನಾಟಕ ಭಾಗದಲ್ಲಿ(ಬೆಂಗಳೂರು, ಕೋಲಾರ, ಮಂಡ್ಯ, ಹಾಸನ, ತುಮಕೂರು ಈ ಪ್ರಾಂತ್ಯದಲ್ಲಿ ತೊಗಲು ಗೊಂಬೆಯವರಲ್ಲಿ ನಾಲ್ಕು ಪಂಗಡಗಳಿವೆ: ಅಬೇಟ, ಪಾಚಂಗಿ, ಅಟಾಪು ಮತ್ತು ಸಿಂಧೆ. ಇವರು ಈ ಪಂಗಡಗಳ ಹೊರತಾಗಿ ಬೇರೆ ಕಡೆ ಹೆಣ್ಣು ತರುವ ಕೊಡುವ ವ್ಯವಹಾರ ಮಾಡುವುದಿಲ್ಲ. ಇವರಲ್ಲಿಯೇ ಸಂಬಂಧಗಳನ್ನು ಬೆಳೆಸಿಕೊಂಡು ಮದುವೆ ಇತ್ಯಾದಿ ಶುಭ ಕಾರ್ಯಗಳನ್ನು ನಡೆಸಿಕೊಳ್ಳುತ್ತಾರೆ. ಇವರ ಮುಖ್ಯ ವೃತ್ತಿ, ಗೊಂಬೆಯಾಟವಾದರೂ ನಾಟಕ ಕಲಿಸುವುದು, ಹರಿಕಥೆ ಮಾಡುವುದು, ವ್ಯವಸಾಯ ಮಾಡುವುದು ಇತ್ಯಾದಿಗಳು ಇವರ ಉಪಕಸುಬುಗಳಾಗಿವೆ. ತೊಗಲು ಗೊಂಬೆಯಾಟದವರು ಹಳ್ಳಿಹಳ್ಳಿಗೆ ಗೊಂಬೆಗಳನ್ನು ಹೊತ್ತುಕೊಂಡು ಹೋಗಿ ಆಡಿಸಿ ಜನರನ್ನು ಸಂತೋಷಪಡಿಸಿ ಅವರು ನೀಡಿದ ಮರಿ, ಕುರಿ, ದವಸ, ಧಾನ್ಯ ಮುಂತಾದ ಕಾಣಿಕೆಗಳನ್ನು ಸಂಗ್ರಹಿಸಿ ಜೀವನ ಸಾಗಿಸುತ್ತಾರೆ.

12th_Kannada_Reader_3-5.indd 82 22-05-2019 14:31:17

ಕಿಳ್ಳೆಕ್ಯಾತರು ಎಲ್ಲಾ ಸಂದರ್ಭಗಳಲ್ಲೂ ಒಂದೇ ರೀತಿಯ ಆಟ ಪ್ರದರ್ಶಿಸುವುದಿಲ್ಲ. ಉದಾಹರಣೆಗೆ : ತಿಥಿ ಸಂದರ್ಭದಲ್ಲಿ 'ಸ್ವರ್ಗಾರೋಹಣ' ಪ್ರಸಂಗ ಆಡಿದರೆ, ಮದುವೆ ಮತ್ತಿತರ ಸಂದರ್ಭದಲ್ಲಿ 'ಗಿರಿಜಾ ಕಲ್ಯಾಣ' ಪ್ರಸಂಗ ಆರಿಸಿಕೊಳ್ಳುತ್ತಾರೆ. ಮಳೆ ಬರದೆ ಕ್ಷಾಮ ಒದಗಿದಾಗ ಮಳೆ ಹುಯ್ಯಲಿ ಎಂದು ತೊಗಲು ಗೊಂಬೆಯಾಟ ಆಡಿಸುವುದುಂಟು. ಕಲಾವಿದರು ಅನೇಕ ಆಟಗಳ ಸಾಹಿತ್ಯವನ್ನು ಬಾಯಿಪಾಠ ಮಾಡಿಕೊಂಡಿರುತ್ತಾರೆ. ತೊಗಲುಗೊಂಬೆಯಾಟದ ಸಂಭಾಷಣೆ, ಹಾಡುಗಳು, ಯಕ್ಷಗಾನದಂತೆ ಸಂಸ್ಕೃತ ಭೂಯಿಷ್ಟವಾದವುಗಳು. ಆದಿತಾಳ, ತ್ರಿಪುಡೆಯ ಮಟ್ಟು ಹೆಚ್ಚು. ಆರಂಭದಲ್ಲೂ ಗಣೇಶನ ಪೂಜೆ, ಮುಕ್ತಾಯದಲ್ಲೂ ಗಣೇಶನ ಪೂಜೆ, ಸ್ತುತಿ ಇರುತ್ತದೆ. ಕಲಾಪ್ರದರ್ಶನದಲ್ಲಿ ಹೆಂಗಸರೂ ಭಾಗವಹಿಸುತ್ತಾರೆ. ಸ್ತ್ರೀಪಾತ್ರಗಳ ಗೊಂಬೆಗಳನ್ನು ಕುಣಿಸುವಲ್ಲಿ ಹಾಡು ಮತ್ತು ಸಂಭಾಷಣೆಗಳಿಗೆ ಸ್ತ್ರೀಯೇ ಕಂಠದಾನ ಮಾಡುತ್ತಾಳೆ.

ಕಲಾವಿದರು ಯಾವುದೇ ಪ್ರಸಂಗದಲ್ಲಾಗಲೀ ಮಧ್ಯೆ ಮಧ್ಯೆ ಬಂಗಾರಕ್ಕ, ಕಿಳ್ಳೇಕ್ಯಾತ ಮುಂತಾದ ಹಾಸ್ಯ ಪಾತ್ರಗಳನ್ನು ತರಲು ಮರೆಯುವುದಿಲ್ಲ. ಪ್ರೇಕ್ಷಕರು ತೂಕಡಿಸುವಾಗ ಕೆಲವು ಪಾತ್ರಗಳು ಆರ್ಭಟ ಮಾಡಿಕೊಂಡು ಬರುತ್ತವೆ. ಕೊನೆಯತನಕ ಪ್ರೇಕ್ಷಕರ ಆಸಕ್ತಿಯನ್ನು ಕಾಯ್ದುಕೊಳ್ಳಲು ಮತ್ತು ಬೇಸರವನ್ನು ನಿವಾರಿಸಿ ಮನರಂಜನೆ ನೀಡಲು ಈ ಪಾತ್ರಗಳು ವಿಶಿಷ್ಟ ಪಾತ್ರ ವಹಿಸುತ್ತವೆ. ಕೆಲವು ಸಮಯದಲ್ಲಿ ಅಶ್ಲೀಲವೆನಿಸಬಹುದಾದ ಹಾಸ್ಯವನ್ನು ತಂದು ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿ ಬಿಡುತ್ತಾರೆ. ಇತ್ತೀಚೆಗೆ ಸಿನಿಮಾ, ನಾಟಕಗಳ ಪ್ರಭಾವ ಹೆಚ್ಚಾಗಿ ತೊಗಲು ಗೊಂಬೆಯಾಟದವರೂ ಮಧ್ಯೆ ಮಧ್ಯೆ ಸಿನಿಮಾ ಹಾಡುಗಳನ್ನು ಹಾಕಿಕೊಳ್ಳುತ್ತಿದ್ದಾರೆ.

ತೊಗಲು ಗೊಂಬೆಯಾಟದ ಕಲಾವಿದರ ವೇಷಭೂಷಣಗಳಲ್ಲಿ ವಿಶೇಷವೇನೂ ಇರುವುದಿಲ್ಲ. ಮಾಮೂಲು ಕಚ್ಚೆ ಪಂಚೆ, ತಲೆಗೆ ಪೇಟ, ಒಂದು ಕರಿಯ ಕೋಟು ಅಷ್ಟೇ. ಮೇಲಾಗಿ ಇವರು ತೆರೆಯ ಹಿಂದೆಯೇ ಇರುವವರು ತಾನೇ.

ಸಾಮಾನ್ಯವಾಗಿ ಗೊಂಬೆರಾಮರು ತೊಗಲುಗೊಂಬೆಯನ್ನು ಹುಲ್ಲೆಯ ಚರ್ಮದಿಂದ ಮಾಡಿರುತ್ತಾರೆ. ಆಡಿನ (ಮೇಕೆ) ಚರ್ಮವನ್ನೂ ಬಳಸುವುದುಂಟು. ಆದರೆ ಜಿಂಕೆಯ ಚರ್ಮ ಪಾರದರ್ಶಕವಾದ್ದರಿಂದ ಮತ್ತು ಹೆಚ್ಚು ಕಾಲ ಅಳಿಯದೇ ಉಳಿಯುವುದರಿಂದ ಬಣ್ಣ ಮುಂತಾದವು ಚೆನ್ನಾಗಿ ಹೊಂದಿಕೊಳ್ಳುವುದರಿಂದ ಬಹುಮಂದಿ ಹುಲ್ಲೆಯ ಚರ್ಮವನ್ನೇ ಬಳಸುತ್ತಾರೆ. ಮೊದಮೊದಲು ತೊಗಲು ಹದ ಮಾಡುವ, ಬಣ್ಣ ಹಚ್ಚುವ, ಕತ್ತರಿಸುವ ಎಲ್ಲಾ ಕೆಲಸಗಳನ್ನೂ ಇವರೇ ಮಾಡಿಕೊಳ್ಳುತ್ತಿದ್ದರು. ಈಗೀಗ ಅದು ತಪ್ಪಿ ಹೊರಗಡೆ ಮಾಡಿಸುತ್ತಾರೆ. ಗೊಂಬೆ ಮಾಡುವವರಿಗೆ ಅಳತೆ ಮುಂತಾದವನ್ನು ಕೊಟ್ಟರೆ ಆಯಿತು. ಗೊಂಬೆ ಸಿದ್ಧವಾಗುತ್ತದೆ. ಹಿಂದೆ ತಮ್ಮ ಊರಿಗೆ ನೆಮ್ಮದಿಯಾದುದಕ್ಕೆ ಕೊಡುಗೆಯಾಗಿ ಕೃತಜ್ಞತೆಯ ಕುರುಹಾಗಿ ಗೊಂಬೆ ಮಾಡಿಸಿ ಕೊಡುತ್ತಿದ್ದರು. ಹಾಗೆ ಮಾಡಿಸಿ ಕೊಡುವಾಗ ಗೊಂಬೆಯ ತಳಭಾಗದಲ್ಲಿ ತಮ್ಮ ವಿಳಾಸವನ್ನೂ ಬರೆಸುತ್ತಿದ್ದರು. ಇದನ್ನು ಗೊಂಬೆಯಾಟ ಆಡಿಸುವಾಗ ಆಟದವರು ಜನರಿಗೆ ಹೇಳುತ್ತಿದ್ದರು.

ತೊಗಲು ಆಡಿಸುವುದು ಒಂದು ಕಲೆಯಾದರೆ ಆ ಗೊಂಬೆ ಮಾಡುವುದು ಇನ್ನೊಂದು ಕುಶಲ ಕಲೆ. ಗೊಂಬೆ ಚಿತ್ರಿಸುವ ಹುಲ್ಲೆ ಚರ್ಮವನ್ನು ನೀರಿನಲ್ಲಿ ನೆನೆ ಹಾಕಿ ಚರ್ಮದ ಮೇಲಿನ ಕೂದಲನ್ನು ಕಳೆಯುತ್ತಾರೆ. ಅನಂತರ ಒಣಗಿಸಿ, ವಿಶಿಷ್ಟ ರೀತಿಯ ಹದ ಕೊಟ್ಟಾಗ ಅದು ಪಾರದರ್ಶಕವಾಗಿರುತ್ತದೆ. ಪಾತ್ರಗಳ ಲಕ್ಷಣ ಹಾಗೂ ಔಚಿತ್ಯಕ್ಕೆ ತಕ್ಕಂತೆ ತೊಗಲನ್ನು ಕತ್ತರಿಸಿ ಯಾವ ಪಾತ್ರಗಳಿಗೆ ಯಾವ ಬಣ್ಣ ಹಾಕಬೇಕು ಎಂಬುದನ್ನು ನೋಡಿಕೊಂಡು ಬಣ್ಣ ಹಾಕುತ್ತಾರೆ. ಕುಶಲ ಕೆಲಸಗಾರರು ಈ ಬಣ್ಣವನ್ನು ತಾವೇ ಮಾಡಿಕೊಳ್ಳುತ್ತಾರೆ. ಬಣ್ಣದಲ್ಲಿ ವಿವಿಧ ಪಾತ್ರಗಳನ್ನು ಬಿಡಿಸುವ ಕಲಾ ಜಾಣ್ಮೆ ವಿಶಿಷ್ಟವಾದುದು. ಗೊಂಬೆಗಳು ಚಲಿಸುವಂತೆ ಅನುಕೂಲವಾಗಲು ಕೈ ಕಾಲು ಕತ್ತುಗಳಿಗೆ ಕೀಲುಗಳಿರುತ್ತವೆ. ಕೈಚಳಕದಿಂದ ಆಡಿಸಲು ಹಿಂದಕ್ಕೆ ಬಿದಿರಿನ ಕಡ್ಡಿಯನ್ನು ಅಂಟಿಸುತ್ತಾರೆ ಇಲ್ಲವೇ ಕಟ್ಟಿರುತ್ತಾರೆ. ಗೊಂಬೆಯಾಡಿಸುವುದು ಆಡಿಸುವವನ ಕೈ ಚಳಕದ ಮೇಲೆ ನಿಂತಿರುತ್ತದೆ. ಎಚ್ಚರಿಕೆಯಿಂದ

12th_Kannada_Reader_3-5.indd 83 22-05-2019 14:31:17

ಬಳಸಿದರೆ ತೊಗಲಿನ ಗೊಂಬೆ ಸಾಮಾನ್ಯವಾಗಿ ನೂರಾರು ವರ್ಷ ಬಾಳಬಹುದು. ಒಂದೆರಡು ತಲೆಮಾರುಗಳಿಗಂತೂ ಕೊರತೆಯಿಲ್ಲ. ಗೊಂಬೆಗಳು ಸುಮಾರು ಎರಡು ಮೂರು ಅಡಿ ಎತ್ತರ ಇರುತ್ತವೆ. ಕೆಲವು ಕಡೆ ಮಾನವಾಕೃತಿಯ ಅಳತೆಯ ಗೊಂಬೆಗಳು ಇರುವುದೂ ಉಂಟು. ಗೊಂಬೆಗಳು ನೋಟಕ್ಕೆ ಪುರಾಣ ಪುರುಷರ ಕಲ್ಪನೆಯನ್ನುಂಟು ಮಾಡುತ್ತವೆ.

ಈ ಕಲೆಯ ಪ್ರದರ್ಶನಕ್ಕೆ ವಿಶಿಷ್ಟ ರಂಗಸಜ್ಜಿಕೆ ಬೇಕು. ಸಾಮಾನ್ಯವಾಗಿ ಎತ್ತರವಾದ ವೇದಿಕೆಯ ಮೇಲೆ ಸುಮಾರು 8 ಅಡಿ ಅಗಲ, 8 ಅಡಿ ಉದ್ದ ಮತ್ತು 8 ಅಡಿ ಎತ್ತರ ಇರುವಂತೆ ಬಿದಿರು ಬೊಂಬಿನಿಂದ ಮಂಟಪ ರಚಿಸಿ, 2 ಮೊಳ ಅಗಲ, 9 ಮೊಳ ಉದ್ದದ ಬಿಳಿ ಬಟ್ಟೆಯನ್ನು ಮುಂಭಾಗಕ್ಕೆ ಕಟ್ಟಿರುತ್ತಾರೆ. ಕೆಳಗಡೆ ಸುಮಾರು ಒಂದು–ಒಂದೂವರೆ ಅಡಿ ಎತ್ತರದವರೆಗೆ ಕರಿಯ ಕಂಬಳಿ ಅಥವಾ ಯಾವುದಾದರೂ ಒರಟು ಬಟ್ಟೆ ಕಟ್ಟುತ್ತಾರೆ. ಮಂಟಪದ ಉಳಿದ ಮೂರು ಬದಿಗಳನ್ನು ಚಾಪೆ ಅಥವಾ ಕಂಬಳಿಗಳಿಂದ ಮುಚ್ಚುತ್ತಾರೆ. ಮಂಟಪದ ಮಧ್ಯೆ ಮೇಲ್ಭಾಗದಲ್ಲಿ ಎಡದಿಂದ ಬಲಕ್ಕೆ ಸ್ಥಿರ ಗೊಂಬೆಗಳನ್ನು ಕಟ್ಟಲಿಕ್ಕಾಗಿ ಒಂದು ಹಗ್ಗವನ್ನು ಬಿಗಿಯಾಗಿ ಕಟ್ಟಿರುತ್ತಾರೆ. ಮುಂಭಾಗದ ಬಿಳಿ ಬಟ್ಟೆಯನ್ನು ಸುಕ್ಕಿರದಂತೆ ಎಳೆದು ಗೊಬ್ಬಳಿ ಅಥವಾ ಈಚಲು ಮುಳ್ಳುಗಳಿಂದ ಚುಚ್ಚಿರುತ್ತಾರೆ. ರಂಗಸಜ್ಜಿಕೆ ಸಿದ್ಧ ಮಾಡುವಾಗ ವಾರ, ತಿಥಿ, ನಕ್ಷತ್ರ ನೋಡುವುದರಲ್ಲಿ ಕಿಳ್ಳೆಕ್ಯಾತರಿಗೆ ನಂಬಿಕೆ ಇದೆ. ಭಾನುವಾರ, ಸೋಮವಾರ, ಬಡಗ; ಮಂಗಳವಾರ, ಬುಧವಾರ, ಮೂಡ; ಬೆಸ್ತು(ಗುರು)ವಾರ ಶುಕ್ರವಾರ, ಶನಿವಾರ ಪಡುವ – ಹೀಗೆ ವಾರ ನೋಡಿ ಆಯಾ ದಿಕ್ಕಿಗೆ ಮುಖ ಮಾಡಿ ರಂಗಸಜ್ಜಿಕೆ ಕಟ್ಟುತ್ತಾರೆ. ಬೇರೆ ಬೇರೆ ತಂಡಗಳು ಬೇರೆ ಬೇರೆ ವಿಧಾನಗಳನ್ನು ಅನುಸರಿಸಬಹುದು. ಅಂದರೆ ಯಾವುದೇ ತಂಡವಾಗಲೀ ತನ್ನದೇ ಆದ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತದೆ. ಇತ್ತೀಚೆಗೆ ಈ ನಿಯಮಗಳು ಸರಳಗೊಂಡಿವೆ.

ರಂಗಸಜ್ಜಿಕೆಯಾದ ನಂತರ ಪರದೆಯ ಹಿಂದೆ ಐದಾರು ಜನ ಗೊಂಬೆಯಾಟದವರು ಕುಳಿತುಕೊಳ್ಳುತ್ತಾರೆ. ಅವರೆಲ್ಲರೂ ಗೊಂಬೆಯಾಡಿಸುವುದಿಲ್ಲ. ಇವರಲ್ಲಿ ಒಬ್ಬಿಬ್ಬರು ಮಾತ್ರ ಗೊಂಬೆಯಾಡಿಸುತ್ತಾರೆ. ಉಳಿದವರು ತಾಳ, ಹಾರ್ಮೋನಿಯಂ, ತಬಲ, ಮೃದಂಗ ಮುಂತಾದ ವಾದ್ಯಗಾರರು. ಒಬ್ಬಿಬ್ಬರು ಭಾಗವತನ ಹಾಡಿಗೆ ದನಿಗೂಡಿಸುವವರಿರುತ್ತಾರೆ. ಹಿಂದಿನ ಕಾಲದಲ್ಲಿ ಶೃತಿಗೆ ಒಂದು ವಿಚಿತ್ರ ಸಾಧನ ಉಪಯೋಗಿಸುತ್ತಿದ್ದರು. ಕಂಚಿನ ಗಂಗಳ(ತಟ್ಟೆ)ವನ್ನು 'ದಬ್ಬಾಕಿ' ಅದರ ಮಧ್ಯೆ ಜೇನು ಮೇಣ ಅಂಟಿಸಿ ಆ ಮೇಣಕ್ಕೆ ದಪ್ಪ ಹಂಚಿಕಡ್ಡಿಯನ್ನು ನೆಟ್ಟಗೆ ನಿಲ್ಲಿಸಿ ಮೇಲಕ್ಕೂ ಕೆಳಕ್ಕೂ ಬೆರಳುಗಳಿಂದ ತೀಡುತ್ತಿದ್ದರು. ಹಾಗೆ ತೀಡಿದಾಗ ಸೊಗಸಾದ ನಾದ–ಶೃತಿ ಹೊರಡುತ್ತಿತ್ತು. ಆದರೆ ಈಗ ಹಾರ್ಮೋನಿಯಂ ಆ ಸ್ಥಳವನ್ನು ಆಕ್ರಮಿಸಿದೆ.

ಒಬ್ಬ ಏಕಕಾಲದಲ್ಲಿ ಎರಡು ಗೊಂಬೆಗಳನ್ನು ಆಡಿಸಬಲ್ಲ. ಆಡಿಸುವ ಗೊಂಬೆಗಳಿಗೆ ಮೂರು ಸೂತ್ರದ ಕಡ್ಡಿಗಳಿರುತ್ತವೆ. ಕಡ್ಡಿಗಳನ್ನು ಬೆರಳುಗಳಿಗೆ ಸಿಕ್ಕಿಸಿಕೊಂಡು ಚಮತ್ಕಾರಯುತವಾಗಿ ಕುಣಿಸುತ್ತಾರೆ. ಪರದೆಯ ಹಿಂದೆ ಕುಣಿಯುವ ಈ ಬಣ್ಣದ ಗೊಂಬೆ ಬಿಳಿ ತೆರೆಯ ಮೇಲೆ ಪಡಿ ಮೂಡುವಂತೆ ತೆರೆಯ ಹಿಂಭಾಗದಲ್ಲಿ ಮಂದವಾದ ಬೆಳಕು ನೀಡುವ 'ಕಕ್ಕಡ' ಉರಿಸುತ್ತಾರೆ. ಬಳಪದ ಕಲ್ಲಿನ ಬಟ್ಟಲಲ್ಲಿ ಐದಾರು ಭತ್ತ ಹಾಕಿ ಕಡಲೆಕಾಯಿ, ಬೇವು, ಹಿಪ್ಪೆ ಅಥವಾ ಹೊಂಗೆ ಎಣ್ಣೆಯನ್ನು ಹಾಕಿ ಇಂತಹ ದೀಪ ಉರಿಸಬಹುದು. ಈಗ ಅವೆಲ್ಲಾ ಹೋಗಿ ಪೆಟ್ರೋಮ್ಯಾಕ್ಸ್ ಇಲ್ಲವೇ ವಿದ್ಯುಚ್ಛಕ್ತಿ ದೀಪದ ಬೆಳಕು ಬಳಕೆಗೆ ಬಂದಿದೆ.

ತೆರೆಯ ಹಿಂದೆ ಕುಳಿತ ಕಲಾವಿದರು ಯಾರೂ ಪ್ರೇಕ್ಷಕರಿಗೆ ಕಾಣಿಸುವುದಿಲ್ಲ. ತೆರೆಯ ಹಿಂದೆ ಕಥೆ ಯಾವುದು ಯಾವ ಪ್ರಸಂಗ ಆದ ಮೇಲೆ ಯಾವ ಪ್ರಸಂಗ ಬರುತ್ತದೆ ಎಂಬುದನ್ನು ತಿಳಿದುಕೊಂಡು ಅದರಂತೆ ಆಟಕ್ಕೆ ಮೊದಲೇ ಗೊಂಬೆಗಳನ್ನು ಜೋಡಿಸಿಕೊಂಡಿರುತ್ತಾರೆ. ತೆರೆಯ ಮೇಲೆ ಪಡಿನೆಳಲಾಗುವ ಗೊಂಬೆಗಳನ್ನು ಬಿಟ್ಟು ಉಳಿದ ಗೊಂಬೆಗಳು ಯಾರಿಗೂ ಕಾಣುವುದಿಲ್ಲ.

ಆರಂಭದಲ್ಲಿ ಗಣಸ್ತುತಿಯೊಡನೆ ಗಣಪತಿಯ ಗೊಂಬೆಯನ್ನು ಕುಣಿಸುತ್ತಾರೆ. ಅನಂತರ ಕಥಾ

12th_Kannada_Reader_3-5.indd 84 22-05-2019 14:31:17

ಪ್ರಸಂಗ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಗೊಂಬೆಗಳು ಬಲಗಡೆಯಿಂದ ಬಂದು ಎಡಗಡೆಗೆ ಹೋಗುತ್ತವೆ. ತೊಗಲು ಗೊಂಬೆಯಾಟದಲ್ಲಿ ಯುದ್ಧ ಸನ್ನಿವೇಶಗಳಂತೂ ಅತ್ಯಂತ ಕುತೂಹಲಕಾರಿಯಾಗಿರುತ್ತದೆ. ವೀರನೊಬ್ಬನು ಬಿಲ್ಲಿನಿಂದ ಬಾಗಿ ಬಾಣ ಬಿಡುವುದನ್ನು ತೋರಿಸುವ ಚಮತ್ಕಾರ ಸೋಜಿಗ ಪಡುವಂತಿರುತ್ತದೆ. ಬಾಣದ ಹೊಡೆತಕ್ಕೆ ಶತ್ರುವಿನ ತಲೆ ಮುರಿದು ಬೀಳುವುದನ್ನು ತೊಗಲು ಗೊಂಬೆಯಾಟದಲ್ಲಿ ತೋರಿಸುವ ಕೌಶಲ್ಯವನ್ನು ನೋಡಬೇಕು! ಆದರೆ ಸೂತ್ರದ ಗೊಂಬೆಯಾಟದಲ್ಲಿ ಇಂತಹ ಚಮತ್ಕಾರ ಸಾಧ್ಯವಿಲ್ಲ. ತೊಗಲು ಗೊಂಬೆಯ ತಲೆ, ಎದೆ, ಕೈ ಕಾಲುಗಳು ಬೇರೆಬೇರೆಯಾಗಿದ್ದು ಅದನ್ನು ದಾರಗಳಿಂದ ಜೋಡಿಸಲಾಗಿರುವುದರಿಂದ ಇಂತಹ ಪ್ರದರ್ಶನಕ್ಕೆ ಅನುಕೂಲ. ಕೈಕಾಲುಗಳು, ಮುಂಡ, ತಲೆ ಇವುಗಳು ಸರಿದಾಡುವಂತೆ ಅವುಗಳಿಗೆ ಬಿದಿರಿನ ಅಥವಾ ಈಚಲ ಕಡ್ಡಿಗಳನ್ನು ಜೋಡಿಸಿರುತ್ತಾರೆ.

ಒಟ್ಟಿನಲ್ಲಿ ತೊಗಲು ಗೊಂಬೆಯಾಟ ಒಂದು ಅದ್ಭುತ ಕೈ ಚಳಕದ ಆಟ. ಈ ಆಟ ಜನಸಾಮಾನ್ಯರಿಗೆ ಸುಲಭವಾಗಿ ಪೌರಾಣಿಕ ಕಥೆಗಳನ್ನು ಹೇಳುವ ಮಾಧ್ಯಮ. ತೊಗಲು ಗೊಂಬೆಯಾಟದ ಶಕುನಿ, ಅಭಿಮನ್ಯು, ರಾಮ, ರಾವಣ, ಆಂಜನೇಯ ಮೊದಲಾದ ಪಾತ್ರಗಳು ಬಹಳ ಕಾಲದವರೆಗೂ ನೆನಪಿನಲ್ಲಿಟ್ಟುಕೊಳ್ಳುವಂತಹವು. ಇಂಥ ಪಾತ್ರಗಳು ಕಣ್ಣಿಗೆ ಕಟ್ಟಿದಂತೆ ನಿಜ ವ್ಯಕ್ತಿಗಳೇ ಕಣ್ಮುಂದೆ ಕುಣಿಯುತ್ತಿರುವಂತೆ ಭಾಸವಾಗುತ್ತವೆ. ಕಿಳ್ಳೆಕ್ಯಾತರು ಬಹುತೇಕ ಮಹಾಭಾರತ ಮತ್ತು ರಾಮಾಯಣದ ಪೌರಾಣಿಕ ಪ್ರಸಂಗಗಳನ್ನೇ ಪ್ರದರ್ಶಿಸುತ್ತಾರೆ. ಸೀತಾ ಸ್ವಯಂವರ, ದ್ರೌಪದಿ ಸ್ವಯಂವರ, ಶಿವ ಜಲಂಧರ, ತ್ರಿಪುರ ಸಂಹಾರ, ದೇವೀ ಮಹಾತ್ಮೆ, ಸಾನಂದ ಗಣೇಶ ಮುಂತಾದ ಪ್ರಸಂಗಗಳನ್ನು ಇಡೀ ರಾತ್ರಿ ತೋರಿಸುತ್ತಾರೆ. ರಾಮಾಯಣವನ್ನು 10 ರಾತ್ರಿ ಬೇಕಾದರೂ ಆಡಿಸಿ ತೋರಿಸಬಹುದೆನ್ನುತ್ತಾರೆ. ಗೊಂಬೆಗಳನ್ನು ಕುಣಿಸುತ್ತಾ ಆ ಗೊಂಬೆಗೆ ಜೀವ ತುಂಬುವಂತೆ ತಾವೇ ಹಾಡುತ್ತಾ ಸಂಭಾಷಿಸುವ ಇವರ ಕಲೆ ಎಂಥವರನ್ನೂ ದಂಗು ಬಡಿಸುತ್ತದೆ. ಆಧುನಿಕ ಸಿನಿಮಾ ನಾಟಕಗಳನ್ನು ನೋಡಲು ಹೆಚ್ಚು ಅವಕಾಶವಿಲ್ಲದ ಅನೇಕ ಹಳ್ಳಿಗಳಿಗೆ ಈ 'ತೊಗಲು ಗೊಂಬೆಯಾಟ'ವೇ ಒಂದು ಸಿನಿಮಾ!

ತೊಗಲು ಗೊಂಬೆಯಾಟ ಆಡಿಸಿದರೆ ಊರಿಗೆ ತಗುಲಿದ ರೋಗರುಜಿನ ಅನಿಷ್ಟಗಳು ತೊಲಗುತ್ತವೆಂದೂ, ಮಳೆ ಬಾರದಿದ್ದಾಗ ಆಡಿಸಿದರೆ ಮಳೆ ಬೀಳುವುದೆಂದೂ ಜನರಲ್ಲಿ ನಂಬಿಕೆಯಿದೆ. 'ತೊಗಲು ಗೊಂಬೆಯಾಟ'ವು ನಮ್ಮ ವಂಶ ಪಾರಂಪರ್ಯದ ಕಸುಬು. 'ಅದು ನಮ್ಮ ಕೈ ಬಿಟ್ಟರೂ ನಾವು ಅದನ್ನು ಕೈಬಿಡುವಂತಿಲ್ಲ' ಎಂಬ ಶ್ರದ್ಧೆ ಕಿಳ್ಳೆಕ್ಯಾತರದು.

ಕೃತಿ–ಕರ್ತೃ ವಿಚಾರ



– ಗೊ.ರು.ಚನ್ನಬಸಪ್ಪ

ಈ ಲೇಖನವನ್ನು ಶ್ರೀ. ಗೊ.ರು.ಚನ್ನಬಸಪ್ಪ ಅವರು ಸಂಪಾದಿಸಿ, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕರ್ನಾಟಕ ಜಾನಪದ ಕಲೆಗಳು' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ತೊಗಲು–ಚರ್ಮ; ಗುಂಪು–ಸಮೂಹ; ಮಿಶ್ರಿತ–ಬೆರಕೆ; ಅಲೆಮಾರಿ–ಸ್ಥಳದಿಂದ ಸ್ಥಳಕ್ಕೆ ಪ್ರಯಾಣ ಮಾಡಿ ಬದುಕುವ ಜನಾಂಗದವರು; ವೃತ್ತಿ–ಕಸುಬು, ಕೆಲಸ; ಕಂಠದಾನ–ಧ್ವನಿ ನೀಡುವುದು, ಇತರರಂತೆ ತಾವೇ ಮಾತನಾಡುವುದು; ಪ್ರೇಕ್ಷಕರು–ವೀಕ್ಷಿಸುವವರು; ಹುಲ್ಲೆ–ಜಿಂಕೆಯ ಜಾತಿಗೆ ಸೇರಿದ ಪ್ರಾಣಿ; ಗಂಗಾಳ–ಕಂಚಿನ ತಟ್ಟೆ; ಅನಿಷ್ಟ–ಕೆಡುಕು; ರೋಗ–ಕಾಯಿಲೆ.

12th_Kannada_Reader_3-5.indd 85 22-05-2019 14:31:17

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ತೊಗಲು ಗೊಂಬೆಯಾಟವು ಯಾವ ಜನಾಂಗದವರ ವಂಶಪಾರಂಪರ್ಯ ಕಲೆಯಾಗಿದೆ ?
2. ಸಿಳ್ಳೆಕ್ಯಾತ ಅಥವಾ ಕಿಳ್ಳೆಕ್ಯಾತರು ಮೂಲತಃ ಯಾವ ಜಿಲ್ಲೆಗೆ ಸೇರಿದವರು?
3. ತೊಗಲು ಗೊಂಬೆಯಾಟದವರು ಯಾವ ಕುಲದವರು ?
4. ತೊಗಲು ಗೊಂಬೆಯಾಟಕ್ಕೆ ಇರುವ ಹೆಸರುಗಳು ಯಾವುವು ?
5. ತೊಗಲು ಗೊಂಬೆಯಾಟದ ಗೊಂಬೆಗಳನ್ನು ಯಾವುದರಿಂದ ತಯಾರಿಸುತ್ತಾರೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ತೊಗಲು ಗೊಂಬೆಯಾಟದವರು ಯಾವ ಯಾವ ದೇವರುಗಳನ್ನು ಆರಾಧಿಸುತ್ತಾರೆ ?
2. ತೊಗಲು ಗೊಂಬೆಯಾಟದವರ ನಾಲ್ಕು ಪಂಗಡಗಳನ್ನು ಹೆಸರಿಸಿ ?
3. ಕಿಳ್ಳೆಕ್ಯಾತರು ಶುಭ ಹಾಗೂ ಅಶುಭ ಸಂದರ್ಭಗಳಲ್ಲಿ ಯಾವ ಯಾವ ಪ್ರಸಂಗಗಳನ್ನು ಪ್ರದರ್ಶಿಸುತ್ತಾರೆ ?
4. ತೊಗಲು ಗೊಂಬೆಯಾಟದವರು ಪ್ರೇಕ್ಷಕರ ಆಸಕ್ತಿಯನ್ನು ಕಾಯ್ದುಕೊಳ್ಳಲು ಏನು ಮಾಡುತ್ತಾರೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ತೊಗಲು ಗೊಂಬೆಯಾಟದವರ ವೇಷಭೂಷಣಗಳನ್ನು ಕುರಿತು ಬರೆಯಿರಿ.
2. ತೊಗಲು ಗೊಂಬೆಯನ್ನು ತಯಾರಿಸುವ ವಿಧಾನವನ್ನು ತಿಳಿಸಿರಿ.
3. ತೊಗಲು ಗೊಂಬೆಯಾಟವು ಒಂದು ಅದ್ಭುತವಾದ ಕೈಚಳಕದ ಆಟ – ಈ ಹೇಳಿಕೆಯನ್ನು ಸಮರ್ಥಿಸಿರಿ.
4. ಜನರಲ್ಲಿ, ತೊಗಲು ಗೊಂಬೆಯಾಟದಿಂದ ಯಾವ ತೊಂದರೆಗಳಿಂದ ಪಾರಾಗಬಹುದೆಂಬ ನಂಬಿಕೆಯಿದೆ. ವಿವರಿಸಿರಿ.

ಚಟುವಟಿಕೆ

1. ನಿಮ್ಮೂರಿನಲ್ಲಿರುವ ಜಾನಪದ ಕಲಾವಿದರಿಂದ ನೀವೂ ಯಾವುದಾದರೂ ಜಾನಪದ ಕಲೆಯನ್ನು ಕಲಿಯಿರಿ.
2. ಜಾನಪದ ಹಾಡುಗಳನ್ನೂ, ಕಥೆಗಳನ್ನೂ ಕೇಳಿ, ನೀವೂ ಹೇಳಿರಿ.



12th_Kannada_Reader_3-5.indd 86 22-05-2019 14:31:17

ಘಟಕ ನಾಲ್ಕು

ಕಾಲ–ಕೃದಂತ–ತದ್ಧಿತಾಂತ–ಅವ್ಯಯ

ಕಾಲಗಳು

ಕಾಲಗಳು ಮೂರು ಬಗೆಯಾಗಿವೆ.

1. **ಭೂತ ಕಾಲ :** ಈಗಾಗಲೇ ಮುಗಿದು ಹೋದ ಸಮಯವನ್ನು ಸೂಚಿಸುವ ಕಾಲ ಭೂತಕಾಲ. ಈ ಕಾಲದ ಪ್ರತ್ಯಯ 'ದ'.
2. **ವರ್ತಮಾನ ಕಾಲ :** ಈಗ ನಡೆಯುತ್ತಿರುವ ಕಾಲ ವರ್ತಮಾನ ಕಾಲ. ಇದರ ಪ್ರತ್ಯಯ 'ಉತ್ತ'.
3. **ಭವಿಷ್ಯತ್ ಕಾಲ :** ಮುಂದೆ ನಡೆಯುವುದನ್ನು ಸೂಚಿಸುವುದೇ ಭವಿಷ್ಯತ್ ಕಾಲ. ಇದರ ಪ್ರತ್ಯಯ 'ವ'.

ಭೂತ ಕಾಲ		
ಪುರುಷ ಲಿಂಗ	ಏಕವಚನ	ಬಹುವಚನ
ಉತ್ತಮ –	(ನಾನು) ಮಾಡಿದೆನು	(ನಾವು) ಮಾಡಿದೆವು
ಮಧ್ಯಮ –	(ನೀನು) ಮಾಡಿದೆ	(ನೀವು) ಮಾಡಿದಿರಿ
ಪ್ರಥಮ – ಪುಲ್ಲಿಂಗ	(ಅವನು) ಮಾಡಿದನು	(ಅವರು) ಮಾಡಿದರು
ಸ್ತ್ರೀಲಿಂಗ	(ಅವಳು) ಮಾಡಿದಳು	(ಅವರು) ಮಾಡಿದರು
ನಪುಂಸಕಲಿಂಗ	(ಅದು) ಮಾಡಿತು	(ಅವು) ಮಾಡಿದವು

ವರ್ತಮಾನ ಕಾಲ		
ಪುರುಷ ಲಿಂಗ	ಏಕವಚನ	ಬಹುವಚನ
ಉತ್ತಮ –	(ನಾನು) ಮಾಡುತ್ತೇನೆ	(ನಾವು) ಮಾಡುತ್ತೇವೆ
ಮಧ್ಯಮ –	(ನೀನು) ಮಾಡುತ್ತೀ	(ನೀವು) ಮಾಡುತ್ತೀರಿ
ಪ್ರಥಮ – ಪುಲ್ಲಿಂಗ	(ಅವನು) ಮಾಡುತ್ತಾನೆ	(ಅವರು) ಮಾಡುತ್ತಾರೆ
ಸ್ತ್ರೀಲಿಂಗ	(ಅವಳು) ಮಾಡುತ್ತಾಳೆ	(ಅವರು) ಮಾಡುತ್ತಾರೆ
ನಪುಂಸಕಲಿಂಗ	(ಅದು) ಮಾಡುತ್ತದೆ	(ಅವು) ಮಾಡುತ್ತವೆ

12th_Kannada_Reader_3-5.indd 87 22-05-2019 14:31:17

ಭವಿಷ್ಯತ್ ಕಾಲ		
ಪುರುಷ ಲಿಂಗ	ಏಕವಚನ	ಬಹುವಚನ
ಉತ್ತಮ –	(ನಾನು) ಮಾಡುವೆನು	(ನಾವು) ಮಾಡುವೆವು
ಮಧ್ಯಮ –	(ನೀನು) ಮಾಡು/ವಿ	(ನೀವು) ಮಾಡುವಿರಿ
ಪ್ರಥಮ – ಪುಲ್ಲಿಂಗ	(ಅವನು) ಮಾಡುವನು	(ಅವರು) ಮಾಡುವರು
ಸ್ತ್ರೀಲಿಂಗ	(ಅವಳು) ಮಾಡುವಳು	(ಅವರು) ಮಾಡುವರು
ನಪುಂಸಕಲಿಂಗ	(ಅದು) ಮಾಡುವುದು	(ಅವು) ಮಾಡುವುವು

ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳಾಗುತ್ತವೆ. ಇವುಗಳನ್ನು ಕೃನ್ನಾಮಗಳೆಂದೂ ಕರೆಯುತ್ತಾರೆ. ಉದಾಹರಣೆಗೆ :

ಓದುವ ಹುಡುಗರು ಓದು+ಉವ=ಓದುವ

ಮಾಡಿದ ಕೆಲಸ ಮಾಡು+ದ=ಮಾಡಿದ

ಮರೆಯದ ನೋಟ ಮರೆ+ಅದ=ಮರೆಯದ

ಇಲ್ಲಿ ಓದುವ, ಮಾಡಿದ, ಮರೆಯದ – ಎಂಬ ಮೂರು ಪದಗಳಿವೆ. 'ಓದು' ಧಾತುವಿನ ಮೇಲೆ 'ಉವ' ಎಂಬ ಪ್ರತ್ಯಯವು ಸೇರಿ ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಅರ್ಥವನ್ನು ಸೂಚಿಸುತ್ತದೆ. 'ಮಾಡು' ಎಂಬ ಧಾತುವಿನ ಮೇಲೆ 'ದ' ಎಂಬ ಪ್ರತ್ಯಯವು ಸೇರಿ ಭೂತ ಕಾಲದ ಅರ್ಥವನ್ನು ಸೂಚಿಸುತ್ತದೆ. 'ಮರೆ' ಎಂಬ ಧಾತುವಿನ ಮೇಲೆ 'ಅದ' ಪ್ರತ್ಯಯವು ಸೇರಿ ನಿಷೇಧಾರ್ತವನ್ನು ಸೂಚಿಸುತ್ತದೆ. ಇವು ಧಾತುಗಳ ಮೇಲೆ ಕೃತ್‌ಪ್ರತ್ಯಯಗಳು ಸೇರಿ ಆಗಿರುವ ಶಬ್ದಗಳು. ಇವುಗಳಿಗೆ ಕೃದಂತಗಳೆಂದು ಹೆಸರು. ಕೃದಂತಗಳೆಂದರೆ ಕೃತ್ ಪ್ರತ್ಯಯಗಳು ಕಡೆಯಲ್ಲಿರುವ ಶಬ್ದಗಳು ಎಂದು ಅರ್ಥ. ಕೃದಂತಗಳಲ್ಲಿ ಕೃದಂತ ನಾಮ, ಕೃದಂತ ಭಾವನಾಮ, ಕೃದಂತಾವ್ಯಯ ಎಂದು ಮೂರು ವಿಧಗಳಿವೆ.

ಕೃದಂತ ನಾಮ

ಕೃದಂತ ಶಬ್ದಗಳ ಮೇಲೆ ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳ ಏಕವಚನಗಳಲ್ಲಿ, ಕ್ರಮವಾಗಿ ಅವನು ಮತ್ತು ಅವಳು; ಇವುಗಳ ಬಹುವಚನಗಳಲ್ಲಿ ಅವರು; ನಪುಂಸಕ ಲಿಂಗ ಏಕವಚನದಲ್ಲಿ ಉದು, ಬಹುವಚನದಲ್ಲಿ ಉವು ಎಂಬ ಪ್ರತ್ಯಯಗಳು ಸೇರಿ ಕೃದಂತ ನಾಮಗಳಾಗುತ್ತವೆ. 'ಉದು' ಮತ್ತು 'ಉವು' ಎಂಬ ಪ್ರತ್ಯಯಗಳಿಗೆ ಬದಲಾಗಿ 'ಅದು' ಮತ್ತು 'ಅವು' ಎಂಬ ಪ್ರತ್ಯಯಗಳು ರೂಢಿಯಲ್ಲಿವೆ. ಉದಾಹರಣೆಗೆ ಮಾಡುವುದು, ನೋಡುವುದು ಇತ್ಯಾದಿ. 'ಅದು' ಎನ್ನುವುದು ಕೆಲವು ಕಡೆ 'ಅದ್ದು' ಅಥವಾ 'ದ್ದು' ಎಂದೂ ಆಗುವುದುಂಟು. ಕಂಡದ್ದು, ನೋಡಿದ್ದು ಇತ್ಯಾದಿ.

ಓದುವವನು, ಓದುವವಳು, ಓದುವವರು, ಓದುವುದು, ಓದುವುವು – ಇವು ವರ್ತಮಾನ, ಭವಿಷ್ಯತ್ ಕೃದಂತ ನಾಮಗಳು.

ಮಾಡಿದವನು, ಮಾಡಿದವಳು, ಮಾಡಿದವರು, ಮಾಡಿದುದು, ಮಾಡಿದುವು – ಇವು ಭೂತ ಕೃದಂತ ನಾಮಗಳು.

ನೋಡದವನು, ನೋಡದವಳು, ನೋಡದವರು, ನೋಡದುದು, ನೋಡದುವು – ಇವು ನಿಷೇಧ ಕೃದಂತ ನಾಮಗಳು.

12th_Kannada_Reader_3-5.indd 88 22-05-2019 14:31:17

ಕೃದಂತ ನಾಮಪ್ರಕೃತಿಗಳ ಎಲ್ಲಾ ವಿಭಕ್ತಿ ಪ್ರತ್ಯಯಗಳೂ ಸೇರುತ್ತವೆ. ಓದುವವನು, ಓದುವವನನ್ನು, ಓದುವವನಿಂದ, ಓದುವವನಿಗೆ, ಓದುವವನ ದೆಸೆಯಿಂದ, ಓದುವವನ, ಓದುವವನಲ್ಲಿ – ಇದೇ ರೀತಿ ಉಳಿದ ರೂಪಗಳಲ್ಲೂ ತಿಳಿದುಕೊಳ್ಳಬಹುದು.

ಕೃದಂತ ಭಾವನಾಮ

ವಸ್ತುಗಳ ಸ್ವಭಾವ ಸ್ಥಿತಿಗಳನ್ನಾಗಲೀ, ಕ್ರಿಯೆಯು ನಡೆಯುವುದರಿಂದ ಉಂಟಾಗುವ ಸ್ಥಿತಿಯನ್ನಾಗಲೀ ತಿಳಿಸುವ ವಾಚಕಗಳಿಗೆ ಭಾವನಾಮಗಳೆಂದು ಹೆಸರು. ಧಾತುಗಳಿಂದ ಉಂಟಾಗುವ ಭಾವನಾಮಗಳಿಗೆ ಕೃದಂತ ಭಾವನಾಮಗಳೆಂದು ಹೆಸರು.

ಭಾವಾರ್ಥದಲ್ಲಿ ಸಾಮಾನ್ಯವಾಗಿ ಎಲ್ಲಾ ಧಾತುಗಳ ಮೇಲೆ 'ವುದು' ಪ್ರತ್ಯಯ ಸೇರುತ್ತದೆ. ಕೆಲವು ಧಾತು ರೂಪದಲ್ಲೇ ಇದ್ದು, ಕೆಲವು ಧಾತುಗಳ ಆದಿ ಸ್ವರಕ್ಕೆ ದೀರ್ಘ ಬಂದು ಭಾವನಾಮಗಳಾಗುವುವು. ಉದಾಹರಣೆಗೆ :

'ಉದು' ಪ್ರತ್ಯಯಾಂತಕ್ಕೆ – ಮಾಡುವುದು, ಹೇಳುವುದು ಬರುವುದು.

ಧಾತು ಸ್ವರೂಪಕ್ಕೆ – ಬದುಕು, ತಪ್ಪು.

ದೀರ್ಘಕ್ಕೆ – ಕೆಡು–ಕೇಡು

ಪಡು–ಪಾಡು

ಬೇರೆಬೇರೆ ಧಾತುಗಳಿಗೆ ಭಾವಾರ್ಥದಲ್ಲಿ ಬೇರೆಬೇರೆ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳಾಗುತ್ತವೆ. ಓಡುವುದರ ಭಾವ 'ಓಟ', ಅಂಜುವುದರ ಭಾವ 'ಅಂಜಿಕೆ'.

ಉದಾಹರಣೆಗೆ :

ಇಕೆ – ನಂಬಿಕೆ, ನಾಚಿಕೆ, ಹೆದರಿಕೆ, ಅಂಜಿಕೆ

ಇಗೆ– ಉಡಿಗೆ, ಅಡಿಗೆ, ಹಾಸಿಗೆ.

ವಳಿಕೆ– ತಿಳುವಳಿಕೆ, ನಡವಳಿಕೆ.

ವಣಿಗೆ–ಮೆರವಣಿಗೆ, ಬರವಣಿಗೆ.

ಅಕೆ– ಮೊಳಕೆ, ಬೆರಕೆ.

ಅವು–ಮರೆವು, ಒಲವು, ಗೆಲವು.

ವು–ಸುಳಿವು, ಅರಿವು, ಮೇವು

ತ–ನೆಗೆತ, ಕುಣಿತ, ತಿವಿತ.

ಇತ–ಒಪ್ಪಿತ, ತಪ್ಪಿತ.

ವಳಿ–ನಡೆವಳಿ, ಹಿಡುವಳಿ, ಕೊಡುವಳಿ.

ಟ– ಆಟ, ಓಟ, ಮಾಟ, ನೋಟ, ಊಟ.

ಅಣೆ–ಒಕ್ಕಣೆ, ಹಗರಣೆ.

ಗೆ–ನಂಬುಗೆ, ಮೆಚ್ಚುಗೆ.

ಅಪು–ಹೊಳಪು, ನೆನಪು.

ಅಲು–ಮುಗ್ಗಲು, ಒಣಗಲು

ಎ–ನಗೆ, ಹೊಗೆ, ಧಗೆ

ಕೃದಂತಾವ್ಯಯ

ನಾಮಪದ, ಕ್ರಿಯಾಪದಗಳಂತೆ ರೂಪಭೇದಗಳನ್ನು ಹೊಂದದೇ ಇರುವ ಶಬ್ದಗಳಿಗೆ ಅವ್ಯಯಗಳೆಂದು

12th_Kannada_Reader_3-5.indd 89 22-05-2019 14:31:17

ಹೆಸರು. ಧಾತುಗಳ ಮೇಲೆ ದು, ದರೆ, ಉತ್ತ, ಅಲು, ಅದೆ ಮುಂತಾದ ಕೃತ್‌ಪ್ರತ್ಯಯಗಳು ಸೇರಿ ಆಗುವ ಅವ್ಯಯಗಳಿಗೆ ಕೃದಂತಾವ್ಯಯಗಳೆಂದು ಹೆಸರು. ಅವು ಅಪೂರ್ಣ ಕ್ರಿಯೆಗಳಾಗಿದ್ದು ಪೂರ್ಣ ಕ್ರಿಯೆಗೆ ವಿಶೇಷಣಗಳಾಗುವುವು. ಇವುಗಳಲ್ಲಿ ಕೆಲವು ಏಕ ಕರ್ತೃಕಗಳು; ಕೆಲವು ಭಿನ್ನ ಕರ್ತೃಕಗಳು.

ಏಕ ಕರ್ತೃಕ

ಕೃದಂತಾವ್ಯಯಗಳಲ್ಲಿ ಒಂದೇ ಪ್ರಧಾನ ಕರ್ತೃವಿಗೆ ಅನ್ವಯಿಸತಕ್ಕದ್ದು ಏಕಕರ್ತೃಕ ಅಥವಾ ಸಮಾನ ಕರ್ತೃಕವೆನ್ನಿಸುವುದು.

ಉದಾಹರಣೆಗೆ :

ಅವನು ಬಂದು ಹೇಳಿ ಹೋದನು.

ಅವನು ಬಂದು ಹೇಳದೇ ಹೋದನು

ಅವನು ಬಂದು ಹೇಳಲು ಹೋದನು.

ಇಲ್ಲಿ ಬರು, ಹೇಳು, ಹೋಗು ಎಂಬ ಕ್ರಿಯೆಗಳಿಗೆ ಅವನು ಎಂಬ ಒಬ್ಬನೇ ಕರ್ತೃ ಇರುವುದರಿಂದ ಇವು ಏಕ ಕರ್ತೃಕಗಳು.

ಭಿನ್ನ ಕರ್ತೃಕ

ಒಂದು ಕರ್ತೃವಿಗೆ ಅನ್ವಯಿಸದೆ ಬೇರೆ ಬೇರೆ ಕರ್ತೃವಿಗೆ ಅನ್ವಯಿಸತಕ್ಕವು ಭಿನ್ನ ಕರ್ತೃಕಗಳೆನಿಸುವುವು.

ಉದಾಹರಣೆಗೆ :

ಉಪಾಧ್ಯಾಯರು ಬೋಧಿಸಲು ವಿದ್ಯಾರ್ಥಿಗಳು ಕಲಿತರು.

ಮಳೆ ಬಂದರೆ ಬೆಳೆಯಾಗುವುದು

ಮೊದಲನೆಯ ವಾಕ್ಯದಲ್ಲಿ ಬೋಧಿಸುವ ಎಂಬ ಕ್ರಿಯೆಗೆ ಉಪಾಧ್ಯಾಯರು ಎಂಬುದು ಕರ್ತೃ; ಕಲಿ ಎಂಬ ಕ್ರಿಯೆಗೆ ವಿದ್ಯಾರ್ಥಿಗಳು ಎಂಬುದು ಕರ್ತೃ.

ಎರಡನೆಯ ವಾಕ್ಯದಲ್ಲಿ ಬರು ಎಂಬ ಕ್ರಿಯೆಗೆ ಮಳೆ ಎಂಬುದು ಕರ್ತೃ. ಆಗು ಎಂಬ ಕ್ರಿಯೆಗೆ ಬೆಳೆ ಎಂಬುದು ಕರ್ತೃ. ಹೀಗೆ ಬೇರೆ ಬೇರೆ ಕರ್ತೃಗಳಿರುವುದರಿಂದ ಇವು ಭಿನ್ನ ಕರ್ತೃಕಗಳೆನ್ನಿಸುವುವು.

ತದ್ಧಿತಾಂತಗಳು

ನಾಮಪ್ರಕೃತಿಗಳ ಮೇಲೆ ಬೇರೆ ಬೇರೆ ಅರ್ಥದಲ್ಲಿ ಬೇರೆ ಬೇರೆ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ನಾಮಗಳಾಗುತ್ತವೆ. ವ್ಯಕ್ತಿ ಅಥವಾ ವಸ್ತುವಿನ ಗುಣ ಶೀಲ ಸ್ವಭಾವ ವೃತ್ತಿ ರಚನೆ ಮುಂತಾದವುಗಳನ್ನು ಆದರಿಸಿ ಕೆಲವು ನಾಮರೂಪಗಳು ಸಿದ್ಧಿಸುತ್ತವೆ. ಇವನ್ನು ತದ್ಧಿತಾಂತ ನಾಮಗಳೆಂದು ಕರೆಯುತ್ತಾರೆ. ತದ್ಧಿತಾಂತಗಳಲ್ಲಿ ತದ್ಧಿತಾಂತ ನಾಮ, ತದ್ಧಿತಾಂತ ಭಾವನಾಮ ಮತ್ತು ತದ್ಧಿತಾಂತಾವ್ಯಯ ಎಂದು ಮೂರು ವಿಧಗಳಿವೆ.

12th_Kannada_Reader_3-5.indd 90 22-05-2019 14:31:17

ಉದಾಹರಣೆಗೆ :

ತದ್ಧಿತಾಂತ ನಾಮ	ತದ್ಧಿತಾಂತ ಭಾವನಾಮ	ತದ್ಧಿತಾಂತಾವ್ಯಯ
ಮೋಸಗಾರ	ಸಿರಿತನ	ರಾಮನ ಹಾಗೆ
ಮಾಲೆಕಾರ	ಬಡತನ	ಮನೆಯತನಕ
ನೇಕಾರ	ಬಂಜೆತನ	ದೇಶಕ್ಕಾಗಿ

ಅವ್ಯಯ

ನಾಮಪದಗಳು ಲಿಂಗ, ವಚನ, ವಿಭಕ್ತಿಗಳಲ್ಲಿಯೂ ಕ್ರಿಯಾಪದಗಳು ಲಿಂಗ, ವಚನ, ಕಾಲ, ಅರ್ಥಗಳಲ್ಲಿಯೂ ಬೇರೆಬೇರೆ ರೂಪ ಬದಲಾವಣೆ ಹೊಂದುತ್ತವೆ. ನಾಮಪದ, ಕ್ರಿಯಾಪದಗಳಂತೆ ಬೇರೆ ಬೇರೆ ರೂಪ ಬದಲಾವಣೆಗಳನ್ನು ಹೊಂದದೆ ಏಕರೂಪವಾಗಿರುವ ಶಬ್ದಗಳಿಗೆ ಅವ್ಯಯಗಳೆಂದು ಹೆಸರು(ವ್ಯಯ ಎಂದರೆ ಶಬ್ದ ರೂಪಕ್ಕೆ ಬದಲಾವಣೆ ಅಥವಾ ಲೋಪವುಂಟಾಗುವುದು; ಅ–ಎಂದರೆ ಅದಿಲ್ಲದಿರುವುದು ಎಂದರ್ಥ). ಅವ್ಯಯಗಳಲ್ಲಿ ಕ್ರಿಯಾರ್ಥಕಾವ್ಯಯ, ಕ್ರಿಯಾ ವಿಶೇಷಣಾವ್ಯಯ, ಸಂಬಂಧ ಸೂಚಕಾವ್ಯಯ, ಭಾವ ಸೂಚಕಾವ್ಯಯ ಎಂಬ ಮುಖ್ಯ ಭೇದಗಳುಂಟು.

1. ಕ್ರಿಯಾರ್ಥಕಾವ್ಯಯ

ಇದರಲ್ಲಿ ಸಂಪೂರ್ಣ ಕ್ರಿಯಾರ್ಥಕಾವ್ಯಯ, ಅಸಂಪೂರ್ಣ ಕ್ರಿಯಾರ್ಥಕಾವ್ಯಯ ಎಂದು ಎರಡು ವಿಧಗಳಿವೆ.

ಸಂಪೂರ್ಣ ಕ್ರಿಯಾರ್ಥಕಾವ್ಯಯಕ್ಕೆ

ಉದಾಹರಣೆ : ಉಂಟು, ಇಲ್ಲ, ಬೇಕು, ಬೇಡ, ಸಾಕು, ಹೌದು ಇತ್ಯಾದಿ.

ಅಸಂಪೂರ್ಣ ಕ್ರಿಯಾರ್ಥಕಾವ್ಯಯಕ್ಕೆ

ಉದಾಹರಣೆ : ಹೇಳಿ, ನೋಡುತ್ತಾ, ಮಾಡದೆ, ಕೇಳಿದರೆ, ಓದಲಿಕ್ಕೆ ಇತ್ಯಾದಿ.

ಈ ಅವ್ಯಯಗಳು ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ತಿಳಿಸದೆ ವಾಕ್ಯದಲ್ಲಿ ಮತ್ತೊಂದು ಪೂರ್ಣ ಕ್ರಿಯಾಪದದ ಸಹಾಯವನ್ನು ಅಪೇಕ್ಷಿಸುತ್ತವೆ.

2. ಕ್ರಿಯಾವಿಶೇಷಣಾವ್ಯಯ

ವಾಕ್ಯದಲ್ಲಿ ಕ್ರಿಯಾಪದದ ಕಾಲ, ಸ್ಥಾನ, ರೀತಿ, ಅನುಕರಣೆ ಮುಂತಾದುವನ್ನು ತಿಳಿಸುವ ಅವ್ಯಯಗಳಿಗೆ ಕ್ರಿಯಾ ವಿಶೇಷಣಾವ್ಯಯಗಳೆಂದು ಹೆಸರು.

ಉದಾಹರಣೆಗೆ :

ಕಾಲ – ಕೂಡಲೆ, ಬಳಿಕ, ತರುವಾಯ, ಬೇಗನೇ.

ಸ್ಥಾನ – ಅಲ್ಲಿ, ಇಲ್ಲಿ, ಎಲ್ಲಿ, ಸುತ್ತಲೂ.

ರೀತಿ – ಹಾಗೆ, ಹೀಗೆ, ಅಂತೆ, ಇಂತು.

ಅನುಕರಣ – ಚಟಚಟನೆ, ಥಟ್ಟನೆ, ಪಟಪಟನೆ, ಸರ್ರನೆ

12th_Kannada_Reader_3-5.indd 91 22-05-2019 14:31:17

3. ಸಂಬಂಧ ಸೂಚಕಾವ್ಯಯ

ಪದಗಳನ್ನಾಗಲೀ, ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಕೂಡಿಸಿ ಅವುಗಳ ಸಂಬಂಧವನ್ನು ಸೂಚಿಸುವ ಅವ್ಯಯಗಳಿಗೆ ಸಂಬಂಧ ಸೂಚಕಾವ್ಯಯಗಳೆಂದು ಹೆಸರು.

ಉದಾಹರಣೆಗೆ :

ಊ, ಮತ್ತು, ಆದರೆ, ಆದುದರಿಂದ, ಹೊರತು, ಅಥವಾ, ಇತ್ಯಾದಿ.

4. ಭಾವಸೂಚಕಾವ್ಯಯ

ಸಂತೋಷ, ದುಃಖ, ಭಯ, ಆಶ್ಚರ್ಯ, ಪ್ರಶ್ನೆ, ತಿರಸ್ಕಾರ, ಆಕ್ಷೇಪ, ಕೋಪ ಮೊದಲಾದ ಮನಸ್ಸಿನ ಭಾವವನ್ನು ಸೂಚಿಸುವ ಅವ್ಯಯಗಳಿಗೆ ಭಾವಸೂಚಕಾವ್ಯಯಗಳೆಂದು ಹೆಸರು. ಇವುಗಳನ್ನು ನಿಪಾತಾವ್ಯಯಗಳೆಂದೂ ಕರೆಯುತ್ತಾರೆ.

ಉದಾಹರಣೆಗೆ :

ಸಂತೋಷ–ಛೇಷ್! ನೀನು ಈ ವಿಜಯಕ್ಕೆ ತಕ್ಕವನೇ ಸರಿ!

ದುಃಖ – ಅಯ್ಯೋ! ಹರಿಶ್ಚಂದ್ರನಿಗೂ ಅಂತಹ ಕಷ್ಟ ಬಂದಿದೆ !
ಭಯ – ಅಬ್ಬಾ ! ಎಷ್ಟು ದೊಡ್ಡ ಹುಲಿ!
ಆಶ್ಚರ್ಯ – ಆಹಾ ! ತಾಜ್ ಮಹಲ್ ಎಷ್ಟು ಸೊಗಸಾಗಿದೆ!
ಪ್ರಶ್ನೆ – ಅವನು ಆಡಿದ ಮಾತಿಗೆ ತಪ್ಪಿದನೆ ?
ತಿರಸ್ಕಾರ – ಛೇ! ಇದೇನೇ ನಿನ್ನ ಯೋಗ್ಯತೆ !
ಆಕ್ಷೇಪ – ಓಹೋ! ನೀನು ಅವನ ಜೊತೆ ಸೇರಿದೆಯಾ ?
ಕೋಪ – ಫಡಫಡ! ಈ ಬಾಣದ ರುಚಿ ನೋಡು !
ಆಃ, ಅಹಹ, ಓಹೋಹೋ, ಎಲೆಲಾ, ಅಷ್ಟೇ, ಅಲ್ಲವೇ, ಅಕ್ಕಟಾ, ಏ, ಓ, ಅಯ್ಯೋ – ಮುಂತಾದವು ಭಾವಸೂಚಕಗಳಾಗುತ್ತವೆ.

ಇಂಗಿತಜ್ಞಾನವಿಲ್ಲದ ಬಂಧುಪರಿವಾರ।
ಹಂಗಿಸುವ ಛಲವುಳ್ಳ ಸತಿಪುತ್ರಸಖರು ॥
ಬಂಗಾರದಸಿ ಚುಚ್ಚಿ ಸಿಂಗರದ ಬೊಟ್ಟಿನುವ।
ಮಂಗಬುದ್ಧಿಯ ಜನರು-ಮಂಕುತಿಮ್ಮ ॥ ೧೭೬

(ಜ್ಞಾನ+ಇಲ್ಲದ)(ಬಂಗಾರದ+ಅಸಿ)(ಬೊಟ್ಟು+ಎನ್ನುವ)

ಇನ್ನೊಬ್ಬರ ಮನಸ್ಸಿನಲ್ಲಿರುವುದನ್ನು ಮುಖಭಾವದಿಂದ ತಿಳಿಯಲಾರದ
(ಇಂಗಿತಜ್ಞಾನವಿಲ್ಲದ)ಬಂಧುಗಳು ಮಾತು ಮಾತಿಗೂ ನಿನ್ನಕಾರ್ಯಗಳನ್ನು
ಹೀಯಾಳಿಸುವ ಹೆಂಡತಿ ಮಕ್ಕಳು ಮತ್ತು ಸ್ನೇಹಿತರು ಬಂಗಾರದ ಕತ್ತಿ (ಅಸಿ)
ಇಂದಹಣೆಯ ಮೇಲೆ ಚುಚ್ಚಿ ಅದನ್ನು ಒಂದು ಸಿಂಗಾರದ ಚಿಹ್ನೆಎನ್ನುವ ಕಪಿ ಬುದ್ಧಿಯ
ಜನರು.

12th_Kannada_Reader_3-5.indd 92 22-05-2019 14:31:17

ಕಾವ್ಯ ಕಣಜ

ಘಟಕ ಐದು

5. ಸಂಸ್ಕೃತಿ



ಕಾವ್ಯ ಕಣಜ	: ನೆಲೆಸುಗೆ ನಿನ್ನ ವಕ್ಷದೊಳ್	–	**ಪಂಪ**
ಗದ್ಯ ವಿಹಾರ	: ಉಪಚಾರ	–	**ನಾ. ಕಸ್ತೂರಿ.**
ಉಪಪತ್ಯ	: ಶಬರಿಗಾದನು ಅತಿಥಿ ದಾಶರಥಿ	–	**ಕುವೆಂಪು**
ವ್ಯಾಕರಣ	: ದ್ವಿರುಕ್ತಿ, ಅನ್ಯದೇಶ್ಯ, ತತ್ಸಮ–ತದ್ಭವ, ಜೋಡಿ ಪದಗಳು, ಅನುಕರಣ ವಾಚಕಗಳು, ನುಡಿಗಟ್ಟು, ಗಾದೆಗಳು.		

12th_Kannada_Reader_3-5.indd 93 22-05-2019 14:31:17

ಕಾವ್ಯ ಕಣಜ

ಘಟಕ ಐದು

ಸಿಸು ಮಕ್ಕಳಿಗೊಲಿದ ಮಾದೇವ

–ಜಾನಪದ ಹಾಡು

ಪ್ರವೇಶ

ಭಕ್ತಿ ಮತ್ತು ಪ್ರೀತಿಗೆ ದೇವರೂ ಕೂಡ ಒಲಿಯುತ್ತಾನೆ ಎಂಬ ವಿಷಯ ಈ ಜಾನಪದ ಹಾಡಿನಲ್ಲಿ ಮೂಡಿ ಬಂದಿದೆ. ದೇವರು ಸದಾ ಕಾಲವೂ ತನ್ನ ಭಕ್ತರನ್ನು ಪರೀಕ್ಷಿಸುತ್ತಾನೆ. ಎಂತಹ ಸಂಕಟಗಳು ಎದುರಾದರೂ ಅದನ್ನು ಧೈರ್ಯದಿಂದ ಎದುರಿಸಿ ಭಕ್ತಿಯನ್ನು ತೋರುವವರಿಗೆ ಖಂಡಿತವಾಗಿ ದೇವರು ಒಲಿಯುತ್ತಾನೆ ಎಂಬ ಜನಪದ ನಂಬಿಕೆ ಈ ಹಾಡಿನಲ್ಲಿ ಮಡುಗಟ್ಟಿದೆ.



12th_Kannada_Reader_3-5.indd 94 22-05-2019 14:31:17

ಲಿಂಗಾ ಲಿಂಗ ಎನ್ನುವರು
ನಿಮ್ಮ ಲಿಂಗವ್ಯಾರು ಬಲ್ಲರು ।ಸೊಲ್ಲು।

ಮೂಡಾಲ ಮಲೆಯಲ್ಲಿ ಮಾದೇವ
ಏಗದಲ್ಲಿ ತಾವೊರಗವರೆ।

ಏಗದಲ್ಲಿ ತಾವೊರಗವರೆ
ಏನೆಂದು ಯೋಚನೆ ಮಾಡವರೆ।

ನಿಜಾ ನೋಡಿ ಕಣ್ಣು ಕೊಟ್ಟಂತ
ಬ್ಯಾಡಾರ ಕನ್ನಯ್ಯ ಪಡುದಿವ್ನಿ ।

ಸತ್ಯವಂತೆ ಸಂಕಮ್ನ ಮಕ್ಳ
ನಾ ದತ್ತುವಾಗಿ ಪಡುದಿವ್ನಿ ।

ಎಷ್ಟೊತ್ತು ಯಾವ ಗಳುಗೇಲು
ಈ ಮಕ್ಳು ಬುಟ್ಟು ಹೋಗರಲ್ಲ।

ಕಡ್ಡಿ ಹಳ್ಳುಕ್ಕೆ ಸಿಸು ಮಕ್ಕ
ನನ್ಗೆ ಪುಷ್ಪ ತರೋದ್ಕೆ ಹೋಗವ್ರೆ।

ಇವುರ್ ಮೂರು ಜನರ ಸತ್ಯಾವ
ನಾ ತಿಳಿಬೇಕಂತಲೆ ಮಾದೇವ।

ಮಾಯಾದ ಮಳೆಯ ಕರ್ದು ನಾನು
ಈ ಮಕ್ಕಳ ಸತ್ಯ ನೋಡಬೇಕು।

ದೇವೇನ್ರ ಪತಿಯ ಬಳುಗೆ ನನ್ನ
ಮುದ್ದು ಮಾದೇವ ಬಂದವ್ರೆ ।

ಹಳ್ಳ ಕೊಳ್ಳ ತುಂಬಿ ತುಳುಕೂವ
ಮಾಯಾದ ಮಳೆಯ ಕಳುಗಪ್ಪ ।

ವಾಸುದೇವನ ಕೂಗಿದರು
ನನ್ನ ಮಾಯಕಾರ ಮಾದೇವ ।

ಜಗತ್ಯವೆಲ್ಲ ಬುಗುರಿ ತಿರಿಯೊಂಗೆ
ಸುಂಟರಗಾಳಿಯ ಕಳುಗಪ್ಪ ।

12th_Kannada_Reader_3-5.indd 95 22-05-2019 14:31:17

ನಾಕು ಲೋಕನು ಎಕುವಾಗಿ
ನೀ ಬೀಸಬೇಕೆಂದ ಮಾದೇವ ।

ಈ ಕೆಂಡಗಣ್ಣಯ್ನ ಮಾತೀಗೆ
ನೀವುತ್ರ ಹೇಳಿರೋ ಏನ್ರಪ್ಪಾ ।

ಒಪ್ಪುಕೊಂಡೊ ಮಾದೇವ
ನೀವೊಪ್ಪದಂಗೆ ಮಾಡುತೀವಿ ।

ಗುಡುಗಾಜಮ್ಮನ ಕರುದವರೆ
ನೀ ಗುಡುಗಾಬೇಕು ಅಂದವರೆ ।

ನೀ ಮಗ ಬೊಮ್ಮರಾಯನ ಕಟುಕೊಂಡು
ನೀ ಮಾಯಾದ ಸಿಳ್ಳ ಕೊಡಬೇಕು ।

ನನ್ನ ಮಾದೇವ್ನ ಮಾತ ಕೇಳವ್ರೆ
ಕಾರೆಂಬ ಕತ್ತಲ್ಯ ಮಾಡವ್ರೆ ।

ಕಾರೆಂಬೋ ಕತ್ತಲ್ಯ ಮಾಡವರೆ
ಜೋರೆಂಬ ಮಳೆಯ ಕರುದವರೆ ।

ಒನೊನ್ ಚಂಡುನ ಗಾತ್ರ ಹನಿಗಳು
ಅಟ್ಟ ಬೆಟ್ಟಾಕೆ ಸುರಿಯಾವು ।

ಗಂಗೆ ಸುರಿಯುವ ರವುಸೀಗೆ
ಭೂಮಿ ಆಕಾಶ ಒಂದಾದೊ ।

ಕಾಡು ಪ್ರಾಣಿಗಳು ಮಾದೇವ
ಕೊರುಕ್ಲಲ್ಲೆಲ್ಲ ತೇಲೀವೊ।

ಆನೆ ಆನೆ ಮದ್ದಾನೆ ಹಿಂಡ
ಹೊತ್ಕೊಂಡೋಯ್ತಾಳೆ ಗಂಗಮ್ಮ ।

ಗುಡುಗು ಸಿಳ್ಳೀನ ರವುಸೀಗೆ
ನಡುಗೋದೊ ನಾಕು ಲೋಕಗಳು।

ಕಡ್ಡಿ ಹಳ್ದಲ್ಲಿ ಕನ್ನಯ್ಯ
ಕತ್ತೆತ್ತಿ ಜಗವ ನೋಡವ್ನೆ ।

12th_Kannada_Reader_3-5.indd 96 22-05-2019 14:31:17

ಎಂದೂ ಬಾರದ ಮಾರಿ ಮಳೆ
ಇಂದು ಬಂದ ಕಾರಣ ಕಾಣ್ನಿಲ್ಲ ।

ಈ ಕೆಟ್ಟ ಗಂಗೆ ಬುಡಳಲ್ಲ
ನಮ್ಮೊತ್ತುಕೊಂಡು ಹೋಗುವಳು ।

ಕಾರಯ್ಯ, ಬಿಲ್ಲಯ್ಯ, ಬ್ಯಾಡಾರ ಕನ್ನಯ್ಯ
ದಿಕ್ಕೆಟ್ಟು ದುಕ್ಕ ಪಡುತಾರೆ ।

ಬಂಧುಬಳಗ ಇಲ್ದೋರ್ಗೆ ಸ್ವಾಮಿ
ನೀನಿಂತ ಬಂಧಾನ ಕೊಟ್ಯಪ್ಪ ।

ಹುಚ್ಚು ಗಂಗಮ್ಮ ಬಂದು ನಮ್ಮ
ಅಪ್ಪಾನ ಗುಡಿಯು ಮುಚ್ಹೋಯ್ತು ।

ಇಂತೆ ದೊಡ್ಡ ಅಪ್ಪಾನೆ ಮುಳುಗೋದ ಮೇಲೆ
ನಾವು ಬಾಳಬೋದೇನೊ ಮಾದೇವ ।

ಬಾಯಿ ಬಾಯಿ ಬಡ್ಕೋತಾನೆ
ಸತ್ಯವುಳ್ಳ ಬ್ಯಾಡ್ರು ಕನ್ನಯ್ಯ ।

ಬ್ಯಾಡುಗಂಪನ್ಕೆ ಒಲುದೋನೆ
ನಾ ಬೇಡುಕೊಳ್ತೀನಿ ಮಾದೇವ ।

ನೀ ಬಂದು ಮೊಕವ ತೋರದಿದ್ದರೆ
ನಾನಿಂದು ಪ್ರಾಣ ಬುಡುತೀನಿ ।

ನೀರು ತೆರೆಯ ಒಡುದಾನು
ನನ್ನಪ್ಪ ತೇಲಿ ಬೀಳುತಾನೆ ।

ನನ್ನಪ್ಪ ತೇಲಿ ಬಿದ್ದಾನಲ್ಲೊ
ನನ್ನ ಮಾಯಕಾರ ಮಾದೇವ ।

ನೀರೀನ ಸುಳಿಗೆ ಮಾದೇವ ಸಿಕ್ಕಿ
ಗರಗರ ಗರನೆ ತಿರುಗವನೆ ।

ಸುತ್ತಮುತ್ತ ನೋಡವ್ನೆ
ಸತ್ವಂತ ಬ್ಯಾಡಾರ ಕನ್ನಯ್ಯ ।

12th_Kannada_Reader_3-5.indd 97 22-05-2019 14:31:18

ನನ್ನಪ್ಪ ಎಳುಕೊಂಡಂಗೆ ಈ ಗಂಗೆ
ನನ್ನೂ ಎಳುಕೊಂಡು ಬುಡುತಾಳೆ ।

ಬಲಿಯ ಕಲ್ಲ ತಬ್ಬವುನೆ
ಬಲವಾಗಿ ಹಿಡ್ಕೊಂಡು ನಿಂತವುನೆ ।

ಕಾರಯ್ಯ ಬಿಲ್ಲಯ್ಯ ನೋಡಿದರು
ಕಣ್ಣಲ್ಲಿ ನೀರ ಕೆಡುಗಿದರು ।

ನಮ್ಮಿಗೆ ಬುಟ್ಟು ಮಾದೇವೊ
ನೀನು ಗಂಗೆ ಒಳುಗೆ ಹೋದಾಯೊ ।

ಗುರುವಿಗೆ ಶಿಷ್ಯಾರೆ ಇಲ್ಲವಲ್ಲೊ
ಶಿಷ್ಯರ್ಗೆ ಗುರುವೆ ಇಲ್ಲುವಲ್ಲೊ ।

ನಾವು ಸತ್ತರೂ ಚಿಂತಿಲ್ಲ ಕಾಣ್ರೊ
ನಮ್ಮಪ್ಪ ಮಾದೇವ್ನ ಹಿಡುಕೊಳ್ರೋ ।

ಈ ಜಗತ್ಯವಾಳುವ ಗುರುದೇವನ
ನಾವೋಗಿ ಈವತ್ತು ಹಿಡಿಯಾನ ।

ಆಲು ಬೆಣ್ಣೆ ಕೊಟ್ಯಲ್ಲ ಗುರುವೆ
ಹೆತ್ತವ್ವನಂಗೆ ಸಲುವೀದೆ ।

ನಮ್ಗೆ ಗೆಡ್ಡೆ ಗೆಣಸು ಕೊಡುನಿಲ್ಲ
ಹಾಲು ತುಪ್ಪ ಕೊಟ್ಯಲ್ಲಪ್ಪ ।

ಇಂತ ಹಾಲು ಬೆಣ್ಣೆ ಕೊಟ್ಟಪ್ಪ
ನಾವೆಂದಿಗು ನಿನ್ನ ಮರಿಯಾವು ।

ಮಕ್ಕಳ ಮಾತ ಕೇಳವುರೆ
ನನ್ನ ಮಕ್ಕಳಿಗೊಲಿದ ಮಾದೇವ ।

ತಬ್ಬಿಕೊಂಡಿಳಿಯೂವ ಮಕ್ಕಳ
ಪ್ರೇಮಾಕೆ ಒಲಿದಾರು ಮಾದೇವ ।

ಇಂಥ ಭಕ್ತಿವಂತ ಮಕ್ಕಳ ಸ್ವಾಮಿ
ತಮ್ಮ ಎಡಬಲದಲ್ಲಿ ತಬ್ಬವರೆ ।

12th_Kannada_Reader_3-5.indd 98 22-05-2019 14:31:18

ನನ್ನ ಸಿಸುಮಕ್ಕಳ ಪ್ರೀತಿಯಿಂದ
ನಾನಾದೆ ಮಕ್ಕಳ ಮಾದೇವ ।

ಮಾಯಾದ ಮಳೆಗೆ ಸನ್ನೆ ಮಾಡಿ
ಮೇಲೋಕುಕ್ಕೆ ಕಳುಗವರೆ ।

ಕಾರಯ್ನ ಕಂಡಾರೆ ಕರುಣ ನನ್ನಪ್ಪಂಗೆ
ಬಿಲ್ಲಯ್ನ ಕಂಡಾರೆ ಬಲು ಪ್ರೇಮ।

ಮಕ್ಕಳನೆತ್ತಿ ಹೆಗಲಲೊತ್ಕಂಡು
ಗುಡಿಗೆ ಬಂದಾರು ಮಾದೇವ ।

ನಂಬಿದೋರ ಮನದಲ್ಲಿ ನನ್ನಪ್ಪ
ತುಂಬಿ ತುಳುಕಾರು ಮಾದೇವ।

ಜಾನಪದ ಕಾವ್ಯ ಪರಿಚಯ

'ಮಲೆಯ ಮಾದೇಶ್ವರ' ಜಾನಪದ ಮಹಾಕಾವ್ಯದಲ್ಲಿ 14 ಕಥಾಭಾಗಗಳಿವೆ. ಒಂದೊಂದು ಕಥಾ ಭಾಗವನ್ನೂ ಒಂದೊಂದು ಸಾಲು ಎಂದು ಕರೆಯುತ್ತಾರೆ. ಒಂದೊಂದು ಸಾಲಿನಲ್ಲಿ ಅನೇಕ ಭಾಗ ಅಥವಾ ಕವಲುಗಳಿದ್ದು ಅವನ್ನು 'ಕವಟ್ಲು' ಎಂದು ಕರೆಯುತ್ತಾರೆ.

ಸಂಕಮ್ಮನ ಮಕ್ಕಳಾದ ಕಾರಯ್ಯ ಬಿಲ್ಲಯ್ಯರನ್ನು ಮತ್ತು ಬ್ಯಾಡರ ಕನ್ನಯ್ಯನನ್ನು ಮಾದೇಶ್ವರ ತನ್ನ ಶಿಶುಮಕ್ಕಳನ್ನಾಗಿ ಮಾಡಿಕೊಳ್ಳುತ್ತಾನೆ. ಅವರನ್ನು ಪರೀಕ್ಷೆಗೆ ಒಡ್ಡಿದ ಸಂದರ್ಭ ಇದಾಗಿದೆ.

ಡಾ. ಪಿ.ಕೆ.ರಾಜಶೇಖರ (1947) ಪ್ರಸಿದ್ಧ ಜಾನಪದ ತಜ್ಞರು. ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪಿರಿಯಾಪಟ್ಟಣದಲ್ಲಿ ಜನಿಸಿದ ಇವರು ಜನಪದ ಮಹಾಕಾವ್ಯಗಳಾದ ಮಲೆಯ ಮಾದೇಶ್ವರ, ಜನಪದ ಮಹಾಭಾರತ, ಜನಪದ ರಾಮಾಯಣ, ಪಿರಿಯಾಪಟ್ಟಣ ಕಾಳಗ, ಬೆಟ್ಟದ ಚಾಮುಂಡಿ ಮುಂತಾದ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಪದಗಳ ಅರ್ಥ

ಮೂಡಲ–ಪೂರ್ವ ದಿಕ್ಕು, ಸೂರ್ಯ ಉದಯಿಸುವ ದಿಕ್ಕು; ಏಗ–ಯೋಗ; ಒರಗು–ಮಲಗು; ಬ್ಯಾಡಾರ–ಬೇಡರ; ಕಡ್ಡಿಹಳ್ಳ–ಒಂದು ಪ್ರದೇಶದ ಹೆಸರು, ಸಿಸು ಮಕ್ಕ–ಶಿಷ್ಯರು; ಗಳುಗೆ–ಗಳಿಗೆ, ಕ್ಷಣ; ದೇವೇನ್ರಪತಿ–ಇಂದ್ರ; ವಾಸುದೇವ–ವಾಯುದೇವ; ಜಗತ್ಯ–ಜಗತ್ತು, ವಿಶ್ವ, ಲೋಕ; ತಿರಿಯೊಂಗೆ–ತಿರುಗುವಂತೆ, ಸುತ್ತುವಂತೆ; ಕಳುಗು–ಕಳುಹು, ಕಳುಹಿಸು; ನಾಕು–ನಾಲ್ಕು; ಕೆಂಡಗಣ್ಣಯ್ಯ–ಕೆಂಡದಂತೆ ಕೆಂಪಾದ ಉರಿಯುವ ಕಣ್ಣುಳ್ಳವನು, ಮಾದೇಶ್ವರ; ನೀವುತ್ರ ಹೇಳಿ–ನೀವು ಉತ್ತರ ಹೇಳಿ; ನೀವೊಪ್ಪುದಂಗೆ–ನೀವು ಒಪ್ಪಿದ ಹಾಗೆ; ಗುಡುಗಾಜಮ್ಮ–ಗುಡುಗಿನ ಅಮ್ಮ; ಕಟುಕೊಂಡು–ಕಟ್ಟಿಕೊಂಡು, ಜೊತೆ ಮಾಡಿಕೊಂಡು, ಒಟ್ಟಿಗೆ; ಸಿಳ್ಳು–ಸಿಡಿಲು; ಕಾರ್ರೆಂಬ ಕತ್ತಲ್ಯ–ತುಂಬಾ ಕಗ್ಗತ್ತಲೆ; ಒನೊನ್–ಒಂದೊಂದೂ, ಪ್ರತಿಯೊಂದೂ; ರವುಸು–ರಭಸ; ಕೊರುಕ್ಲು–ಕೊರುಕುಲು, ಹಳ್ಳ; ಬುಡಳು–ಬಿಡಲಾರಳು; ಇಲ್ದೋರ್ಗೆ–ಇಲ್ಲದವರಿಗೆ;

12th_Kannada_Reader_3-5.indd 99 22-05-2019 14:31:18

ಬಾಳಬೋದೇನೋ–ಬಾಳಬಹುದೇ, ಜೀವದಿಂದಿರಬಹುದೇ; ಬ್ಯಾಡುಗಂಪನ–ಕಂಪಣ ಎಂಬ ಕುಲಕ್ಕೆ ಸೇರಿದ ಬೇಡರು ವಾಸಿಸುತ್ತಿದ್ದ ಪ್ರದೇಶ; ಮೊಕು–ಮೊಗ, ಮುಖ; ಮೇಲೋಕ–ಮೇಲಿನ ಲೋಕ, ಸ್ವರ್ಗ; ಒತ್ಕೊಂಡು–ಹೊತ್ತುಕೊಂಡು.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮಾದೇವ ಎಲ್ಲಿ ಒರಗಿದ್ದಾನೆ ?
2. ಯಾರ ಮಕ್ಕಳನ್ನು ಮಾದೇವ ದತ್ತುವಾಗಿ ಪಡೆದನು?
3. ಶಿಶು ಮಕ್ಕಳು ಹೂ ತರಲು ಎಲ್ಲಿಗೆ ಹೋಗಿದ್ದರು?
4. ಮಾದೇವ ಮಕ್ಕಳ ಸತ್ಯ ನೋಡಲು ಏನು ಮಾಡಬೇಕೆಂದು ಯೋಚಿಸಿದನು ?
5. ಮಳೆಯನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ ?
6. ವಾಯುದೇವನನ್ನು ಎಂತಹ ಸುಂಟರಗಾಳಿ ಕಳುಹಿಸು ಎಂದು ಮಾದೇವ ಕೇಳುತ್ತಾನೆ ?
7. ಕಾರೆಂಬೋ ಕತ್ತಲಲ್ಲಿ ಎಂತಹ ಮಳೆ ಬಂತು?
8. ಗಂಗೆ ಸುರಿಯುವ ರಭಸಕ್ಕೆ ಏನೇನು ಒಂದಾದವು?
9. ಗಂಗಮ್ಮ ಏನನ್ನು ಹೊತ್ತುಕೊಂಡು ಹೋದಳು?
10. ನೀರಿನ ಸುಳಿಗೆ ಸಿಲುಕಿದ ಮಾದೇವ ಹೇಗೆ ತಿರುಗಿದನು?
11. ಮಾದೇವ ಶಿಷ್ಯರ ಯಾವ ಗುಣಕ್ಕೆ ಒಲಿದನು?
12. ನಂಬಿದವರ ಮನದಲ್ಲಿ ಮಾದೇವ ಹೇಗಿರುತ್ತಾನೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಮಾದೇವನ ಶಿಶುಮಕ್ಕಳ ಹೆಸರೇನು?
2. ಸಿಡಿಲು ಗುಡುಗುಗಳನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?
3. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದುಕೊಳ್ಳುತ್ತಾನೆ?
4. ಶಿಶುಮಕ್ಕಳು ಬಾಯಿ ಬಾಯಿ ಏಕೆ ಬಡಿದುಕೊಳ್ಳುತ್ತಾರೆ?
5. ಬಲಿಯ ಕಲ್ಲನ್ನು ಕನ್ನಯ್ಯ ಬಲವಾಗಿ ಹಿಡಿದುಕೊಳ್ಳುವುದು ಏಕೆ?
6. ಶಿಶುಮಕ್ಕಳು ನಾವು ಸತ್ತರೂ ಚಿಂತಿಲ್ಲ ಎನ್ನಲು ಕಾರಣವೇನು?
7. ಮಾದೇವ ತನ್ನ ಶಿಶುಮಕ್ಕಳಿಗೆ ಏನೇನು ನೀಡಿ ಸಲಹಿದನು?
8. ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಮಾದಪ್ಪ ತನ್ನ ಶಿಶುಮಕ್ಕಳನ್ನು ಪರೀಕ್ಷಿಸಲು ಕಾರಣಗಳೇನು ?
2. ಮಾದೇವ ತನ್ನಶಿಶು ಮಕ್ಕಳನ್ನು ಪರೀಕ್ಷಿಸಲು ಯಾರ್ಯಾರ ಸಹಕಾರವನ್ನು, ಹೇಗೆ ಪಡೆದನು?
3. ಮಳೆ ಉಂಟು ಮಾಡಿದ ಪರಿಣಾಮಗಳನ್ನು ವಿವರಿಸಿ.
4. ಮಳೆಯಲ್ಲಿ ಸಿಲುಕಿದ ಮಾದೇವನನ್ನು ಶಿಷ್ಯರು ಹೇಗೆ ರಕ್ಷಿಸಿದರು ?
5. ಮಾದೇವ ಶಿಷ್ಯರನ್ನು ಹೇಗೆ ಸಲುಹಿದನು? ವಿವರಿಸಿ.

ಭಾಷಾಭ್ಯಾಸ

1. ಈ ಪದಗಳಿಗೆ ತತ್ಸಮ ತದ್ಭವ ಬರೆಯಿರಿ

ಸಿಸು, ಬೊಮ್ಮ, ಆಕಾಶ, ಭಕ್ತಿ, ಭೂಮಿ.

2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಮೂಡಲ, ಸತ್ಯ, ಗುರು, ಚಿಂತೆ, ಪ್ರೀತಿ.

3. ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಯೋಚನೆ, ರಭಸ, ಕರುಣೆ, ನಂಬಿಕೆ, ಕಣ್ಣೀರು.

4. ಈ ಪದ್ಯ ಭಾಗದಲ್ಲಿರುವ ಜೋಡು ನುಡಿಗಳನ್ನು ಪಟ್ಟಿ ಮಾಡಿರಿ.

12th_Kannada_Reader_3-5.indd 100 22-05-2019 14:31:18

ಚಟುವಟಿಕೆ

1. **ಗ್ರಾಮ್ಯ–ಗ್ರಾಂಥಿಕ ಪದಗಳು:** ಆಡು ಮಾತಿಗೂ ಬರಹದ ಮಾತಿಗೂ ವ್ಯತ್ಯಾಸವಿರುತ್ತದೆ. ಉದಾಹರಣೆ: ಏಗ–ಯೋಗ ರವುಸು–ರಭಸ. ಬರಹದ ಭಾಷೆಗಿಂತ ಆಡುಮಾತಿಗೆ ಹೆಚ್ಚು ಮಹತ್ವವನ್ನು ಆಧುನಿಕ ಭಾಷಾ ಶಾಸ್ತ್ರಜ್ಞರು ನೀಡುತ್ತಾರೆ. ಈ ಪಠ್ಯದಲ್ಲಿ ಬರುವ ಗ್ರಾಮ್ಯ ಪದಗಳನ್ನು ಪಟ್ಟಿ ಮಾಡಿ ಅವುಗಳ ಬರಹ ರೂಪವನ್ನು ಬರೆಯಿರಿ.
2. 'ಮಂಟೇ ಸ್ವಾಮಿ ಕಾವ್ಯ', 'ಜುಂಜಪ್ಪನ ಕಾವ್ಯ', ಮೈಲಾರ ಲಿಂಗನ ಕಾವ್ಯ' 'ಎಲ್ಲಮ್ಮನ ಕಾವ್ಯ', 'ತುಳು ಪಾಡ್ದನ', 'ಸೋಲಿಗರು ಹಾಡಿದ ಬಿಳಿಗಿರಿ ರಂಗನ ಕಾವ್ಯ' ಮೊದಲಾದ ಜಾನಪದ ಕಾವ್ಯಗಳನ್ನು ಕೇಳಿ ಕಲಿತು ಹಾಡಲು ಪ್ರಯತ್ನಿಸಿ.

ಮಕ್ಕಳು ಬುದ್ಧಿವಂತರೂ, ನೀತಿವಂತರೂ ಆಗಿ ಬೆಳೆಯಬೇಕು. ಹಾಗೆ ಬೆಳೆದ ಮಕ್ಕಳೇ ಒಳ್ಳೆಯ ಪ್ರಜೆಗಳು. ಅಂತಹ ಪ್ರಜೆಗಳಿಂದ ಕೂಡಿರುವ ದೇಶಕ್ಕೆ ಕೀರ್ತಿ ಬರುತ್ತದೆ.

– ಎಂ.ಎಸ್.ಪುಟ್ಟಣ್ಣ.



12th_Kannada_Reader_3-5.indd 101 22-05-2019 14:31:18

ಘಟಕ ಐದು

ಉಪಚಾರ

– ನಾ. ಕಸ್ತೂರಿ



"ಕಾವ್ಯಷು ನಾಟಕಂ ರಮ್ಯಂ" ಎಂಬುದು ಮಹಾಕವಿ ಕಾಳಿದಾಸನ ಅಭಿಮತ ನಾಟಕಗಳು ಸಾಮಾಜಿಕ ಬದುಕಿನ ರಸ–ನೀರಸ ಸನ್ನಿವೇಶಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ವರ್ಣಿಸುವ ಸಾಹಿತ್ಯ ಪ್ರಕಾರವಾಗಿದೆ. ಪ್ರಸ್ತುತ ನಾಟಕದಲ್ಲಿ ಲೇಖಕರು ದಸರೆಯ ರಜೆಯಲ್ಲಿ ಮನೆಗೆ ಬಂದ ಅತಿಥಿಯೊಬ್ಬರ ಸತ್ಕಾರ ಸಮಾರಂಭವನ್ನು ಹಾಸ್ಯಪೂರ್ಣವಾಗಿ ಚಿತ್ರಿಸಿರುವ ಸನ್ನಿವೇಶದತ್ತ ಬೆಳಕು ಬೆಲ್ಲುತ್ತದೆ.



12th_Kannada_Reader_3-5.indd 102 22-05-2019 14:31:18

(ಮೈಸೂರಿನಲ್ಲಿ ಒಂದು ಮಧ್ಯಮ ವರ್ಗದ ಮನೆ. ಮನೆಯ ಯಜಮಾನಿ ಸೀತಮ್ಮ. ತನ್ನ ಮಗಳು ಲಲಿತು ಮೇಲೆ ರೇಗಿದ್ದಾಳೆ. ಲಲಿತು ಅಳುತ್ತಿದ್ದಾಳೆ.)

ಲಲಿತು : (ಅಳುತ್ತಾ) ಉಂಗುರ, ಅಮ್ಮಾ! ಕೆಂಪು ಹರಳಿನ ಉಂಗುರ... ತೆಗೆದುಕೊಡಮ್ಮಾ...

ಸೀತಮ್ಮ : (ರೇಗಿ) ಬಾರಿಸಿ ಬಿಡುತ್ತೇನೆ ನೋಡು, ಬೆನ್ನ ಮೇಲೆ ನಾಲ್ಕು...! ಅವರಿಗೇನು... ಹಿರಿಯರು ಬೇಕಾದಷ್ಟು ಹೊಲಗದ್ದೆ ಬಿಟ್ಟು ಹೋಗಿದ್ದಾರೆ. ಒಂದೊಂದಕ್ಕೂ ಒಂದೊಂದು ಉಂಗುರ ತೆಗೆದರು... ಒಂದೊಂದು ಬೆರಳಿಗೂ ಒಂದೊಂದುಂಗುರ ತಗಲಿಸಿಕೊಳ್ಳುವ ಚೈತನ್ಯ ಅವರಿಗಿದೆ. ನೀನು ಅಂಥ ಶ್ರೀಮಂತ ಮನೆಯಲ್ಲಿ ಹುಟ್ಟುವ ಪುಣ್ಯ ಪಡೆದಿಲ್ಲ. ನಾ ಏನು ಮಾಡಲಿ ಅದಕ್ಕೆ... ನಿಮ್ಮಪ್ಪನ ಕೈ ಸಂಪಾದನೆ ನಮ್ಮ ಹೊಟ್ಟೆಗೇ ಸಾಲದು.

(ಮಗಳ ಕಣ್ಣೀರನ್ನೊರೆಸುತ್ತಾ...)

ಇಲ್ಲಿ ಬಾರೇ, ಇಲ್ಲಿ...! ಅವರೆಲ್ಲ ಊರಿಗೆ ಹೋಗಲಿ. ಈ ಸಾಲ ಎಲ್ಲ ತೀರಲಿ. ನಮಗೆ ಯಾರಿಗೂ ಬೇಡ, ಉಂಗುರ ನಿನಗೇ ಮೊದಲು... ಯಾವ ಬೆರಳಿಗೆ ಹೇಳು... ಎಂಥ ಹರಳು...?

(ಮಗಳ ಗಲ್ಲ ಹಿಡಿದು, ಮುಖ ಸವರಿ, ಅವಳನ್ನು ಮಡಿಲಲ್ಲಿ ಕುಳ್ಳಿರಿಸಿಕೊಳ್ಳುತ್ತಾ ತಾನು ನೆಲದ ಮೇಲೆ ಕುಸಿದು ಸೆರಗಿನಿಂದ ಗಾಳಿ ಹಾಕಿಕೊಳ್ಳುತ್ತಿರುವಾಗ...)

ಲಕ್ಷ್ಮಮ್ಮ : (ಪ್ರವೇಶಿಸಿ) ಏನು ಸೀತಮ್ಮನವರೇ...? ಏನು ಮಾಡುತ್ತಿದ್ದೀರಿ...?

ಸೀತಮ್ಮ : (ಎದ್ದು) ಬನ್ನಿ, ಲಕ್ಷ್ಮಮ್ಮನವರೇ!

(ಮಂದಲಿಗೆ ಹಾಸುತ್ತಾ)

ಲಲಿತು! ಹೋಗಿ ಆಡಿಕೋ ಅಮ್ಮ..., ಜಾಣೆ... ಕೂತುಕೊಳ್ಳಿ, ತುಂಬಾ ಅಪರೂಪ ನೀವು ಈಚೆಗೆ.

ಲಕ್ಷ್ಮಮ್ಮ : (ನಗುತ್ತಾ) ನಾನೋ ನೀವೋ ಅಪರೂಪ...? ನವರಾತ್ರಿ ಹಬ್ಬ ಹತ್ತು ದಿನ ನಡೆಯಿತಲ್ಲ, ಒಂದು ದಿನ ಕೂಡ ನೀವು ನಮ್ಮ ಮನೆಗೆ ಬರಬೇಡವೇ? ಗೊಂಬೆಗೆ ಆರತಿ ಅಂಥ ಹೇಳಿ ಕಳಿಸುತ್ತಲೇ ಇದ್ದೆನಲ್ಲ?

ಸೀತಮ್ಮ : (ಬಿಸುಸುಯ್ದು) ಅಯ್ಯೋ! ಪ್ರಾಣ ಹೋಗುವ ವೇಳೆ...ಸ ವೀಣೆ ಕೇಳುವುದಕ್ಕೆ ಹೋದಳು... ಅಂದ ಹಾಗೆ ನನಗೆ ಯಾವ ಗೊಂಬೆ, ಯಾವ ಆರತಿ... ನಮ್ಮ ಮನೆಯಲ್ಲಿ ಈ ವರ್ಷ ಗೊಂಬೆ ಕೂರಿಸಿಲ್ಲ. ದೊಂಬಿ ಜರುಗುತ್ತಾ ಇದೆ, ಹತ್ತು ಹದಿನೈದು ದಿನದಿಂದ ವಿಪರೀತ ಗಲಾಟೆ... ಎಲ್ಲಿಂದಲೋ ಬಂದಿವೆ ಬಣ್ಣದ ಗೊಂಬೆಗಳು... ಅವರ ಬಂಗಾರ, ಶಿಂಗಾರ... ಅವರ ಅಡಾವುಡಿ... ಇದೇ ಆಗಿದೆ.

ಲಕ್ಷ್ಮಮ್ಮ : ನೆಂಟರು ಬಂದಿದ್ದಾರೋ?

ಸೀತಮ್ಮ : ನೆಂಟರಾದರೆ ಅದೊಂದು ತರಹ... ಜಾತಿಯಲ್ಲ, ಜನವಲ್ಲ... ಈ ಹಾಳು ನವರಾತ್ರಿ ಬಂತು ಅಂದರೆ ಮೈಸೂರಲ್ಲಿರುವ ನಾವು ಎಲ್ಲಿಗೋ ದೇಶಾಂತರ ಹೊರಟು ಬಿಡುವುದೇ ಸುಖ. ಕಂಡಕಂಡವರಿಗೆಲ್ಲ ಚೊಕ್ಕ ಭೋಜನ ಮಾಡಿ ಹಾಕಿ ಅವರ ಮಕ್ಕಳ ಮೂಗೊರೆಸಿ, ಅವಕ್ಕೆ ಜಡೆ ಹೆಣೆದು...

ಲಕ್ಷ್ಮಮ್ಮ : ಎಲ್ಲಿಂದ ಬಂದರು ? ನಿಮಗೆ ಗುರುತು, ಪರಿಚಯ ಏನೂ ಇಲ್ಲವೇ? ಇದ್ದಕ್ಕಿದ್ದ ಹಾಗೆ ಹೀಗೆ ಧುಮುಕಿದರೆ ಪಾಪ, ನೀವು ತಾನೇ ಏನು ಮಾಡೀರಿ...

ಸೀತಮ್ಮ : ಇವರ ಜೊತೆ ಹಿಂದೆಂದೋ ಓದಿದ್ದವರಂತೆ. ಒಂದೇ ಹಾಸ್ಟೆಲ್ಲಿನಲ್ಲಿದ್ದರಂತೆ. ಹೋದ ವರ್ಷ ಅಕಸ್ಮಾತ್ ಬೆಂಗಳೂರು ರೈಲು ಸ್ಟೇಷನ್‌ನಲ್ಲಿ ಮತ್ತೆ ಭೇಟಿಯಾದರಂತೆ... "ಓಹೋಹೋ... ಏನಯ್ಯಾ, ಎಲ್ಲಯ್ಯಾ..."

12th_Kannada_Reader_3-5.indd 103 22-05-2019 14:31:18

ಅಂತ ಒಬ್ಬರಿಗೊಬ್ಬರು ಹಳೇ ಸ್ನೇಹಾನ ಬೀರಿಕೊಂಡರಂತೆ. ಇದೇ ಸಮಯ ಅಂತ, ಆತ ನಮ್ಮ ಅಡ್ರೆಸ್ ಸಂಪಾದಿಸಿ ನವರಾತ್ರಿವರೆಗೆ ಕಾದಿದ್ದು, ಬರುತ್ತೇನೆ ಅಂತ ಲೆಟರ್ ಬರೆದೇ ಬಿಟ್ಟ. ಮುಖ್ಯ ನಮ್ಮ ಗ್ರಹಚಾರ... ಆತನನ್ನು ಬೈದೇನು ಫಲ?

ಲಕ್ಷ್ಮಮ್ಮ : (ಸಹತಪಿಸುತ್ತ) ಹಿಂದಿನ ಜನ್ಮದ ಸಾಲ ಅನ್ನಿ...

ಸೀತಮ್ಮ : ಈ ಊರಿನವರು ನವರಾತ್ರಿ ಎಂದರೆ ತೆಪ್ಪಗಿರುತ್ತಾರೆಯೇ? ಸಾವಿರದೆಂಟು ಸಮಾರಂಭ. ಪೇಪರಲ್ಲೆಲ್ಲ ಪ್ರಕಟಣೆ... ನಾನು ಹೇಳಿದೆ ಇವರಿಗೆ... "ಊರಲ್ಲಿರುವುದಿಲ್ಲ ಅಂತ ಬರೆಯಿರಿ... ನನಗೆ ಜ್ವರ ಅನ್ನಿ..." ಅಂದೆ. ಇವರ ಬಿಗುಮಾನ; ಗಳಸ್ಯ ಕಂಠಸ್ಯ ಎಂಬ ಉತ್ಸಾಹ. ಈಗ ಇವರಿಗೂ ಅನುಭವಕ್ಕೆ ಬಂತು...

ಲಕ್ಷ್ಮಮ್ಮ : ಇನ್ನೂ ಹೊರಟಿಲ್ಲವೇ ಅವರು... ಊರೂರೇ ಕಾಲಿಯಾಗಿದೆಯಲ್ಲ.

ಸೀತಮ್ಮ : ಯಾಕೆ ಹೊರಡುತ್ತಾರೆ? ಬೆಳಿಗ್ಗೆ ಮಧ್ಯಾಹ್ನ ಸಂಜೆ ಪುಷ್ಕಳವಾಗಿ ನಾನು ಮಾಡಿ ಹಾಕುವಾಗ? ಆ ಗಂಡಸಿಗೆ ಗೋಧಿ ಅನ್ನ. ಆ ಹೆಂಗಸಿಗೆ ಹುಳಿ ಮಜ್ಜಿಗೆ ಆಗದು... ಮಕ್ಕಳಿಗೆಲ್ಲಾ ಹಸುವಿನ ಹಾಲೇ ಆಗಬೇಕು... ಹಿಂಡುತ್ತಾ ಇದ್ದಾರೆ ಪಂಚ ಪ್ರಾಣವನ್ನೂ... ರೇಷ್ಮೆ ಕಾರ್ಖಾನೆ ಆಯಿತು ನೆನ್ನೆ... ಗಂಧದೆಣ್ಣೆ ಕಾರ್ಖಾನೆಯಂತೆ ಈ ಹೊತ್ತು... ಹೋಗಿವೆ, ಪಟಾಲವೂ ಕಂಠ ಪೂರ್ತಿ ಉಪ್ಪಿಟ್ಟು ಹೊಡೆದು... ಕಾರಲ್ಲಿ...

ಲಕ್ಷ್ಮಮ್ಮ : ಮೋಟಾರ್‌ನಲ್ಲೆ ಬಂದಿದ್ದಾರೇನು?

ಸೀತಮ್ಮ : ಹುಂ... ಕಾರು ಬೇರೆ ಇದೆ. ಕಂಡವರ ಕದ್ದನ್ನ ತಿಂಬೋ ಅವರ ಯೋಗ್ಯತೆಗೆ; ಅವರ ಕಾರು, ಅವರ ಡ್ರೈವರು, ಅವರ ಆಳು... ಎಲ್ಲಕ್ಕೂ ಇಲ್ಲಿ ಪಂಚಭಕ್ಷ್ಯ ಪರಮಾನ್ನದ ಶುಶ್ರೂಷೆ... ಸಾಂಗವಾಗಿ. ಮಕ್ಕಳೋ, ಅರ್ಧ ಡಜನ್ ಇವೆ. ಸೊಟ್ಟ ಮೂತಿ, ಡೊಂಕುಬಾಲ, ವಾರೆಗಣ್ಣು, ಅವಲಕ್ಷಣ ಒಂದಕ್ಕಿಂತ ಒಂದು... ಲಲಿತುಗೂ ಅವಕ್ಕೂ ಮೂರು ಹೊತ್ತೂ ಜಗಳ... ಅವು ಬಂದು ವಕ್ಕರಿಸಿದ ಮೇಲೆ... ಲಲಿತು ಏನೇನೋ ಕೆಟ್ಟ ಕೆಟ್ಟ ಮಾತೆಲ್ಲ ಕಲಿತು ಬಿಟ್ಟಿದೆ.

ಲಕ್ಷ್ಮಮ್ಮ : ಅಯ್ಯೋ, ಅಯ್ಯೋ...! ಹೀಗಾಗಿದೆಯೇ ನಿಮ್ಮ ಪಾಡು? ನಮ್ಮ ಮನೆಗೆ ನೀವು ಒಂದು ದಿನವೂ ಬರಲಿಲ್ಲ. ಎಲ್ಲೋ ಎಕ್ಸಿಬಿಷಿನ್ ಕಡೆ ಹೋಗುತ್ತಿದ್ದೀರಿ, ನಾಟಕ, ಸಿನಿಮಾ ಅಂತ... ಆ ಅಡಾವುಡಿಯಲ್ಲಿದ್ದೀರಿ ಅಂತಿದ್ದೆ...

ಸೀತಮ್ಮ : ಅಂಥ ಪುಣ್ಯವನ್ನೆಲ್ಲ ಅವರೇ ಪಡೆದು ಬಂದಿದ್ದಾರೆ. ಛತ್ರ ಇದ್ದ ಹಾಗಿದೆ ಈ ಮನೆ. ಬೆಳಗಾದರೆ ಕಾಫಿ ಕೊಡು, ಕನ್ನಂಬಾಡಿಗೆ ಹೋಗಬೇಕು...! ಸಾಯಂಕಾಲ, ಸಜ್ಜಿಗೆ... ಶ್ರೀರಂಗಪಟ್ಟಣ... ಮಧ್ಯಾಹ್ನ, ಮೊಸರನ್ನ, ಚಾಮುಂಡಿ ಬೆಟ್ಟ... ನಂಜನಗೂಡು... ನಿಂಬೆಹಣ್ಣಿನ ಚಿತ್ರಾನ್ನ... ಇವರಿಗೇನು, ಕೆಮ್ಮುತ್ತಾ ಕೆರೆಯುತ್ತಾ ಅಡಿಗೆ ಮನೆ ಬಾಗಿಲಲ್ಲಿ ಇಣುಕಿ ನೋಡುತ್ತಾರೆ. ಕ್ಷಮಿಸು ಸೀತಾ ಅಂತಾರೆ... ಪೆಚ್ಚುಪೆಚ್ಚಾಗಿ ನಗುತ್ತಾರೆ... ಹಲ್ಲು ಕಿರಿಯುತ್ತಾರೆ. ಗಂಡು ಗಂಡಸು ಸ್ನೇಹ ಅಂದರೆ, ನಮಗೆ ಯಾಕೆ ಲಕ್ಷ್ಮಮ್ಮನವರೇ ಈ ಚಿತ್ರ ಹಿಂಸೆ...

ಲಕ್ಷ್ಮಮ್ಮ : ಸುಮ್ಮನಿರಿ! ಅಗೋ, ಬಂದರು ಅಂತ ಕಾಣುತ್ತೆ... ಯಾವುದೋ ಕಾರು ಬಂತು...

ಸೀತಮ್ಮ : ಬರಲಿ! ಬರಲಿ! ಅವರೂರಿಂದ ಒಂದು ಕಾರ್ಡು ಬಂದಿದೆ. ಅವರ ಮಗಳಿಂದ... ಮೊಮ್ಮಗನಿಗೆ ಮೈ ಹುಷಾರಿಲ್ಲ ಅಂತ. ಆಕೇನೂ ಹೇಳುತ್ತಿದ್ದಳು... ಸಧ್ಯ, ಆ ಕೂಸಿಗೆ ಕೊಂಚ ಜಾಸ್ತಿಯಂತೆ ಜ್ವರ...

12th_Kannada_Reader_3-5.indd 104 22-05-2019 14:31:18

ಲಕ್ಷ್ಮಮ್ಮ : ಇದೇನ್ರೀ ಅನ್ಯಾಯ ? ಸಂಸಾರಸ್ಥರು ಹೀಗೆ ಮನೆ ಮಠ ಬಿಟ್ಟು ತಿಂಗಳುಗಟ್ಟಲೆ ಹೀಗೆ ಬೇರೊಬ್ಬರ ಮನೆಯಲ್ಲಿ ಬೇರು ಬಿಟ್ಟರೆ ಗತಿಯೇನು?

ಸೀತಮ್ಮ : ಶ್...! ನೀವಿಲ್ಲೇ ಇರಿ ಲಕ್ಷ್ಮಮ್ಮನವರೇ. ಅವರನ್ನೂ ಅವರ ಮಕ್ಕಳ ಮೂತಿಯನ್ನೂ, ಅವರ ಆರ್ಭಟವನ್ನೂ ನೋಡಿಬಿಟ್ಟೇ ಹೋಗಿ... ಹೇಗಿದ್ದರೂ ಬಂದಿದ್ದೀರಿ...

ಲಕ್ಷ್ಮಮ್ಮ : ಲಲಿತು ಎಲ್ಲಿ? ಪಾಪ, ಅದಕ್ಕೆಷ್ಟು ಬೇಜಾರಾಗಿದೆಯೋ ಏನೋ?

ಸೀತಮ್ಮ : ಆ ಹುಡುಗರು ಬಂದ್ರೆ ಅವೆಲ್ಲ ಸೇರಿ ಇವಳನ್ನು ಕಾಡುತ್ತವೆ. ಆ ಹಾಳು ಕಾರಲ್ಲಿ ಅದಕ್ಕೆ ಒಂದಿಷ್ಟಗಲ ಜಾಗ ಕೊಡೋದಿಲ್ಲ ಅಂತ ಅವು ಚಂಡಿ ಹಿಡಿಯುತ್ತವೆ... ಆ ಕಪಿಗಳು ಬರುವಷ್ಟರಲ್ಲೇ ಆಟ ಆಡಿ ಮುಗಿಸುತ್ತೇನೆ ಅಂತ ಲಲಿತು ಹೋಗಿದೆ, ಗೇಟ್ ಹತ್ತಿರ...

(ಆಕೆಯ ಪ್ರವೇಶ)

ಏನು? ಬನ್ನಿ, ಬನ್ನಿ...! ಗಂಧದೆಣ್ಣೆ ಕಾರ್ಖಾನೆ ಎಲ್ಲ ನೋಡಿದಿರಾ... ತುಂಬಾ ಆಯಾಸವಾಗಿದೆ ಅಂತ ಕಾಣುತ್ತದಲ್ಲ...

ಆಕೆ : ಅಯ್ಯೋ! ಗಂಧಾನೂ ಬೇಡ ಈಗ, ಅಕ್ಷತೇನೂ ಬೇಕಿಲ್ಲ... ನಿಮ್ಮ ಮನೆ ಮುಂದೆ ಟಪಾಲಿನವನು ಸಿಕ್ಕಿದ. ಕವರೂ ಕೊಟ್ಟ. ಒಡೆದು ನೋಡಿದರೆ ಎದೆ ಒಡೆಯಿತು. ಸರಸು ಗಂಡ ಹೈದರಾಬಾದಿನಿಂದ ನೆನ್ನೆ ಬೆಂಗಳೂರಿಗೆ ಬಂದನಂತೆ. ಅವನ ಕಣ್ಣಿಗೇನೋ ಆಗಿದೆಯಂತೆ... ದೇವರೇ ಕಾಪಾಡಬೇಕು... ಆಪರೇಷನ್ ಆಗಬೇಕಂತೆ... ಕೂಡಲೇ ನಾವು ಈಗಿಂದೀಗ ಹೊರಟು ಬಿಡಬೇಕಮ್ಮಾ... ನಿಲ್ಲುವುದಕ್ಕೆ ನೆಮ್ಮದಿಯೇ ಇಲ್ಲ. ಅವರೆಲ್ಲ ಕಾರಲ್ಲೇ ಕೂತಿದ್ದಾರೆ.

ಸೀತಮ್ಮ : ಸುಮ್ಮನೆ ಗಾಬರಿ ಪಡಬೇಡಿ. ನಿಧಾನವಾಗಿ... ಇವರೂ ಬರಲಿ. ಇಬ್ಬರು ಸ್ನೇಹಿತರೂ ಕೂತು ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರಲಿ... ಕಾಗದಾನ ಇನ್ನೊಂದು ಸಲ ಓದಿ... ಕೂತುಕೊಳ್ಳಿ... ನೋಡಿ, ಇವರು ಲಕ್ಷ್ಮಮ್ಮನವರು ಅಂತ. ತುಂಬಾ ದಿವಸದಿಂದ ನಮಗೆ ಗುರುತು, ಪರಿಚಯ. ನಿಮ್ಮನ್ನು ಇವರ ಮನೆಗೂ, ನನ್ನ ತಮ್ಮನ ಅತ್ತೆ ಮನೆಗೂ ಕರೆದುಕೊಂಡು ಹೋಗಲಿಲ್ಲ... ಲಕ್ಷ್ಮಮ್ಮನವರೇ, ಇವರ ಮಕ್ಕಳು... ಮುಖಸ್ತುತಿಯಲ್ಲ, ನೋಡಿ... ಬಲು ಜಾಣರು, ಬಲು ಚೂಟಿ... ಹದಿನೈದಿಪ್ಪತ್ತು ದಿನದಿಂದ ಈ ಮನೆ ನಂದಗೋಕುಲ...

ಆಕೆ : ಮನಸ್ಸು ಸ್ಥಿಮಿತದಲ್ಲೇ ಇಲ್ಲ ಕಣ್ರೀ... ನಾವು ಹೊರಟೇ ಬಿಡಬೇಕು.

(ಕೈಪೆಟ್ಟಿಗೆಗೆ ಹಲಕೆಲವು ಸಾಮಾನುಗಳನ್ನು ತುಂಬುತ್ತಾ)

ಲಕ್ಷ್ಮಮ್ಮ : ನಮ್ಮ ಮನೆಗೆ ಬಂದು ಹರಿಷಿಣ ಕುಂಕುಮ ತೆಗೆದುಕೊಂಡು ಹೋಗಿ. ಇಲ್ಲೇ ಆಚೆ ಬೀದಿ ನಮ್ಮದು.

ಸೀತಮ್ಮ : ನನ್ನ ಮಾತು ಕೇಳಿ, ನಿಮ್ಮ ಯಜಮಾನರು ಹೋಗಿ ವಿಷಯ ಎಲ್ಲ ತಿಳಿದುಕೊಂಡು ಕಾಗದ ಬರೆಯಲಿ. ಆಮೇಲೆ ನೀವು ಹೊರಟರಾಯಿತು... ಆಗದವರು ಬರೆಯುವುದುಂಟು, ಇಂತಹ ಅನಾಹುತದ ಪತ್ರಗಳನ್ನು. ತರಾತುರಿಯಲ್ಲಿ ನಿಂತ ಕಾಲಲ್ಲೇ ಏಕೆ ಹೊರಡಬೇಕು ನೀವು?

ಆಕೆ : ಅಯ್ಯೋ! ಅದಾಗುವುದೇ ಇಲ್ಲ... ಸರಸು ಪಾಪ, ಅರಿಯದ ಹುಡುಗಿ. ಆಪರೇಷನ್, ಆಸ್ಪತ್ರೆ ಎಂದರೆ ಅವಳಿಗೆ ಜ್ವರವೇ ಬಂದು ಬಿಡುತ್ತದೆ.

ಲಕ್ಷ್ಮಮ್ಮ : ಹಾಗಾದರೆ ಇನ್ನೊಂದು ಕೆಲಸ ಮಾಡಿ.

ಸೀತಮ್ಮ : ನಾನು ಹೇಳುತ್ತೇನೆ, ಲಕ್ಷ್ಮಮ್ಮನವರೇ! ನಿಮ್ಮ ಅಳಿಯನನ್ನು ಇಲ್ಲಿಗೇ ಬರಹೇಳಿ. ಇವರಿಗೆ ಇಲ್ಲಿಯವರೊಬ್ಬರು ಗೊತ್ತಿದೆ. ಆಪರೇಷನ್ ಇಲ್ಲದೇನೇ ಕಣ್ಣಿಗೆ ದೃಷ್ಟಿ ಕೊಡುತ್ತಾರೆ. ತಕ್ಷಣ ಕಾಗದ ಹಾಕಿ, ಬೇಡ... ತಂತಿ

12th_Kannada_Reader_3-5.indd 105 22-05-2019 14:31:18

ಕೊಡಿ... ನಮ್ಮ ಮನೆಯೇನು ನಿಮ್ಮ ಮನೆಯೇನು? ಬಾಲ್ಯ ಸ್ನೇಹ ಅಂದರೆ ಅಷ್ಟೂ ನೀವು ಸ್ವಾತಂತ್ರ್ಯ ವಹಿಸಬಾರದೇ? ಸರಸೂನ ಅವಳ ಮಕ್ಕಳನ್ನು ಅವಳ ಗಂಡನನ್ನು ನಾವೂ ನೋಡಿದ ಹಾಗಾಗುತ್ತೆ.

ಲಕ್ಷ್ಮಮ್ಮ : ಕಣ್ಣು ವಾಸಿಯಾದ ಮೇಲೆ ಅವರೂ ನೋಡಲಿ ಕಣ್ಣಂಬಾಡಿನ...

ಆಕೆ : ಛೇ! ಎಲ್ಲಾದರೂ ಉಂಟೇ? ಅಳಿಯನಿಗೆ ಬಾ ಅಂತ ನಾವು ಇಲ್ಲಿಂದ ಕಾಗದ ಬರೆಯೋದು ತಪ್ಪು! ಅದೂ ಅಲ್ಲದೆ, ಹೈದರಾಬಾದ್ ಡಾಕ್ಟರ್, ಬೆಂಗಳೂರಿನ ಡಾಕ್ಟರೊಬ್ಬರಿಗೆ ಕಾಗದ ಬರೆದಿದ್ದಾರಂತೆ. ಅಳಿಯನ ಕಣ್ಣಿಗೆ ಇಂತಿಂತಹುದನ್ನು ಹಚ್ಚಿದ್ದೇನೆ, ಹೀಗೆ ಹೀಗೆ ಮಾಡಿದೆ ಅಂತ... ನೀವೇನೂ ತಿಳಿದುಕೊಳ್ಳಬೇಡಿ... ನಾವು ಹೊರಡುತ್ತೇವೆ...

ಸೀತಮ್ಮ : ಕೊಂಚ ಕಾಫಿ ಕುಡಿದು ಹೋಗಿ... ಸಜ್ಜಿಗೆ ಮಾಡುತ್ತೇನೆ. ನಿಮ್ಮ ಕೊನೆಯ ಮಗನಿಗೆ ತುಂಬಾ ಇಷ್ಟ. ತಡೆಯಿರಿ. ಸುಧಾರಿಸಿಕೊಂಡು ಹೋಗೋಣಂತೆ... ಬಿಸಿಲು ಹೋಗಲಿ... ತಂಪು ಹೊತ್ತಿನಲ್ಲಿ ಹೊರಡಿ...

ಆಕೆ : ಬೇಡಿ, ಬೇಡಿ... ಅದಕ್ಕೆಲ್ಲ ನಿಲ್ಲಿಸಬೇಡಿ.

(ಹೊರಗಿಂದ ಹಾರನ್ ಶಬ್ದ)

ಸೀತಮ್ಮ : ಕೇಳಿ, ಲಕ್ಷ್ಮಮ್ಮನವರೆ! ಇಷ್ಟು ಹೊತ್ತಿನಲ್ಲಿ ಕಾಫಿ ಕೊಡದೆ ಇವರನ್ನೆಲ್ಲ ಕಳುಹಿಸಬಹುದೆ ನಾನು? ನೀವಾಗಿದ್ದರೆ, ಏನು ಮಾಡುತ್ತಿದ್ದಿರಿ?

(ಹಾರನ್, ಮತ್ತೆ)

ಆಕೆ : ಹುಂ! ಕೇಳಿ, ಹಾರನ್ ಮಾಡುತ್ತಿದ್ದಾರೆ ಅವರು ಅಲ್ಲಿಂದ ಒಂದೇ ಸಮನೆ...

ಸೀತಮ್ಮ : ಮಕ್ಕಳಿಗೆ ಒಂದು ಬಟ್ಟಲು ಕಾಫಿ... ಅವಕ್ಕೆ ಬೇಡ ಎನ್ನಬೇಡಿ.

ಆಕೆ : ಬೇಡಿ ಬೇಡಿ... ದಾರಿಯಲ್ಲೇ ಎಲ್ಲಾದರೂ ಕೊಟ್ಟರಾಯಿತು... ಇಗೋ ಹೊರಟೆ... ಕುಂಕುಮ ಕೊಡಿ...

(ಹಾರನ್)

ಸೀತಮ್ಮ : (ಕುಂಕುಮ ಕೊಡುತ್ತ) ಹೊರಟೇ ಬಿಡುತ್ತೀರಾ? ಲಕ್ಷ್ಮಮ್ಮನವರೇ, ಕಾರ್ ಹತ್ರ ಹೋಗಿ, ಇವರ ಮಕ್ಕಳನ್ನು ಒಂದು ಕಣ್ಣು ನೋಡಿ ಬನ್ನಿ... ಎಷ್ಟು ಮುದ್ದಾಗಿವೆ ಅಂತ ಒಂದೊಂದೂನೂ...

ಆಕೆ : (ಕೈ ಪೆಟ್ಟಿಗೆ ಎತ್ತಿ ನಿಂತು) ನಿಮಗೆ ತುಂಬಾ ತೊಂದರೆ ಕೊಟ್ಟೆವು...

ಸೀತಮ್ಮ : ಅಯ್ಯೋ! ಬಿಡಿ ಅಂದ್ರೆ...! ಇವೆಲ್ಲ ಪೂರ್ವಜನ್ಮದಲ್ಲಿ ನಾವು ಮಾಡಿದುದರ ಫಲ. ನಾಳೆಯಿಂದ ಮನೆ ಬಿಕೋ ಅಂತ ಇರುತ್ತದಲ್ಲಾ ಅದೇ ನನ್ನ ಯೋಚನೆ... ಲಲಿತೂಗಂತೂ ಹೊತ್ತೇ ಹೋಗೋದಿಲ್ಲ...

ಆಕೆ : ಅಂದ ಹಾಗೆ ಮಗು ಎಲ್ಲಿ?

(ಹಾರನ್)

ಸೀತಮ್ಮ : ಅಲ್ಲೇ ನಿಮ್ಮ ಕಾರು ಹತ್ತಿರ ಇರಬಹುದು... ಅದರದೇನು? ನಿಮ್ಮ ಮಕ್ಕಳು ಹಸಿವು ಹೇಗೆ ತಡೆದೀತು ಎಂಬುದೇ ನನ್ನ ಯೋಚನೆ. ನೋಡಿ, ನಾನೊಂದು ಮಾತು ಹೇಳುತ್ತೇನೆ... ಕೇವಲ ಉಪಚಾರ ಅಂತ ತಿಳಿಯಬೇಡಿ... ಆಸ್ಪತ್ರೆ, ಅಪರೇಷನ್ ಮುಗಿದ ಮೇಲೆ, ಸರಸು ಅಳಿಯ ಇಬ್ಬರೂ ಇಲ್ಲಿಗೆ ಬರಲಿ... ಎಂಟು ಹತ್ತು ದಿನ ಇದ್ದು ಇಲ್ಲೆಲ್ಲ ನೋಡಿಕೊಂಡು ಹೋಗಲಿ... ನಿಮ್ಮ ಮಗಳಿಗೆ ಹೇಳಿ... ಇವರು ಬಂದ ಮೇಲೆ ನನ್ನನ್ನೆಷ್ಟು ಬೈಯುತ್ತಾರೋ, ಏಕೆ ಕಳುಹಿಸಿದೆ ನಿಮ್ಮನ್ನು ಅಂತ...

(ಹಾರನ್)

ಆಕೆ : ಏನು ಮಾಡುವುದು, ನಮಗೇನೋ ಇನ್ನೂ ಒಂದು ತಿಂಗಳಿರೋಣ ಅಂತ ಆಸೆ. ಈ ಗ್ರಹಚಾರ ಹೀಗೆ ಬರುತ್ತದೆ ಅಂತ ಯಾರು ಕಂಡಿದ್ದರು... ಬರುತ್ತೇನೆ.

(ಕೈ ಪೆಟ್ಟಿಗೆ ಸಹಿತ ಹೊರಡುವರು)

12th_Kannada_Reader_3-5.indd 106 22-05-2019 14:31:18

ಸೀತಮ್ಮ : (ಕುಳಿತು) ಅಂತೂ ಶನಿ ತೊಲಗಿತು ಲಕ್ಷ್ಮಮ್ಮನವರೇ! ಪೀಡೆ ಕಳೆಯಿತು. ಬದುಕಿದೆ. ಕೇಳಿದಿರಾ ನೀವು... ಇನ್ನೂ ಒಂದು ತಿಂಗಳಿದ್ದು ನನ್ನ ಪ್ರಾಣ ಹಿಂಡಬೇಕೆಂದಿದ್ದಳಂತಲ್ಲಾ ಆಕೆ? ಕೈಯಲ್ಲಿ ಮೂರು ಕಾಸಿಲ್ಲ. ಸೊಸೈಟಿಯಲ್ಲಿ ಅರವತ್ತು ರೂಪಾಯಿ ಸಾಲ... ಇವಕ್ಕೆ ಕೂಳು ಬೇಯಿಸಿ ಹಾಕಿ ರಟ್ಟೆ ಎಲ್ಲ ಮುರಿದು ಹೋಯಿತು.

ಲಕ್ಷ್ಮಮ್ಮ : ಶ್! ಮತ್ತೆ ಬಂದರು.

ಸೀತಮ್ಮ : (ಎದ್ದು) ಏನಾದರೂ ಮರೆತಿರಾ?

ಆಕೆ : ಏನೂ ಇಲ್ಲ... ಹೊರಟ ಗಳಿಗೆ ಚೆನ್ನಾಗಿಲ್ಲವೋ ಏನೋ? ಕಾರು ತಂಟೆ ಮಾಡುತ್ತೆ... ಒಂದೈದು ನಿಮಿಷ ತಡವಾಗುತ್ತೆ ಅಂತ ಹೇಳಿದರು... ನನಗೇಕೋ ಭಯವಾಗುತ್ತೆ ಸೀತಮ್ಮನವರೆ.

ಸೀತಮ್ಮ : ಬಿಡಿ ಅಂದ್ರೆ! ಇಷ್ಟಕ್ಕೆಲ್ಲ ಭಯವೇಕೆ? ನಂಜುಂಡೇಶ್ವರನಿಗೆ ಎರಡು ಕಣ್ಣು ಮಾಡಿಸಿ ಕಳುಹಿಸಿ... ನಿಮ್ಮ ಯಜಮಾನರು ರೈಲಲ್ಲೇ ಹೋಗಿ ಸಂಜೆ ತಲುಪಿ, ತಂತಿ ಕೊಡಲಿ. ನೀವಿಲ್ಲೇ ಇರಿ... ಮಕ್ಕಳು ಮರಿ ಆಟ ಆಡಿಸುತ್ತಾ... ಲಲಿತು ಪಾಪ ನಿಮ್ಮ ಮಕ್ಕಳ ಜೊತೆ ಇಷ್ಟಪೂರ್ತಿ ಆಡಲೇ ಇಲ್ಲ...

ಆಕೆ : ಹಾಗೆಲ್ಲ ಒತ್ತಾಯ ಮಾಡಬೇಡಿ... ಇಲ್ಲಿಯ ತನಕ ನಾವು ನಿಮಗೆ ಕೊಟ್ಟಿರುವ ತೊಂದರೆಯೇ ಸಾಕು

(ಹಾರನ್)

ಲಕ್ಷ್ಮಮ್ಮ : ಓ! ಕರೀತಿರೋ ಹಾಗಿದೆ, ನಿಮ್ಮನ್ನ... ಕೇಳಿ ಹಾರನ್‌ನ...!

ಸೀತಮ್ಮ : ತೊಂದರೆ ಎಂಬ ಮಾತೇ ಇಲ್ಲ. ನಿಮ್ಮ ಅಳಿಯನ ಚಿಕಿತ್ಸೆ ಇಲ್ಲೇ ನಡೆಯಲಿ, ಆಪರೇಷನ್ನೇ ಆಗಬೇಕೆಂದರೆ ಅದಕ್ಕೂ ಇಲ್ಲಿ ವೈದ್ಯರಿಲ್ಲವೇ? ಕಾಸು ಕೊಟ್ಟರೆ, ಅಂಥ ಜನ ಇಲ್ಲೂ ಸಿಗುತ್ತಾರೆ. ಅಂತೂ ಗುಣವಾಗುವುದು ಮುಖ್ಯ.

ಆಕೆ : ಎಲ್ಲ ನಿಮ್ಮ ಆಶೀರ್ವಾದ. ಗುಣವಾಗಲಿ...

ಸೀತಮ್ಮನವರೆ! ನಂಜುಂಡೇಶ್ವರನಿಗೆ ಕಣ್ಣು ಕಳುಹಿಸುತ್ತೇನೆ. ಬರುತ್ತೇನೆ... ಹಾರನ್ ಜೋರಾಯಿತು... ಬರುತ್ತೇನೆ. ಈ ಕಾಗದ ಬರದೆ ಇದ್ದರೆ ನಾವು ಹೀಗೆ ಹೋಗುತ್ತಾ ಇರಲಿಲ್ಲ ಕಣ್ರೀ...!

ಸೀತಮ್ಮ : ಎಲ್ಲರೂ ಒಟ್ಟಿಗೆ ಬಂದು... ನಂಜನಗೂಡಿಗೆ ಅವರೇ ಹೋಗಿ, ಈಶ್ವರನಿಗೆ ಅರ್ಪಿಸಲಿ. ಅದೇ ಚೆನ್ನ!

(ಆಕೆ ಹೊರಡುವಳು)

ಹಾಳಾಗಿ ಹೋಯ್ತು! ಕೇಳಿದಿರಾ ಆಕೆಯ ಮಾತನ್ನ? ಹೇಗಿದೆ, ಲಕ್ಷ್ಮಮ್ಮನವರೇ...!

ಇವರ ಕಾರೋ! ಇವರ ಜಂಭವೋ! ಅರ್ಧ ದಾರಿಯಲ್ಲಿ ಕೆಟ್ಟು ಕೂರಬೇಕು ಇವರ ಕಾರು! ಒಂದು ದಿನ ಕೂಡ ಲಲಿತೂನ ಕೂರಿಸಿಲ್ಲ ಅದರಲ್ಲಿ. ತಮ್ಮ ವಾನರ ಸೇನೆ ತುಂಬುವುದಕ್ಕೇನೇ ಸ್ಥಳ ಸಾಲದು. ಹಾಳು ಜನ. ಎಲ್ಲಿಂದಲೋ ವಕ್ರಿಸಿ ನನ್ನ ಪ್ರಾಣ ತಿಂದು ಬಿಟ್ಟರು... ಇವರ ಅಳಿಯನ ಕಣ್ಣಿಗೆ ಹುಣ್ಣು ಬಡೆದರೆ ನನಗೇನು? ಏನೋ ಉಪಚಾರಕ್ಕೆ ಅಂತ ಒಳ್ಳೆಯ ಮಾತಾಡಿದರೆ, ಆ ಹೆಂಗಸು... ಹೇಗೆ ಹಿಗ್ಗುತ್ತಾಳೆ ನೋಡಿದಿರಾ ಲಕ್ಷ್ಮಮ್ಮನವರೆ!

(ಹಾರನ್)

ಲಕ್ಷ್ಮಮ್ಮ : (ಎದ್ದು) ಅಗೊ! ಮತ್ತೆ ಬಂದರಲ್ಲಮ್ಮ!

ಸೀತಮ್ಮ : (ಎದ್ದು) ಯಾರು? ಆಕೇನೇ? ಅಯ್ಯೋ! ನನ್ನ ಹಣೆಯ ಬರಹವೇ? ಮತ್ತೆ ಬಂದಳೇ?

ಲಕ್ಷ್ಮಮ್ಮ : ಜೊತೆಗಿನ್ನಾರೋ ಒಬ್ಬರು.

ಸೀತಮ್ಮ : ಆ? ಏನೆಂದಿರಿ?

ಆಕೆ : ಸೀತಮ್ಮನವರೆ! ಇವಳೇ ಸರಸು! ಕೊಂಕುಳು ಕೂಸನ್ನು ಎತ್ತಿಕೊಂಡು ಗಂಡನ ಜೊತೆ ಇಲ್ಲಿಗೇ ಬಂದುಬಿಟ್ಟಿದ್ದಾಳೆ. ನಿಮ್ಮ ಮಾತು ಎಷ್ಟು ಫಲಿಸಿತು... ಇಲ್ಲೇ ಸಿಕ್ಕರು ನಮಗೆ... ಆ ಬೆಂಗಳೂರಿನ ಡಾಕ್ಟರಿಗೆ ಮೈಸೂರಿಗೇ ವರ್ಗವಾಗಿದೆಯಂತೆ. ಕಾರು

12th_Kannada_Reader_3-5.indd 107 22-05-2019 14:31:18

ಮಾಡಿಕೊಂಡು ಇಲ್ಲೇ ಬಂದರು. ಇನ್ನೇನು ನೀವು ಹೇಳಿದ ಹಾಗೆ, ಇಲ್ಲೇ ಎಲ್ಲರೂ ಇದ್ದೇ ಕಣ್ಣು ವಾಸಿ ಮಾಡಿಕೊಂಡು, ನಂಜುಂಡೇಶ್ವರನ ದರ್ಶನ ಮುಗಿಸಿ ಕಣ್ಣಂಬಾಡಿಗೂ ಹೋಗಿ, ನಿಧಾನವಾಗಿ ಹೋದರಾಯ್ತು. ನಮಗಿನ್ನೇನು ಬೆಂಗಳೂರಲ್ಲಿ ಕೆಲಸ?

(ಸೀತಮ್ಮನವರು ನೆಲದ ಮೇಲೆ ಕುಸಿಯುವರು)

ಏಕೆ? ಏನಿದು ಸರಸೂ! ಹಿಡಿದುಕೋ ಅವರನ್ನ...

ಲಕ್ಷ್ಮಮ್ಮ : (ಗಾಬರಿಯಿಂದ) **ಸೀತಮ್ಮಾ...** ನೀರು ತರಲೆ?

ಸೀತಮ್ಮ : (ಮೆಲುದನಿಯಲ್ಲಿ) ಹಾ!

ಆಕೆ : (ಹೆದರಿ) ಸರಸೂ! ಹಿಡಿದುಕೋ, ಅವರನ್ನ... ಟ್ರಂಕು ಹಾಸಿಗೆಗಳನ್ನು ಒಳಕ್ಕೆ ತರಲು ಹೇಳುತ್ತೇನೆ.

ಲಕ್ಷ್ಮಮ್ಮ : ಏನ್ರೀ? ಏನಾಗ್ತಾ ಇದೆ...

ಸೀತಮ್ಮ : (ದೀನ ಸ್ವರದಲ್ಲಿ) ನಂಜುಂಡೇಶ್ವರಾ...!

ನಾಟಕ ಕಾದಂಬರಿ ಹಾಸ್ಯ ಪ್ರಬಂಧಗಳನ್ನು ಬರೆದಿದ್ದಾರೆ. ತಮ್ಮ ಬರಹಗಳಲ್ಲಿ ಮಾತುಗಾರಿಕೆ ಹಾಗೂ ಸನ್ನಿವೇಶಗಳನ್ನು ಹಾಸ್ಯೋತ್ಪಾದನೆಯ ಉಪಕರಣವನ್ನಾಗಿ ಉಪಯೋಗಿಸಿಕೊಳ್ಳುವುದು ಅವರ ಪದ್ಧತಿ. ನಾ.ಕಸ್ತೂರಿಯವರ 'ಅನಥ–ರ್ ಕೋಶ' ಅವರ ಹಾಸ್ಯ ಪ್ರವೃತ್ತಿಗೆ ಉತ್ತಮ ಉದಾಹರಣೆಯಾಗಿದೆ.

ಪ್ರಸ್ತುತ ನಾಟಕದಲ್ಲಿ ಮೈಸೂರಿನಲ್ಲಿರುವ ಸೀತಮ್ಮನವರು ದಸರೆಗೆ ಬಂದ ಅತಿಥಿಗಳಿಗೆ ಉಪಚಾರ ಮಾಡುವ ವಿಧಾನವನ್ನು ವಿವರಿಸಲಾಗಿದೆ. ಏನೋ ಮುಖದಾಕ್ಷಿಣ್ಯಕ್ಕೆ ಉಪಚಾರದ ಮಾತುಗಳನ್ನಾಡಿ ರುಚಿರುಚಿಯಾಗಿ ಅಡಿಗೆ ಮಾಡಿ ಬಡಿಸಿದರೆ ಬಂದ ಅತಿಥಿಗಳು ಆತಿಥ್ಯವನ್ನು ಸ್ವೀಕರಿಸುತ್ತಾ ಭಂಡತನದಿಂದ ನಿಸ್ಸಂಕೋಚವಾಗಿ ತಿಂಗಳುಗಟ್ಟಲೆ ಅವರ ಮನೆಯಲ್ಲಿಯೇ ಬಿಡಾರ ಹೂಡುತ್ತಾರೆ. ಇದರಿಂದಾಗಿ ಸೀತಮ್ಮನವರು ಪೇಚಾಟಕ್ಕೆ ಸಿಕ್ಕಿ ಬೀಳುವ ಸಂದರ್ಭವನ್ನು ನಾಟಕಕಾರರು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಕೃತಿ–ಕರ್ತೃ ವಿಚಾರ



– ನಾ. ಕಸ್ತೂರಿ

ನಾ. ಕಸ್ತೂರಿಯವರು ಕನ್ನಡ ನಾಡಿನ ಜನಪ್ರಿಯ ಲೇಖಕರಲ್ಲಿ ಒಬ್ಬರು. ನಗೆಯ ಬುಗ್ಗೆಯನ್ನೆಬ್ಬಿಸುವ ಲೇಖಕರು ಎಂಬ ಪ್ರಖ್ಯಾತಿ ಅವರಿಗೆ ಇದೆಯಾದರೂ ಅವರು ಇತಿಹಾಸ, ಸಮಾಜಶಾಸ್ತ್ರ ಮುಂತಾದ ಗಹನ ವಿಚಾರಗಳನ್ನು ಕುರಿತ ಗ್ರಂಥಗಳನ್ನೂ ಬರೆದಿದ್ದಾರೆ. ಅನೇಕ

ಪದಗಳ ಅರ್ಥ

ಮಧ್ಯಮ ವರ್ಗ–ಹೆಚ್ಚು ಬಡವರೂ ಅಲ್ಲದ ಹೆಚ್ಚು ಶ್ರೀಮಂತರೂ ಅಲ್ಲದ ಜನರು; ಚೈತನ್ಯ–ಶಕ್ತಿ; ಗಳಸ್ಯಕಂಠಸ್ಯ–ಅತಿ ನಿಕಟ ಸ್ನೇಹ; ಪಂಚಭಕ್ಷ್ಯ–ಐದು ವಿಧದ ತಿಂಡಿ ತಿನಿಸುಗಳು; ಹಲ್ಲುಕಿರಿ–ನಗು; ಅಡಾವುಡಿ–ಆಡಂಬರ, ಗದ್ದಲ; ಮುಖಸ್ತುತಿ–ಎದುರಿಗೆ ಹೊಗಳುವುದು; ತರಾತುರಿ–ಅವಸರ; ಪಂಚಪ್ರಾಣ–ಶರೀರದಲ್ಲಿರುವ ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನವೆಂಬ ಐದು ವಾಯುಗಳು; ಕಂಠಪೂರ್ತಿ–ಕುತ್ತಿಗೆಯವರೆಗೆ; ಬಾಲ್ಯಸ್ನೇಹ–ಚಿಕ್ಕಂದಿನ ಗೆಳೆತನ; ತಂತಿ–ಟೆಲಿಗ್ರಾಂ; ಸ್ತಿಮಿತ–ಸ್ಥಿರತೆ, ನಿಶ್ಚಲವಾದ; ಬಿಸುಸುಯ್–ನಿಟ್ಟುಸಿರು ಬಿಡು; ದೊಂಬಿ–ಗದ್ದಲ, ಗೊಂದಲ, ಕದನ; ತಪಿಸು–ದುಃಖಪಡು; ಪುಷ್ಕಳ–ಹೇರಳ, ವಿಫುಲ, ಯಥೇಚ್ಛ; ವಕ್ರಿಸು–ದಾಕ್ಷಿಣ್ಯವಿಲ್ಲದೆ ಬರುವುದು; ಸೂಟಿ–ಚುರುಕು; ಕೂಳು–ಅನ್ನ.

12th_Kannada_Reader_3-5.indd 108 22-05-2019 14:31:18

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲಲಿತು ಏಕೆ ಅಳುತ್ತಿದ್ದಳು ?
2. ಲಕ್ಷ್ಮಮ್ಮ ಸೀತಮ್ಮನವರಿಗೆ ಏನು ಹೇಳಿದರು ?
3. ಸೀತಮ್ಮ, ಲಕ್ಷ್ಮಮ್ಮಳ ಮನೆಗೆ ನವರಾತ್ರಿಗೆ ಹೋಗದಿರಲು ಕಾರಣವೇನು ?
4. ಸೀತಮ್ಮ, ನೆಂಟರು ಬಾರದಿರುವ ಸಲುವಾಗಿ ಯಾವ ನೆಪ ಹೇಳುವಂತೆ ತನ್ನ ಗಂಡನಿಗೆ ತಿಳಿಸಿದ್ದಳು. ?
5. ಮನೆಗೆ ಬಂದ ನೆಂಟರು ಮೈಸೂರಿನಲ್ಲಿ ಯಾವ ಯಾವ ಸ್ಥಳಗಳಿಗೆ ಹೋಗಿದ್ದರು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸೀತಮ್ಮ ಬಂದ ಅತಿಥಿಗಳನ್ನು ಹೇಗೆ ಉಪಚರಿಸಿದಳು ?
2. ಮನೆಗೆ ಬಂದ ಅತಿಥಿಗಳ ಮಕ್ಕಳು ಹೇಗಿದ್ದರು ?
3. ಸರಸೂ ಗಂಡನಿಗೆ ಏನಾಗಿತ್ತು ?
4. ಸೀತಮ್ಮ, ತನ್ನ ಮನೆಗೆ ಬಂದಾಕೆಗೆ ಹೇಗೆ ಸಾಂತ್ವನದ ಮಾತುಗಳನ್ನಾಡಿದಳು?
5. ಸೀತಮ್ಮ ನೆಲದ ಮೇಲೆ ಕುಸಿಯಲು ಕಾರಣವೇನು

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ತಮ್ಮ ಮನೆಗೆ ಬಂದ ಅತಿಥಿಗಳನ್ನು ಸೀತಮ್ಮ ಹೇಗೆ ಉಪಚರಿಸಿದಳು?
2. ಅತಿಥಿಗಳು ಸೀತಮ್ಮನ ಮನೆಯಲ್ಲಿಯೇ ಉಳಿದುಕೊಳ್ಳಲು ಕಾರಣವೇನು?
3. ಸೀತಮ್ಮನ ಉಪಚಾರದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.
4. ಈ ಪ್ರಹಸನದಿಂದ ತಿಳಿದು ಬರುವ ಮುಖ್ಯಾಂಶವೇನು?

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಸಂಪಾದನೆ, ಚೈತನ್ಯ, ಧುಮುಕು, ಗ್ರಹಚಾರ, ಅಕಸ್ಮಾತ್, ಪುಷ್ಕಳ

2. ಕೆಳಗಿನ ಪದಗಳ ವಿರುದ್ಧ ಪದಗಳನ್ನು ಬರೆಯಿರಿ.

ಶ್ರೀಮಂತ, ಚೈತನ್ಯ, ಹುಟ್ಟು, ಉತ್ಸಾಹ, ಅನುಭವ, ಸ್ಥಿರ

3. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಪರಮಾನ್ನ, ಆಯಾಸವಾಗು, ದೇಶಾಂತರ, ಅವರೂರಿಂದ, ಮೈಸೂರಿನಲ್ಲಿ.

ಚಟುವಟಿಕೆ

1. ಮನೆಗೆ ಬಂದ ಅತಿಥಿಗಳನ್ನು ನೀವು ಹೇಗೆ ಉಪಚಾರ ಮಾಡುತ್ತೀರಿ ಎಂಬುದರ ಬಗ್ಗೆ ತರಗತಿಯಲ್ಲಿ ಸಂಭಾಷಣೆ ನಡೆಸಿ.
2. ಈ ನಾಟಕವನ್ನು ತರಗತಿಯಲ್ಲಿ ಅಭಿನಯಿಸಿ.



12th_Kannada_Reader_3-5.indd 109 22-05-2019 14:31:18

ಉಪಪಠ್ಯ

ಘಟಕ ಐದು

ಶಬರಿಗಾದನು ಅತಿಥಿ ದಾಶರಥಿ

– ಕುವೆಂಪು



ಅತಿಥಿ ದೇವೋ ಭವ ಎಂಬುದು ಆರ್ಯೋಕ್ತಿ. ಭಾರತೀಯರು ಪ್ರಾಚೀನ ಕಾಲದಿಂದಲೂ ಅತಿಥಿಗಳನ್ನು ದೇವರೆಂದೇ ಬಗೆದು ಅವರಿಗೆ ಸೂಕ್ತ ಉಪಚಾರಗಳನ್ನು ನೀಡಿ ಆದರಿಸಿ ಅವರ ಹಾರೈಕೆಗಳಿಗೆ ಪಾತ್ರರಾಗಿರುವುದು ತಿಳಿದು ಬರುತ್ತದೆ. ಪ್ರಸ್ತುತ ಕಥೆಯಲ್ಲಿ ಶ್ರೀ ರಾಮಲಕ್ಷ್ಮಣರು ಸೀತೆಯನ್ನು ಹುಡುಕಲು ಹೋದಾಗ ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ಸನ್ನಿವೇಶ ಭಾರತೀಯ ಸಂಸ್ಕೃತಿಯ ಹಿರಿಮೆಗೆ ಸಾಕ್ಷಿಯಾಗಿದೆ.



ಆ ದಿನರಾತ್ರಿಗಳು ತೊಲಗಿದವು. ಮರುದಿನ ನೆನಪಿನ ಪಂಚವಟಿಯನ್ನು ಬಿಟ್ಟು ನೈಋತ್ಯದ ಕಡೆಗೆ ಹೊರಟರು. ಮುಂದೆ ನಡೆದಂತೆಲ್ಲ ಕಾಡು ನಿಬಿಡವಾಯಿತು. ಜೀರುಂಡೆಗಳ ಧ್ವನಿ ಕರ್ಕಶವಾಯಿತು. ಮಂಗಟ್ಟೆ ಹಕ್ಕಿಯ ವಿಕಾರ ರವ ಭೀಕರವಾಯಿತು. ನಿರಾಶೆ ಹೆಚ್ಚಿತು. ಧ್ವನಿ ಶವವಾಯಿತು. ಮಂಕುಬಡಿದವನಂತೆ ರಾಮ ಕುಳಿತು 'ನಾವೆಲ್ಲಿಗೆ ಹೋಗುತ್ತಿದ್ದೇವೆ ಸೌಮಿತ್ರಿ?' ಎಂದನು. 'ದೇವಿಯನ್ನು ಹುಡುಕಲು!' 'ಆ ದೇವಿ ಯಾರು?' ಆಗ ಲಕ್ಷ್ಮಣ, 'ಬೇಡ ಅಣ್ಣಯ್ಯ, ಬೇಡ! ನಿನ್ನ ಧೈರ್ಯವನ್ನು ನಿರಾಶೆಗೆ ಮಾರಬೇಡ. ಭರದ್ವಾಜ, ವಜ್ರರೋಮ, ಅತ್ರಿ, ಅನಸೂಯೆ, ಅಗಸ್ತ್ಯರನ್ನು ನೆನೆ. ವಿಶ್ವಾಮಿತ್ರನ ಮಂತ್ರವನ್ನು ನೆನೆ. ನಿನ್ನ ಮಹಿಮೆಯನ್ನು ನೀನೇ ಮರೆಯುವೆಯಾ? ಆತ್ಮ ನಿಂದನೆಯೆ ಆತ್ಮಹತ್ಯೆ. ನಿನ್ನ ಮಹಿಮೆಯ ನೆನಪೇ ನನ್ನನ್ನು ರಕ್ಷಿಸುತ್ತಿರುವಾಗ, ಹೇ ಕೋದಂಡಪಾಣಿ, ನೀನು ನಿರಾಶೆಗೆ ತುತ್ತಾಗುವುದು ಸರಿಯೇ?' ಎಂದನು.

ಅಷ್ಟರಲ್ಲಿ ರಾಮನಿಗೆ ಅದ್ಭುತವಾದುದೊಂದು ಅನುಭವವಾಯಿತು. ಕಾಡಿನಲ್ಲೆಲ್ಲ ಮಂಜು ತುಂಬಿತು. ಸೃಷ್ಟಿ ಅಸ್ಪಷ್ಟವಾಯಿತು. ಎಲ್ಲೆಲ್ಲಿಯೂ ಭೀತಿ ರಾಹುವಿನಂತೆ ಅಲೆಯಿತು. ಇದ್ದಕ್ಕಿದ್ದಂತೆ ಆ ಮಂಜೇ ಆ ಭೀತಿಯೇ ಮೈಗೊಂಡಂತೆ ಸರ್ಪಾಕೃತಿಯ ರಾಕ್ಷಸ ಶರೀರ ಮೂಡಿತು. ಅದಕ್ಕೆ ಕೈಯಿಲ್ಲ, ಕಾಲಿಲ್ಲ; ಎಲ್ಲವೂ ಮೆಯ್. ಹೊಟ್ಟೆಯೇ

12th_Kannada_Reader_3-5.indd 110 22-05-2019 14:31:18

ಮಂಡೆ! ಕಾಲೊ ತೋಳೋ, ಅಂತು ಎರಡು ಬಾಹುಗಳು ಕವಿಯಿಂದ ಯೋಜನ ದೂರ ಚಾಚಿಕೊಂಡಿದ್ದವು. ಭೀತಿಯೆ ತೂತಾದಂತೆ ಅಕ್ಷಿ ಕುಕ್ಷಿಗಳು ಭಯಂಕರವಾಗಿದ್ದವು. ತನ್ನ ನಿರಾಶೆಯೆ ಮೂರ್ತಿವೆತ್ತಂತಿದ್ದ ಕಬಂಧನನ್ನು ನೋಡಿ ರಾಮ ನಡುಗಿದನು. ಹೆಮ್ಮೆ ಹಿಮ್ಮೆಟ್ಟಿತು; ಬಲ್ಮೆ ಹುದುಗಿತು. ಓಡಿ ಹೋಗಲೆಳಸಿದನು. ಕಾಲನ್ನು ಕೀಳಲಾರದೆ ಭಯ ಮೂರ್ಛೆ ಬಡಿದು ನೆಲಕ್ಕುರುಳಿದನು. ಕಬಂಧ ಹೆಬ್ಬಂಡೆಯಂತೆ ದುಶ್ಶಕುನ ಕೇತುವಿನಂತೆ ಮುಂದೆ ಮುಂದೆ ತೆವಳಿಕೊಂಡು ಬಂದು ಕೌಸಲ್ಯೆಯ ಕಂದನ ಕೋಮಲ ದೇವಗಾತ್ರವನ್ನಪ್ಪಿಕೊಂಡನು. 'ಹಾ! ಲಕ್ಷ್ಮಣಾ, ಕೆಟ್ಟೆ, ಕೆಟ್ಟೆ. ಅಸುರನ ಕೈಗೆ ಸಿಕ್ಕಿದೆ. ಕತ್ತಿ ಹಿಡಿಯಲು ಕೈಬಾರದು. ಓಡಲು ಕಾಲು ಬಾರದು. ದೂರ ಸರಿ, ದೂರ ಸರಿ. ಇವನು ನಿನ್ನನ್ನು ಹಿಡಿದಾನು. ನೀನೊಬ್ಬನಾದರೂ ಅಯೋಧ್ಯೆಗೆ ಹೋಗಿ ಭರತನನ್ನೂ ತಾಯಿಯನ್ನೂ ಸಮಾಧಾನ ಪಡಿಸು. ನನಗಿದೇ ಗತಿ. ಸೀತೆಯಿಲ್ಲದೆ ನನಗೆ ಅಯೋಧ್ಯೆ ಏನು, ಮರಣವೇನು?' ಎಂದು ರಾಮ ಒರಲಿದನು. ಹಾಗೆ ಒರಲುತ್ತಿರುವಾಗಲೆ ಲಕ್ಷ್ಮಣ ರಾಕ್ಷಸನ ಮೇಲೆ ಹಾಯ್ದು ಖಡ್ಗದಿಂದ ಅವನ ತೋಳನ್ನು ಕತ್ತರಿಸಿದನು. ಅಕ್ಷಿಕುಕ್ಷಿಗಳನ್ನು ಇರಿದನು. ರಾಮನು ನೋಡುತ್ತಿದ್ದಂತೆ ಆ ರಾಕ್ಷಸ ದುಃಸ್ವಪ್ನದಂತೆ ಮಾಯವಾದನು. ನಿರಾಶೆಯ ಕತ್ತಲಿಂದ ಆಶೆಯ ಕಿಡಿ ಮೂಡುವಂತೆ ಅವನ ಮೈಯಿಂದ ಬೃಂದಾರಕನೊಬ್ಬನು ಮೂಡಿ, ಶಬರಿಯಾಶ್ರಮದ ಕಡೆಗೆ ಕೈತೋರಿ ಮರೆಯಾದನು.

ರಾಮ ಭಯ ಮೂರ್ಛೆಯಿಂದ ಮೈತಿಳಿದೆದ್ದು ಸುಯ್ದು, 'ಸೌಮಿತ್ರಿ, ನಿನ್ನಿಂದ ಬದುಕಿದೆ' ಎಂದನು. 'ತಿಳಿದವನು ತನ್ನ ನೆರಳಿಗೆ ತಾನೆ ಹೆದರುವನೆ?' ಎಂದ ಲಕ್ಷ್ಮಣನ ಮಾತಿಗೆ ರಾಮ 'ತಿಳಿದವನಾಗುವುದು ತಿಳಿದ ಮೇಲೆ ತಾನೆ, ಭೂಮಿಗೆ ತನ್ನ ನೆಳಲೇ ರಾಹುವಲ್ಲದೆ ಬೇರುಂಟೇ?, ಭೂಕಂಪನದಿಂದ ಬೆಟ್ಟದ ದೃಢತೆಯೂ ಅಸ್ಥಿರವಾಗುತ್ತದಲ್ಲವೆ? ಆ ಭೂಸುತೆಗಾಗಿ ರಾಮ ಧೈರ್ಯ ನಡುಗುತ್ತಿದೆ. ಆ ನಿಶಾಚರ ನಿನ್ನಿಂದ ಸತ್ತನು. ಕಬಂಧನನ್ನು ಗೆದ್ದೆ. ನಿರಾಶೆಯನ್ನು ಕೊಂದೆ. ಆಶೆ ಮೂಡುತ್ತಿದೆ. ಬಾ, ಇಲ್ಲಿಂದ ತೆರಳೋಣ. ಮುಂದಿನ ಕಾರ್ಯ ಗುರುತರವಾಗಿದೆ' ಎನ್ನುತ್ತ ತಮ್ಮನನ್ನಪ್ಪಿಕೊಂಡನು. ಆಮೇಲೆ ಇಬ್ಬರೂ ಮುಂದೆ ನಡೆದರು.

ಆ ಬೆಳ್ದಿಂಗಳ ರಾತ್ರಿ ಮುದುಕಿ ಶಬರಿ ಕನಸೊಂದನ್ನು ಕಂಡು, ನಗುತ್ತ ಹುಲ್ಲಿನ ಹಾಸಿಗೆಯ ಮೇಲೆ ಎದ್ದು ಕುಳಿತಳು. ಕನಸಿನ ನೀಲಶ್ರೀಮೂರ್ತಿಯನ್ನು ಚಿತ್ರಿಸಿಕೊಂಡಳು. ಹರ್ಷ ಉಕ್ಕುತ್ತಿದ್ದಂತೆ ಮುಖದ ಸುಕ್ಕು ತೆರೆತೆರೆಯಾಯಿತು. ಪುಂಡಿನಾರಿನಂತಿದ್ದ ತಲೆಗೂದಲಿನ, ಹಲ್ಲುದುರಿದ ಬೋಡು ಬಾಯಿಯ, ಬಾಗಿದ ಬೆನ್ನ ಆ ಹಣ್ಣು ಮುದುಕಿ ಗುಡಿಸಲ ಬಾಗಿಲನ್ನು ತೆರೆದು ನೋಡಿದಳು. ಮುದುಕಿಯ ಮೇಲಣ ಕನಿಕರದಿಂದ ರಾತ್ರಿಯೇ ಕರಗಿ ಬೆಳಕಾದಂತೆ ಎಲ್ಲೆಲ್ಲೂ ಅವಳ ತಲೆಗೂದಲಂಥ ತಿಂಗಳು ಹರಡಿತ್ತು. ಶಬರಿ ಸುತ್ತಲೂ ತನ್ನ ಕಾತರ ದೃಷ್ಟಿಯನ್ನಟ್ಟಿ, ನಿಡುಸುಯ್ದು, 'ಓ! ಕಂದಯ್ಯ, ರಾಮಚಂದ್ರಯ್ಯ, ನೀನೆಂದು ಬರುವೆ. ಗುರು ಮತಂಗನ ಮಾತು ಸುಳ್ಳಾಗುವುದೆ? ಓ! ನನ್ನಯ್ಯ, ಹತ್ತು ವರ್ಷಗಳಿಂದ ನಿನಗಾಗಿ ಕಾದಿದ್ದೇನೆ. ಬಿತ್ತಿ ಬೆಳೆದು ಹಣ್ಣು ಹಂಪಲನ್ನು ಅಣಿ ಮಾಡಿಟ್ಟುಕೊಂಡು ನನ್ನ ಆಶ್ರಮ ನಿನಗಾಗಿ ಕಾಯುತ್ತಿದೆ. ಈ ಒಡಲು ಹಣ್ಣಾಗಿದೆ. ನೀನು ಬರುವುದಕ್ಕೆ ಮುಂಚೆ ಎಲ್ಲಿ ಅಳಿದೀತೋ ಎಂದು ಮನಸ್ಸಿಗೆ ನೋವಾಗುತ್ತಿದೆ. ಆಗಲೇ ದಿಟ್ಟಿ ಮಬ್ಬಾಗಿದೆ; ಅದು ಪೂರ್ತಿ ಹೋದ ಮೇಲೆ ನೀನು ಬಂದರೆ, ನಿನ್ನನ್ನು ಕಣ್ಣಾರೆ ನೋಡಲಾಗುತ್ತದೆಯೇ? ಕೈಯಿಂದ ಮೈಸವರಿ ಸಂತೋಷ ಪಡುವೆನಾದರೂ ಕಣ್ಣಾಸೆಯನ್ನು ಹೇಗೆ ತಡೆಯಲಿ? ಕಂದಯ್ಯ, ಬೇಗ ಬಾ, ಬದುಕಿರವಾಗಲೇ ನನ್ನೆದೆಗೆ ಶಾಂತಿಯನ್ನು ತಾ' ಎಂದು ರಾತ್ರಿಯ ಶಾಂತಿಗೆ ಭಂಗ ಬರದಂತೆ ಪ್ರಲಾಪಿಸಿದಳು.

ಇರುಳು ಕಳೆದು ಬೆಳಕು ಮೂಡಿತು. ಇಬ್ಬನಿಯನ್ನು ತಳೆದ ಬಯಲ ಕರಡ ಹುಲ್ಲು ಸಹ ಮಾತಂಗಿಯಂತೆ ನಿಡುಬಯಕೆಯಿಂದ ನಿಟ್ಟುಸಿರು ಬಿಡುತ್ತಿತ್ತು. ಮುದುಕಿಗೆ ಏನೋ ಕಳವಳ. ಒಂದೆಡೆ ನಿಲ್ಲಳು. ಹೊರಗೆ ಬರುತ್ತಾಳೆ. ಒಳಗೆ ಹೋಗುತ್ತಾಳೆ. ಭೋಂಕನೆ ಹೊರಗೆ ಬಂದು ಬಯಲು ಕಾಲ್ದಾರಿಯ ಕಡೆಗೆ ಕಣ್ಣಾಗಿ ನಿಲ್ಲುತ್ತಾಳೆ. ಸುಯ್ಯುತ್ತಾಳೆ. ಏನೇನೋ ಗೊಣಗಿಕೊಳ್ಳುತ್ತಾಳೆ. ಗುಣಿಸುತ್ತಾಳೆ. ಪೊರಕೆ ತಂದು ತರಗು ಗುಡಿಸಿ, ಸೊಂಟಗೈಯಾಗಿ ನಿಲ್ಲುತ್ತಾಳೆ. ಕಣ್ಣು ನಿಲುಕುವವರೆಗೆ ನೋಡುತ್ತಾಳೆ, ನಿಟ್ಟುಸಿರು ಬಿಡುತ್ತಾಳೆ. ಹೀಗೆ ನಿರೀಕ್ಷಣೆಯ ನೋಂಪಿಯಲ್ಲಿಯೇ ಹೊತ್ತೇರಿ ನಡುಹಗಲಾಯಿತು. ಹುಲ್ಲುಗಾವಲಿನ ನಡುವೆ ಯಾರೋ ಬರುತ್ತಿದ್ದಂತೆ ಭ್ರಾಂತಿಯಾಯಿತು. ಕಟಿಗೊಂದು ಕೈಯಿಟ್ಟು, ಹಣೆಗೊಂದು ಕೈಯೆತ್ತಿ ಡೊಂಕಾಗಿ ನಿಂತಳು. ನೋಡಿದಳು. ಮತ್ತೆ ಏನೇನೋ ಸಂದೇಹ ಮುತ್ತಿ ಕಾಡಿತು. ಯಾರೋ ಬಂದರು. ಬಂದವರು ತಾನು ಚಿತ್ರಿಸಿಕೊಂಡಿದ್ದ ರಾಮಲಕ್ಷ್ಮಣರಲ್ಲ. ಭಗವಂತ ಭಕ್ತ ನಿರೀಕ್ಷಿಸಿದ ರೂಪದಲ್ಲಿ ಬರುತ್ತಾನೆಯೇ? ಸುಖದ ರೂಪವನ್ನು ಅಪೇಕ್ಷಿಸಿದರೆ, ದುಃಖದ ರೂಪದಲ್ಲಿಯೇ ಅವನು ಮೈದೋರಬಹುದು. ಅವಳ ಮಂದದೃಷ್ಟಿಗೆ ಕೆದರುದಲೆಯ, ಕೊಳೆಬೆವರಿಡಿದ

12th_Kannada_Reader_3-5.indd 111 22-05-2019 14:31:19

ಉಡುಗೆಯ, ಬಾಡಿದ ಮೋರೆಯ, ಸತಿವಿಯೋಗಾಗ್ನಿ ದಗ್ಧ ಶರೀರದ, ರೂಕ್ಷ ರೂಪದ ರಾಮ ಬೇಡನಂತೆ ಕಂಡು ಬಂದನು. ಅವರಿಬ್ಬರನ್ನೂ ನೆಂಟರೆಂದು ಭಾವಿಸಿ ಪೆಚ್ಚು ಮೋರೆಯಿಂದ ಅವಳು ನೋಡುತ್ತಿರಲು ಲಕ್ಷ್ಮಣ, 'ಅಜ್ಜಿ, ದಣಿದು ಬಂದಿದ್ದೇವೆ. ಗುಡಿಸಲೊಳಗೆ ಸ್ವಲ್ಪ ಜಾಗವನ್ನೂ, ತಿನ್ನಲು ಸ್ವಲ್ಪ ಆಹಾರವನ್ನೂ ಕೊಟ್ಟು ಈ ನಿನ್ನ ಪರದೇಶಿ ಕಂದರನ್ನು ಕಾಪಾಡು' ಎಂದನು. 'ಕಂಡಕಂಡವರಿಗೆಲ್ಲ ಬಂದಬಂದವರಿಗೆಲ್ಲ ಊಟ ವಸತಿಗಳನ್ನು ಒದಗಿಸಲು ನಾನೇನು ಅಡುಗೂಲಜ್ಜಿಯೇ? ಹುಂ, ಹೋಗಲಿ ನಾನೂ ಬಡವಿ. ಇದ್ದುದನ್ನು ಕೊಡುತ್ತೇನೆ, ಬನ್ನಿ' ಎಂದು ಶಬರಿ ಒಳಗೆ ನಡೆದಳು. ರಾಮಲಕ್ಷ್ಮಣರು ಕನಿಕರದ ನಗೆಸೂಸಿ ಹಿಂಬಾಲಿಸಿದರು.

ಹಿಂದೆಯೇ ಉರಿ ಬಿಸಿಲ ಝಳದಿಂದ ಒಳಗೆ ಬಂದ ಅತಿಥಿ ಮಕ್ಕಳನ್ನು ಕುರಿತು ಶಬರಿ ಶಂಕೆಯಿಂದ, 'ನೀವು ಯಾರು, ಎಲ್ಲಿಯವರು? ನನ್ನ ಕಣ್ಣು ಮಬ್ಬು. ಬಗೆ ಮಂಜು, ಏನೂ ಸರಿಯಾಗಿ ತಿಳಿಯದು' ಎಂದು ಕೇಳಿದಳು. 'ಅಜ್ಜಿ, ನಮಗೆ ಮನೆಯಿಲ್ಲ, ಮಾರಿಲ್ಲ. ದಿಕ್ಕುಗೆಟ್ಟು ಕಾಡು ಪಾಲಾದವರು. ಇಲ್ಲಿ ಮೀಯಲು ಕೊಳವಿದೆಯೇ?' ಎಂದು ಲಕ್ಷ್ಮಣ ಪ್ರಶ್ನಿಸಿದನು. 'ಬೇಡರಿಗೆ ಸ್ನಾನವೇ?' ಎಂದು ಶಬರಿ ವಿಸ್ಮಯ ಪಡುತ್ತ, 'ಆ ಪೇರಿಳೆ ಮರದ ಕೆಳಗೆ ಇದೆ... ಈ ನಾಡಿನಲ್ಲಿ ಎಷ್ಟೋ ಮಂದಿ ನಿಮ್ಮಂತೆ ನೆಲೆಗೆಟ್ಟು, ಮನೆ ಬಿಟ್ಟು ಅಲೆಯುತ್ತಿದ್ದಾರೆ. ಏನು ಕೇಡುಗಾಲವೋ, ಒಬ್ಬ ಮತ್ತೊಬ್ಬನ ಹೆಂಡತಿಯನ್ನು ಮೋಹಿಸುತ್ತಾನೆ' ಎಂದು ಮಾತು ಮುಗಿಸುವಷ್ಟರಲ್ಲಿ ರಾಮ ಬೆಚ್ಚಿ, 'ಯಾರ ಹೆಂಡತಿಯನ್ನು ಯಾರು ಮೋಹಿಸಿದರು ಅಜ್ಜಿ?' ಎಂದು ಪ್ರಶ್ನಿಸಿದನು. 'ಮಿಂದುಂಡ ಮೇಲೆ ಆ ಹೊಲಸು ಕಥೆಯನ್ನು ಹೇಳುವುದಾಗಿ ಅವರನ್ನು ಕೊಳಕ್ಕೆ ಕಳುಹಿಸಿದಳು.

ಅವರು ಆ ಕಡೆ ಹೋದ ಮೇಲೆ ಶಬರಿ ಕೌತುಕಕ್ಕಾಗಿ ಅವರ ಗಂಟನ್ನು ಮುಟ್ಟಿ ನೋಡಿದಳು. ಬಿಲ್ಲು ಬತ್ತಳಿಕೆಗಳನ್ನೂ ಇತರ ವಸ್ತುಗಳನ್ನು ಕಂಡು ಅಚ್ಚರಿಗೊಂಡಳು. ಆದರೂ ತನ್ನ ಕಲ್ಪನೆಯ ರಾಮನನ್ನು ಕಾಣಲಿಲ್ಲ. ಅಷ್ಟರಲ್ಲಿ ರಾಮ ಲಕ್ಷ್ಮಣರು ಮಿಂದು ಬಂದರು. ಅವರ ತೇಜಸ್ಸನ್ನೂ, ನಯದ ನಡೆ ನುಡಿಗಳನ್ನೂ ಕಂಡು ಅವರು ದೊರೆ ಮಕ್ಕಳೇ ಇರಬೇಕೆಂದು ಅವಳು ಊಹಿಸಿದಳು. ಗೀಕುಚಾಪೆ, ಮಣೆಗಳನ್ನಿರಿಸಿ ಬಾಳೆಯ ತಳಿರನ್ನು ಹಾಸಿ, ಹಸಿರು ದೊನ್ನೆಗಳಲ್ಲಿ ನೀರಿಟ್ಟು, ಕೆನೆ ಹಾಲು, ಜೇನು, ಗೆಣಸು, ಬಾಳೆಹಣ್ಣು, ಸೌತೆ ಪಚ್ಚಡಿ, ಬಿಸಿಯನ್ನ, ಮೊಸರು, ಬೆಲ್ಲ, ಬೆಣ್ಣೆಗಳನ್ನು ಬಡಿಸುತ್ತ, 'ಯಾರ ಪುಣ್ಯ ಯಾರಿಗೋ, ನಿಮ್ಮ ಪುಣ್ಯ ಮತ್ತೊಬ್ಬರಿಗೆ ಲಭಿಸುತ್ತದೆಯೇ? ಯಾರಾದರೇನು, ನೀವು ನನ್ನ ಅತಿಥಿಗಳು. ಉಂಡು ನಲಿಯಿರಿ' ಎಂದು ಮುಗುಳುನಗುತ್ತಾ ನುಡಿದಳು. 'ಯಾರ ಪುಣ್ಯ ಯಾರಿಗೆ? ಹೇಳಜ್ಜಿ. ಇದು ಯಾರಿಗೆ ಮೀಸಲಾಗಿತ್ತು? ಅಂತೂ ನಿನ್ನ ಬಯಕೆಯ ಅತಿಥಿ ಪುಣ್ಯವಂತನೇ ಇರಬೇಕು!'. 'ದಶರಥ ಕುಮಾರ, ಲಕ್ಷ್ಮಣಾಗ್ರಜ, ಸೀತಾರಮಣ' ಹೆಸರು ಹೇಳುವ ಸಂತೋಷಕ್ಕೆ ಶಬರಿ ಅಳುತ್ತಾ, 'ಕಂದಾ, ಅವರಿಗಾಗಿ ಹತ್ತು ವರ್ಷಗಳಿಂದ ಕಾಯುತ್ತಿದ್ದೇನೆ. ನಿತ್ಯವೂ ಇದೇ ಉಣಿಸನ್ನೇ ಅಣಿ ಮಾಡುತ್ತಿದ್ದೇನೆ. ಗುರು ಮತಂಗನ ನುಡಿ ಸುಳ್ಳೇ? ನೀವು ಬಡಗರಂತೆ ಕಾಣುವಿರಿ. ರಾಮ ಎಲ್ಲಿದ್ದಾನೆ, ಎಂದು ಬರುತ್ತಾನೆ? ನೀವು ಅವನನ್ನು ಕಂಡಿದ್ದೀರಾ, ಕೇಳಿದ್ದೀರಾ? ನಾನು ಸಾಯುವುದಕ್ಕೆ ಮುಂಚೆ ಅವನ ಪವಿತ್ರ ದರ್ಶನ ಸಿಗದೇ? ಆ ಶಾಂತ ಮೂರ್ತಿಯನ್ನು ಕಾಣುವುದೇ ನನಗೆ ಪರಮ ಶಾಂತಿ' ಎಂದಳು. ಅವಳ ಮಾತನ್ನು ಕೇಳಿ ರಾಮನ ಕಣ್ಣಿನಲ್ಲಿ ನೀರೂರಿತು. 'ಆ ಶಾಂತಿ ನಿಧಿ, ಶಾಂತಿಯಿಲ್ಲದೆ ಅಲೆಯುತ್ತಿರುವನಲ್ಲವೇ? ತಾಯಿ, ಮನೆಗೆಟ್ಟು ಕಾಡುಪಾಲಾದವರನ್ನು ಶಾಂತಿನಿಧಿಯೆಂದು ವರ್ಣಿಸುವೆಯಾ? ನಿನ್ನ ಪ್ರೀತಿಯ ಕಲ್ಪನೆ ಸಾಮಾನ್ಯನನ್ನು ದೇವಮಾನವನೆಂದು ಬಗೆದಿದೆ' ಎಂದನು. 'ತೆಗೆ, ತೆಗೆ! ಮಹಾತ್ಮನನ್ನು ತೆಗಳಬೇಡ', 'ನಾನು ರಾಮನನ್ನು ಬಲ್ಲೆ', 'ನೀನರಿಯೆ', 'ನನ್ನನ್ನು ನಾನರಿಯೆನೆ?' ಶಬರಜ್ಜಿ ಬೆರಗು ಹೊಡೆದವಳಂತೆ ರಾಮನ ಕಣ್ಣಿನಲ್ಲಿ ಕಣ್ಣಿಟ್ಟು ನೋಡಿದಳು. ರಾಮನು ಕಣ್ಣೆತ್ತದೆ ಉಣತೊಡಗಿದನು. ಅವನ ತುತ್ತಿಗೆ ಕಣ್ಣೀರ ಹನಿ ಉದುರಿದವು. ಮುದುಕಿ ಮಾತು ನಿಲ್ಲಿಸಿದಳು.

ಊಟವಾದ ಮೇಲೆ ಇಬ್ಬರೂ ವಿಶ್ರಾಂತಿಗಾಗಿ ಮಲಗಿದರು. ಸ್ವಲ್ಪ ಹೊತ್ತಿನಲ್ಲಿ ಬಿಳಿ ಮೆಯ್ಯ ಲಕ್ಷ್ಮಣ ಎದ್ದು, ಹೊರಗೆ ಹೋದನು. ನೀಲಿ ಮೆಯ್ಯ ರಾಮ, 'ಸೀತೆ, ಬಾ, ಇಲ್ಲಿ ಬಾ ಪ್ರಿಯೇ, ಜನಕ ಜಾತೆ!' ಎಂದು ಕನವರಿಸಿದನು. ಹತ್ತಿರದಲ್ಲಿ ಬೆಲ್ಲ ಬೇಲಗಳ ಪಾನಕವನ್ನು ಮಾಡುತ್ತಿದ್ದ ಅಜ್ಜಿ ಓಡಿ ಬಂದು, ಕನಸಿನಲ್ಲಿ ಮುಗುಳು ನಗುತ್ತಿದ್ದ ದೇವಗಾತ್ರನನ್ನು ನೋಡಿದಳು. ತನ್ನ ಕಲ್ಪನೆಯ ಸೌಮ್ಯನನ್ನು ದರ್ಶಿಸಿ ಆನಂದತುಂದಿಲಳಾದಳು. ಇದ್ದಕ್ಕಿದ್ದಂತೆ ವೈರ ಭಾವದಿಂದ ಅವನ ಮುಖ ವಿಕಾರವಾಯಿತು. ಕೋಪದಿಂದ, 'ನಿಲ್, ನಿಲ್... ರಾಕ್ಷಸಾಧಮ, ನನ್ನ ಸೀತೆಯೆಲ್ಲಿ ಹೇಳು?' ಎಂದು ಕೂಗಿ ಹುಬ್ಬುಗಂಟಿಕ್ಕಿ ಜಿಡುಗಚ್ಚಿದನು. ನಿದ್ದೆ ಕಳೆದು ಎದ್ದು ಕುಳಿತನು. ದೂರ ಸರಿದು ತಲ್ಲಣಿಸುತ್ತಿದ್ದ ಶಬರಜ್ಜಿಯನ್ನು ಕಂಡು ನಾಚಿಕೆಯಿಂದ ಬಾಗಿ, 'ತಪ್ಪಾಯ್ತಜ್ಜಿ, ಕನಸನ್ನು ನಿಜವೆಂದು ಭಾವಿಸಿದೆ. ನಿನ್ನನ್ನು

12th_Kannada_Reader_3-5.indd 112 22-05-2019 14:31:19

ಹೆದರಿಸಿದೆ' ಎಂದನು. ಮುದುಕಿ ಧೊಪ್ಪನೆ ಬಿದ್ದು ರಾಮನನ್ನಪ್ಪಿಕೊಂಡು, 'ದಮ್ಮಯ್ಯ, ಈ ಮರೆಸಾಟವನ್ನು ಸಾಕು ಮಾಡು. ರಾಮಚಂದ್ರಯ್ಯ, ನನ್ನ ಮಗಳಿಗೆ ಏನಾಯಿತು? ಹೇಳು? ಸೀತೆಯೆಲ್ಲಿ? ಆಗಲೇ ನಿನ್ನ ಗಂಟಿನಲ್ಲಿದ್ದ ಸೀರೆಯನ್ನು ಕಂಡರೂ ಅರಿಯದೇ ಹೋದೆ' ಎಂದು ಗದ್ಗದಿಸಿದಳು. ತಾಯಿಯ ಆಲಿಂಗನದ ತೊಟ್ಟಿಲಲ್ಲಿ ಶಿಶುವಾದ ರಾಮ, 'ನಾನೇ ನಿರ್ಭಾಗ್ಯನಾದ ರಾಮ ಅಜ್ಜಿ. ಸೀತೆಯನ್ನು ರಾಕ್ಷಸ ಕದ್ದೊಯ್ದನು. ಅವಳನ್ನು ಹುಡುಕಲು ಲಕ್ಷ್ಮಣನೊಡನೆ ಅಲೆಯುತ್ತಿದ್ದೇನೆ' ಎಂದು ಬಿಕ್ಕಿ ಬಿಕ್ಕಿ ಅತ್ತನು. ತಾಯಿಯ ಮಡಿಲಲ್ಲಿ ಯಾರಾದರೂ ಬರಿಯ ಹಸುಗಳೇ ಅಲ್ಲವೇ?

ಶ್ರೀರಾಮ, ದುಃಖ ಭಾರದಿಂದ ಕುಗ್ಗಿ ಏಳಲಾರದೆ ಹಾಸುಗೆ ಹಿಡಿದನು. ಆ ತಪಸ್ವಿನಿ ಮುದುಕಿ ಹಗಲಿರುಳೆನ್ನದೆ ನಿದ್ದೆಯುಳಿದು ನಿರಂತರವಾಗಿ ತನ್ನಿಷ್ಟ ದೇವತಾಮೂರ್ತಿ ರಾಮನ ಸೇವೆಗೆ ಉಳಿದ ಆಯಸ್ಸನ್ನು ಸಮೆಸಿದಳು. ಮನೋರೋಗಕ್ಕೆ ಪ್ರೇಮವೇ ಸಿದ್ಧೌಷಧವಲ್ಲವೇ? ಹಗಲಿರುಳೆನ್ನದೆ ನಿದ್ದೆಯಿಲ್ಲದೆ, ಹಾಸುಗೆಯ ಬಳಿ ಕುಳಿತು, ರಾಮನ ಮೈಯನ್ನು ಸವರುತ್ತಾ ವನವಾಸದ ಕಥೆಯನ್ನು ಕೇಳುವಳು. ತನ್ನ ಬಾಳಿನ ಕಥೆಯನ್ನು ಹೇಳಿ ಅವನನ್ನು ಸಂತೈಸುವಳು. ಆದರೂ ರಾಮನ ರುಜೆ ಹರಿಯಲಿಲ್ಲ. ದಿನೇದಿನೇ ಅವನು ಕೃಶವಾದನು; ಕಾಂತಿ ಮಸುಳಿಸಿತು. ರಾವಣನ ರಾಜತಂತ್ರ ಯಶಸ್ವಿಯಾಯಿತೆನ್ನುವಂತೆ ರಾಮನ ಮನದ ಕೆಚ್ಚು ಮುರುಟಿ ಹೋಯಿತು. ಮೊಗ ಬಾಡಿತು. ಒಂದು ರಾತ್ರಿ, ಲಕ್ಷ್ಮಣ ಒಬ್ಬನೇ ಹೊರಗೆ ಹೋಗಿ ಅರೆ ಬಂಡೆಯೊಂದರ ಮೇಲೆ ಕುಳಿತು ಬಿಕ್ಕಿ ಬಿಕ್ಕಿ ಅಳುತ್ತಾ, ಸಪ್ತಋಷಿ ಮಂಡಲದ ಉದಯವನ್ನು ನೋಡುತ್ತಿದ್ದನು. ಹಿಂದಿನಿಂದ ಶಬರಿ ಬಂದು ಅವನ ಹೆಗಲ ಮೇಲೆ ಕೈಯಿಟ್ಟು, 'ಕಂದಾ, ಲಕ್ಷ್ಮಣ! ಇದೇನು? ಏಕೆ ಈ ಕೊರಗು?' ಎಂದು ಕೇಳಿದಳು. 'ಅಜ್ಜಿ, ಅತ್ತಿಗೆಯ ಪಾಡು ಹಾಗಾಯಿತು. ಅಣ್ಣನೋ... ಅಣ್ಣನೋ...' ಎಂದು ಲಕ್ಷ್ಮಣ ರೋಧಿಸುತ್ತಿರಲು, ಶಬರಿ ಅವನ ಕಣ್ಣೊರೆಸಿ, 'ಮಗು, ದುಃಖ ಬೇಡ. ನಿನ್ನಣ್ಣನ ಪ್ರಾಣಕ್ಕೆ ನಾನು ಹೊಣೆ. ಗುರುಕೃಪೆಯಿಂದ ರಾಮನ ರುಜೆಯನ್ನೆಲ್ಲ ಹೀರಿ ಬಿಡುತ್ತೇನೆ ನೋಡು, ಬಾ...' ಎಂದು ಒಳಗೆ ಕರೆದುಕೊಂಡು ಹೋದಳು. ತನ್ನ ಗುರುವನ್ನು ಧ್ಯಾನಿಸುತ್ತಾ, ಎಲುಬುಗೂಡಾಗಿ ಮಲಗಿದ್ದ ಶ್ರೀರಾಮ ಮೂರ್ತಿಯನ್ನು ಪ್ರದಕ್ಷಿಣೆ ಮಾಡಿ ಅವನ ಶ್ರೀ ಪಾದಗಳಿಗೆ ನಮಸ್ಕರಿಸಿ ಬೆರಗಾಗಿ ನೋಡುತ್ತಿದ್ದ ಲಕ್ಷ್ಮಣನ ಕಡೆಗೆ ತಿರುಗಿ, 'ವತ್ಸ, ರಾಮನಿನ್ನು ಸುಕ್ಷೇಮಿ; ದುಃಖವನ್ನು ಬಿಡು' ಎಂದಳು. ಮರುದಿನ ಬೆಳಿಗ್ಗೆ ರಾಮ ಆರೋಗ್ಯದಿಂದ ಎದ್ದನು. ಅವನ ಉಜ್ವಲ ತೇಜಸ್ಸನ್ನು ಕಂಡು ಲಕ್ಷ್ಮಣ ಕೃತಜ್ಞತೆಯಿಂದ ಶಬರಿಗೆ ನಮಸ್ಕರಿಸಿದನು.

ಆ ದಿನವೇ ಶಬರಿ ಹಾಸುಗೆ ಹಿಡಿದಳು. ನಿದ್ದೆಗೆಟ್ಟು ತನ್ನನ್ನು ಉಪಚರಿಸಿದ ರಾಮ, ಉಪಚರಿಸಲುನುವಾದನು. 'ಮಗುವೇ! ನನಗಾಗಿ ಮರುಗಬೇಡ. ಹಸುರೆಲೆಗೆ ಉಪಚಾರ ಬೇಕೇ ಹೊರತು ಹಣ್ಣೆಲೆಗೇಕೆ? ರಾಮಚಂದ್ರಾ, ನಾನು ಧನ್ಯೆ. ನಿನ್ನ ಸೇವೆಯಿಂದ ನನಗೆ ಆಧ್ಯಾತ್ಮ ಸಿದ್ಧಿಸುತ್ತದೆ. ಇದಕ್ಕಿಂತ ಬೇರೆ ಪುಣ್ಯ ಬೇಕೆ? ನಿನ್ನ ಮುಂದಿನ ಕೆಲಸ ಬೆಟ್ಟದಂತಿದೆ, ಕಠಿಣವಾಗಿದೆ. ನಾನೊಂದು ಕನಸನ್ನು ಕಂಡೆ. ರಾವಣನ ಉದ್ಯಾನದಲ್ಲಿ ಸೀತೆ ಸೊರಗಿದ್ದಾಳೆ. ಕಂದಾ, ನಿನ್ನಂತೆ ಮನೆಯನ್ನೂ ಮಡದಿಯನ್ನೂ ಕಳೆದುಕೊಂಡು ಕಾಡುಪಾಲಾದ ಸುಗ್ರೀವ ತನ್ನ ಗೆಳೆಯರೊಡನೆ ಋಷ್ಯಮೂಕದಲ್ಲಿದ್ದಾನೆ. ಅಗೋ ಅಲ್ಲಿ, ದಿಗಂತದೆಡೆ ಕಾಣಿಸುತ್ತಿರುವುದೇ ಆ ದಿವ್ಯ ಪರ್ವತ. ಅದರ ತಪ್ಪಲಲ್ಲಿಯೇ ಮತಂಗ ಮುನಿಯ ಕಾನನವಿದೆ. ಅದರ ಅಂಚಿನಲ್ಲಿಯೇ ಪಂಪಾ ಸರೋವರವಿದೆ. ತುಂಗಭದ್ರೆಯ ದಡದ ಮೇಲೆ ವಾನರ ರಾಜಧಾನಿ ಕಿಷ್ಕಿಂಧೆಯಿದೆ. ಅದರ ದೊರೆ ವಾಲಿ. ಅವನಿಂದ ಸುಗ್ರೀವ ಭಂಗ ಹೊಂದಿದ್ದಾನೆ. ನೀನು ಆ ಸುಗ್ರೀವನ ಸಖ್ಯವನ್ನು ಗ್ರಹಿಸು. ದುಃಖಿಗೆ ದುಃಖಿ ಸಹಾಯಕ. ದೈವೇಚ್ಛೆ ಗೆಲ್ಲಲಿ, ನಿನ್ನಿಚ್ಛೆ ಸಲ್ಲಲಿ' ಹೀಗೆ ನುಡಿಯುತ್ತಾ ನುಡಿಯುತ್ತಾ, ಹರ್ಷದಿಂದ ರಾಮ ಲಕ್ಷ್ಮಣರನ್ನು ನೋಡುತ್ತಾ ನೋಡುತ್ತಾ ಆ ಅಮರ ಸನ್ಯಾಸ್ಮೆ ಧನ್ಯೆ ಕಣ್ಣು ಮುಚ್ಚಿದಳು.

ಕೃತಿ–ಕರ್ತೃ ವಿಚಾರ



ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ

12th_Kannada_Reader_3-5.indd 113 22-05-2019 14:31:19

ಎಂಬಲ್ಲಿ 1904ರಲ್ಲಿ ಜನಿಸಿದರು. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ವೃತ್ತಿಯನ್ನು ಆರಂಭಿಸಿದ ಇವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಮಕ್ಕಳ ಕಥನ ಕವನವಾದ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ'ಯಿಂದ ತೊಡಗಿ, 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದವರೆಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕುವೆಂಪು ಅವರು ವೈವಿಧ್ಯಮಯವಾದ ಕೃತಿಗಳನ್ನು ರಚಿಸಿದರು. ನವಿಲು, ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ, ಪಕ್ಷಿಕಾಶಿ, ಕಲಾಸುಂದರಿ, ಜೇನಾಗುವಾ ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. 'ನನ್ನ ದೇವರು ಮತ್ತು ಇತರ ಕಥೆಗಳು', 'ಸಂನ್ಯಾಸಿ ಮತ್ತು ಇತರ ಕಥೆಗಳು' ಇವು ಇವರ ಕಥಾ ಸಂಕಲನಗಳು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಇವರ ಬೃಹತ್ ಕಾದಂಬರಿಗಳು. ರಕ್ತಾಕ್ಷಿ, ಬೆರಳ್ಗೆ ಕೊರಳ್, ಬಿರುಗಾಳಿ, ಯಮನ ಸೋಲು, ಜಲಗಾರ, ಧನ್ವಂತರಿಯ ಚಿಕಿತ್ಸೆ ಮೊದಲಾದವು ಅವರ ನಾಟಕಗಳು. 'ನೆನಪಿನ ದೋಣಿಯಲ್ಲಿ' ಎಂಬುದು ಅವರ ಆತ್ಮಕಥನ. 'ದ್ರೌಪದಿಯ ಶ್ರೀಮುಡಿ' ಮೊದಲಾದ ವಿಮರ್ಶಾ ಕೃತಿಗಳನ್ನೂ ರಚಿಸಿದ್ದಾರೆ. 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ 1955ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1968ರಲ್ಲಿ ಭಾರತೀಯ 'ಜ್ಞಾನಪೀಠ ಪ್ರಶಸ್ತಿ' ಮತ್ತು 1988ರಲ್ಲಿ ಪಂಪ ಪ್ರಶಸ್ತಿಗಳು ಲಭಿಸಿವೆ. 1957ರಲ್ಲಿ ಧಾರವಾಡದಲ್ಲಿ ನಡೆದ 39ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸರ್ಕಾರವು ಇವರಿಗೆ 'ಪದ್ಮಭೂಷಣ' ಹಾಗೂ 'ಪದ್ಮವಿಭೂಷಣ' ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರವು 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ನಾಡೋಜ, ರಾಷ್ಟ್ರಕವಿ ಎಂಬ ಬಿರುದುಗಳೂ ಕೂಡ ಇವರಿಗೆ ದೊರಕಿವೆ. ಮೈಸೂರು, ಕರ್ನಾಟಕ, ಬೆಂಗಳೂರು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿವೆ. ಇವರು 9.11.1994ರಂದು ನಿಧನರಾದರು.

ಪದಗಳ ಅರ್ಥ

ಶವ–ಹೆಣ; ಕಾಡು–ವನ, ಅರಣ್ಯ; ಭೀತಿ–ಭಯ; ಕಂದ–ಮಗು; ಅಸುರ–ರಾಕ್ಷಸ; ಬೆಟ್ಟ–ಪರ್ವತ; ಪ್ರಲಾಪಿಸು–ರೋಧಿಸು; ನೆಂಟ–ಸಂಬಂಧಿಕರು; ಝಳ–ಸೂರ್ಯನ ತಾಪ; ಮಿಂದು–ಸ್ನಾನ, ಜಳಕ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಪಂಚವಟಿಯನ್ನು ಬಿಟ್ಟು ಬರುವಾಗ ಲಕ್ಷ್ಮಣನು ಏನು ಹೇಳಿದನು ?
2. ಶಬರಿ ಎಂತಹ ಕನಸನ್ನು ಕಂಡಳು ?
3. ಶಬರಿ ಹೇಗೆ ಪ್ರಲಾಪಿಸಿದಳು?
4. ಶಬರಜ್ಜಿಗೆ ರಾಮನು ಹೇಗೆ ಕಂಡನು ?
5. ಶಬರಜ್ಜಿಯಲ್ಲಿ ಲಕ್ಷ್ಮಣನು ಏನೆಂದು ಬೇಡಿದನು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅತಿಥಿ ಮಕ್ಕಳನ್ನು ಶಬರಿಯು ಏನೆಂದು ಕೇಳಿದಳು?
2. ಶಬರಿ ಆಶ್ಚರ್ಯ ಪಡಲು ಕಾರಣವೇನು?
3. ಶಬರಿ ರಾಮಲಕ್ಷ್ಮಣರಿಗೆ ಹೇಗೆ ಉಪಚಾರ ಮಾಡಿದಳು?
4. ಮಲಗಿರುವಾಗ ರಾಮನು ಹೇಗೆ ಕನವರಿಸಿದನು?
5. ಲಕ್ಷ್ಮಣನು ಒಬ್ಬಂಟಿಗನಾಗಿ ಬಂಡೆಯ ಮೇಲೆ ಕುಳಿತು ಏನನ್ನು ಕಂಡನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಶಬರಿಯು ರಾಮ ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ ?
2. ಶಬರಿಯು ಸಾವನ್ನಪ್ಪಿದ ಸಂದರ್ಭವನ್ನು ವಿವರಿಸಿ.

12th_Kannada_Reader_3-5.indd 114 22-05-2019 14:31:19

ಘಟಕ ಐದು

ದ್ವಿರುಕ್ತಿ, ಅನ್ಯದೇಶ್ಯ, ತತ್ಸಮ–ತದ್ಭವ, ಜೋಡಿ ಪದಗಳು, ಅನುಕರಣ ವಾಚಕಗಳು, ನುಡಿಗಟ್ಟು, ಗಾದೆಗಳು.

ದ್ವಿರುಕ್ತಿ

ಒಂದೇ ಪದವನ್ನು ಅರ್ಥದ ಪರಿಣಾಮ ಹೆಚ್ಚಿಸಲು ಎರಡು ಸಲ ಬಳಸುವುದನ್ನೇ ದ್ವಿರುಕ್ತಿ ಎನ್ನಲಾಗುವುದು. ಅಭಿವ್ಯಕ್ತಿಯ ವಿಶೇಷತೆ, ಸಂಭ್ರಮ, ತ್ವರೆ, ಆವೃತ್ತಿ, ಎಚ್ಚರಿಕೆ, ವೀಪ್ಸೆ(ವೀಪ್ಸೆ ಎಂದರೆ ಒಂದನ್ನು ಬಿಡದೆ ಹೇಳುವುದು) ಮೊದಲಾದ ವಿಶೇಷವಾದ ಅರ್ಥಗಳು ತೋರುವಾಗ ಒಂದು ಪದವನ್ನಾಗಲೀ, ವಾಕ್ಯವನ್ನಾಗಲೀ ಎರಡೆರಡು ಬಾರಿ ಪ್ರಯೋಗಿಸುತ್ತೇವೆ. ಇದಕ್ಕೆ **ದ್ವಿರುಕ್ತಿ** ಎಂದು ಹೆಸರು.

ಉದಾಹರಣೆಗೆ:

ಸಂಭ್ರಮ : ಭಲೆಭಲೆ, ಗೆದ್ದೆಗೆದ್ದೆ

ತ್ವರೆ : ಬಂದೆಬಂದೆ, ನಿಲ್ಲುನಿಲ್ಲು

ಎಚ್ಚರಿಕೆ : ಹಳ್ಳಹಳ್ಳ, ಮುಳ್ಳುಮುಳ್ಳು, ಕಲ್ಲುಕಲ್ಲು

ವೀಪ್ಸೆ : ಕೇರಿಕೇರಿಯಲ್ಲಿ, ಮನೆಮನೆಯಲ್ಲಿ

ಲಾಸ್ಯ : ಬೇಗ ಹೋಗು, ಬೇಗಹೋಗು;
ನನಗೆ ಕೊಡು, ನನಗೆ ಕೊಡು.

ಅನ್ಯದೇಶ್ಯಗಳು

ಯಾವುದೇ ಭಾಷೆಯ ಚರಿತ್ರೆಯನ್ನು ಗಮನಿಸಿದಾಗ ಅದರ ಶಬ್ದಕೆದೂಶಕ್ಕೆ ಕಾಲಕ್ರಮದಲ್ಲಿ ಇತರ ಭಾಷೆಗಳ ಅನೇಕ ಶಬ್ದಗಳು ಸೇರಿಕೊಂಡಿರುವುದು ಕಂಡು ಬರುತ್ತದೆ. ಹೀಗೆ ಬೇರೆ ಭಾಷೆಗಳಿಂದ ಬಂದಿರುವ ಪದಗಳನ್ನು ಅನ್ಯದೇಶ್ಯಗಳೆಂದು ಕರೆಯುವರು.

ಉದಾಹರಣೆಗೆ: ಅರ್ಜಿ, ಕಛೇರಿ, ಜಮೀನು, ಕಾರ್ಖಾನೆ, ಕಾಗದ, ರೈಲು, ಬ್ಯಾಂಕ್, ಕೋರ್ಟು, ಹೋಟೆಲ್, ಕವರ್, ಸ್ಕೂಟರ್, ದವಾಖಾನೆ, ಕುರ್ಚಿ, ಬೆಂಚ್ ಇತ್ಯಾದಿ.

ಇದರಲ್ಲೂ ಮುಖ್ಯವಾಗಿ ಸಂಸ್ಕೃತದಿಂದ ಕನ್ನಡಕ್ಕೆ ಹಲವು ಪದಗಳು ಬಂದು ಸೇರಿವೆ. ಅವುಗಳನ್ನು ತತ್ಸಮ–ತದ್ಭವಗಳೆಂಬ ಹೆಸರಿನಿಂದ ಗುರುತಿಸುತ್ತೇವೆ.

12th_Kannada_Reader_3-5.indd 115 22-05-2019 14:31:19

ತತ್ಸಮ–ತದ್ಭವ

ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದರ್ಥ. ತದ್ಭವ ಎಂದರೆ ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡಕ್ಕೆ ಪರಿವರ್ತನೆ ಮಾಡಿಕೊಂಡ ಪದ ಅಥವಾ ಸಂಸ್ಕೃತದಿಂದ ಹುಟ್ಟಿದ ಪದ ಎಂದು ಅರ್ಥ. ಸಂಸ್ಕೃತ ಭಾಷೆಯ ಶಬ್ದವನ್ನು ಅದು ಇರುವಂತೆಯೇ ಅಥವಾ ತಡೆಯಲ್ಲಿ ಬದಲಾವಣೆಯೊಂದಿಗೆ ಕನ್ನಡದಲ್ಲಿ ಬಳಸಿದರೆ ಅಂತಹ ಪದಗಳನ್ನು ತತ್ಸಮ ಅಥವಾ ಸಮಸಂಸ್ಕೃತಗಳೆಂದು ಕರೆಯುತ್ತಾರೆ.

ಉದಾಹರಣೆಗೆ: ಸೀತೆ, ದೇವತೆ, ಗಂಗೆ, ಯಶ, ರಾಜ, ವಿಪತ್ತು ಇತ್ಯಾದಿ. ಸಂಸ್ಕೃತದಿಂದ ರೂಪ ವ್ಯತ್ಯಾಸಗೊಂಡು ಕನ್ನಡದಲ್ಲಿ ಬಳಕೆಯಲ್ಲಿರುವ ಪದಗಳಿಗೆ ತದ್ಭವಗಳೆಂದು ಹೆಸರು.

ಉದಾಹರಣೆಗೆ:

ತತ್ಸಮ	–	ತದ್ಭವ
ಆಕಾಶ	–	ಆಗಸ
ಅಟವಿ	–	ಅಡವಿ
ಶರ್ಕರಾ	–	ಸಕ್ಕರೆ
ವಿದ್ಯೆ	–	ಬಿಜ್ಜೆ
ಕಾವ್ಯ	–	ಕಬ್ಬ
ನಿತ್ಯ	–	ನಿಚ್ಚ

ಜೋಡಿ ಪದಗಳು

ಭಾಷೆಯಲ್ಲಿ ತಮ್ಮ ವಿಚಾರಗಳನ್ನು ಹೆಚ್ಚು ಅರ್ಥೈಸಿಕೊಳ್ಳಲು ಹಲವು ಬಾರಿ ಪದಗಳ ಜೋಡಣೆಯನ್ನು ಮಾಡಿಕೊಂಡಿದ್ದೇವೆ. ಅಂತಹ ಅರ್ಥಪೂರ್ಣ ಪದಗಳ ಹಿಂಡನ್ನು ಜೋಡು ಪದಗಳೆನ್ನುವರು. ಉದಾಹರಣೆಗೆ : ದಷ್ಟಪುಷ್ಟ, ಲಾಲನೆಪಾಲನೆ, ಅರ್ಧಂಬರ್ಧ, ತಳಬುಡ.

ಅನುಕರಣ ವಾಚಕಗಳು

ಪ್ರಕೃತಿಯಲ್ಲಿ ಕೇಳುವ ಕಾಣುವ ಧ್ವನಿಗಳನ್ನು ಭಾಷೆಯಲ್ಲಿ ಹಲವು ಬಾರಿ ಉಪಯೋಗಿಸುತ್ತೇವೆ. ಆ ಬಗೆಯ ಧ್ವನಿಮಾಗಳನ್ನು ಅನುಕರಣ ವಾಚಕಗಳೆಂದು ಕರೆಯಲಾಗಿದೆ.

ಉದಾಹರಣೆಗೆ: ಢವಢವ, ಕಿರ್ರನೆ, ಗಕ್ಕನೆ, ಲೊಚಲೊಚ, ಕಿಲಕಿಲ, ಥಟಕ್ಕನೆ, ಪಿಸಿಪಿಸಿ ಇತ್ಯಾದಿ.

ನುಡಿಗಟ್ಟುಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥವತ್ತಾಗಿ ಸೇರಿ ವಿಶೇಷ ಪದವಾದರೆ ನುಡಿಗಟ್ಟು ಎನ್ನಿಸುವುದು. ಇಲ್ಲಿ ಬಳಕೆಯಾದ ಪ್ರತ್ಯೇಕಪದಗಳ ಅರ್ಥಕ್ಕೂ, ನುಡಿಗಟ್ಟಿನ ಅರ್ಥಕ್ಕೂ ಸಾಕಷ್ಟು ವ್ಯತ್ಯಾಸವಿರುತ್ತದೆ.

ಉದಾಹರಣೆಗೆ: ಲೆಕ್ಕ ಹಾಕು. ಇದರ ಶಾಬ್ದಿಕ ಅರ್ಥ ಎಣಿಸು ಎಂದಾಗುತ್ತದೆ. ಆದರೆ ನುಡಿಗಟ್ಟಿನ ವಾಸ್ತವಿಕ ಅರ್ಥ, 'ಚಿಂತಿಸು, ಆಲೋಚಿಸು' ಎಂದಾಗುತ್ತದೆ.

12th_Kannada_Reader_3-5.indd 116 22-05-2019 14:31:19

ಕೆಲವು ಪ್ರಚಲಿತ ನುಡಿಗಟ್ಟುಗಳು

ಅಗ್ನಿಪರೀಕ್ಷೆ–ಕಠಿಣವಾದ ಸಂದರ್ಭ

ಅನ್ನದ ಋಣ–ಆಯಸ್ಸು, ಜೀವನ ಕಾಲ

ಅರ್ಧಜೀವ–ಬಹಳತೊಂದರೆ ಪಡು

ಆಕಾಶ ಮುಟು–ಬಹಳ ಎತ್ತರವಾಗು

ಆಳಿನ ಮೇಲೆ ಬೀಳು–ಬಹಳ ಜನ ಸೇರಿ ಕೆಲಸ ಮಾಡು

ಇಕ್ಕಳ ಹಾಕು–ಅಡ್ಡಿ ಮಾಡು

ಉಗುಳು ದಾಟು–ಮಾತು ಮೀರು

ಉತ್ತರಕುಮಾರ–ಹೇಡಿ

ಉಸಿರು ಅಡಗಿಸು–ನಾಶಪಡಿಸು

ಎಂಟೆದೆ–ಧೈರ್ಯ

ಎದೆಯೊಡೆ–ಧೈರ್ಯಗುಂದು

ಎದೆ ಭಾರವಾಗು–ದುಃಖವಾಗು

ಎರಡುಬಗೆ–ಮೋಸಮಾಡು

ಒಡೆದ ಕನ್ನಡಿ–ಸರಿಪಡಿಸಲಾಗದ ಸ್ಥಿತಿ

ಕಂಚಿನ ಕಂಠ–ದೊಡ್ಡ ಧ್ವನಿ

ಭರತವಾಕ್ಯ–ಕೊನೆಯ ಮಾಡು

ಕಂಬಿಕೀಳು–ಓಡಿಹೋಗು

ಕವಳ ಕತ್ತರಿಸು–ಬಿಟ್ಟು ಊಟ ಮಾಡು

ಕೈಹಾಕು–ಆರಂಭ ಮಾಡು

ಗಂಟುಕರಗು–ಖರ್ಚಾಗು

ಗಾಡಿ ಬಿಡು–ಹೊರಟು ಹೋಗು

ಚಾಣಕ್ಯ–ತಂತ್ರಗಾರ

ಜಪಮಾಡು–ಒಂದೇ ಸಮನೆ ಚಿಂತಿಸು

ಜೀವಹಿಡಿ–ಸಹನೆಯಿಂದ ಇರು

ಮೋಡಿ ಹಾಕು–ಮೋಸ ಮಾಡು

ತಲೆಕೆಡು–ಬುದ್ಧಿಭ್ರಮಣೆಯಾಗು

ದಿಕ್ಕುತಪ್ಪಿಸು–ತಪ್ಪುದಾರಿಗೆ ಒಯ್ಯಿ

ದೌಲತ್ತು ಮಾಡು–ಅಧಿಕಾರ ಚಲಾಯಿಸು

ಧ್ವಜ ಊರು–ಇದ್ದಲ್ಲಿಯೇ ನೆಲೆಯಾಗು

ನಮಹಾಕು–ಮೋಸ ಮಾಡು

ನಿದ್ದೆ ಹರಿ–ಎಚ್ಚರವಾಗು

ನ್ಯಾಯ ತೀರಿಸು–ಇತ್ಯರ್ಥ ಪಡಿಸು

ಪುಂಗಿಊದು–ಪ್ರಭಾವ ಬೀರು

ಬಗ್ಗು ಬಡಿ–ಸುಮ್ಮನಿರಿಸು, ನಾಶಮಾಡು.

ಬೆಕ್ಕು ಅಡ್ಡಬರುವುದು–ಅಪಶಕುನವಾಗು

ಮಟ್ಟ ಹಾಕು–ನಾಶಮಾಡು

ಮಾತುತಪ್ಪು–ಕೊಟ್ಟ ಮಾತನ್ನು ಉಳಿಸಿಕೊಳ್ಳದಿರುವುದು

ಯಮಭಾರ–ಅತಿಯಾದ ಭಾರ

ರಕ್ತಕುದಿ–ಅತಿಯಾಗಿ ಕೋಪಗೊಳ್ಳು

ರೆಕ್ಕೆಮೂಡು–ಉತ್ಸಾಹಗೊಳ್ಳು

ಲೆಕ್ಕಕ್ಕೆ ಬರುವುದು–ಗಮನಕ್ಕೆ ಬರುವುದು

ವಿಷ ಕಕ್ಕುವುದು–ಅಸೂಯೆ ಪಡುವುದು

ಶತಮೊಂಡ–ಹಠಮಾರಿ

ಗಾದೆಗಳು

ಜನಪದರ ವೇದಗಳೆಂದೇ ಹೆಸರಾದ ಅನುಭವದ ನುಡಿಗಳು. ಸಿಂಧುವನ್ನು ಬಿಂದುವಿನಲ್ಲಿ ಹಿಡಿದಿಡುವ ಮಹತ್ತರವಾದ ಕಾರ್ಯವನ್ನು ಗಾದೆಗಳು ಮಾಡುತ್ತವೆ. ಇವು ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿರದೆ ಸಮಷ್ಟಿ ಪ್ರಜ್ಞೆಯನ್ನು ತೋರುತ್ತವೆ. ಗಾದೆಗಳ ಅರ್ಥವನ್ನು ಅರಿತು ಸಾರ್ಥಕ ಅರ್ಥವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ.

ಗಾದೆಗಳಲ್ಲಿ ಮೇಲ್ನೋಟಕ್ಕೆ ಕಾಣುವ ಅರ್ಥ ಒಂದಿದ್ದರೆ ಅವುಗಳ ಒಳ ಅರ್ಥ ಬೇರೆಯದೇ ಆಗಿರುತ್ತದೆ. ಇವುಗಳ ಒಳ ಅರ್ಥವನ್ನು ಗ್ರಹಿಸುವ ಪ್ರಯತ್ನ ನಮ್ಮದಾಗಬೇಕು.

12th_Kannada_Reader_3-5.indd 117 22-05-2019 14:31:19

ಕೆಲವು ಪ್ರಸಿದ್ಧ ಗಾದೆಗಳು

ಮನಸ್ಸಿದ್ದರೆ ಮಾರ್ಗ

ಕೈಕೆಸರಾದರೆ ಬಾಯಿ ಮೊಸರು

ಅಟ್ಟಕ್ಕೆ ಹಾರದವ ಬೆಟ್ಟಕ್ಕೆ ಹಾರಿಯಾನೆ?

ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು

ಅತಿಯಾಸೆ ಗತಿಗೇಡು

ಆಪತ್ತಿಗಾದವನೇ ನಂಟ

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ

ಹಾಸಿಗೆ ಇದ್ದಷ್ಟು ಕಾಲು ಚಾಚು

ದುಡ್ಡೇ ದೊಡ್ಡಪ್ಪ, ವಿದ್ಯೆ ಅವರಪ್ಪ

ಕೆಟ್ಟ ಮೇಲೆ ಬುದ್ಧಿ ಬಂತು

ಬೆಳೆವ ಸಿರಿ ಮೊಳಕೆಯಲ್ಲಿ

ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ?

ನಾಳೆಯೆಂಬುದು ಹಾಳು

ಮಾತು ಬೆಳ್ಳಿ, ಮೌನ ಬಂಗಾರ

ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ

ಅಲ್ಪರ ಸಂಗ, ಅಭಿಮಾನ ಭಂಗ

ಸಜ್ಜನರ ಸಂಗ ಹೆಜ್ಜೇನು ಸವಿದಂತೆ

ಮಾಡಿದ್ದುಣ್ಣೋ ಮಹರಾಯ

ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು

ಕುಲಕ್ಕೆ ಮೃತ್ಯು ಕೊಡಲಿ ಕಾವು

ಹೊಳೆಯುವುದೆಲ್ಲಾ ಬಂಗಾರವಲ್ಲ

ಆಳಾಗಿ ದುಡಿ, ಅರಸನಾಗಿ ಉಣ್ಣು

ಶಕ್ತಿಗಿಂತ ಯುಕ್ತಿ ಮೇಲು

ಮನೆಗೆ ಮಾರಿ, ಪರರಿಗೆ ಉಪಕಾರಿ

ಗಾದೆಗಳ ವಿಸ್ತರಣೆ(ಮಾದರಿ)

1. ಮನಸ್ಸಿದ್ದರೆ ಮಾರ್ಗ

ಯಾವುದೇ ಕೆಲಸವನ್ನು ಮಾಡಲು ದೃಢವಾದ ನಿರ್ಧಾರ ಬೇಕು. ಇಂತಹ ನಿರ್ಧಾರದಿಂದ ಕೆಲಸವನ್ನು ಸಫಲವಾಗಿ ಮಾಡಬಹುದೆಂದು ಈ ಗಾದೆ ಹೇಳುತ್ತದೆ. ಕೆಲಸ ಮಾಡುವಾಗ ಅದರ ಬಗ್ಗೆ ಆಸಕ್ತಿ, ನಿಷ್ಠೆ ಇದ್ದರೆ ಇನ್ನೂ ಸುಲಭವಾಗಿ ಆ ಕೆಲಸವನ್ನು ಸಾಧಿಸಬಹುದು. 'Where there is a will, there is a way' ಎಂಬ ಆಂಗ್ಲ ಗಾದೆಯೂ ಇದನ್ನೇ ಹೇಳುತ್ತದೆ. ಮನಸ್ಸಿಟ್ಟು ಕೆಲಸ ಮಾಡಿದರೆ ಬೆಟ್ಟವನ್ನೂ ಸಹ ಕುಟ್ಟಿ ಪುಡಿ ಮಾಡಬಹುದು.

2. ಶಕ್ತಿಗಿಂತ ಯುಕ್ತಿಮೇಲು

ದೈಹಿಕ ಶಕ್ತಿಗಿಂತ ಹೆಚ್ಚು ಸಮರ್ಥವಾದುದು ಬುದ್ಧಿಶಕ್ತಿ. ಬೌದ್ಧಿಕ ಸಾಮರ್ಥ್ಯದಿಂದ ಎಂತಹ ಕಷ್ಟಕರ ಸಮಸ್ಯೆಯನ್ನೂ ಸಹ ಸುಲಭವಾಗಿ ಮಾಡಿ ಮುಗಿಸಬಹುದು. ಕಥೆಯೊಂದರಲ್ಲಿ ಬರುವ ಮೊಲವು ತನ್ನ ಬುದ್ಧಿಶಕ್ತಿಯಿಂದ ಬಲಿಷ್ಠ ಸಿಂಹವನ್ನೇ ನಾಶ ಮಾಡಿತು. ಶಕ್ತಿಯಿದ್ದರೂ ಬುದ್ಧಿಯ ಪ್ರಭಾವವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಯುಕ್ತಿಗಿಂತ ಶಕ್ತಿ ಮೇಲು ಎಂಬುದು ಈ ಗಾದೆಯ ಅರ್ಥ.

12th_Kannada_Reader_3-5.indd 118 22-05-2019 14:31:19

ಘಟಕ
ಆರು

6. ಪ್ರಕೃತಿ/ಪರಿಸರ



ಕಾವ್ಯ ಕಣಜ	:	ಕಾರಿ ಹೆಗ್ಗಡೆಯ ಮಗಳು	– **ಬಿ.ಎಂ.ಶ್ರೀ.**
ಗದ್ಯ ವಿಹಾರ	:	ಬಸಯ್ಯ ಮತ್ತು ಜೇನು ಗೂಡು	– **ಅಮರೇಶ ನುಗಡೋಣಿ**
ಉಪಪಠ್ಯ	:	ಹೂವಾದ ಹುಡುಗಿ	– **ಜನಪದ ಕಥೆ**
ವ್ಯಾಕರಣ	:	ಸಂಧಿಗಳು	

12th_Kannada_Reader_6.indd 119 22-05-2019 15:06:52

ಕಾವ್ಯ ಕಣಜ

ಘಟಕ ಆರು

ಕಾರಿ ಹೆಗ್ಗಡೆಯ ಮಗಳು

– ಬಿ.ಎಂ.ಶ್ರೀ.



ಪ್ರೀತಿಯೆಂಬುದಕ್ಕೆ ಸಿರಿತನ ಬಡತನವೆಂಬ ಬೇಧವಿಲ್ಲ. ಜಾತಿ ಮತಗಳೂ ಅಡ್ಡಿಯಾಗವು. ಪ್ರೇಮವೆಂಬುದು ಶಾಶ್ವತವಾದದ್ದು. ಪರಸ್ಪರ ಪ್ರೀತಿಸಿ ತಂದೆಯ ಕೋಪಕ್ಕೆ ಭಯಗೊಂಡ ಪ್ರೇಮಿಗಳು ಕಡಲಿನಲ್ಲಿ ಪಯಣ ಬೆಳೆಸುವ ಸಂದರ್ಭದಲ್ಲಿ ಸುಂಟರಗಾಳಿಗೆ ಸಿಲುಕಿ ಕಡಲಲ್ಲಿ ಮುಳುಗಿ ದುರಂತಕ್ಕೆ ಒಳಗಾಗುವ ಭೀಷಣ ಚಿತ್ರಣ ಈ ಕವನದಲ್ಲಿ ಚಿತ್ರಣವಾಗಿದೆ.



ಪಡುವ ದಿಬ್ಬದ ಗೌಡನೊಬ್ಬನು
ಬಿಡದೆ ತೊರೆಯನ ಕೂಗಿಕೊಂಡನು
'ತಡೆಯದೀಗಲೆ ಗಡುವ ಹಾಯಿಸು
ಕೊಡುವೆ ಕೇಳಿದ ಹೊನ್ನನು' ॥೧॥

12th_Kannada_Reader_6.indd 120 22-05-2019 15:06:53

‘ಆರು ನೀವೀ ಕರುಗಿ ಮೊರೆಯುವ
ನೀರ ಕಾಯಲ ಹಾಯುವವರು?’
‘ಪಡುವ ದಿಬ್ಬದ ಗೌಡ ನಾನೀ
ಮಡದಿ ಕಾರಿಯ ಕುವರಿಯು ॥೨॥
ಓಡಿ ಬಂದೆವು ಮೂರು ದಿವಸ
ಜಾಡ ಹಿಡಿದು ಹಿಂದೆ ಬಂದರು
ನಮ್ಮನೀ ಕಣಿವೆಯಲಿ ಕಂಡರೆ
ಬಿಮ್ಮಿ ಹರಿವುದು ನೆತ್ತರು ॥ ೩ ॥
ಹತ್ತಿ ಕುದುರೆಯ ತರುಬೆ ಬರುವರು
ಮುತ್ತಿ ಕೊಂಡರೆ ನನ್ನ ಕೊಲುವರು
ಘೋರ ದುಃಖದ ನಾರಿಯನು ಬಳಿ
ಕಾರು ನಗಿಸಲು ಬಲ್ಲರು ?’ ॥೪॥
ಆಗ ಅಂಜದೆ, ತೊರೆಯನೆಂದನು
‘ಬೇಗ ಜೀಯಾ, ಓಡ ತರುವೆನು
ಸುಡಲಿ ಹೊನ್ನು, ಬೆಡಗಿ ನಿನ್ನೀ
ಮಡದಿಗೋಸುಗ ಬರುವೆನು ॥೫॥
ಆದುದಾಗಲಿ, ಮುದ್ದಿನರಗಿಣಿ
ಗಾದ ಗಂಡವ ಕಾದು ಕೊಡುವೆನು
ಕಡಲು ನೊರೆಗಡೆದೆದ್ದು ಕುದಿಯಲಿ
ಗಡುವ ಹಾಯಿಸಿ ಬಿಡುವೆನು’ ॥೬॥
ತೂರು ಗಾಳಿಗೆ ಕಡಲು ಕುದಿಯಿತು
ನೀರ ದೆವ್ವಗಳರಚಿಕೊಂಡವು
ಹೆಪ್ಪು ಮೋಡದ ಹುಬ್ಬುಗಂಟಿಗೆ
ಕಪ್ಪಗಾದವು ಮುಖಗಳು ॥೭॥

12th_Kannada_Reader_6.indd 121 22-05-2019 15:06:53

ಕೆರಳಿ ಕೆರಳಿ ಗಾಳಿ ಚಚ್ಚಿತು
ಇರುಳ ಕತ್ತಲೆ ಕವಿದು ಮುಚ್ಚಿತು
ಕಣಿವೆಯಿಳಿವರ ಕುದುರೆ ಕತ್ತಿಯ
ಖಣಿಖಿಣಿ ಧ್ವನಿ ಕೇಳಿತು ! ॥೮॥
'ಏಳು, ಬೇಗೇಳಣ್ಣ' ಎಂದಳು
'ಹೂಳಿಕೊಳಲಿ ನನ್ನ ಕಡಲು
ಮುಳಿದ ಮುಗಿಲ ತಡೆಯ ಬಲ್ಲೆ
ಮುಳಿದ ತಂದೆಯ ತಡೆಯೆನು' ॥೯॥
ಇತ್ತ ಕರೆಮೊರೆ ಹಿಂದಕಾಯಿತು
ಅತ್ತ ತೆರೆಮೊರೆ ಸುತ್ತಿಕೊಂಡಿತು
ಆಳ ಕೈಯಲಿ ತಾಳಬಹುದೇ
ಏಳುಬೀಳಿನ ಕಡಲದು ! ॥೧೦॥
ಅಲೆಗಳಬ್ಬರದಲ್ಲಿ ಮೀಟಿ
ಮುಳುಗುತಿಹರು ಏಳುತಿಹರು
ಕರೆಗೆ ಬಂದ ಕಾರಿ ಹೆಗ್ಗಡೆ
ಕರಗಿ ಮುಳಿಸು, ಅತ್ತನು ! ॥೧೧॥
ತೊಂಡು ತೆರೆಗಳ ಮುಸುಕಿನಲ್ಲಿ
ಕಂಡು ಮಗಳ ಕರಗಿ ಹೋದ;
ಒಂದು ಕೈ ನೀಡಿದಳು ನೆರವಿಗೆ
ಒಂದು ತಬ್ಬಿತು ನಲ್ಲನ ! ॥೧೨॥
'ಮರಳು, ಮರುಳು ಮಗಳೇ' ಎಂದ!
ಮೊರೆವ ಕಾಯಲ ಗಂಟಲಿಂದ
'ಮರೆತೆ, ಒಪ್ಪಿದೆ ನಿನ್ನ ನಲ್ಲನ
ಮರಳು ಕಂದಾ'! ಎಂದನು ॥೧೩॥
ಮರಳಬಹುದೆ? ಹೋಗಬಹುದೆ?
ಕರೆಯ ತೆರೆಯಪ್ಪಳಿಸಿ ಹೊಯ್ದು
ಹೊರಳಿ ಹೋದುವು ಮಗಳ ಮೇಲೆ
ಕೊರಗಿನಲಿ ಅವನುಳಿದನು ॥೧೪॥

12th_Kannada_Reader_6.indd 122 22-05-2019 15:06:53

ಕವಿ ಕಾವ್ಯ ಪರಿಚಯ

ಪ್ರಸ್ತುತ ಕವನವನ್ನು ಬಿ.ಎಂ.ಶ್ರೀಕಂಠಯ್ಯನವರ 'ಇಂಗ್ಲಿಷ್ ಗೀತಗಳು' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಕನ್ನಡದ ಕಣ್ವರೆಂದು ಖ್ಯಾತಿ ಪಡೆದ ಬಿ.ಎಂ.ಶ್ರೀ.ಯವರು ಕ್ರಿ.ಶ. 1884ರಲ್ಲಿ ತುಮಕೂರಿನ ಬಳಿಯ ಬೆಳ್ಳೂರು ಎನ್ನುವ ಗ್ರಾಮದಲ್ಲಿ ಜನಿಸಿದರು. ತಂದೆಯ ಹೆಸರು : ಮೈಲಾರಯ್ಯ. ಶ್ರೀ ಎಂಬುದು ಇವರ ಕಾವ್ಯನಾಮ. ವೃತ್ತಿಯಿಂದ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ, ಇವರು ಕನ್ನಡದ ವಿಚಾರದಲ್ಲಿ ಅನುಪಮವಾದ ಶ್ರದ್ಧೆಯನ್ನು ಇರಿಸಿಕೊಂಡಿದ್ದರು. ಕನ್ನಡ ನಾಡಿನ ಮೂಲೆ ಮೂಲೆಗಳಲ್ಲೂ ಸಂಚರಿಸಿ ಇವರು ಕನ್ನಡಿಗರಲ್ಲಿ ಕನ್ನಡದ ಕೆಚ್ಚನ್ನು ಮೂಡಿಸಿದರು.



ಶ್ರೀಯವರ ಸಾಹಿತ್ಯ ಸೇವೆ ಗಮನಾರ್ಹವಾದುದು. ಅವರ 'ಇಂಗ್ಲಿಷ್ ಗೀತೆಗಳು' ಕನ್ನಡ ಸಾಹಿತ್ಯದಲ್ಲಿ ನವೋದಯ ಕಾವ್ಯಕ್ಕೆ ಕಾರಣವಾಯಿತು. 'ಗದಾಯುದ್ಧ ನಾಟಕ', 'ಅಶ್ವತ್ಥಾಮನ್', 'ಪಾರಸಿಕರು' ಮುಂತಾದವು ಶ್ರೀಯವರ ನಾಟಕಗಳು. 'ಹೊಂಗನಸುಗಳು' ಎಂಬುದು ಅವರ ಕವನ ಸಂಕಲನ. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, 'ಕನ್ನಡ ಬಾವುಟ'(ಸಂಪಾದನೆ) ಇವು ಅವರ ಮಹತ್ವದ ಗ್ರಂಥಗಳು. ಇವರು 1928ರಲ್ಲಿ ಕಲ್ಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1946ರಲ್ಲಿ ಬಿ.ಎಂ.ಶ್ರೀ.ಯವರು ನಿಧನರಾದರು.

ಆಶಯ ಭಾವ

'ಕಾರಿ ಹೆಗ್ಗಡೆಯ ಮಗಳು' ಎಂಬುದು ಒಂದು ಕಥನ ಕವನವಾಗಿದೆ. ಇದು ಆಂಗ್ಲ ಕವಿ ಕ್ಯಾಂಪ್ ಬೆಲ್‌ರವರ 'ಲಾರ್ಡ್ ವಿಲ್ಲಿನ್ಸ್ ಡಾಟರ್' ಎನ್ನುವ ಕವನದ ಕನ್ನಡ ರೂಪಾಂತರವಾಗಿದೆ. ಇದೊಂದು ಪ್ರಣಯಿಗಳ ದುರಂತ ಕಥೆ. ಕಾರಿ ಹೆಗ್ಗಡೆಯ ಮಗ್ಗಳು ತಾನು ತಂದೆಯ ಕೋಪಕ್ಕೆ ಬಲಿಯಾಗುತ್ತೇನೆಂದು ಭಯಗೊಂಡು, ತನ್ನ ಪ್ರಿಯಕರ ಗೌಡನೊಂದಿಗೆ ಕಡಲಿನತ್ತ ಹೋಗುತ್ತಾಳೆ. ಹೇಗಾದರೂ ಮಾಡಿ ಗಡುವ ಹಾಯಿಸಬೇಕೆಂದು ತೊರೆಯನ ಬಳಿ ಗೌಡ ಕೇಳಿಕೊಳ್ಳುತ್ತಾನೆ. ಕಡಲು ನೊರೆಗಡೆದೆದ್ದು ಕುದಿದರೂ ನಿಮ್ಮನ್ನು ಗಡುವ ದಾಟಿಸಿ ಬಿಡುತ್ತೇನೆಂದು ಅವನು ಇವರಿಗೆ ಮಾತು ಕೊಟ್ಟನು. ಆದರೆ ವಿಧಿ ಯಾರನ್ನು ಬಿಟ್ಟೀತು? ಸುಂಟ–ರಗಾಳಿಗೆ ಕಡಲು ಅಲ್ಲೋಲಕಲ್ಲೋಲವಾಯಿತು. ಇತ್ತ ಪ್ರಣಯಿಗಳ ಮುಖ ಬಾಡಿತು. ಕಡಲು ತನ್ನನ್ನು ಹೂಳಿಕೊಂಡರೂ ಸಹಿಸಬಲ್ಲೆ; ಮುಳಿದ ಮುಗಿಲ ತಡೆಯಬಲ್ಲೆ; ಆದರೆ ಸಿಟ್ಟಾದ ತಂದೆಯನ್ನು ತಡೆಯಲಾರೆ ಎನ್ನುತ್ತಾ ಹೆಗ್ಗಡೆಯ ಮಗಳು ತನ್ನ ಗಂಡ ಗೌಡನೊಂದಿಗೆ ಕಡಲಿಗೆ ಜಿಗಿದಳು. ಕಡಲಿನ ಅಲೆಗಳ ಅಬ್ಬರದಲ್ಲಿ ಕಾರಿ ಹೆಗ್ಗಡೆಯ ಮಗಳು ಮತ್ತು ಅವಳ ಪ್ರಿಯಕರ ಸಿಕ್ಕಿಕೊಂಡರು. ಇತ್ತ ಮಗಳನ್ನು ಅರಸುತ್ತಾ ಬಂದ ಹೆಗ್ಗಡೆಯು ಕಡಲಿನ ಕಡೆ ಬಂದು, ಮಗಳ ದುರಂತ ಸ್ಥಿತಿಯನ್ನು ಕಂಡು ಕರಗಿ ಹೋದನು. ನಿನ್ನ ನಲ್ಲನನ್ನು ನಾನು ಒಪ್ಪಿಕೊಂಡೆ. ಹಿಂತಿರುಗಿ ಬಾ, ಎಂದು ಅವನು ಜೋರಾಗಿ ಕೂಗಿದನು. ಪ್ರೇಮದ ನಡುವೆ ಸಿರಿತನ ಬಡತನ, ಘನತೆ ಕೊರತೆ ಜಾತಿ ಮತ ಯಾವುದೂ ಅಡ್ಡಿಯಾಗದು. ಪ್ರೇಮವೊಂದೇ ಶಾಶ್ವತವೆಂದು ಅರಿತು ತನ್ನ ಮಗಳು ಮತ್ತೆ ದಡ ಸೇರಬೇಕೆಂದು ಅವನು ಬಯಸಿದ. ಆದರೇನು ಪ್ರಯೋಜನ? ಕಡಲಿನ ವಿರಾಟ್ ರೂಪದ ಅಲೆಗಳು ಪ್ರಣಯಿಗಳನ್ನು ಕಡಲಿನಾಳದತ್ತ ಕರೆದೊಯ್ದಿತು. ಹೆಗ್ಗಡೆ ಕೊರಗಿನಲ್ಲೇ ಉಳಿದನು. ಹೀಗೆ ಕಾರಿ ಹೆಗ್ಗಡೆಯ ಮಗಳ ಬಾಳು ದುಃಖಾಂತ್ಯವಾಯಿತು.

12th_Kannada_Reader_6.indd 123 22-05-2019 15:06:53

ಪದಗಳ ಅರ್ಥ

ತೊರೆಯ–ಬೆಸ್ತ, ಅಂಬಿಗ; ಹೊನ್ನು–ಚಿನ್ನ, ಹಣ; ಜಾಡು–ಸುಳಿವು; ಸೂಚನೆ–ಸುಳಿವು; ತರುಬು–ಅಟ್ಟಿಸಿಕೊಂಡು ಹೋಗು; ತೂರುಗಾಳಿ–ಬಿರುಗಾಳಿ; ಕರೆಮೊರೆ–ತೀರದಲ್ಲಿದ್ದವರ ಕೂಗು; ನೆತ್ತರು–ರಕ್ತ; ತೆರೆಮೊರೆ–ಅಲೆಗಳ ಕೂಗು; ನೆರವು–ಸಹಾಯ; ನಲ್ಲ–ಪ್ರೇಮಿ, ಪ್ರಿಯಕರ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಗೌಡ ತೊರೆಯನ ಬಳಿ ಬಂದು ಏನೆಂದು ಕೇಳಿಕೊಂಡನು ?
2. ತೊರೆಯನು ಪ್ರೇಮಿಗಳಿಗೆ ಹೇಳಿದ ಆಶ್ವಾಸನೆಯ ಮಾತುಗಳೇನು ?
3. ತೂರು ಗಾಳಿ ಬಂದಾಗ ಕಡಲು ಹೇಗೆ ಅಬ್ಬರಿಸಿತು ?
4. ಮಗಳನ್ನು ನೋಡಿ ಕಾರಿ ಹೆಗ್ಗಡೆ ಏನೆಂದನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಗೌಡ ಮತ್ತು ತೊರೆಯನ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.
2. ಪ್ರೀತಿಯ ನಡುವೆ ಬಡವ–ಬಲ್ಲಿದ, ಜಾತಿ–ಮತ ಯಾವುದೂ ಅಡ್ಡ ಬರಲಾರದು ಎಂಬುದನ್ನು ಈ ಕಥನ ಕವನದ ಮೂಲಕ ಸಮರ್ಥಿಸಿ.
3. ಕಾರಿ ಹೆಗ್ಗಡೆಯ ಮಗಳು – ಕವನದ ಸಾರಾಂಶವನ್ನು ಬರೆಯಿರಿ.

ಭಾಷಾಭ್ಯಾಸ

1. ಈ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ಬರೆಯಿರಿ.

ಮುದ್ದಿನರಗಿಣಿ, ನೊರೆಗಡೆದೆದ್ದು, ಕಪ್ಪಗಾದವು, ತಡೆಯದೀಗಲೆ, ಅವನುಳಿದನು.

2. ಈ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಕಡಲು, ಹೆಪ್ಪು, ಮೋಡ, ಮುಸುಕು, ಕೊರಗು.

ಚಟುವಟಿಕೆ

1. ಬಿ.ಎಂ.ಶ್ರೀಯವರ ಇತರ ಕವನಗಳನ್ನು ಸಂಗ್ರಹಿಸಿ ಓದಿರಿ.



12th_Kannada_Reader_6.indd 124 22-05-2019 15:06:53

ಗದ್ಯ ವಿಹಾರ

ಘಟಕ ಆರು

ಬಸಯ್ಯ ಮತ್ತು ಜೇನುಗೂಡು

– ಅಮರೇಶ ನುಗಡೋಣಿ



ದುಡಿಯುವ ವರ್ಗಕ್ಕೆ ದುಡಿಮೆಯೊಂದೇ ಗೊತ್ತು. ಆದರೂ ಅವರಲ್ಲೊಂದು ಶುದ್ಧ ಮಾನವೀಯ ಹೃದಯವಿರುತ್ತದೆ. ಸಂತಸವಾದಾಗ ಅದು ನಲಿಯುತ್ತದೆ, ದುಃಖವಾದಾಗ ನೋಯುತ್ತದೆ. ಹೊಲದಲ್ಲಿ ದುಡಿಯುವ ದುಡಿಮೆಗಾರರು ಪ್ರಕೃತಿಯ ಕೂಸುಗಳು. ಪ್ರಕೃತಿಯನ್ನು ತನ್ನ ಸ್ವಂತ ಲಾಭಕ್ಕಾಗಿ ಬಳಸುವ ಮಂದಿ ಅದನ್ನು ಆ ದೃಷ್ಟಿಯಲ್ಲೇ ನೋಡುತ್ತಾರಾದರೆ, ಪ್ರಕೃತಿಯ ಕೂಸಾದ ದುಡಿಮೆಗಾರರು ಅದನ್ನು ಹಾಗೂ ಅದರಲ್ಲಿ ಬದುಕಿರುವ ಸಕಲ ಚರಾಚರಗಳನ್ನೂ ಪ್ರೀತಿಯಿಂದ ನೋಡುತ್ತಾರೆ. ಆ ಪ್ರೀತಿಯ ಮುಂದೆ ಅವರ ದುಗುಡ ದುಮ್ಮಾನಗಳು ಗೌಣವಾಗುತ್ತವೆ.



ಬಸಯ್ಯನಿಗೆ ಇಂದು ತಡವಾಗಿ ಎಚ್ಚರವಾಯಿತು. ಮೂಡಲು ಹರಿದು, ಸೂರ್ಯ ಮಾರುದ್ದ ಮೇಲೇರಿದ್ದರೂ ಆತಂಕವಾಗಲಿಲ್ಲ. ಮಾಡುವ ಕೆಲಸದ ಕಡೆ ಉತ್ಸಾಹ ಮೂಡುವುದಿರಲಿ, ಅದರ ಕಡೆ ಲಕ್ಷ್ಯವೂ ಹೋಗಲಿಲ್ಲ. ಪುನಃ ಮುದುರಿ ಮಲಗಬೇಕೆಂದರೂ ನಿದ್ದೆ ಬರುವಂತೆ ಕಾಣಲಿಲ್ಲ. ದುಗುಡ ತುಂಬಿಕೊಂಡು ವ್ಯಥೆಯಿಂದ ಬೆಳಗಾಗೋ ತನಕ ನಿದ್ದೆಯಿಲ್ಲದೆ ನರಳಿದ್ದ. ಅದರಿಂದಾಗಿ ಬೆಳಗಾಗುವ ಮುನ್ನ ಕಣ್ಣಿಗೆಕಣ್ಣು ಹತ್ತುವಂತಾಗಿತ್ತು. ನೆನ್ನೆಯಿಂದ ಗುಡಿಸಲಲ್ಲೇ ಮಲಗಿಕೊಂಡು ರೊಟ್ಟಿ, ನೀರಿನ ಪರಿವೆಯಿಲ್ಲದೆ ಚಿಂತೆಯಲ್ಲಿ ಮುಳುಗಿದ್ದ–ರಿಂದ ಹಸಿವು ಕಾಣೆಸಿಕೊಂಡಿತು. ಎದ್ದು ಹೊರಬಂದ. ಬಿಸಿಲು ಚುರುಕಾಗಿತ್ತು. ಬಸಯ್ಯ ನಿತ್ಯಕರ್ಮಗಳನ್ನು ಮುಗಿಸಿದ. ಒಡೆಯ ರಾಘಣ್ಣನ ಮನೆಯ ಕಡೆ ಎರಡು ದಿನಗಳಿಂದ ಹೋಗಿರಲಿಲ್ಲ. ಅದು ಯಾಕೋ ಅಳುಕಾಗಿ ಕಾಡಿತು. ಹೋದರಾಯಿತೆಂದು ರಾಘಣ್ಣನ

12th_Kannada_Reader_6.indd 125 22-05-2019 15:06:53

ಮನೆಗೆ ಬಂದ. ಒಳಗೆ ಹೋಗಲು ಮನಸ್ಸು ಹಿಂಜ–ರಿಯಿತು. ಹದಿನೈದು ವರ್ಷ ದುಡಿದಿದ್ದರೂ ಇಂದು ಅದು ಅನ್ಯರ ಮನೆಯೆಂದು ಅನ್ನಿಸತೊಡಗಿತು. ಬೇಸರದಿಂದ ಒಳ ಬಂದು ನಿಂತ. ರಾಘಣ್ಣ ಇರಲಿಲ್ಲ. ರಾಘಣ್ಣನ ಹೆಂಡತಿ ಸೀತಮ್ಮ ಇದ್ದಳು. 'ಎರಡು ದಿನದಿಂದ ಯಾಕ ಬರಲಿಲ್ಲ? ನಿನಗೆ ನಾನು ಸುಮ್ಮನೆ ಬಯ್ದಿಲ್ಲ, ಇರ್ಲಿ. ಈಗ ಬುತ್ತಿ ಕೊಡ್ತೀನಿ. ತಗೊಂಡು ಹೊಲಕ್ಕೆ ಹೋಗು. ಎರಡು ದಿನದಿಂದ ಹೊಲದ ಕಡೆ ಯಾರೂ ಹೋಗಿಲ್ಲ. ಯಜಮಾನ್ರು ನಿನ್ನ ನಂಬಿಕೊಂಡು ಕುಂತಾರ' ಎಂದು ಬುತ್ತಿ ಕೊಟ್ಟಳು. ಬಸಯ್ಯ ಒಂದೂ ಮಾತಾಡದೆ ಬುತ್ತಿ ತೆಗೆದುಕೊಂಡು ಹೊರಬಂದ. ಸೀತಮ್ಮ 'ಯಾವ ಜನುಮದ ಋಣಾನೋ ನೀನು ನಮ್ಮ ಮನೆಗೆ ದುಡಿಯಲು ಬಂದಿದ್ದೀ. ಬಂದು ಈ ಮನೆಗೆ ಜೀವ ತೇದು ನಿಂತಿದ್ದಿ. ನೀನು ದುಡಿದದ್ದಕ್ಕೇ ನಾವು ಚೆನ್ನಾಗಿದ್ದೇವೆ' ಎಂದು ಅನೇಕ ಸಲ ಹೇಳಿದ್ದಳು. ಆಕೆಯ ಮಾತುಗಳು ಇಂದು ಬಸಯ್ಯನ ಎದೆಯ ಮೂಲೆಯಿಂದ ಕೇಳಿಸಿತು. ಹೊರಬಂದ ಬಸಯ್ಯನಿಗೆ ದಿಕ್ಕುತೋಚದಾಯಿತು. ಹೆಜ್ಜೆ ಕಿತ್ತಿಡಲು ನೆಲ ಹುಡುಕುವಂತಾಯಿತು. ಪ್ರೀತಿ ವಿಶ್ವಾಸಕ್ಕೆ ಯಾವ ಬೆಲೆಯೂ ಇಲ್ಲವೆಂದು ಅನ್ನಿಸಿತು. ಹದಿನೈದು ವರ್ಷ ದುಡಿದ ತನಗೆ ಈ ಗತಿ ಬಂದಿತೆಂದು ಸಂಕಟಪಡುತ್ತಾ ಒಡೆಯನ ಹೊಲಕ್ಕೆ ಬಂದ. ಹೊಲವೂ ಅಪ–ರಿಚಿತವೆನಿಸಿತು. ಸೋತವನಾಗಿ ಹುಣಸೆ ಮರದ ಕೆಳಗೆ ಕುಳಿತ. ಬಸಯ್ಯ ಎಂದೂ ಬದುಕಿನಲ್ಲಿ ಜುಗುಪ್ಸೆಗೊಂಡಿರಲಿಲ್ಲ. ಏನೇನೋ ನೆನೆಸಿಕೊಂಡು ಯಾತನೆ ಪಟ್ಟ. ಆ ಹುಣಸೇ ಮರದಲ್ಲಿದ್ದ ಹಿರೇಜೇನಿನ ಕಡೆ ದೃಷ್ಟಿ ಹರಿಯಿತು. 'ನನ್ನ ಬದುಕನ್ನು ಈ ಗತಿಗೆ ತಂದದ್ದು ಈ ಜೇನು ಹುಳುಗಳೇ' ಎಂದುಕೊಂಡ ವಿಷಾದದಿಂದ...

ಬಸಯ್ಯ ಹದಿನೈದು ವರ್ಷಗಳ ಹಿಂದೆ ಈ ಊರಿನ ಶಿವಮ್ಮನನ್ನು ಮದುವೆಯಾದ. ತನ್ನ ಊರಿನಿಂದ ಬಂದು ಇಲ್ಲೇ ನೆಲೆಸಿದ. ಬಸಯ್ಯನ ಸ್ವಭಾವ ಮನಗಂಡಿದ್ದ ರಾಘಣ್ಣ ತನ್ನ ಮನೆ–ಹೊಲದಲ್ಲಿ ದುಡಿಯಲು ನಿಲ್ಲಿಸಿಕೊಂಡ. ಬಸಯ್ಯ, ರಾಘಣ್ಣನಿಗಿರುವ ಆರೇಳು ಎಕರೆ ಹೊಲವನ್ನು ಮನಸ್ಸುಗೊಟ್ಟು ಹರಗಿ, ಬೀಜ ಬಿತ್ತಿ ಬೆಳೆ ತರುವಂತೆ ದುಡಿದ. ಮೂರು ವರ್ಷದಲ್ಲೇ ರಾಘಣ್ಣನ ಸಂಸಾರವನ್ನು ಕುಳಿತು ಉಣ್ಣುವ ಸ್ಥಿತಿಗೆ ತಂದ. ಬಸಯ್ಯ ತನ್ನ ಹೆಂಡತಿಯೊಂದಿಗೆ ರಾಘಣ್ಣನ ಹೊಲದಲ್ಲೇ ಗುಡಿಸಲು ಹಾಕಿಕೊಂಡು ಆ ಹೊಲ ತನ್ನದೆಂಬಂತೆ ಬಾಳು ನಡೆಸಿದ. ಹೆಣ್ಣು ಮಗು ಹುಟ್ಟಿತು. ಆಮೇಲೆ ಹತ್ತು ಹನ್ನೊಂದು ವರ್ಷಗಳವರೆಗೆ ಮಕ್ಕಳಾಗಲಿಲ್ಲ. ಇದ್ದ ಒಬ್ಬ ಮಗಳ ಜೊತೆ ಆಡುತ್ತಾ, ದುಡಿಯುತ್ತಾ... ಪ್ರಕೃತಿಯಲ್ಲಿ ಒಂದಾಗಿದ್ದ. ಹೊಲದ ಅಕ್ಕಪಕ್ಕವಿದ್ದ ಹಳ್ಳ ಬೆಟ್ಟಗಳಲ್ಲಿ ತಿರುಗಾಡುತ್ತಿದ್ದ ಹಕ್ಕಿಪಕ್ಕಿಗಳ ಜೊತೆ, ಸಣ್ಣ ಪುಟ್ಟ ಕಾಡುಪ್ರಾಣಿಗಳ ನಡುವೆ ಬಸಯ್ಯನ ಜೀವನ ಅರಳುತ್ತಿತ್ತು. ಮಗಳು ಕೈಗೆ ಬಂದ ವರ್ಷವೇ ಶಿವಮ್ಮ ಗಂಡು ಮಗುವಿಗೆ ಜನ್ಮ ನೀಡಿದಳು. ಮಗ ಮೂರು ವರ್ಷದವನಿದ್ದಾಗ, ಬಸಯ್ಯ ರಾಘಣ್ಣನ ನೆರವಿನಿಂದ ಮಗಳ ಮದುವೆ ಮಾಡಿ, ಗಂಡನ ಮನೆಗೆ ಕಳಿಸಿದ. ಮಗ ತಂದೆಯಂತೆ ಪ್ರಕೃತಿಯಲ್ಲಿ ಬೆಳೆಯುತ್ತಿದ್ದ.

ಒಂದು ದಿನ ಬಸಯ್ಯ, ತಾನಿರುವ ಹೊಲದಲ್ಲಿದ್ದ ಹುಣಸೆ ಮರಕ್ಕೆ ಹಿರೇಜೇನಿರುವುದು ಕಂಡು ಬೆರಗಾದ. ಊರ ಜನರು, ಹಿರೇಜೇನಿನ ಬಗ್ಗೆ ಕೇಳಿದ್ದರೇ ವಿನಃ ನೋಡಿರಲಿಲ್ಲ. ಈ ಪ್ರದೇಶದಲ್ಲಿ ಚಿಕ್ಕ ಜೇನುಗೂಡುಗಳು ಕಾಣಿಸುತ್ತವೆ. ಆದ್ದ–ರಿಂದ ರಾಘಣ್ಣನ ಹೊಲಕ್ಕೆ ಮಂದಿ ಬಂದು ಬಂದು ದೊಡ್ಡ ಗೂಡನ್ನು ನೋಡಿ ಬೆರಗಾಗಿ ಹೋಗುವುದೇ ನಡೆಯಿತು. 'ನಮ್ಮ ಚಿಕ್ಕ ಜೇನಿನಂತಲ್ಲ, ಈ ಹಿರೇಜೇನು! ಕೊಡದಷ್ಟು ಜೇನುತುಪ್ಪ ಆ ಗೂಡಿನಾಗ ಇರ್ತದ. ಆದ್ರೆ ಜೇನು ಬಿಡಿಸಲು ಹುಳಗಳು ಬಿಡೋದಿಲ್ಲಂತ. ಬಿಡಿಸಲು ಹೋದ್ರೆ ಬೆನ್ನತ್ತಿ ಕಚ್ಚುತ್ತವಂತೆ' ಎಂದು ಜನ ಮಾತಾಡಿಕೊಂಡರು. ಇಂತಹ ಮಾತುಗಳನ್ನು ಕೇಳಿದ ಚಿಕ್ಕ ಹುಡುಗರಿಗೆ ಆ ಹಿರೇಜೇನಿನ ಬಗ್ಗೆ ಕುತೂಹಲ ಮೂಡಿತು. ತಮ್ಮತಮ್ಮಲ್ಲೇ ತಮಗೆ ಹೊಳೆದಂತೆ ಏನೇನೋ ಚರ್ಚೆ ಮಾಡಿ, 'ಹಿರೇಜೇನು ಬಿಡಿಸಲು ಬರುವುದಿಲ್ಲವಂತೆ. ಯಾಕೆ? ನಾವು ಜೇನು ಹುಳಗಳನ್ನು ಓಡಿಸಿ, ಕೊಡದ ತುಂಬಾ ಜೇನು ತುಪ್ಪ ತಂದು ಊರ ಮಂದಿಗೆಲ್ಲ ತಿನ್ನಿಸಬೇಕು' ಎಂದು ಮಾತಾಡಿಕೊಂಡರು. ಆದರೆ ಈ ಹುಡುಗ–ರಿಗೆ ಅದು ಸುಲಭವಾಗುತ್ತಿರಲಿಲ್ಲ. ಬಸಯ್ಯನ ಕಣ್ಣು ತಪ್ಪಿಸಿ ಮಾಡಬೇಕಾಗಿತ್ತು. ಹೀಗಾಗಿ ಈ ಹುಡುಗರೆಲ್ಲ ಬಸಯ್ಯನ ಮಗ ರಾಮನನ್ನು ಗೆಳೆತನ ಮಾಡಿಕೊಂಡು ತಮ್ಮೊಂದಿಗೆ ಸೇರಿಸಿಕೊಂಡರು.

ಆ ದಿನ ಆದಿತ್ಯವಾರ. ಬಸಯ್ಯ ಸಂತೆ ಮಾಡಲು ಪಕ್ಕದೂರಿಗೆ ಹೋದ. ಶಿವಮ್ಮ, ರಾಘಣ್ಣನ ಮನೆಯಲ್ಲಿ ಏನೋ ಕೆಲಸ ಮಾಡಲು ಊರೊಳಗೆ ಹೋದಳು. ಇದನ್ನು ಗಮನಿಸಿದ ಹುಡುಗರೆಲ್ಲ ಕೂಡಿಕೊಂಡು

12th_Kannada_Reader_6.indd 126 22-05-2019 15:06:53

ರಾಘಣ್ಣನ ಹೊಲಕ್ಕೆ ಬಂದರು. ರಾಮನನ್ನು ಸೇರಿಸಿಕೊಂಡು ಹುಣಸೆ ಮರದ ಕೆಳಗೆ ನಿಂತುಕೊಂಡು, ಕಲ್ಲಿನಿಂದ ಹೊಡೆಯತೊಡಗಿದರು. ಜೇನುಗೂಡಿಗೆ ಒಂದು ಕಲ್ಲು ತಾಗಿತು. ಗಾಯಗೊಂಡ ಹುಳಗಳು, 'ಜೊಯ್...' ಎಂದು ಗೂಡಿನಿಂದ ಹೊರಕ್ಕೆ ಹಾರಿದವು. ಕೆಲವು ಹುಡುಗರ ಕಡೆ ಬಂದು ಕಚ್ಚತೊಡಗಿದವು. ಹೌಹಾರಿದ ಹುಡುಗರು ದಿಕ್ಕಿಗೊಬ್ಬರು ಓಡಿದರು. ನಾಕಾರು ಹುಡುಗರು ಹುಳಗಳಿಂದ ಕಚ್ಚಿಸಿಕೊಂಡು ಅಳುತ್ತಾ, ಚೀರುತ್ತಾ ಊರ ದಾರಿ ಹಿಡಿದರು. ಬಸಯ್ಯನ ಮಗ ಚಿಕ್ಕವನು. ಹೊಲದಲ್ಲೇ ಇದ್ದ ತನ್ನ ಗುಡಿಸಲು ಹೊಕ್ಕರೂ ಮೂರು ನಾಲ್ಕು ಕಡೆ ಹುಳಗಳು ಕಚ್ಚಿದ್ದವು. ಅಬ್ಬರಿಸಿ ಅಳುತ್ತಾ ಅಪ್ಪ ಅವ್ವ ಬರುವವರೆಗೆ ನೋವಿನಿಂದ ನರಳಿ, ದುಃಖಿಸಿ ನೆಲ ಹಿಡಿದ. ಮನೆ ಕೆಲಸಕ್ಕೆ ಹೋಗಿದ್ದ ಶಿವಮ್ಮ ಗುಡಿಸಲಿಗೆ ಬಂದು ಮಗನ ಅವಸ್ಥೆ ಕಂಡು, 'ಆ ಕಡೆ ಹೋಗಬಾರದೆಂದು ಹೇಳಿಲ್ಲವೇನು?' ಎಂದು ಬೈಯ್ಯುತ್ತಲೇ ಸಮಾಧಾನ ಮಾಡಿ ಯಾವುದೋ ಗಿಡದ ತೊಪ್ಪಲು ಕುಟ್ಟಿ ರಸ ಹಿಂಡಿ ಹಚ್ಚಿದಳು. ಸಂಜೆ ಸಂತೆ ಮಾಡಿಕೊಂಡು ಬಂದ ಬಸಯ್ಯ ಮಗನಿಗೆ ಒದಗಿದ ಆಪತ್ತು ಕಂಡು ಮರುಗಿದ. ಮರುದಿನ ಊರೊಳಗೆ ಹೋಗಿ, 'ಇನ್ನಿತರ ಹುಡುಗರ ತಂದೆ ತಾಯಿಗಳನ್ನು ವಿಚಾರಿಸಿ ಬಂದ. ಎಂದಿನಂತೆ ಕೆಲಸಕ್ಕಾಗಿ ಆ ಹುಣಸೆ ಮರದ ಕಡೆ ಬಂದಾಗ ಜೇನುಹುಳಗಳು ಒಂದೊಂದೇ ಹಾರಿ ಬರತೊಡಗಿದವು. ತಲೆಗೆ ಸುತ್ತಿಕೊಂಡಿದ್ದ ಸೆಲ್ಲೆಯನ್ನು ಬೀಸಿ ಬೀಸಿ ಅವುಗಳನ್ನು ಓಡಿಸಿ ರಕ್ಷಿಸಿಕೊಂಡು ಗುಡಿಸಲಿಗೆ ಬಂದು ಸೇರಿದ. ಅಂದಿನಿಂದ ಬಸಯ್ಯನಿಗೆ ಅವುಗಳ ಮೇಲಿದ್ದ ಪ್ರೀತಿ ಕಮ್ಮಿಯಾಯಿತು. ಒಂದು ವಾರ ಆ ಕಡೆ ಹೋಗುವುದನ್ನು ಬಿಡಬೇಕಾಯಿತು. ಅಲ್ಲದೆ ಯಾರನ್ನೂ ಆ ಕಡೆ ಸುಳಿಯದಂತೆ ನೋಡಿಕೊಂಡ. ಬಸಯ್ಯನ ಮಗಳು ತನ್ನ ತಮ್ಮನಿಗೆ ಹಿರೇಜೇನಿನ ಹುಳುಗಳು ಕಡಿದ ಸುದ್ದಿ ಕೇಳಿ ಬಂದು ಮಾತಾಡಿಸಿ ಹೋದಳು. ಮಗಳಿಗೆ ಇನ್ನು ಮಕ್ಕಳಾಗಿರಲಿಲ್ಲ. ಅದೊಂದು ಸಣ್ಣ ಚಿಂತೆ ಬಸಯ್ಯನಿಗಿತ್ತು.

ಪ್ರಕೃತಿಯ ಆಟ ಯಾರು ಬಲ್ಲರು? ಯಾಕೋ ಆ ವರ್ಷ ಹುಣಸೆ ಮರಕ್ಕೆ ಹೂವು ಆಗಲಿಲ್ಲ. ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಎಲ್ಲೋ ಹೂವು ಕಾಣಿಸುತ್ತಿದ್ದವು. ಅವೇ ಹೂವು ಕಾಯಾದವು. ರಾಘಣ್ಣನಿಗೆ ನಿರಾಶೆಯಾಯಿತು. ಅದರಿಂದ ಬರುವ ಉತ್ಪನ್ನ ಕೈತಪ್ಪಿತು. ಒಂದು ವೇಳೆ ಕಾಯಿ ಬಿಟ್ಟಿದ್ದರೆ ಇಳಿಸುವುದು ಹೇಗೆಂದು ಆ ಹಿರೇ ಜೇನನ್ನು ನೆನೆಸಿಕೊಂಡು ಬಸಯ್ಯ ಗಾಬರಿಯಾಗಿದ್ದ. ಈಗಲೂ ಆ ಹುಣಸೆ ಮರದ ಕಡೆ ಜನರು ಹೋಗಲು ಹಿಂದು ಮುಂದು ನೋಡುತ್ತಿದ್ದರು. ಅಕ್ಕಪಕ್ಕದ ಹೊಲಗಳಲ್ಲಿ ಕೆಲಸ ಮಾಡುವ ಕೂಲಿ ಹೆಂಗಸರು ಆ ಹುಣಸೆ ಮರದಲ್ಲಿ ಅಲ್ಲೊಂದು ಇಲ್ಲೊಂದು ಕಾಣುವ ಕಾಯಿಗೆ ಆಸೆ ಪಟ್ಟು ಏನೇನೋ ತಂತ್ರ ಮಾಡಿ ಹರಿಯಲು ಪ್ರಯತ್ನಿಸಿದರು. ಜೇನು ಹುಳಗಳು ಕಾದು ಕುಳಿತಿದ್ದವೋ ಎಂಬಂತೆ ಹಾರಿ ಬಂದು ಬೆನ್ನಟ್ಟಿ ಕಚ್ಚತೊಡಗಿದವು. ಕೂಲಿ ಹೆಂಗಸರು ಹೌಹಾರಿ ಚೀರುತ್ತಾ ಎತ್ತರದ ಬೆಳೆಯಲ್ಲಿ ಅಡಗಿ ತಪ್ಪಿಸಿಕೊಂಡರು. ಆದರೂ ಕೆಲವರಿಗೆ ಹುಳಗಳು ಕಡಿದು ಬಿಟ್ಟಿದ್ದವು. ಊರ ಗೌಡನ ಬಳಿಗೆ ಈ ವಿಷಯ ತಂದು ರಾಘಣ್ಣನಿಗೆ ಎಚ್ಚರಿಸಿದರು. ಏನಾದರೂ ಮಾಡಿ ಆ ಹಿರೇಜೇನಿನ ಗೂಡನ್ನು ಅಲ್ಲಿಂದ ಓಡಿಸಬೇಕೆಂದು ಹೇಳಿದರು. ಪೊಲೀಸರಿಂದಲೂ ಹೇಳಿದರು. ಇದ–ರಿಂದ ಬಸಯ್ಯನಿಗೆ ಬೇಸರ ಬಂತು. ಬಸಯ್ಯನ ಹೆಂಡತಿಗೆ ಹೊಲದಲ್ಲಿರಲು ಭಯವಾಗಿ ಊರಲ್ಲಿ ಗುಡಿಸಲು ಹಾಕಿಕೊಂಡು ಇರಲು ಬಯಸಿದಳು. ಊರ ಮಂದಿ ರಾಘಣ್ಣನ ಹೊಲದ ಕಡೆ ಸುಳಿಯುವುದಿರಲಿ, ತಮ್ಮ ದನಕರುಗಳನ್ನು ಬಿಡಲೂ ಅಂಜಿದರು. ಇದ–ರಿಂದ ರಾಘಣ್ಣನ ಹೊಲಕ್ಕೆ ರಕ್ಷಣೆ ಸಿಕ್ಕಿತು. ತುಡುಗು ದನಗಳ ಹಾವಳಿ ಕಮ್ಮಿಯಾಯಿತು. 'ಬಸಯ್ಯ, ಇದ–ರಿಂದ ನಿನಗೂ ಧಾವತಿ ಕಮ್ಮಿಯಾದಂತಾಯಿತು ಬಿಡು' ಅಂದ ರಾಘಣ್ಣ. ಆದರೆ ಬಸಯ್ಯ ಒಡೆಯನಿಗೆ, 'ಬ್ಯಾಡಪ್ಪ, ಈ ಹುಳಗಳನ್ನು ನಾನು ಹೆಂಗನ್ನ ಮಾಡಿ ಓಡಿಸ್ತೀನಿ' ಎಂದ. ಹೊಲದ ಸುರಕ್ಷತೆಯನ್ನು ಕಂಡ ರಾಘಣ್ಣ ಬೇಡವೆಂದು ತಡೆದುಬಿಟ್ಟ. ಆದರೂ ಆ ಹುಳಗಳಿಂದ ಬಸಯ್ಯನಿಗೆ ಅಂಜಿಕೆ ಹೆಚ್ಚಾಯಿತು.

ಈ ಹಿಂದೆ ಹುಳ ಕಚ್ಚಿಸಿಕೊಂಡ ಹುಡುಗರು ಸುಮ್ಮನೆ ಕೂಡಲಿಲ್ಲ. 'ನಾವು ಅವುಗಳಿಗೆ ಒಂದು ಕೈ ತೋರಿಸಿಬಿಡ್ತೀವಿ' ಎಂದು ತೀರ್ಮಾನಿಸಿಕೊಂಡಿದ್ದರು. ಬಸಯ್ಯನ ಮಗನೂ ಅವರ ಮಾತಿಗೆ ಹುರುಪುಗೊಂಡಿದ್ದ. ಅವರಪ್ಪನೇ ಆ ಹುಳಗಳನ್ನು ಓಡಿಸಬೇಕೆಂದು ಮಾತಾಡಿದ್ದನ್ನು ಇವನು ಕೇಳಿಸಿಕೊಂಡಿದ್ದ. ಆದರೆ ಹುಡುಗರೆಲ್ಲ ಬಸಯ್ಯನಿಲ್ಲದ ಸಮಯವನ್ನು ಕಾಯುತ್ತಿದ್ದರು. ಒಂದು ದಿನ ರಾಘಣ್ಣನೇ ಬಸಯ್ಯನನ್ನು ಕೆಲಸದ ನಿಮಿತ್ತ ಬೇರೆ ಊರಿಗೆ ಕಳಿಸಿದ್ದ. ಶಿವಮ್ಮ ರಾಘಣ್ಣನ ಮನೆಯಲ್ಲಿ ಎಂಥದೋ ಕೆಲಸಕ್ಕೆ ಹೋದಳು. ಅದು ಹೇಳಿ

12th_Kannada_Reader_6.indd 127 22-05-2019 15:06:53

ಮಾಡಿಸಿದ ಸಮಯವಾಗಿ ಪರಿಣಮಿಸಿತು. ಬೇಸಿಗೆ ರಜೆ ಬೇರೆ ಇತ್ತು. ಹುಡುಗರೆಲ್ಲ ಸೇರಿಕೊಂಡರು. ಆಗಾಗ ಊರ ಜನ ಮಾತಾಡಿಕೊಂಡಂತೆ, ಹುಣಸೆ ಮರದ ಕೆಳಗೆ ಬೆಂಕಿ ಮಾಡಿ, ಅದಕ್ಕೆ ಹಸಿ ತೊಪ್ಪಲು ತಂದು ಹಾಕಿ ಹೊಗೆಯೆಬ್ಬಿಸಿದರು. ಹೊಗೆ ಮೇಲೆದ್ದು ಜೇನಿನ ಗೂಡಿಗೆ ತಗುಲುವ ಮುನ್ನವೇ ಹುಡುಗರು ಕಲ್ಲು ತೂರಿದರು. ಹುಳುಗಳು ಗೂಡು ಬಿಟ್ಟು ಬರತೊಡಗಿದವು. ಹುಡುಗರೆಲ್ಲಾ ಮೊದಲೇ ಯೋಚಿಸಿಕೊಂಡು ತಂದಿದ್ದ ಗೋಣಿಚೀಲದೊಳಗೆ ತೂರಿಕೊಂಡರು. ಕೆಲವರಿಗೆ ಅವಸರದಲ್ಲಿ ತೂರಿಕೊಳ್ಳಲಾಗಲಿಲ್ಲ. ಅಕ್ಕಪಕ್ಕದಲ್ಲಿದ್ದ ಬೆಳೆಯಲ್ಲಿ ಅಡಗಲು ಓಡಿದರು. ಹುಳುಗಳು ಹುಡುಗರ ಬೆನ್ನು ಬಿದ್ದವು. ಇತರ ಹುಡುಗರಿಗಿಂತ ಚಿಕ್ಕವನಿದ್ದ ರಾಮನಿಗೆ ಗೋಣಿ ಚೀಲ ಸಿಗಲಿಲ್ಲ. ಹತ್ತಿರವಿದ್ದ ತನ್ನ ಗುಡಿಸಲ ಕಡೆ ಓಡಿದ. ಹುಳುಗಳು ಬೆನ್ನು ಹತ್ತಿ ಕಚ್ಚಿದವು. ನೋವು ತಾಳದೆ ಚೀರುತ್ತಾ ಗುಡಿಸಲು ಸೇರಿ ನೆಲ ಹಿಡಿದು ಒದ್ದಾಡಿದ. ಕೊನೆಗೆ ಪ್ರಜ್ಞೆ ತಪ್ಪಿತು. ಸುದ್ದಿ ಕೇಳಿದ ತಾಯಿ ಶಿವಮ್ಮ ಓಡಿ ಬಂದು ಎದೆ ಎದೆ ಬಡಿದುಕೊಂಡು ಅತ್ತಳು. ಈ ಮೊದಲು ಹಚ್ಚಿದ ತೊಪ್ಪಲು ತಂದು ಕುಟ್ಟಿ ಹಚ್ಚಿದಳು. ಆದರೂ ಮಗನಿಗೆ ಎಚ್ಚರವಾಗಲಿಲ್ಲ. ಬಸಯ್ಯ ಬರುವ ಮುನ್ನವೇ ಮಗ ಸತ್ತು ಹೋದ. ಮಗ ಸತ್ತನಲ್ಲ ಎಂದು ಶಿವಮ್ಮ ಚಿಂತೆಯಲ್ಲಿ ಬೆಂದು ತಿಂಗಳೊಪ್ಪತ್ತಿನಲ್ಲಿಯೇ ಕೊನೆಯುಸಿರೆಳೆದಳು. ಅಂದಿನಿಂದ ಬಸಯ್ಯ ಒಂಟಿಯಾಗಿ ಬಿಟ್ಟ. ಮಗಳು ಬಂದು ಅತ್ತು ಗೋಳಾಡಿದಳು. ತಂದೆಯನ್ನು ಸಂತೈಸಿ ತನ್ನ ಊರಿಗೆ ಕರೆದಳು. ಯಾಕೋ ಬಸಯ್ಯ ಹೋಗಲಿಲ್ಲ.

...ಹುಣಸೆ ಮರದಡಿ ಕುಳಿತುಕೊಂಡ ಬಸಯ್ಯ, ಕಳೆದುಕೊಂಡ ಬದುಕಿನ ದುರಂತ ಕ್ಷಣಗಳನ್ನು ನೆನೆಸಿಕೊಂಡ. ಮಗನನ್ನೂ ಹೆಂಡತಿಯನ್ನೂ ಕಳೆದುಕೊಂಡು ಒಂಟಿಯಾಗಿದ್ದರೂ ಮಗಳ ಮನೆಗೆ ಹೋಗದೆ, ಒಡೆಯ ರಾಘಣ್ಣನ ಮನೆಯಲ್ಲೇ ದುಡಿದು ಜೀವನ ಸಾಗಿಸುತ್ತಿದ್ದ. 'ಬಂದದ್ದು ಅನುಭವಿಸಬೇಕು' ಎಂದು ಸಮಾಧಾನ ತುಂಬಿಕೊಂಡಿದ್ದ. ಆದರೆ ಎರಡು ದಿನಗಳ ಹಿಂದೆ ರಾಘಣ್ಣನ ಹೆಂಡತಿ ಅಂದ ಮಾತಿನಿಂದ ಎದೆ ಒಡೆದು ಹೋಗಿತ್ತು. ಕದಡಿದ್ದ ಮನಸ್ಸು ಸಮಾಧಾನಕ್ಕೆ ಬರಲಿಲ್ಲ. ಆದದ್ದು ಇಷ್ಟೇ :

ಮೊನ್ನೆ ದಿನ ರಾಘಣ್ಣನ ಹೆಂಡತಿ ಸೀತಮ್ಮ ಹಾಲು ಕೊಡುವ ಆಕಳನ್ನು ಹೊಲದಲ್ಲಿ ಮೇಯಲು ಬಿಟ್ಟು, 'ಸಂಜೆ ಮನೆಗೆ ಹೊಡಕೊಂಡು ಬಾ' ಎಂದು ಹೇಳಿ ಮನೆಗೆ ಹೋದಳು. ಆಕಳು ತನ್ನ ಪಾಡಿಗೆ ತಾನು ಮೇಯುತ್ತಿತ್ತು. ಮಧ್ಯಾಹ್ನ ಬಸಯ್ಯ ಗುಡಿಸಲಿಗೆ ಬಂದು ಗಳಿಗೆ ಹೊತ್ತು ಮಲಗಿ ಏಳುತ್ತಿದ್ದ. ರೂಢಿಯಂತೆ ಮಲಗಿದ್ದಾಗ ಆಕಳು ಅರಚುವುದು ಕೇಳಿ, ಧಿಗ್ಗನೆದ್ದು ಹೊರ ಬಂದ. ಅದು ಹುಣಸೆ ಮರದ ಕೆಳಗೆ ಬಿದ್ದು ಒದ್ದಾಡುತ್ತಿತ್ತು. ಗಾಬರಿಯಿಂದ ಬಸಯ್ಯ ಓಡಿ ಬಂದು ನೋಡಿದ. ಜೇನುಹುಳಗಳು ಆಕಳಿಗೆ ಕಚ್ಚುತ್ತಿದ್ದವು. ಆಕಳು ನೆಲಕ್ಕೆ ಬಿದ್ದು ಒದ್ದಾಡುತ್ತಿತ್ತು. ಅದರ ಕಾಲಿಗೆ ಏನೋ ಸುತ್ತಿಕೊಂಡು ಅದಕ್ಕೆ ಏಳಲು ಆಗದಂತಾಗಿತ್ತು. ನಿಂತು ನೋಡಲೂ ಆಗಲಿಲ್ಲ. ಜೇನು ಹುಳುಗಳು ಬಸಯ್ಯನ ಕಡೆ ಹಾರಿ ಬಂದವು. ಅನಿವಾರ್ಯವಾಗಿ ಆತ ಓಡಿ ತನ್ನ ಗುಡಿಸಲು ಸೇರಿಕೊಂಡ. ಭಯದಿಂದ ತತ್ತರಿಸಿದರೂ ಆಕಳಿನ ಅವಸ್ಥೆ ಕಂಡು ಅಯ್ಯೋ, ಎಂದು ಅಸಹಾಯಕತೆಯಿಂದ ಚೀರಿ ಚಡಪಡಿಸಿದ. ಆಕಳು ಕೊನೆಗೆ ಎದ್ದು ಮನೆಗೆ ಓಡಿತು. ಬಸಯ್ಯನೂ ಊರ ಕಡೆ ಓಡಿದ. ರಾಘಣ್ಣನ ಮನೆಗೆ ಬರುವಷ್ಟರಲ್ಲಿ ಆಕಳು ಅಂಕಣ ಸೇರಿ ಸತ್ತು ಹೋಗಿತ್ತು. ರಾಘಣ್ಣನ ಹೆಂಡತಿ, 'ಅದು ತನ್ನ ತವರು ಮನೆಯಿಂದ ತಂದದ್ದು. ಹಾಲು ಹಿಂಡುತ್ತಿತ್ತು. ಅದನ್ನು ಸರಿಯಾಗಿ ನೋಡಿಕೊಳ್ಳದೆ ಹುಣಸೆ ಮರದ ಕೆಳಗೆ ಯಾಕೆ ಬಿಟ್ಟಿದ್ದಿ? ನೀನು ದಂಡ ಪಿಂಡ. ಬೇಕಾಗಿಯೇ ಆಕಳನ್ನು ಸಾಯಿಸಲು ಹಾಗೆ ಮಾಡಿದ್ದಿ! ವಯಸ್ಸಾದರೂ ನಿನಗೆ ಅರಿವಿಲ್ಲ' ಎಂದು ಬಾಯಿಗೆ ಬಂದಂತೆ ಅಳುತ್ತಾ ಒದರಿ ಬಸಯ್ಯನಿಗೆ ಬೈದಳು. ಬಸಯ್ಯನಿಗೆ ಏನು ಹೇಳಬೇಕು, ಏನು ಮಾಡಬೇಕೆಂದು ತಿಳಿಯದೆ ಕುಸಿದು ಬಿಟ್ಟ. ರಾಘಣ್ಣನಾದಿಯಾಗಿ ಊರ ಮಂದಿ ಬಸಯ್ಯನಿಗೆ ಎಷ್ಟು ಸಮಾಧಾನ ಮಾಡಿದರೂ ಆತ ಸಮಾಧಾನಗೊಳ್ಳಲಿಲ್ಲ. ಸೀತಮ್ಮನ ಮಾತುಗಳು ತೀವ್ರವಾಗಿ ಅವನನ್ನು ಗಾಯ ಮಾಡಿದ್ದವು. ಮಗ ಹೆಂಡತಿ ಸತ್ತಾಗಲೂ ಇಷ್ಟು ಘಾಸಿಗೊಂಡಿರಲಿಲ್ಲ ಎಂಬಷ್ಟು ಅವನು ದುಃಖಿತನಾಗಿದ್ದ. ಎರಡು ದಿನ ತನ್ನ ಗುಡಿಸಲಿನಿಂದ ಹೊರ ಬಂದಿರಲಿಲ್ಲ.

ಇಂದು ರಾಘಣ್ಣನ ಮನೆಗೆ ಹೋಗಿ ಬಂದು ಕುಳಿತಿದ್ದ. ಬಸಯ್ಯನನ್ನು ಹುಡುಕಿಕೊಂಡು ರಾಘಣ್ಣನೇ ಹೊಲಕ್ಕೆ ಬಂದು, 'ಬಸಯ್ಯ, ನಿಂದೇನೂ ತಪ್ಪಿಲ್ಲ. ಬ್ಯಾಡರ ಸಿದ್ಧ ಹಕ್ಕಿ ಹಿಡಿಯಲು ಗಿಡದ ಕೆಳಗೆ ಬಲೆ ಬೀಸಿದ್ದನಂತೆ. ಆಕಳು ಮೇಯುತ್ತಾ ಗಿಡದ ಕಡೆ ಹೋದಾಗ, ಅದರ ಕಾಲಿಗೆ ಬಲೆ ಸಿಕ್ಕಿಕೊಂಡು ಒದ್ದಾಡಿ ನೆಲಕ್ಕೆ ಬಿತ್ತಂತೆ. ಸಿದ್ಧ ಅದೇನು ಮಾಡಿದನೋ ಜೇನು

12th_Kannada_Reader_6.indd 128 22-05-2019 15:06:53

ಹುಳುಗಳು ಹಾರಿ ಬಂದು ಆಕಳಿಗೆ ಕಚ್ಚಿದವಂತೆ. ಇದು ತಿಳಿಯದೆ ನನ್ನ ಹೆಂಡತಿ ನಿನಗೆ ಬೈದುದನ್ನು ಮರೆತು ಬಿಡು. ನಿನ್ನ ದುಡಿಮೆಯಿಂದ ನನ್ನ ಮನೆ, ಬದುಕು ಒಳ್ಳೆಯ ಸ್ಥಿತಿಗೆ ಬಂದಿದೆ ಎಂದು ನಾನು ಹೇಳುವುದಿರಲಿ, ಅದು ಊರ ಜನಕ್ಕೇ ಗೊತ್ತಿದೆ. ನೋಡು, ಈ ಹಿರೇಜೇನನ್ನು ನೀನು ಇಲ್ಲಿಂದ ಓಡಿಸುತ್ತೇನೆ ಎಂದಾಗ ನಾನೇ ಬೇಡವೆಂದು ತಡೆದಿದ್ದೆ. ಈಗ ನಾನೇ ಹೇಳ್ತೀನಿ. ಇವತ್ತು ರಾತ್ರಿ ಬೆಂಕಿ ಎಬ್ಬಿಸಿ ಓಡಿಸಿ ಬಿಡು' ಎಂದು ಬೇಡಿಕೊಂಡಂತೆ ಹೇಳಿ, 'ಮೊದಲು ಊಟ ಮಾಡು' ಎಂದು ಸಮಾಧಾನ ಮಾಡಿ ಹೋದ. ಬಸಯ್ಯನಿಗೆ ಹಸಿವಾಗಿದ್ದರೂ ಉಣ್ಣಲು ಮನಸ್ಸು ಬರಲಿಲ್ಲ. ಸೀತಮ್ಮ ಕೊಟ್ಟಿದ್ದ ಬುತ್ತಿಯನ್ನು ಬಿಚ್ಚಿದ. ಕಾಗೆಗಳು ಒಂದೊಂದಾಗಿ ಬಂದವು. ಸ್ವಲ್ಪ ಸ್ವಲ್ಪವಾಗಿ ಎಲ್ಲವನ್ನೂ ಕಾಗೆಗಳಿಗೆ ಎಸೆದು ಬಿಟ್ಟ. ಕಾಗೆಗಳ ಹಿಂಡೇ ನೆರೆಯಿತು. ಬುತ್ತಿಯನ್ನು ಕಾಗೆಗಳಿಗ ಎಸೆದು ಕಾಲಿ ಮಾಡಿದ. ತಲೆ ಎತ್ತಿ ನೋಡಿದ. ಹಿರೇಜೇನಿನ ಗೂಡು ಕಂಡಿತು. ಆ ಗೂಡಿಗೆ ಇಂದು ರಾತ್ರಿ ಬೆಂಕಿ ಇಡುವುದನ್ನು ನೆನೆಸಿಕೊಂಡ. ಸಾವಿರಾರು ಹುಳಗಳನ್ನು ಕೊಲ್ಲಬೇಕೇ? ಯಾಕೋ ಬೇಡವೆನ್ನಿಸಿತು. ಜೇನುಗೂಡು ಚೆಂದವಾಗಿ ಕಾಣಿಸಿತು. ಅಷ್ಟರಲ್ಲಿ ಯಾರೋ ಬಂದಂತೆ ಕಾಣಿಸಿತು. ಮಗಳ ಗಂಡ ಅಳಿಯ ಬಂದಿದ್ದ. ಮಗಳು ಮಗುವನ್ನು ಹೆತ್ತ ಸುದ್ದಿಯನ್ನು ತಂದಿದ್ದ. ಹಾಗೇ ಮಗಳು ತನ್ನನ್ನು ಕರೆದುಕೊಂಡು ಬರಲು ಹೇಳಿದ್ದಳು. ಬಸಯ್ಯನಿಗೆ ಮೊಮ್ಮಗುವಿನ ಅಳುವ ದನಿ ಕೇಳಿಸಿದಂತಾಯಿತು. ಎಲ್ಲ ಮರೆತು ಅಳಿಯನನ್ನು ಬಲವಾಗಿ ಅಪ್ಪಿಕೊಂಡ. ಎಂಥದೋ ಸಮಾಧಾನ ಬಸಯ್ಯನ ಎದೆಯಲ್ಲಿ ಮೂಡಿ ನಿಂತಿತು.

ಕೃತಿ–ಕರ್ತೃ ವಿಚಾರ

ಅಮರೇಶ ನುಗಡೋಣಿಯವರು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ನುಗಡೋಣಿಯಲ್ಲಿ 12.06.1960ರಲ್ಲಿ ಜನಿಸಿದರು. 1992ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಸಹಾಯಕರಾಗಿ ಸೇರಿದ ಅವರು, ಪ್ರಸ್ತುತ ಅಲ್ಲಿಯೇ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಪಡೆದಿರುವುದಷ್ಟೇ ಅಲ್ಲದೆ ಇತರ ಕೆಲವು ಪ್ರಶಸ್ತಿಗಳನ್ನೂ ಅವರು ಪಡೆದುಕೊಂಡಿದ್ದಾರೆ. 'ನೀನು ಅವರು ಪರಿಸರ'(ಕವನ ಸಂಕಲನ), 'ಮಣ್ಣು ಸೇರಿತು ಬೀಜ', 'ತಮಂಧದ ಕೇಡು'(ಕಥೆಗಳು), 'ನುಡಿವ ಬೆಡಗು', 'ತತ್ವ ಸಾಹಿತ್ಯ ವಿಮರ್ಶೆ' ಮುಂತಾದ ಹತ್ತಾರು ಕೃತಿಗಳನ್ನು ಅವರು ರಚಿಸಿದ್ದಾರೆ. ಇವರಲ್ಲಿ ಕಥೆ ಕಟ್ಟುವ ಸಾಮರ್ಥ್ಯ ಅಪಾರವಾಗಿದೆ ಎಂಬುದಕ್ಕೆ 'ಬಸಯ್ಯ ಮತ್ತು ಜೇನುಗೂಡು' ಉತ್ತಮ ನಿದರ್ಶನವಾಗಿದೆ.

ಆಶಯ

ಪರರ ಒಳಿತಿಗಾಗಿ ಬಾಳನ್ನು ಸವೆಯಿಸುವ ಶುದ್ಧ ಮನಸ್ಕರಿಗೆ ತಮ್ಮ ಒಳಿತಿಗಿಂತ ಪರರ ಒಳಿತೇ ಮುಖ್ಯವಾಗುತ್ತದೆ. ಯಜಮಾನನ ಜಮೀನಿನಲ್ಲಿ ದುಡಿದು ಆತನ ಬದುಕನ್ನು ಹಸನು ಮಾಡಿದ ಬಸಯ್ಯ ತನ್ನ ಹೆಂಡತಿ ಮಗುವನ್ನೇ ಕಳೆದುಕೊಂಡಾಗಲೂ ಸ್ಥಿತಪ್ರಜ್ಞನಂತಿರುತ್ತಾನೆ. ಆದರೆ ಒಡೆಯನ ಪತ್ನಿಯ ಕಠೋರ ಮಾತಿನಿಂದ ಆತನ ಮನಸ್ಸು ಕಲ್ಲೇಟು ಬಿದ್ದ ಜೇನುಗೂಡಿನಂತೆ ಅಲ್ಲೋಲಕಲ್ಲೋಲವಾಗುತ್ತದೆ. ಗೂಡಿನೊಳಗಿನ ಜೇನಿನಂತೆ ಆತ ನೋವಿನ ನಡುವೆಯೂ ಮನಸ್ಸನ್ನು ಮಧುರವಾಗಿಟ್ಟುಕೊಳ್ಳುತ್ತಾನೆ. ತನ್ನವರನ್ನು ಕಳೆದುಕೊಳ್ಳುವುದಕ್ಕೆ ಕಾರಣವಾದ ಜೇನುಗೂಡು ಆತನಿಗೆ ಸುಂದರವಾಗಿ ಕಾಣಿಸುತ್ತದೆ.

ಬಸಯ್ಯನೋರ್ವ ಕರ್ಮಯೋಗಿ. ಕಾಯಕವೇ ಆತನ ಪಾಲಿನ ಕೈಲಾಸ. ಆತನಿನದು ಜೇನುನೊಣದ ದುಡಿಮೆ. ಒಂದೇ ವ್ಯತ್ಯಾಸ: ಜೇನು ನೊಣಗಳು ತಮಗೆ ನೋವಾದಾಗ ಸಾಮೂಹಿಕವಾಗಿ ಪ್ರತಿಭಟಿಸುತ್ತವೆ; ಬಸಯ್ಯ ನೋವನ್ನು ತನ್ನೊಳಗೆ ಅಡಗಿಸಿಕೊಳ್ಳುತ್ತಾನೆ. ಮೊಮ್ಮಗು ಹುಟ್ಟುವುದು ಆತನ ಬದುಕಿಗೊಂದು ಹೊಸ ಅರ್ಥವನ್ನು ಕಟ್ಟಿಕೊಡುತ್ತದೆ.

ಪದಗಳ ಅರ್ಥ

ಲಕ್ಷ್ಯ–ಗಮನ; ಹಿರೇಜೇನು–ಹೆಜ್ಜೇನು, ದೊಡ್ಡಜೇನು; ಹರಗು–ಸಮತಟ್ಟು ಮಾಡು, ಹದ ಮಾಡು; ತೊಪ್ಪಲು–ಎಲೆ; ಸೆಲ್ಲೆ–ವಸ್ತ್ರ, ಮೇಲುವಸ್ತ್ರ; ತುಡುಗು ದನ–ಪೋಲಿ ದನ; ಧಾವತಿ–ಗಡಿಬಿಡಿ; ಆಕಳು–ಹಸು, ಗೋವು; ಹೆಂಗನ್ನ–ಹೇಗಾದರೂ; ಅಂಕಣ–ಮನೆಯ ಮುಂಭಾಗ; ದಂಡಪಿಂಡ–ನಾಲಾಯಕ್ಕು, ನಿಷ್ಪ್ರಯೋಜಕ; ಒದರು–ಕಿರುಚು.

12th_Kannada_Reader_6.indd 129 22-05-2019 15:06:53

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಬಸಯ್ಯ ಯಾರ ಹೊಲದಲ್ಲಿ ದುಡಿಯುತ್ತಿದ್ದನು ?
2. ಹಿರೇಜೇನು ಎಲ್ಲಿ ಗೂಡುಕಟ್ಟಿತ್ತು ?
3. ಹುಡುಗರು ಹಿರೇಜೇನನ್ನು ಓಡಿಸಲು ಏನು ಮಾಡಿದರು ?
4. ತುಡುಗು ದನಗಳು ರಾಘಣ್ಣನ ಹೊಲಕ್ಕೆ ಏಕೆ ಹೋಗುತ್ತಿರಲಿಲ್ಲ ?
5. ಬಸಯ್ಯನ ಹೆಂಡತಿ ತೀರಿಕೊಳ್ಳಲು ಕಾರಣವೇನು ?
6. ಬಸಯ್ಯ ಜೇನುಗೂಡಿಗೆ ಬೆಂಕಿ ಇಡಬಾರದೆಂದು ತೀರ್ಮಾನಿಸಿದ್ದೇಕೆ ?
7. ಆಕಳು ಚೀರಿಕೊಂಡದ್ದೇಕೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ರಾಘಣ್ಣನ ಹೊಲದಲ್ಲಿದ್ದ ಹಿರೇಜೇನನ್ನು ನೋಡಿ ಮಂದಿ ಏನೆನ್ನುತ್ತಿದ್ದರು?
2. ಹಿರೇಜೇನಿನ ಬಗ್ಗೆ ಚಿಕ್ಕ ಹುಡುಗರು ಅಭಿಪ್ರಾಯವೇನಾಗಿತ್ತು ?
3. ಬಸಯ್ಯನ ಮಗ ಮೊದಲ ಬಾರಿಗೆ ದುಃಖಿಸಿ ನೆಲ ಹಿಡಿಯಲು ಕಾರಣವೇನು?
4. ಮೊದಲ ಬಾರಿಗೆ ಹಿರೇಜೇನಿನಿಂದ ಕಚ್ಚಿಸಿಕೊಂಡ ಹುಡುಗರ ಪಾಡನ್ನು ವಿವರಿಸಿ.
5. ಹಿರೇಜೇನನ್ನು ಓಡಿಸಲು ಹುಡುಗರು ಎರಡನೆಯ ಬಾರಿ ನಡೆಸಿದ ಪ್ರಯತ್ನವನ್ನು ತಿಳಿಸಿ.
6. ಸೀತಮ್ಮನ ಯಾವ ಮಾತುಗಳು ಬಸಯ್ಯನನ್ನು ನೋಯಿಸಿದವು ?
7. ಸೀತಮ್ಮನ ಆಕಳು ಸಾಯಲು ಕಾರಣವಾದ ಸಂಗತಿಯೇನು ?
8. ಜೇನು ಹುಳುಗಳನ್ನು ಓಡಿಸಲು ರಾಘಣ್ಣ ಏಕೆ ತೀರ್ಮಾನಿಸಿದನು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಹುಡುಗರು ಜೇನು ಹುಳುಗಳನ್ನು ಓಡಿಸಲು ಎರಡು ಬಾರಿ ನಡೆಸಿದ ಪ್ರಯತ್ನ ಹಾಗೂ ಅದರ ಪರಿಣಾಮವನ್ನು ವಿವರಿಸಿ.
2. ಬಸಯ್ಯನ ವ್ಯಕ್ತಿ ಚಿತ್ರವನ್ನು ಸಂಗ್ರಹಿಸಿ ಬರೆಯಿರಿ.

ಭಾಷಾಭ್ಯಾಸ

1. **ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.**
   ಸಹಾಯ, ಸಮಾಧಾನ, ವಿಶ್ವಾಸ, ನಿಮಿತ್ತ, ಸುಂದರ, ಚಿಕ್ಕ.
2. **ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.**
   ಪರಿವೆಯಿಲ್ಲದೆ, ಮೇಲಿದ್ದ, ಕಿತ್ತಿಡು, ತನ್ನದೆಂಬಂತೆ, ಆರೇಳು.
3. **ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ಮಾಡಿರಿ.**
   'ಕೈತೋರಿಸು, ಎದೆ ಒಡೆದು ಹೋಗು, ಕಣ್ಣಲ್ಲಿ ಕಣ್ಣಿಟ್ಟು ನೋಡು, ಹೆಜ್ಜೆ ಕಿತ್ತಿಡು, ಹಿಂದುಮುಂದು ನೋಡು, ಕೊನೆಯುಸಿರೆಳೆ, ಬೆನ್ನುಬೀಳು.
4. **ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**
   ಜನುಮ, ಸಂತೆ, ವರ್ಷ, ಕ್ಷಣ, ರಾಕ್ಷಷ.
5. **ಕೆಳಗಿನ ಪದಗಳ ಗ್ರಾಂಥಿಕ ರೂಪಗಳನ್ನು ಬರೆಯಿರಿ.**
   ಬೆಳಗಾಗ, ಕುಂತಾರ, ಯಾಕ, ಗೂಡಿನ್ಯಾಗ, ಹೊತಕೊಂಡು, ಬ್ಯಾಡ, ಓಡುಸ್ತೀನಿ.

ಚಟುವಟಿಕೆ

1. ನಿಮ್ಮ ಪರಿಸರದಲ್ಲಿರುವ ಜೇನುಗೂಡನ್ನು ಗಮನಿಸಿ.
2. ಜೇನುತುಪ್ಪದ ವಿವಿಧ ಬಗೆಯ ಪ್ರಯೋಜನಗಳನ್ನು ತಿಳಿಯಿರಿ.
3. ಗ್ರಾಮೀಣ ಜೀವನವನ್ನು ಚಿತ್ರಿಸುವ ಇದೇ ಬಗೆಯ ಸಣ್ಣ ಕಥೆಗಳನ್ನು ಓದಿರಿ.

12th_Kannada_Reader_6.indd 130 22-05-2019 15:06:53

ಘಟಕ ಆರು

ಉಪಪಠ್ಯ

ಹೂವಾದ ಹುಡುಗಿ

ಜನಪದ ಕಥೆ

– ಎ.ಕೆ.ರಾಮಾನುಜನ್



ಇಂದಿನ ಶಿಷ್ಟ ಸಾಹಿತ್ಯ ಸಂಪದ್ಭರಿತವಾಗಿ ಬೆಳೆಯಲು ಜನಪದ ಸಾಹಿತ್ಯವೇ ಬುನಾದಿಯಾಗಿದೆ. ಆದುದರಿಂದ ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಕವಿರಾಜ ಮಾರ್ಗ ಜನಪದ ಸಾಹಿತ್ಯದ ಮಹತ್ವವನ್ನು ಸಾರುತ್ತದೆ. ನಮ್ಮ ಜನಪದರು ತಮ್ಮ ಬದುಕಿನ ಸುಖ–ದುಃಖ, ನೋವು–ನಲಿವು, ಸರಸ–ವಿರಸ, ಪ್ರೀತಿ–ವಾತ್ಸಲ್ಯ, ಆಸರಿಕೆ–ಬೇಸರಿಕೆಗಳನ್ನು ಗಂಡು ಹೆಣ್ಣೆಂಬ ಬೇಧವಿಲ್ಲದೆ ಅನುಭವಗಳನ್ನು ಹಾಡುಗಳ ಮೂಲಕ, ಕಥೆಗಳ ರೂಪದಲ್ಲಿ, ಹಾಡುಗಬ್ಬವಾಗಿ ವ್ಯಕ್ತಪಡಿಸಿದ್ದಾರೆ.

ಹಿಂದೆ ಅವಿಭಕ್ತ ಕೌಟುಂಬಿಕ ವ್ಯವಸ್ಥೆಯಲ್ಲಿ ಅಜ್ಜಅಜ್ಜಿಯರು ಹೇಳುತ್ತಿದ್ದ, ರೋಮಾಂಚನವನ್ನು ಉಂಟು ಮಾಡುತ್ತಿದ್ದ ಕಥೆಗಳು ಕುತೂಹಲ ಕೆರಳಿಸುವ, ಕಲ್ಪನಾ ಲೋಕದ ಬಾಗಿಲು ತೆರೆಸುವ, ಮನಸ್ಸಿಗೆ ಮುದ ನೀಡುವ ಮೂಲಕ ಮಕ್ಕಳಲ್ಲಿ ಜ್ಞಾಪಕ ಶಕ್ತಿ, ಕಲ್ಪನಾಶಕ್ತಿ ಬೆಳೆಸುತ್ತಿದ್ದವು. ಇವೆಲ್ಲಾ ಇಂದು ಕಣ್ಮರೆಯಾಗುತ್ತಿವೆ. ಇಂತಹ ಒಂದು ಅನುಭವವನ್ನು ಜನಪದ ಕಥೆಗಳ ಮೂಲಕ ಮಕ್ಕಳಿಗೆ ಕಟ್ಟಿ ಕೊಡುವ ಅಗತ್ಯವಿದೆ. ಈ ಉದ್ದೇಶದಿಂದ ಪ್ರಕೃತ ಕಥೆಯನ್ನು ಇಲ್ಲಿ ನೀಡಲಾಗಿದೆ.



12th_Kannada_Reader_6.indd 131 22-05-2019 15:06:53

ಒಂದು ಪಟ್ಟಣ. ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ದೊರೆಯ ಮೊದಲನೆಯ ಹೆಣ್ಣುಮಗಳಿಗೆ ಲಗ್ನವಾಗಿತ್ತು.

ಅದೇ ಊರಿನಲ್ಲಿ ಒಬ್ಬಳು ಮುದುಕಿಯಿದ್ದಳು. ಅವಳಿಗೆ ಇಬ್ಬರು ಹೆಣ್ಣು ಮಕ್ಕಳು. ಆ ಮುದುಕಿ ಕೂಲಿ ಮಾಡಿ ತನ್ನ ಮಕ್ಕಳನ್ನು ಸಾಕುತ್ತಿದ್ದಳು. ಒಂದು ದಿನ ತಂಗಿ, 'ಅಕ್ಕಯ್ಯ, ಹೋದಷ್ಟು ದಿನಕ್ಕೆ ಅಮ್ಮ ಕೂಲಿ ಮಾಡಿ ನಮ್ಮನ್ನು ಸಾಕಬೇಕು ಅಂದ್ರೆ ಕಷ್ಟ. ಆದ್ದರಿಂದ ನಾನು ಹೂವಿನ ಗಿಡ ಆಗ್ತೀನಿ. ನೀನು ಹೂ ತಕ್ಕೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ' ಎಂದು ಅಕ್ಕನಿಗೆ ಹೇಳಿದಳು. ಅಕ್ಕನಿಗೆ ಕುತೂಹಲ ಕೆರಳಿ, 'ಅದು ಹೇಗೆ ಹೂವಿನ ಗಿಡ ಆಗ್ತೀಯೇ?' ಎಂದು ಕೇಳಿದಳು. 'ಅದೆಲ್ಲಾ ನಾನು ಆಮೇಲೆ ಹೇಳ್ತೀನಿ ಕಣೆ. ಮೊದಲು ಮನೆಯೆಲ್ಲ ಸಾರಿಸಿ ಬಿಡು. ನೀನು ಸ್ನಾನ ಮಾಡಿ ಬಾವಿಯಿಂದ ಚಿಳ್ ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರು ತಗೊಂಡು ಬಾ' ಎಂದಳು. ಅಕ್ಕ ಹಾಗೇ ಮಾಡಿದಳು. ಇವರ ಮನೆಯ ಎದುರಿಗೆ ಒಂದು ದೊಡ್ಡ ಮರವಿತ್ತು. ಅಲ್ಲೂ ಗುಡಿಸಿ ಸಾರಿಸಿದಳು. ಅಲ್ಲಿಗೆ ಇಬ್ಬರೂ ಹೋದರು. ತಂಗಿ ಅಕ್ಕನನ್ನು ಕರೆದು, 'ನೋಡಕ್ಕಯ್ಯಾ. ನಾನಿಲ್ಲಿ ದೇವರ ಧ್ಯಾನ ಮಾಡಿ ಕುಳಿತ್ಕೊಳ್ತೀನಿ. ನೀನು ಒಂದು ತಂಬಿಗೆ ನೀರನ್ನೆಲ್ಲ ನನ್ನ ಮೈಮೇಲೆ ಸುರಿದು ಬಿಡು. ನಾನು ಹೂವಿನ ಗಿಡ ಆಗ್ತೀನಿ. ಸುಳಿ ಮುರಿಯದ ಹಾಗೆ ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂ ಕಿತ್ಕೋ. ನಿನಗೆ ಸಾಕಾದ ಮೇಲೆ ಇನ್ನೊಂದು ತಂಬಿಗೆ ನೀರನ್ನು ನನ್ನ ಮೇಲೆ ಸುರಿದು ಬಿಡು. ಪುನಃ ನಾನು ಮನುಷ್ಯಳಾಗ್ತೀನಿ' ಎಂದಳು. ತಂಗಿ ದೇವರನ್ನು ನೆನೆಯುತ್ತಾ ಕುಳಿತಳು. ಅಕ್ಕ ಒಂದು ಬಿಂದಿಗೆ ನೀರನ್ನು ಅವಳ ಮೇಲೆ ಸುರಿದಳು. ಸರಿ, ಹೂವಿನ ಗಿಡವಾದಳು. ಅಕ್ಕ ಸುಳಿ ಎಲೆ ತೊಟ್ಟು ಮುರಿಯದ ಹಾಗೆ ಹೂವನ್ನು ಬಿಡಿಸಿಕೊಂಡಳು. ನಂತರ ಮತ್ತೊಂದು ತಂಬಿಗೆ ನೀರನ್ನು ಗಿಡದ ಮೇಲೆ ಸುರಿದಳು. ಯಥಾಸ್ಥಿತಿಯಂತೆ ತಂಗಿ ಲಕ್ಷಣವಾಗಿ ಮನುಷ್ಯಳಾದಳು. ಅನಂತರ ಇಬ್ಬರೂ ಆ ಹೂವನ್ನೆಲ್ಲ ಬುಟ್ಟಿಗೆ ತುಂಬಿ ಮನೆಗೆ ಬಂದರು. ಇಬ್ಬರೂ ಸೇರಿ ಹೂವು ಕಟ್ಟಿದರು. 'ಎಲ್ಲಿಗೆ ತೆಗೆದುಕೊಂಡು ಹೋಗಿ ಮಾರಲಿ?' ಎಂದಳು ದೊಡ್ಡವಳು. 'ಅಕ್ಕಯ್ಯ, ದೊರೆ ಮನೆಗೆ ತಗೊಂಡು ಹೋಗು. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅಮ್ಮ ನಮಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚು ಹಣ ಕೂಡಿ ಹಾಕಿ ಅಮ್ಮನಿಗೆ ತೋರಿಸೋಣ' ಎಂದಳು ಚಿಕ್ಕವಳು.

ಅಂದು ಹಿರಿಯವಳು ಒಂದು ಬುಟ್ಟಿಯಲ್ಲಿ ಹೂವನ್ನೆಲ್ಲ ಇಟ್ಟುಕೊಂಡು, 'ಹೂವು ಬೇಕೇನಮ್ಮಾ, ಹೂವು...' ಎಂದು ದೊರೆಯ ಮನೆಯ ಮುಂದೆ ಬಂದಳು. ದೊರೆಯ ಚಿಕ್ಕ ಮಗಳು, 'ಅಮ್ಮಾ! ಹೂವು ಗಮಗಮ ಅಂತಾವೆ. ಕೊಡಿಸು' ಎಂದಳು. ದೊರೆಯ ಹೆಂಡತಿ ಹೂವನ್ನು ನೋಡಿದಳು. 'ಎಷ್ಟು ಬೆಲೆ?' ಎಂದು ಕೇಳಿದಳು. 'ಎಷ್ಟಾನ ಕೊಡಿರವ್ವ, ನಾವು ಬಡವರು' ಎಂದಳು ಅಕ್ಕ. ದೊರೆಯ ಹೆಂಡತಿ ಹೂವು ತಗೊಂಡು ಒಂದು ಮೊಗೆ ಹಣ ಕೊಟ್ಟಳು. ಅಕ್ಕ ಮೊಗೆ ಹಣವನ್ನು ತಂದು ತಂಗಿಗೆ ತೋರಿದಳು. 'ಅಕ್ಕಯ್ಯ, ಅಮ್ಮನಿಗೆ ಹೇಳಬೇಡ, ಮುಚ್ಚಿಡು' ಎಂದಳು. ಹೀಗೇ ಕೆಲವು ದಿನ ಮಾಡಿದರು. ಒಟ್ಟು ಐದು ಮೊಗೆ ಹಣವಾಯಿತು. ಅಕ್ಕ, 'ಅಮ್ಮನಿಗೆ ತೋರಿಸೋಣ' ಎಂದಳು. 'ಬೇಡವೇ ತಂಗಿ, ಅಮ್ಮ ಹೊಡೀತಾಳೆ' ಅಂತ ಅವರವರೇ ಮಾತಾಡಿಕೊಂಡರು. ಈ ಹುಡುಗಿಯರಿಗೆ ಸಂಪಾದನೆ ಮಾಡೊ ಆಸೆ.

ಈ ಹೂವು ದೊರೆ ಮಗನ ಕಣ್ಣಿಗೆ ಬಿತ್ತು. ಒಳ್ಳೇ ಗಮಗಮ ಅನ್ನುತ್ತಿತ್ತು. ಇಂತಹ ಸೊಗಸಾದ ಹೂವನ್ನು ಅವನೆಂದೂ ನೋಡೇ ಇರಲಿಲ್ಲ. ಈ ಹೂವನ್ನು ಯಾರು ತಂದು ಕೊಡುತ್ತಾರೆ ಎಂದು ಯೋಚಿಸಿ ಆ ದೊಡ್ಡ ಹುಡುಗಿ ತಂದು ಕೊಡುವುದನ್ನು ನೋಡಿ, ಅವಳನ್ನೇ ಹಿಂಬಾಲಿಸಿ ಹೋಗಿ ನೋಡಿದ. ಈ ಮನೆಯ ಸುತ್ತಮುತ್ತ ಹೂವಿನ ಗಿಡಗಳಿಲ್ಲದ್ದನ್ನು ಗಮನಿಸಿ ಇಂತಹ ಹೂವು ಇವರಿಗೆಲ್ಲಿಂದ ಬರುತ್ತದೆ ಎಂದು ಯೋಚನೆ ಮಾಡಿ ಅರಮನೆಗೆ ಬಂದ. ಮಾರನೇ ದಿನ ಸೂರ್ಯ ಹುಟ್ಟುವ ಮೊದಲೇ ಹೋಗಿ ಹುಡುಗಿಯರ ಮನೆಯ ಮುಂದಿದ್ದ ದೊಡ್ಡ ಮರದ ಮೇಲೆ ಕುಳಿತುಕೊಂಡ.

ಅಂದು ಸಹ ಹುಡುಗಿಯರು, ಆ ಮರದಡಿ ಸಾರಿಸಿ ಗುಡಿಸಿದರು. ತಂಗಿ ಯಥಾಪ್ರಕಾರ ಹೂವಿನ ಗಿಡವಾದಳು. ಅಕ್ಕ ಎಚ್ಚರಿಕೆಯಿಂದ ಹೂ ಬಿಡಿಸಿಕೊಂಡಳು. ಅನಂತರ ಪುನಃ ಹೂವಿನ ಗಿಡವಾಗಿದ್ದ ತಂಗಿ ಮನುಷ್ಯಳಾದಳು. ಇದೆಲ್ಲವನ್ನೂ ಮರದ ಮೇಲಿದ್ದ ದೊರೆ ಮಗ ನೋಡಿಕೊಂಡ. ಆಮೇಲೆ ಸೀದಾ ಅರಮನೆಗೆ ಬಂದು ಮಂಚದ ಮೇಲೆ ಮಕಾಡೆ ಮಲಗಿಕೊಂಡ. ತಂದೆತಾಯಿ ಬಂದು

12th_Kannada_Reader_6.indd 132 22-05-2019 15:06:53

ಕೇಳಿದರೂ ಏನೂ ಹೇಳಲಿಲ್ಲ. ಆಗ ಮಂತ್ರಿಯ ಮಗ ಬಂದು ಕೇಳಲಾಗಿ ಹೂವಿನ ಗಿಡವಾಗುವ ಹುಡುಗಿಯ ವಿಚಾರವನ್ನು ಹೇಳಿದ. ದೊರೆಗೆ ಈ ವಿಚಾರ ತಿಳಿದು ಆ ಮುದುಕಿಯನ್ನು ಕರೆಸಿ ಮದುವೆಗೆ ಸಕಲ ಸಿದ್ಧತೆಯನ್ನೂ ಮಾಡಿದ. ಒಳ್ಳೇ ಮುಹೂರ್ತದಲ್ಲಿ, ಹೂವಿನ ಗಿಡವಾಗುತ್ತಿದ್ದ ಹುಡುಗಿಯ ಜೊತೆಯಲ್ಲಿ ರಾಜಕುಮಾರನ ಮದುವೆ ನಡೆಯಿತು. ಅರಮನೆಯಲ್ಲಿ ಅವರಿಬ್ಬರನ್ನು ಏಕಾಂತದಲ್ಲಿ ಬಿಟ್ಟರು. ಇವನಿಷ್ಟಕ್ಕೆ ಇವನಿದ್ದಾನೆ. ಅವಳಿಷ್ಟಕ್ಕೆ ಅವಳಿದ್ದಾಳೆ. ಅವರೇ ಮಾತನಾಡಲಿ ಅಂತ ಅವಳೂ, ಅವಳೇ ಮಾತನಾಡಲಿ ಅಂತ ಅವನೂ... ಹೀಗೆ ಇಬ್ಬರೂ ಗುಮ್ಮಾಗಿ ಸುಮ್ಮನಿದ್ದರು. 'ಏನು ಅವರು ಮಾತಾಡಿಸಲೇ ಇಲ್ಲವಲ್ಲ, ಮತ್ತೇಕೆ ಮದುವೆಯಾದರು' ಅಂತ ಯೋಚನೆ ಮಾಡಿ 'ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?' ಅಂತ ರಾಜಕುಮಾರನನ್ನು ಕೇಳಿದಳು. 'ನಾನು ಹೇಳಿದ ಹಾಗೆ ಕೇಳಿದ್ರೆ ಮಾತಾಡ್ತೀನಿ. ಇಲ್ದೇ ಹೋದ್ರೆ ಇಲ್ಲ' ಎಂದು ಹೇಳಿದ ದೊರೆಮಗ. 'ಪತಿ ಮಾತು ಕೇಳದೇ ಉಂಟೇ? ಅದೇನು ಹೇಳಿ' ಎಂದಳು. 'ಮತ್ತೆ ನೀನು ಹೂವಿನ ಗಿಡ ಆಗ್ತೀಯಲ್ಲ, ಆಗು. ಹೂವ ಹಾಸಿಕೊಂಡು ಹೊದ್ದುಕೊಂಡು ಮಲಕ್ಕೋಬೇಕು' ಅಂದ. 'ಸ್ವಾಮಿ, ನಾನು ದೇವರಲ್ಲ, ದೆವ್ವವಲ್ಲ. ಎಲ್ಲರ ಹಾಗೆ ನರಮನುಷ್ಯಳು. ನರಮನುಷ್ಯರು ಹೂವಿನ ಗಿಡ ಆಗೋದುಂಟೆ?' ಎಂದಳು ದೈನ್ಯದಿಂದ. 'ಈ ಕಳ್ಳಾಟವೆಲ್ಲ ಬೇಡ. ಅವತ್ತು ನೀನು ಹೂವಿನ ಗಿಡ ಆಗಿದ್ದನ್ನು ಕಣ್ಣಾರೆ ನಾನು ನೋಡಿದ್ದೇನೆ. ನನ್ನ ಮುಂದೆ ನೀನು ಹೂವಿನ ಗಿಡ ಆಗದಿದ್ದ ಮೇಲೆ ಇನ್ನಾರ ಮುಂದೆ ಆಗ್ತೀಯಾ?' ಎಂದು ಸಿಟ್ಟಾದ. ಕಣ್ಣೀರನ್ನು ಸೆರಗಿನಿಂದ ಒರೆಸಿಕೊಂಡು, 'ಸ್ವಾಮೀ, ಸಿಟ್ಟಾಗಬೇಡಿ. ಎರಡು ತಂಬಿಗೆ ನೀರನ್ನು ತರಿಸಿ' ಎಂದು ಹೇಳಿ, ಅದನ್ನು ಮಂತ್ರಿಸಿ ಕೊಟ್ಟು ನೀರನ್ನು ಹಾಕುವ ವಿಧಾನ, ಹಾಗೂ ಹೂವನ್ನು ಬಿಡಿಸುವ ವಿಧಾನವನ್ನು ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ದೊರೆಮಗ ನೀರನ್ನು ಸುರಿದ ಕೂಡಲೇ ಹೂವಿನ ಗಿಡವಾದಳು. ತನಗೆ ಬೇಕಾದಷ್ಟು ಹೂವನ್ನು ಬಿಡಿಸಿಕೊಂಡು ಮತ್ತೊಂದು ತಂಬಿಗೆ ನೀರನ್ನು ಸುರಿದನು. ಮನುಷ್ಯಳಾದಳು. ಇಬ್ಬರೂ ಆನಂದದಿಂದ ಹೂವನ್ನು ಹಾಸಿಕೊಂಡು, ಹೊದ್ದುಕೊಂಡು ಮಲಗಿದರು.

ಹೀಗೆ ಕೆಲವು ದಿನ ಕಳೆಯಲು ಅರಮನೆಯ ಪಕ್ಕದಲ್ಲಿ ಬಾಡಿದ ಹೂವಿನ ರಾಶಿಯನ್ನು ನೋಡಿದ ದೊರೆಯ ಕಿರಿಮಗಳು, 'ಅತ್ತಿಗೆ ಮುಡಿದು ಬಿಸಾಕಿದ ಹೂವೇ ಒಂದು ರಾಶಿಯಾಗಿದೆ. ನನಗೆ ಹೂವು ಕೊಟ್ಟಿಲ್ಲ'ವೆಂದು ತಾಯಿಯ ಬಳಿ ದೂರು ಹೇಳಿದಳು. 'ಹೂ ಬೇಕಾದರೆ ಕೊಡಿಸಿ ಕೊಡ್ತೀನಿ. ಸುಮ್ಮನಿರಮ್ಮ' ಎಂದು ತಾಯಿ ಸಮಾಧಾನ ಮಾಡಿದಳು.

ಅದು ಹೇಗೋ ಆ ಕಿರಿ ಮಗಳಿಗೆ ಅತ್ತಿಗೆ ಹೂವಿನ ಗಿಡವಾಗುವ ವಿಷಯ ತಿಳಿದು ಹೋಯಿತು. ದೊರೆ ಮಗಳು ತನ್ನ ಸ್ನೇಹಿತರನ್ನೆಲ್ಲ, 'ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣವ, ಬನ್ನಿ. ನಮ್ಮ ಅತ್ತಿಗೆ ಹೂವಿನ ಗಿಡ ಆಗ್ತಾಳೆ. ನೀವೆಲ್ಲರೂ ಬನ್ನಿ. ಗಮಗಮ ಅನ್ನೋ ಹೂನ ಬೇಕಾದಷ್ಟು ಕೊಡ್ತೀನಿ' ಎಂದು ಹೇಳಿ ಬಂದಳು. ತಾಯಿಗೆ ಅತ್ತಿಗೆಯನ್ನು ಕಳಿಸಿ ಕೊಡುವಂತೆ ಕೇಳುತ್ತಾಳೆ. ತಾಯಿ, 'ಅಣ್ಣನ್ನ ಕೇಳ್ಕೊಂಡು ಕರ್ಕೊಂಡೋಗು' ಅಂತಾಳೆ. ಅಣ್ಣನ್ನ ಕೇಳಿದರೆ 'ನನ್ನಿಷ್ಟ ಅಲ್ಲಮ್ಮ ಕಳ್ಸಕ್ಕೆ, ಅಮ್ಮನ್ನ ಕೇಳು' ಅಂತಾನೆ. ತಾಯಿಯನ್ನು ಕೇಳಿದಳು. 'ಹೋಗಿ ಸಂಜೆ ಹೊತ್ತಿಗೆ ಜೋಪಾನವಾಗಿ ಬನ್ನಿ' ಅಂತ ತಾಯಿ ಹೇಳಿದಳು.

ದೊರೆ ಮಗ ಎಲ್ಲೋ ಹೊರಗೆ ಹೋಗಿದ್ದ. ಆಗ ಎಲ್ಲರೂ ಸುರಹೊನ್ನೆ ತೋಟಕ್ಕೆ ಹೋದರು. ಉಯ್ಯಾಲೆ ಆಡುತ್ತಾ ಇದ್ದಾಗ ಇದ್ದಕ್ಕಿದ್ದಂತೆ ದೊರೆ ಮಗಳು ಅತ್ತಿಗೆಗೆ, 'ನೀನು ಹೂವಿನ ಗಿಡ ಆಗ್ತೀಯಲ್ಲ, ಆಗು' ಎಂದಳು. 'ಅಯ್ಯೋ, ದೇವರೇ, ಇದ್ಯಾರು ನಿನಗೆ ಹೇಳಿದ್ದು. ನಾನೂ ನಿಮ್ಮ ಹಾಗೆ ಮನುಷ್ಯಳೇ! ಹುಚ್ಚು ಹುಚ್ಚಾಗಿ ಆಡಬೇಡ' ಎಂದು ಗದರಿಸಿದಳು ಅತ್ತಿಗೆ. 'ಆಹಾ... ಅಲ್ಲ ಅತ್ತಿಗೆ ನಮ್ಮ ಮುಂದೆ ಆಗದೆ ಇನ್ನಾರ ಮುಂದೆ ಹೂವಿನ ಗಿಡ ಆಗಾಕೆ ಹೋಗ್ತೀಯಾ?' ಎಂದು ನಿಷ್ಠುರವಾಗಿ ಮಾತಾಡಿದಳು ಅವಳು. ವ್ಯಥೆ ಪಟ್ಟು, ಎರಡು ತಂಬಿಗೆ ನೀರು ತರಿಸಿ ಅದನ್ನು ಮಂತ್ರಿಸಿ ಕೊಟ್ಟು ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ಹುಡುಗಿಯರು ಸರಿಯಾಗಿ ಆಲಿಸದೆ ನಿರ್ಲಕ್ಷ್ಯದಿಂದ ತಂಬಿಗೆ ನೀರನ್ನು ಅಡ್ಡಾದಿಡ್ಡಿಯಾಗಿ ಸುರಿದರು. ಆಕೆ ಅರ್ಧಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು. ಗುಡುಗು ಸಿಡಿಲಿನ ಮಳೆ ಪ್ರಾರಂಭವಾಯಿತು. ಆಗ ಅವರು ಹೂವು ಕೀಳೋ ಸಂಭ್ರಮದಲ್ಲಿ ತೊಟ್ಟು, ಎಲೆ, ಸುಳಿ ಕಿತ್ತು ರೆಂಬೇನೆಲ್ಲಾ ಮುರಿದು ಬಿಟ್ಟರು.

12th_Kannada_Reader_6.indd 133 22-05-2019 15:06:53

ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಸುರಿದು ಹೊರಟು ಹೋದರು. ಆಕೆ ಕೈಯಿಲ್ಲದ, ಕಾಲಿಲ್ಲದ ಅರ್ಧಂಬರ್ಧ ಮನುಷ್ಯ ದೇಹವಾಗಿದ್ದಳು. ಮೈಯೆಲ್ಲಾ ಗಾಯವಾಗಿತ್ತು. ಆ ಮಳೆಯ ನೀರಿನಲ್ಲಿ ತೇಲಿಕೊಂಡು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಬಿದ್ದಳು.

ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದವು. 'ಹ್ಞಾ... ಹ್ಞಾ...' ಈಕೆ ಅಂತ ಕೊರಗುತ್ತಾ ಬಿದ್ದಿರುವುದನ್ನು ಗಾಡಿಯವನೊಬ್ಬ ನೋಡ್ತಾನೆ. ಒಂದು ದೇಹದ ಮುದ್ದೆ! ಮುಖ ಮಾತ್ರ ಚೆನ್ನಾಗಿತ್ತು. ಬಟ್ಟೆ ಇಲ್ಲ ಬರೆ ಇಲ್ಲ. 'ಅಯ್ಯೋ, ಮನುಷ್ಯ ಕಣಪ್ಪಾ!' ಅಂತ ಹೇಳಿ ತನ್ನ ತಲೆಯಲ್ಲಿದ್ದ ವಸ್ತ್ರ ಹಾಕಿ, ಗಾಡಿಯಲ್ಲಿ ಕೂರಿಸಿಕೊಂಡು ಮುಂದೂರಿನ ಹಾಳು ಮಂಟಪದಲ್ಲಿ ಗಾಡಿ ನಿಲ್ಲಿಸಿ, ಅವಳನ್ನು ಆ ಮಂಟಪದಲ್ಲಿಟ್ಟು ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ ಅಂತ ಹೇಳಿ ಹೊರಟ. ಇತ್ತ ನಿಜವಾದ ಸಂಗತಿ ತಿಳೀದೇ ದೊರಮಗ ಬೇಜಾರಾಗಿ ಗೋಸಾಯಿ ದಿರಿಸು ಹಾಕಿಕೊಂಡು ದೇಶಾಂತರ ಹೊರಟ.

ಇತ್ತ ಮೈಯೆಲ್ಲಾ ಗಾಯವಾಗಿ ಅರ್ಧಂಬರ್ಧ ದೇಹವಾಗಿದ್ದ ಇವಳು ತನ್ನ ಗಂಡನ ದೊಡ್ಡಕ್ಕಳನ್ನು ಮದುವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿ ಬಿದ್ದಿದ್ದಳು. ಆ ಪಟ್ಟಣದ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡಿ, ಈ ವಿಚಾರಾನ ರಾಣಿಗೆ 'ಅಮ್ಮಾ, ಅಮ್ಮಾ! ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ. ಕರೆತರಲೇ' ಎನ್ನುತ್ತಾರೆ. 'ಹೋಗ್ರೇ, ಹೋಗ್ರೇ ಅವಳ ಸೇವೆ ಮಾಡಿ ಅನ್ನ ಹಾಕಬೇಕಾಗುತ್ತೆ' ಎಂದು ತಾತ್ಸಾರ ಮಾಡ್ತಾಳೆ ಆಕೆ. ದಾದೇರು ಗೋಗರೆದದ್ದಕ್ಕೆ ಕಡೆಗೆ ಒಪ್ಪತಾಳೆ. 'ಅವಳ ಸೇವೆ ನೀವೇ ಮಾಡಬೇಕು' ಎಂದಳು ರಾಣಿ. 'ಆಯ್ತು, ನಾವೇ ಮಾಡ್ತೀವಮ್ಮ' ಎಂದು ಒಪ್ಕೊಂಡು ಅವಳನ್ನು ಕರೆ ತಂದು, ನೀರು ನಿಡಿ ಉಯ್ದು ಬಟ್ಟೆ ಉಡಿಸಿ ಅರಮನೆ ಬಾಗಿಲಲ್ಲಿ ಕುಳ್ಳಿರಿಸಿದರು. ದಿನವಹಿ ಮೈಮೇಲಿನ ಗಾಯಗಳಿಗೆ ಔಷಧ ಹಾಕಿ ವಾಸಿ ಮಾಡಿದರು.

ಇತ್ತ ದೊರೆ ಮಗ ದೇಶದೇಶವೆಲ್ಲ ತಿರುಗಿ ತನ್ನ ಅಕ್ಕನ ಪಟ್ಟಣಕ್ಕೆ ಬಂದ. ಬಂದು ಪಟ್ಟಣದ ಬಾಗಿಲ ಬಳಿ ಕುಳಿತ. ತಿಕ್ಕಲು ಮನುಷ್ಯನ ಹಾಗೆ ಅವನಿಗೆ ಗಡ್ಡ ಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದೇರು ಇವನನ್ನು ನೋಡಿ, 'ಅರಮನೆಗೆ ಬಂದು, ಅಮ್ಮಾವ್ರೇ, ಯಾರೋ ನಿಮ್ಮ ತಮ್ಮ ಕುಳಿತಂಗೆ ಕಾಣುತ್ತೆ' ಅಂತ ಗೋಗರೆದರು. ದುರಬೀನು ಹಾಕಿ ನೋಡಿ ರಾಣಿ, ಕರೆಸಿ ಚೆನ್ನಾಗಿ ನೋಡಿದಳು. ನನ್ನ ತಮ್ಮನೇ ಇರಬೇಕೆಂದುಕೊಂಡಳು. ಕೊಪ್ಪಕೊಪ್ಪರಿಗೆ ಎಣ್ಣೆ ಕಾಯಿಸಿ ನೆತ್ತಿಗೆ ತಿಕ್ಕಿಸಿ ಹಂಡೆ ಹಂಡೆ ನೀರು ಹಾಕ್ಸಿ ತನ್ನ ತಮ್ಮನೇ ಹೌರತು ಬೇರಲ್ಲವೆಂದು ತಿಳಿದುಕೊಂಡಳು. ದಿನಕ್ಕೊಂದು ಅಡಿಗೆ, ದಿನಕ್ಕೊಂದು ದಿರಿಸು ಕೊಟ್ಟಳು. ಆದರೆ ಆತ ಮಾತನಾಡಲೇ ಇಲ್ಲ. ಅಷ್ಟು ಹೊತ್ತಿಗೆ ಇಬ್ಬರಿಗೂ ತಾವು ಅಕ್ಕತಮ್ಮ ಅನ್ನೋದು ಚೆನ್ನಾಗಿ ಗೊತ್ತಾಗಿತ್ತು.

ನಾನೆಷ್ಟು ಉಪಚಾರ ಮಾಡಿದ್ರೂ ನನ್ನ ತಮ್ಮ ಮಾತನಾಡಲಿಲ್ಲ, ಏನು ಕಾರಣ? ಎಂದು ಯೋಚಿಸಿ ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳಿಸಿದಳು. ಆದರೂ ಯಾರೊಂದಿಗೂ ಮಾತಾಡಲಿಲ್ಲ. ಆಗ ಮಾರನೇ ದಿನ ರಾತ್ರಿ ದಾದೇರೆಲ್ಲ ಸೇರಿ ಅರಮನೆಯ ಮುಂದಿದ್ದ ಇವಳಿಗೆ ಶೃಂಗಾರ ಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಇವನ ಮಂಚದ ಮೇಲೆ ಕೂರಿಸಿದರು. ಇವನು ದಾದೇರ್ನ ನೋಡಲೂ ಇಲ್ಲ, ಮಾತನಾಡಿಸಲೂ ಇಲ್ಲ. ಆದರೆ ರಾತ್ರಿ ಇದು ಮೋಟು ಗೈಯಲ್ಲಿ ಇವನ ಕಾಲನ್ನು ಒತ್ತುತ್ತಾ, ಹ್ಞೂ... ಹ್ಞೂ... ಅಂತ ಕೊರಗುತ್ತಿತ್ತು. ಆಗ ಎದ್ದು ನೋಡಿದ. ಇವಳೇ ನನ್ನ ಹೆಂಡತಿಯೆಂದು ತಿಳಿದುಕೊಂಡ. ನಿಂತಿದ್ದ ಮಾತು ಬಂತು. ಆಗ ಏನು ಎತ್ತ ಎಂದು ಅವಳನ್ನು ವಿಚಾರಿಸಿದ. ಆಕೆ, 'ನಿಮ್ಮ ತಂಗಿಯಿಂದಾಗಿ ಹೀಗಾಯಿತು' ಎಂದು ಎಲ್ಲವನ್ನೂ ಹೇಳಿದಳು. 'ಅದಕ್ಕೆ ಈಗೇನು ಮಾಡಬೇಕು?' ಅಂತ ಕೇಳಿದ. 'ಹೆಚ್ಚಿಗೇನೂ ಮಾಡಬೇಡಿ. ಚಿಳ್ಳುಗುರು ಸೋಕದ ಹಾಗೆ ಎರಡು ತಂಬಿಗೆ ನೀರನ್ನು ತನ್ನಿ ಎಂದಳು. ಆತ ಯಾರಿಗೂ ಗೊತ್ತಾಗದ ಹಾಗೆ ಎರಡು ತಂಬಿಗೆ ನೀರನ್ನು ತಂದುಕೊಟ್ಟ. ಎರಡು ತಂಬಿಗೆ ನೀರನ್ನೂ ಮಂತ್ರಿಸಿಕೊಟ್ಟು, 'ಮೊದಲು ಈ ತಂಬಿಗೆ ನೀರು ಹೊಯ್ದು ಬಿಡಿ. ಹೂವಿನ ಗಿಡ ಆಗ್ತೀನಿ. ಆಗ ಎಲ್ಲಿ ಎಲೆ ಹೋಗಿದೆಯೋ ಅಲ್ಲಿ ಎಲೆ ಜೋಡಿಸಿ. ಎಲ್ಲಿ ರೆಂಬೆ ಹೋಗಿದೆಯೋ ಅಲ್ಲಿಗೆ ರೆಂಬೆ ಜೋಡಿಸಿ. ಆನಂತರ ಇನ್ನೊಂದು ತಂಬಿಗೆ ನೀರನ್ನು ಸುರಿಯಿರಿ' ಎಂದು ಹೇಳಿ ದೇವರನ್ನು ನೆನೆದು ಕುಳಿತುಕೊಂಡಳು. ಒಂದು ತಂಬಿಗೆ ನೀರು ಸುರಿದು ನೋಡ್ತಾನೆ. ಕೊಂಬೆ

12th_Kannada_Reader_6.indd 134 22-05-2019 15:06:53

ರೆಂಬೇನೆಲ್ಲಾ ತರ್ದು ಬಿಟ್ಟಿದ್ದಾರೆ. ಅದನ್ನೆಲ್ಲ ಸರಿ ಪಡಿಸಿ ಇನ್ನೊಂದು ತಂಬಿಗೆ ನೀರನ್ನು ಸುರಿದನು. ಆಗ ಪುನಃ ಮನುಷ್ಯಳಾಗಿ, ಎದ್ದು ತನ್ನ ಗಂಡನ ಕಾಲಿಗೆ ನಮಸ್ಕಾರ ಮಾಡ್ತಾಳೆ. ನಾದಿನಿಯಾದ ರಾಣಿಯನ್ನೆಬ್ಬಿಸಿ ಆಕೆಯ ಕಾಲಿಗೂ ನಮಸ್ಕಾರ ಮಾಡಿದಳು. ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ಆಕೆ ಈಕೆಯನ್ನಪ್ಪಿ ಮುದ್ದಾಡಿ ಅತ್ತಳು. ಕಡೆಗೆ ಚೆನ್ನಾಗಿ ಉಪಚಾರ ಮಾಡಿ ಅವರಿಬ್ಬರನ್ನೂ ನಾಲ್ಕಾರು ವಾರ ತನ್ನ ಮನೆಯಲ್ಲಿಟ್ಟುಕೊಂಡು, ತನ್ನ ತಂದೆಯ ಪಟ್ಟಣಕ್ಕೆ ಹೋಗುವಾಗ ಬೇಕಾದಷ್ಟು ಐಸಿರಿಯ ಉಡುಗೊರೆ ಕೊಟ್ಟು ಕಳಿಸಿದಳು.

ಕೃತಿ–ಕರ್ತೃ ವಿಚಾರ



ಕವಿ ಎ.ಕೆ. ರಾಮಾನುಜನ್ ಅವರು ಕವಿ, ಚಿಂತಕ, ಪ್ರಾಧ್ಯಾಪಕ, ಜಾನಪದ ತಜ್ಞ. ಹೀಗೆ ಅವರು ವಿವಿಧ ಪ್ರತಿಭೆಗಳ ಸಂಗಮವೆಂದು ಖ್ಯಾತರಾದವರು. ಇವರ ಪೂರ್ಣ ಹೆಸರು ಅತ್ತಿಪಟ್ಟು ಕೃಷ್ಣಸ್ವಾಮಿ ರಾಮಾನುಜನ್. ಇವರು ಮಾರ್ಚ್ 16, 1929ರಲ್ಲಿ ಮೈಸೂರಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ., ಪದವಿ ಗಳಿಸಿದ ಇವರು ದಕ್ಷಿಣ ಭಾರತ ಮತ್ತು ಅಮೇರಿಕಾದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, 1993ರಲ್ಲಿ ನಿಧನರಾದರು. ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡದಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು', 'ಕುಂಟೋ ಬಿಲ್ಲ', 'ಮತ್ತೊಬ್ಬನ ಆತ್ಮಚರಿತ್ರೆ' ಇವು ಇವರ ಪ್ರಸಿದ್ಧ ಕೃತಿಗಳು. ಕನ್ನಡ ವಚನ ಸಾಹಿತ್ಯವನ್ನು 'ಸ್ಪೀಕಿಂಗ್ ಆಫ್ ಶಿವ' ಎಂದು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಇವರ ಸಾಹಿತ್ಯದಲ್ಲಿನ ಸಾಧನೆಗೆ 1976ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 1983ರಲ್ಲಿ ಪ್ರಸಿದ್ಧ 'ಮ್ಯಾಕ್ ಅರ್ಥರ್ ಫೆಲೋಷಿಪ್' ಗೌರವ ಇವರಿಗೆ ಸಂದಿದೆ.

ಪ್ರಸ್ತುತ ಹೂವಾದ ಹುಡುಗಿ ಎನ್ನುವ ಜನಪದ ಕಥೆಯನ್ನು ಎ.ಕೆ.ರಾಮನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಆಶಯ ಭಾವ

ಕೂಲಿ ಮಾಡಿ ತಮ್ಮನ್ನು ಸಾಕುತ್ತಿದ್ದ ತಾಯಿಯ ಕಷ್ಟವನ್ನು ನೋಡಿದ ಹೆಣ್ಣು ಮಗಳು ತಾಯಿಗೆ ನೆರವಾಗಲು ತಾನು ಹೂವಿನ ಗಿಡವಾಗಿ, ಹೂ ಮಾರಿ ಹಣವನ್ನು ಸಂಗ್ರಹಿಸುವ, ಈ ಹೂವಿನ ರಹಸ್ಯವನ್ನು ತಿಳಿದು ಆಕೆಯನ್ನೇ ಮದುವೆಯಾಗುವ ದೊರೆ ಮಗ. ಹೂವಿನ ಗಿಡವಾಗುವ ಹುಡುಗಿಯು ತನ್ನ ಗಂಡನ ತಂಗಿಯಿಂದಲೇ ಕಷ್ಟಕ್ಕೆ ಸಿಲುಕಿ ಯಾತನೆಯನ್ನನುಭವಿಸಿ ಕೊನೆಗೆ ಎಲ್ಲಾ ತೊಂದರೆಗಳಿಂದ ಪಾರಾಗಿ ದಂಪತಿಗಳು ಒಂದಾಗುವ ಜನಪದ ಸೊಗಡಿನ ಕಥೆಯಿದು. ಹೆಣ್ಣಿನ ಸಹನೆ, ದಾಂಪತ್ಯದ ಅನ್ಯೋನ್ಯತೆ, ಪ್ರೀತಿ ಸಹಕಾರ ಮನೋಭಾವಗಳ ಮೌಲ್ಯಗಳನ್ನು ತಿಳಿಸುವ ಆಶಯ ಇಲ್ಲಿದೆ.

ಪದಗಳ ಅರ್ಥ

ಐಸಿರಿ–ಐಶ್ವರ್ಯ, ಸಂಪತ್ತು; ಕುತೂಹಲ–ಆಸಕ್ತಿ, ತಿಳಿದುಕೊಳ್ಳುವ ಹಂಬಲ, ಉತ್ಸುಕತೆ; ಕೊಪ್ಪರಿಗೆ–ಕಡಾಯಿ; ಗುಮ್ಮಾಗಿ–ಸುಮ್ಮನೆ, ಯಾರ ಬಳಿಯಲ್ಲೂ ಮಾತನಾಡದೆ; ಗೋಸಾಯಿ–ಸನ್ಯಾಸಿ, ಬೈರಾಗಿ; ತಿಕ್ಕಲು–ಹುಚ್ಚು, ಬುದ್ಧಿ ಭ್ರಮಣೆ; ದಾದೇರು–ದಾದಿಯರು, ಸೇವಕಿಯರು, ದಾಸಿಯರು; ದಿರಿಸು–ಉಡುಪು, ವಸ್ತ್ರ, ಬಟ್ಟೆ; ಮೊಗೆ–ಬೊಗಸೆ ತುಂಬಾ; ಮೋರಿ–ಚರಂಡಿ, ಗಟಾರ, ಕೊಳಕು ನೀರು ಹೋಗುವ ಕಾಲುವೆ; ಯಥಾಸ್ಥಿತಿ–ಮೊದಲು ಇದ್ದ ರೀತಿ; ಸಂಭ್ರಮ–ಸಂತೋಷ; ಸುರಹೊನ್ನೆ–ಒಂದು ಜಾತಿಯ ಹೂವಿನ ಮರ, ಪನ್ನಾಗ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು ?
2. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು ?

12th_Kannada_Reader_6.indd 135 22-05-2019 15:06:54

3. ಹೂವಾಗುವ ಹುಡುಗಿಯ ಬಳಿ ದೊರೆಯ ಮಗ ಏನು ಹೇಳಿದ ?
4. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು ?
5. ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಏನು ಉಡುಗೊರೆ ನೀಡಿದಳು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ದೊರೆ ಮಗ ಹೇಗೆ ಕಂಡು ಹಿಡಿದನು?
2. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು ?
3. ದೊರೆಯ ಮಗ ದೇಶಾಂತರ ಹೋಗಲು ಕಾರಣವೇನು ?
4. ಅರ್ಧಂಬರ್ಧ ದೇಹವಾಗಿದ್ದವಳು ಹೇಗೆ ರಾಣಿಯ ಅರಮನೆ ಸೇರಿದಳು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ಮಾಡಿದ ದ್ರೋಹವೇನು ?
2. ದೊರೆಯ ಮಗ ತನ್ನ ಹೆಂಡತಿಯನ್ನು ಪುನಃ ಹೇಗೆ ಪಡೆದನು ?

ಚಟುವಟಿಕೆ

1. ನಿಮ್ಮ ಊರಿನಲ್ಲಿರುವ ಹಿರಿಯರು ಹೇಳುವ ಜಾನಪದ ಕಥೆಗಳನ್ನು ಕೇಳಿರಿ.



12th_Kannada_Reader_6.indd 136 22-05-2019 15:06:54

ಘಟಕ ಆರು

ಸಂಧಿಗಳು

ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೆ ಒಂದನ್ನೊಂದು ಸೇರಿ ಒಂದೇ ಪದವಾಗುವುದಕ್ಕೆ ಸಂಧಿ ಎನ್ನುತ್ತೇವೆ. ಸಂಧಿಯಲ್ಲಿ ಸ್ವರ ಸಂಧಿ, ವ್ಯಂಜನ ಸಂಧಿ ಎಂದು ಎರಡು ವಿಧಗಳಿವೆ.

ಕನ್ನಡ ಸಂಧಿಗಳು

ಕನ್ನಡದಲ್ಲಿ ಒಟ್ಟು ಮೂರು ಬಗೆಯ ಸಂಧಿಗಳಿವೆ. ಅವುಗಳು : ಲೋಪಸಂಧಿ, ಆಗಮ ಸಂಧಿ, ಆದೇಶ ಸಂಧಿ.

ಲೋಪ ಸಂಧಿ

ಸ್ವರದ ಮುಂದೆ ಸ್ವರವು ಬಂದು, ಸಾಮಾನ್ಯವಾಗಿ ಪೂರ್ವ ಪದದ ಕೊನೆಯ ಅಕ್ಷರವು ಲೋಪವಾಗುವುದನ್ನೇ ಲೋಪಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಊರು + ಅನ್ನು = ಊರನ್ನು(ಉಕಾರ ಲೋಪವಾಗಿದೆ)

ಕಾಡು + ಇಗೆ = ಕಾಡಿಗೆ(ಉಕಾರ ಲೋಪವಾಗಿದೆ)

ಆಗಮ ಸಂಧಿ

ಸ್ವರದ ಮುಂದೆ ಸ್ವರವು ಬಂದು ಲೋಪ ಸಂಧಿಯಾದರೆ; ಆಗ ಅರ್ಥವು ಕೆಡುವಂತಿದ್ದಲ್ಲಿ ಆ ಎರಡು ಸ್ವರಗಳ ನಡುವೆ 'ಯ'ಕಾರವೋ ಅಥವಾ 'ವ'ಕಾರವೋ ಹೊಸದಾಗಿ ಬಂದು ಸೇರಿಕೊಳ್ಳುತ್ತದೆ. ಇದನ್ನು ಆಗಮ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಹಳ್ಳಿ + ಅಲ್ಲಿ = ಹಳ್ಳಿಯಲ್ಲಿ(ಯಕಾರಾಗಮ)

ಕರು + ಅನ್ನು = ಕರುವನ್ನು(ವಕಾರಾಗಮ)

ಆದೇಶ ಸಂಧಿ

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಆದೇಶವಾಗಿ ಬರುವುದನ್ನೇ ಆದೇಶ ಸಂಧಿ ಎಂದು ಕರೆಯುತ್ತಾರೆ. ಮುಖ್ಯವಾಗಿ ಉತ್ತರ ಪದದ

12th_Kannada_Reader_6.indd 137 22-05-2019 15:06:54

ಮೊದಲಿನ ಅಕ್ಷರಗಳಾದ ಕ,ತ,ಪ–ಗಳಿಗೆ ಅದೇ ವರ್ಗದ ತೃತೀಯಾಕ್ಷರಗಳಾದ ಗ,ದ,ಬ–ಗಳು ಆದೇಶವಾಗುತ್ತವೆ.

ಉದಾಹರಣೆಗೆ:

ಅಡಿ	+	ಕಲ್ಲು	=	ಅಡಿಗಲ್ಲು(ಕಕಾರಕ್ಕೆ ಗಕಾರ ಆದೇಶವಾಗಿದೆ)
ಕೆಳ	+	ತುಟಿ	=	ಕೆಳದುಟಿ(ತಕಾರಕ್ಕೆ ದಕಾರ ಆದೇಶವಾಗಿದೆ)
ಕಣ್	+	ಪನಿ	=	ಕಂಬನಿ(ಪಕಾರಕ್ಕೆ ಬಕಾರ ಆದೇಶವಾಗಿದೆ)

ಪ್ರಕೃತಿಭಾವ

ಸ್ವರದ ಮುಂದೆ ಸ್ವರವು ಬಂದರೂ, ಕೆಲವು ಕಡೆಗಳಲ್ಲಿ ಲೋಪ–ಆಗಮ–ಆದೇಶ ಸಂಧಿಗಳಾಗದೆ ಇರುವ ಪದಗಳು ಇರುವ ಹಾಗೆಯೇ ಇರುವುದಕ್ಕೆ ಪ್ರಕೃತಿ ಭಾವ ಎಂದು ಎಂದು ಕರೆಯುತ್ತಾರೆ.

ಉದಾಹರಣೆಗೆ:

ಆ	+	ಅರಸ	=	ಆ ಅರಸ
ಓಹೋ	+	ನಿಧಿ ಸಿಕ್ಕಿತು!	=	ಓಹೋ ನಿಧಿ ಸಿಕ್ಕಿತು!
ದೇವರೇ	+	ಅವರನ್ನು ಕಾಪಾಡು	=	ದೇವರೇ, ಅವರನ್ನು ಕಾಪಾಡು!

ಸಂಸ್ಕೃತ ಸಂಧಿಗಳು

ಸಂಸ್ಕೃತ ಸಂಧಿಗಳನ್ನು ಸ್ವರ ಸಂಧಿಗಳು, ವ್ಯಂಜನ ಸಂಧಿಗಳು ಹಾಗೂ ಅನುನಾಸಿಕ ಸಂಧಿಗಳೆಂದು ಎರಡು ರೀತಿಯಲ್ಲಿ ಗುರುತಿಸಬಹುದು.

ಸಂಸ್ಕೃತ ಸ್ವರ ಸಂಧಿಗಳು

ಸವರ್ಣದೀರ್ಘ ಸಂಧಿ

ಸವರ್ಣ ಸ್ವರಗಳು ಒಂದರ ಮುಂದೆ ಒಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಸ್ವರದ ದೀರ್ಘ ಸ್ವರವು ಬರುವುದನ್ನು ಸವರ್ಣದೀರ್ಘ ಸಂಧಿ ಎಂದು ಎಂದು ಕರೆಯುತ್ತಾರೆ.

ಉದಾಹರಣೆಗೆ:

ಭೀಮ	+	ಅರ್ಜುನ	=	ಭೀಮಾರ್ಜುನ(ಅ+ಅ=ಆ)
ಕವಿ	+	ಇಂದ್ರ	=	ಕವೀಂದ್ರ(ಇ+ಇ+ಈ)
ಗುರು	+	ಉಪದೇಶ	=	ಗುರೂಪದೇಶ(ಉ+ಉ+ಊ)

12th_Kannada_Reader_6.indd 138 22-05-2019 15:06:54

ಗುಣ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಇಈ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏಕಾರವೂ, ಉಊಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಓಕಾರವೂ; ಋಕಾರವು ಪರವಾದರೆ ಅವೆರಡರ ಸ್ಥಾನದಲ್ಲಿ ಅರ್‌ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಸುರ	+	ಇಂದ್ರ	=	ಸುರೇಂದ್ರ(ಅ+ಇ=ಏ)
ಚಂದ್ರ	+	ಉದಯ	=	ಚಂದ್ರೋದಯ(ಅ+ಉ=ಓ)
ಮಹ	+	ಋಷಿ	=	ಮಹರ್ಷಿ(ಅ+ಋ=ಅರ್/ರ್)

ವೃದ್ಧಿ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಅಆ–ಕಾರಗಳಿಗೆ ಉತ್ತರ ಪದದ ಮೊದಲಲ್ಲಿ ಏಐ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐಕಾರವೂ; ಒಔ–ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔಕಾರವೂ ಬರುವುದನ್ನು ವೃದ್ಧಿ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಏಕ	+	ಏಕ	=	ಏಕೈಕ(ಅ+ಏ=ಐ)
ಮಹಾ	+	ಔನ್ನತ್ಯ	=	ಮಹೌನ್ನತ್ಯ(ಆ+ಔ=ಔ)

ಯಣ್ ಸಂಧಿ

ಪೂರ್ವ ಪದದ ಕೊನೆಯಲ್ಲಿ ಇಈಉಊಋ–ಕಾರಗಳಿಗೆ ಸವರ್ಣವಲ್ಲದ ಅಕ್ಷರಗಳು ಪರವಾದರೆ, ಇಈ–ಕಾರಗಳಿಗೆ 'ಯ'ಕಾರವೂ; ಉಊ–ಕಾರಗಳಿಗೆ 'ವ'ಕಾರವೂ; ಋಕಾರಕ್ಕೆ 'ರ'ಕಾರವೂ ಆದೇಶವಾಗಿ ಬರುವುದನ್ನು ಯಣ್ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಪ್ರತಿ	+	ಉತ್ತರ	=	ಪ್ರತ್ಯುತ್ತರ(ಇಕಾರಕ್ಕೆ ಯಕಾರ)
ಮನು	+	ಅಂತರ	=	ಮನ್ವಂತರ(ಉಕಾರಕ್ಕೆ ವಕಾರ)
ಪಿತೃ	+	ಅರ್ಜಿತ	=	ಪಿತ್ರಾರ್ಜಿತ(ಋಕಾರಕ್ಕೆ ರಕಾರ)

12th_Kannada_Reader_6.indd 139 22-05-2019 15:06:54

ಸಂಸ್ಕೃತ ವ್ಯಂಜನ ಸಂಧಿಗಳು

ಜಸ್ತ್ವ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ಕ,ಚ,ಟ,ತ,ಪ ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಆಯಾ ವರ್ಗದ ಮೂರನೆಯ ವ್ಯಂಜನಾಕ್ಷರಗಳಾದ ಗ,ಜ,ಡ,ದ,ಬ–ಗಳು ಆದೇಶವಾಗಿ ಬರುವುದನ್ನು ಜಸ್ತ್ವಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ದಿಗ್	+	ಅಂತ	=	ದಿಗಂತ(ಕಕಾರಕ್ಕೆ ಗಕಾರ ಆದೇಶವಾಗಿದೆ)
ಸತ್	+	ಆನಂದ	=	ಸದಾನಂದ(ತಕಾರಕ್ಕೆ ದಕಾರಾದೇಶ)
ಷಟ್	+	ಆನನ	=	ಷಡಾನನ(ಟಕಾರಕ್ಕೆ ಡಕಾರಾದೇಶ)

ಶ್ಚುತ್ವ ಸಂಧಿ

ಪೂರ್ವ ಪದದ ಕೊನೆಯಲ್ಲಿ ಸಕಾರ ಹಾಗೂ ತವರ್ಗಾಕ್ಷರಗಳಿಗೆ ಶಕಾರ ಮತ್ತು ಚವರ್ಗಾಕ್ಷರಗಳು ಪರವಾದರೆ; ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶವಾಗಿ ಬರುವುದನ್ನೇ ಶ್ಚುತ್ವ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ:

ಮನಸ್	+	ಶಾಂತಿ	=	ಮನಶ್ಶಾಂತಿ(ಸಕಾರಕ್ಕೆ ಶಕಾರಾದೇಶ)
ಸತ್	+	ಚಿತ್ತ	=	ಸಚ್ಚಿತ್ತ(ತಕಾರಕ್ಕೆ ಚಕಾರಾದೇಶ)

ಅನುನಾಸಿಕ ಸಂಧಿ

ಪೂರ್ವ ಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಗಳಾದ ಕಚಟತಪ ವ್ಯಂಜನಗಳಿಗೆ ಯಾವುದೇ ವ್ಯಂಜನಗಳು ಪರವಾದರೂ ಅದೇ ವರ್ಗದ ಅನುನಾಸಿಕಗಳಾದ ಙಞಣನಮಗಳು ಆದೇಶವಾಗಿ ಬರುವುದನ್ನೇ ಅನುನಾಸಿಕ ಸಂಧಿ ಎಂದು ಕರೆಯುತ್ತಾರೆ.

ಉದಾಹರಣೆಗೆ :

ದಿಗ್	+	ನಾಗ	=	ದಿಙ್ನಾಗ
ಷಟ್	+	ಮುಖ	=	ಷಣ್ಮುಖ
ಸತ್	+	ಮಾನ	=	ಸನ್ಮಾನ

12th_Kannada_Reader_6.indd 140 22-05-2019 15:06:54

ಘಟಕ ಏಳು

7. ನಾಡು/ಸಮಾಜ/ರಾಜಕೀಯ ನಿರ್ವಹಣೆ



ಕಾವ್ಯ ಕಣಜ	:	ಅಂಬಿಗಾ ನಾ ನಿನ್ನ ನಂಬಿದೆ	– ಪುರಂದರದಾಸ
ಗದ್ಯ ವಿಹಾರ	:	ನಗು–ಅಳು	– ಎಂ.ಎಸ್. ಸುಂಕಾಪುರ
ಉಪಪಠ್ಯ	:	ಸ್ವಾತಂತ್ರ್ಯದ ಬೆಲೆ	– ಕೆ.ಕುಮಾರ್ ಆಚಾರ್
ವ್ಯಾಕರಣ	:	ಸಮಾಸಗಳು	

12th_Kannada_Reader_7.indd 141 22-05-2019 14:37:37

ಕಾವ್ಯ ಕಣಜ

ಘಟಕ ಏಳು

ಅಂಬಿಗಾ ನಾ ನಿನ್ನ ನಂಬಿದೆ

– ಪುರಂದರ ದಾಸರು



ಎನ್ನ ಕಾಲೇ ಕಂಬ, ದೇಹವೇ ದೇಗುಲ ಎಂಬ ಬಸವಣ್ಣನವರ ನುಡಿಯಂತೆ ಈ ದೇಹವೇ ದೇವರ ಮನೆ, ದೇವರ ಕೃಪೆ ಆಶೀರ್ವಾದವಿಲ್ಲದಿದ್ದರೆ ಹುಲು ಮಾನವ ಏನೂ ಮಾಡಲು ಸಾಧ್ಯವಿಲ್ಲ. ಆದುದರಿಂದ ಈ ಜೀವನ ಪಯಣದ ನೌಕೆಯಲ್ಲಿ ಸುಗಮವಾಗಿ ಸಾಗಲು ನೀನು ಸಹಾಯ ಮಾಡಬೇಕು ಎನ್ನುವ ಪ್ರಾರ್ಥನೆ ಈ ಕೀರ್ತನೆಯಲ್ಲಿ ವ್ಯಕ್ತವಾಗಿದೆ. ಆದುದರಿಂದ ದೇವರ ಆಶೀರ್ವಾದವೇ ಮುಖ್ಯ ಎಂಬುದು ಈ ಕೀರ್ತನೆಯಲ್ಲಿ ಮೂಡಿ ಬಂದಿದೆ.



12th_Kannada_Reader_7.indd 142 22-05-2019 14:37:37

ಅಂಬಿಗ ನಾ ನಿನ್ನ ನಂಬಿದೆ ಜಗ–
ದಂಬಾರಮಣ ನಿನ್ನ ನಂಬಿದೆ ॥ ಪಲ್ಲವಿ ॥
ತುಂಬಿದ ಹರಿಗೋಲಂಬಿಗ ಅದ–
ಕೊಂಬತ್ತು ಛಿದ್ರ ನೋಡಂಬಿಗ
ಸಂಭ್ರಮದಿಂದ ನೀನಂಬಿಗ ಅದ–
ರಿಂಬು ನೋಡಿ ನಡೆಸಂಬಿಗ ॥ 1 ॥

ಹೊಳೆಯ ಬರವ ನೋಡಂಬಿಗ ಅದಕೆ
ಸೆಳೆವು ಘನವಯ್ಯ ಅಂಬಿಗ
ಸುಳಿಯೊಳು ಮುಳುಗಿದೆ ಅಂಬಿಗ ಎನ್ನ
ಸೆಳೆದುಕೊಂಡೊಯ್ಯೊ ನೀನಂಬಿಗ ॥ 2 ॥

ಆರು ತೆರೆಯ ನೋಡಂಬಿಗ, ಅದು
ಮೀರಿ ಬರುತಲಿದೆ ಅಂಬಿಗ
ಯಾರಿಂದಲಾಗದು ಅಂಬಿಗ ಅದ ನಿ–
ವಾರಿಸಿ ದಾಟಿಸೊ ಅಂಬಿಗ ॥ 3 ॥

ಹೊತ್ತು ಹೋಯಿತು ನೋಡಂಬಿಗ, ಅಲ್ಲಿ
ಮತ್ತೈವರೀರ್ವರು ಅಂಬಿಗ
ಒತ್ತಿ ನಡೆಸು ನೋಡಿ ಅಂಬಿಗ, ಎನ್ನ
ಸತ್ಯಲೋಕಕೆ ಒಯ್ಯೊ ಅಂಬಿಗ ॥ 4 ॥

ಸತ್ವ ಪಥದೊಳಗಂಬಿಗ ಪರಾ–
ಭಕ್ತಿ ಹುಟ್ಟನು ಹಾಕಿ ಅಂಬಿಗ
ಮುಕ್ತಿದಾಯಕ ನಮ್ಮ ಪುರಂದರ ವಿಠಲನ
ಮುಕ್ತಿಮಂಟಪಕ್ಕೊಯ್ಯೊ ಅಂಬಿಗ ॥ 5 ॥

12th_Kannada_Reader_7.indd 143 22-05-2019 14:37:37

ಕವಿ–ಕಾವ್ಯ ಪರಿಚಯ



ಈ ಪದ ಅಥವಾ ಕೀರ್ತನೆಯನ್ನು ರಚಿಸಿದವರು ಪುರಂದರ ದಾಸರು. ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬಾಳಿದವರು. ಆಗರ್ಭ ಶ್ರೀಮಂತರಾಗಿದ್ದ ಇವರು ಯಾವುದೋ ಒಂದು ಸನ್ನಿವೇಶದಲ್ಲಿ ವೈರಾಗ್ಯವನ್ನು ತಾಳಿ ಹರಿದಾಸರಾದರೆಂಬ ಪ್ರತೀತಿಯಿದೆ. ಇವರ ಮೊದಲಿನ ಹೆಸರು ಕ್ರಿಷ್ಣಪ್ಪ ನಾಯಕ ಅಥವಾ ವರದಪ್ಪ ನಾಯಕ ಅಥವಾ ಶ್ರೀನಿವಾಸ ನಾಯಕ ಎಂದು ಬೇರೆ ಬೇರೆಯಾಗಿ ಪ್ರಚಲಿತದಲ್ಲಿದೆ. ಇವರು ಕೀರ್ತನೆಗಳನ್ನಲ್ಲದೆ ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಹರಿನಾಮ ಸ್ಮರಣೆ, ಅಂತರಂಗ ನಿವೇದನೆ, ಕೃಷ್ಣಲೀಲೆ, ಸಮಾಜ ವಿಮರ್ಶೆ ಹೀಗೆ ಇವರ ಕೀರ್ತನೆಗಳ ವಸ್ತು ವೈವಿಧ್ಯಮಯವಾಗಿದೆ. ಲಕ್ಷಾಂತರ ಕೀರ್ತನೆಗಳನ್ನು ಬರೆದಿರುವರೆಂಬ ನಂಬಿಕೆಯಿದ್ದರೂ ಸಿಕ್ಕಿರುವ ಇವರ ರಚನೆಗಳು ಸುಮಾರು ಒಂದು ಸಾವಿರ. ಕರ್ನಾಟಕ ಸಂಗೀತದ ಬುನಾದಿಯಾದ ಪಿಳ್ಳಾರಿ ಗೀತಗಳು ಪುರಂದರದಾಸರು ಬರೆದದ್ದು. ಆದ್ದರಿಂದ ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯುತ್ತಾರೆ. 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ತಮ್ಮ ಗುರು ವ್ಯಾಸರಾಯರಿಂದಲೇ ಹೊಗಳಿಸಿಕೊಂಡ ಭಕ್ತಶ್ರೇಷ್ಠರು ಇವರು.

ಪ್ರಸ್ತುತ ಕೀರ್ತನೆಯನ್ನು ಪುರಂದರ ದಾಸ ಸಾಹಿತ್ಯ ದರ್ಶನದ ಎರಡನೆಯ ಸಂಪುಟದಿಂದ ಆರಿಸಿಕೊಳ್ಳಲಾಗಿದೆ.

ಪುರಂದರದಾಸರು ದೇಹವನ್ನು ಹರಿಗೋಲಿಗೂ, ಜೀವನವನ್ನು ಸುಳಿಗಳಿಂದ ಕೂಡಿ ರಭಸವಾಗಿ ಹರಿಯುವ ಹೊಳೆಗೂ ಅಂಬಿಗನನ್ನು ಪರಮಾತ್ಮನಿಗೂ ಹೋಲಿಸಿ ಈ ಕೀರ್ತನೆಯನ್ನು ಒಂದು ಸುಂದರ ಕಾವ್ಯ ಪ್ರತಿಮೆಯನ್ನಾಗಿಸಿದ್ದಾರೆ.

ಪದಗಳ ಅರ್ಥ

ಪದಗಳ ಅರ್ಥ

ಜಗದಂಬಾ ರಮಣ–ವಿಷ್ಣು; ಹರಿಗೋಲು–ಗುಂಡನೆಯ ಆಕಾರದ ಚರ್ಮದ ದೋಣಿ; ಐವರೀರ್ವರು–ಐವರ ಎರಡು ಗುಂಪುಗಳು(ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು); ಹುಟ್ಟು–ದೋಣಿ ನಡೆಸುವ ಸಾಧನ; ಪರಾಭಕ್ತಿ–ಅಲೌಕಿಕ ಭಕ್ತಿ; ಮುಕ್ತಿಮಂಟಪ–ವೈಕುಂಠ; ಇಂಬು–ನೆಲೆ, ಆಶ್ರಯ, ಪರಿಸ್ಥಿತಿ.

ವಿವರಣೆ

1. ಒಂಭತ್ತು ಛಿದ್ರ – ಮಾನವನ ದೇಹದ ನವ ದ್ವಾರಗಳು(ಕಣ್ಣುಗಳು, ಕಿವಿಗಳು, ಮೂಗಿನ ಹೊಳ್ಳೆಗಳು, ಬಾಯಿ, ಗುದ ಮತ್ತು ಜನನೇಂದ್ರಿಯ)
2. ಆರು ತೆರೆ – ಹಸಿವು, ಬಾಯಾರಿಕೆ, ಶೋಕ, ಮೋಹ, ಜರೆ(ಮುಪ್ಪು), ಸಾವು – ಈ ಆರು ಅಲೆಗಳು.
3. ಜ್ಞಾನೇಂದ್ರಿಯಗಳು – ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮ, ಪಂಚೇಂದ್ರಿಯಗಳು.
4. ಕರ್ಮೇಂದ್ರಿಯಗಳು – ಕೈ, ಕಾಲು, ನಾಲಗೆ, ಗುದ ಮತ್ತು ಜನನೇಂದ್ರಿಯ.
5. ಸತ್ವ – ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರು ಗುಣಗಳಲ್ಲಿ ಒಂದು; ಸಾತ್ವಿಕ ಗುಣವೇ ದೈವೀ ಗುಣ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ದಾಸರು ನಂಬಿರುವ ಅಂಬಿಗ ಯಾರು?
2. ಹರಿಗೋಲಿನ ಸ್ಥಿತಿ ಹೇಗಿದೆ ?
3. ಅಂಬಿಗನು ಏನನ್ನು ಗಮನಿಸಿ ದೋಣಿ ನಡೆಸಬೇಕು?
4. ಅಂಬಿಗನು ಕರೆದೊಯ್ಯಬೇಕಾದದ್ದು ಎಲ್ಲಿಗೆ ?

12th_Kannada_Reader_7.indd 144 22-05-2019 14:37:37

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಅಂಬಿಗನು ದಾಟಿಸಬೇಕಾದ ಹೊಳೆಯ ಸ್ವರೂಪವನ್ನು ತಿಳಿಸಿ ?
2. ದೋಣಿಯ ಪ್ರಯಾಣವನ್ನು ದಿಕ್ಕುಗೆಡಿಸುವ ಅಂಶಗಳು ಯಾವುವು ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಅಂಬಿಗನು ಹರಿಗೋಲನ್ನು ಹೇಗೆ ನಡೆಸಬೇಕೆಂದು ದಾಸರು ಬಯಸುತ್ತಾರೆ?

IV. ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ.

1. 'ಅಂಬಿಗ ನಾ ನಿನ್ನ ನಂಬಿದೆ'
2. 'ಆರು ತೆರೆಯ ನೋಡಂಬಿಗ'
3. 'ಹೊತ್ತು ಹೋಯಿತು ನೋಡಂಬಿಗ'
4. 'ಸುಳಿಯೊಳು ಮುಳುಗಿದೆ ಅಂಬಿಗ'

ಭಾಷಾಭ್ಯಾಸ

1. ಈ ಕೀರ್ತನೆಯಲ್ಲಿ ಬರುವ 'ಆದಿ ಪ್ರಾಸ'ಗಳನ್ನು ಪಟ್ಟಿ ಮಾಡಿ.

2. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ

ಜಗದಂಬಾ, ಅದಕೊಂಬತ್ತು, ನೋಡಂಬಿಗ, ಐವರೀರ್ವರು, ಮಂಟಪಕೊಯ್ಯಿ.

3. ಕೆಳಗಿನ ಪದಗಳನ್ನು ನಾಮಪದವನ್ನಾಗಿಯೂ, ಕ್ರಿಯಾಪದವನ್ನಾಗಿಯೂ ಬಳಸಿ ಸ್ವಂತ ವಾಕ್ಯಗಳನ್ನು ಮಾಡಿರಿ.

ಹುಟ್ಟು, ಆರು, ತೆರೆ, ಹೊಳೆ, ಸುಳಿ, ಹೊತ್ತು.

4. ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ತಿಳಿಸಿ

ರಮಣ, ಛಿದ್ರ, ಹೊಳೆ, ತೆರೆ, ಪಥ.

ಚಟುವಟಿಕೆ

1. ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಓದಿರಿ.

ಸ್ಮರಿಸು ಗುರುಗಳ ಮನವೆ :-

ಸ್ಮರಿಸು ಗುರುಗಳ ಮನವೆ । ಸ್ಮರಿಸು ಗುರುಗಳ - ॥ಪ॥
ಸ್ಮರಿಸು ಗುರುಗಳು ನಿಮಗೆ ಪರಮ ಮಂಗಳ ಬಂದ -೨
ದುರಿತ ಪರ್ವತಕೆ ಪವಿ ಎಂದು ತಿಳಿಯೊss ॥ಅಪ॥

ಉರಗ ವೃಶ್ಚಿಕ ವ್ಯಾಘ್ರ ಅರಸು ಚೋರಾಗ್ನಿ - ಕರಿ ।
ಗರಳ ಜ್ವರ ಮೊದಲಾದ ಭಯಗಳಿಂದ -೨॥
ಪೊರೆದು ಮಂಗಳವೀವ ನರಹರಿಯ ದಾಸರ -೨।
ಚರಣ ಕಂಡೆನೊ ದುರಿತ ಪರಿಹಾರವಾಯಿತು - ॥೧॥

ಗುರು ಸ್ಮರಣೆಯಿಂದ ಸಕಲ ವಿಪತ್ತ ಪರಿಹಾರ ।
ಗುರು ಸ್ಮರಣೆಯಿಂದ ಸಂಪದವು ನಮಗೆ-೨॥
ಗುರು ಸ್ಮರಣೆಯಿಂದ ವಿಶೇಷ ಧನ ದೊರಕುವುದು -೨।
ಗುರು ಸ್ಮರಣೆಯಿಂದ ಹರಿಒಲಿದು ಪೊರೆವ - ॥೨॥

ಗುರುಗಳಿಂದಧಿಕ ಇನ್ನಾರು ಆಪ್ತರು ನಿನಗೆ ।
ಗುರುಗಳೇ ಪರಮ ಹಿತಕರರು ನೋಡು -೨॥
ಗುರು ಸ್ವಾಮಿ ವರದ ಗೋಪಾಲವಿಠ್ಠಲ ಮಹಾ-೨।
ದುರಿತಗಳ ಕಳೆದು ಸುಖಗರೆವ ನೋಡು ॥೩॥

12th_Kannada_Reader_7.indd 145 22-05-2019 14:37:38

ಘಟಕ ವಿಳು

ನಗು–ಅಳು

– ಎಂ.ಎಸ್. ಸುಂಕಾಪುರ



ಪ್ರಸ್ತುತ ಕನ್ನಡ ಸಾಹಿತ್ಯದಲ್ಲಿ ಸಂಶೋಧನಾ ಪ್ರಬಂಧಗಳಿಗೆ ಅಗ್ರಸ್ಥಾನವಿದೆ. ಹೊಸ ವಿಚಾರ, ಚಿಂತನೆಗಳ ಅಭಿವ್ಯಕ್ತಿಗೆ ಸಂಶೋಧನೆ ಅಗತ್ಯ. ಅದೊಂದು ಶಾಸ್ತ್ರೀಯ ವೈಜ್ಞಾನಿಕ ಪ್ರಕಾರ. ಅದೊಂದು ಆಧಾರ ಸಹಿತ ಉದ್ದೇಶಿತ ವಿಷಯವನ್ನು ವಿಶ್ಲೇಷಿಸುವ ಮೌಲಿಕ ಕ್ಷೇತ್ರ. ಇದು ಮೇಲ್ನೋಟಕ್ಕೆ ಸಾಮಾನ್ಯ ವಿಷಯ ಎಂಬಂತೆ ತೋರಿದರೂ ಅಧ್ಯಯನಕ್ಕೆ ತೊಡಗಿದಾಗ ಇದರ ವಿವಿಧ ಸ್ತರಗಳು ಅನಾವರಣಗೊಳ್ಳುತ್ತವೆ. ಅವೆಲ್ಲದರ ಸುಸಂಘಟಿತ ರೂಪವೇ ಈ ಪ್ರೌಢ ಪ್ರಬಂಧ.



ಪ್ರಪಂಚ ಸುಖ–ದುಃಖಗಳ ಆಗರ. ಕೇವಲ ಸುಖ, ಕೇವಲ ದುಃಖ ಯಾವ ಪ್ರಾಣಿ ಜೀವನದಲ್ಲಿಯೂ ಇಲ್ಲ. ಮುಕ್ತ ಜೀವಿ ಮಾತ್ರ ಸುಖ–ದುಃಖಗಳನ್ನು ಸಮನಾಗಿ ನೋಡುವನೇ ಹೊರತು ಸುಖ–ದುಃಖಗಳೇ ಅವನಿಗಿಲ್ಲವೆಂದಲ್ಲ. ಅವನು ಸುಖಕ್ಕಾಗಿ ಉಬ್ಬುವುದಿಲ್ಲ; ದುಃಖಕ್ಕಾಗಿ ಕೊರಗುವುದಿಲ್ಲ. ಆದರೆ ಸಾಮಾನ್ಯ ಜೀವಿಗಳು ಮಾತ್ರ ಬಾಳಿನಲ್ಲಿ ಸುಖದ ಹೇರಿಗಿಂತ ದುಃಖದ ಭಾರಕ್ಕೆ ಬಳುಕುತ್ತವೆ, ಬಗ್ಗುತ್ತವೆ. ಸುಖವೆನ್ನಿಸಿದಾಗ ಸಂತೋಷವೂ, ದುಃಖವೆನ್ನಿಸಿದಾಗ ಅಳುವೂ ಬರುವುದು. ಸುಖ ದುಃಖಗಳಿಗೆ ಮನವೇ ಮೂಲ. ನಗೆ ವಿಶ್ವವ್ಯಾಪಕ. ಅದು ಸ್ವರ್ಗ, ಮರ್ತ್ಯ ಪಾತಾಳ ಲೋಕಗಳನ್ನೆಲ್ಲ ಹಬ್ಬಿಕೊಂಡಿದೆ. ಸ್ವರ್ಗದೊಳಗಿನ ದೇವಾನುದೇವತೆಗಳೂ ನಗುತ್ತಾರೆ, ಮರ್ತ್ಯಲೋಕದ ಮಾನವರೂ ಇತರ ಪ್ರಾಣಿಗಳೂ ನಗುತ್ತವೆ, ಪಾತಾಳ ಲೋಕದ ಅಸುರರೂ ನಾಗ ಕನ್ನೆಯರೂ ನಗುತ್ತಾರೆ. ಒಟ್ಟಿನಲ್ಲಿ ನಗದಿರುವ ಜೀವಿಯೇ ಇಲ್ಲ.

ತಿಮ್ಮನ ಮಗಳಿಗೆ ಅಷ್ಟ ವರ್ಷ ದಾಟಿದರೂ ಒಬ್ಬ ವರನಾದರೂ ದೊರೆಯುವುದಿಲ್ಲ. ವರದಕ್ಷಿಣೆ ಕೊಡುವುದು–ತೆಗೆದುಕೊಳ್ಳುವುದಲ್ಲ, ಹಿತೈಷಿಗಳ ಕಾರ್ಯಭಾರದಲ್ಲಿ ಅಪರಾಧವಾಗಿ, ತಿಮ್ಮನ ಮಗಳ ಮದುವೆ ಬೆನಕನ ಮದುವೆಯಾಯಿತು.

12th_Kannada_Reader_7.indd 146 22-05-2019 14:37:38

ಪ್ರಯತ್ನಗಳೆಲ್ಲವೂ ವ್ಯರ್ಥವಾಗಿ ಮನಸ್ಸಿಗೆ ಜುಗುಪ್ಸೆಯಾಗಿ ಜಗತ್ತೇ ಬೇಡಾಗಿ, ತಿಮ್ಮ ಹಿಮಾಲಯಕ್ಕೆ ಹೋಗಿ ತಪಸ್ಸು ಆಚರಿಸಿದ. ಕರಾರಿನಂತೆ ದೇವರು ಪ್ರತ್ಯಕ್ಷನಾಗಿ, 'ತಿಮ್ಮ, ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ನಿನಗೆ ಬೇಕಾದ ವರ ಕೇಳು' ಎಂದ. ಕಣ್ಣು ತೆರೆಯದೆ ತಿಮ್ಮ, 'ಅಯ್ಯೋ, ಮಹಾರಾಯಾ, ಇದೂ ನಿನಗೆ ತಿಳಿಯದೆ? ವರ ಬೇಕಾಗಿರುವುದು ನನಗಲ್ಲ, ನನ್ನ ಮಗಳಿಗೆ' ಎಂದು ನಕ್ಕು ಬಿಟ್ಟ. ಬೀಚಿಯವರೆ ಚತುರೋಕ್ತಿಗಳಲ್ಲಿ ಇದೊಂದು!

ಸುಪ್ರಸಿದ್ಧ ನಾಟಕಕಾರ ಷೆರಿಡನ್ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯನಾಗಿದ್ದ. ಒಮ್ಮೆ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಿದ್ದಾಗ ಆವೇಶದ ಭರದಲ್ಲಿ ಆತ, 'ಈ ಸಭಾ ಗೃಹದಲ್ಲಿರುವ ಸಭಾಸದರಲ್ಲಿ ಅರ್ಧದಷ್ಟು ಜನರು ಕತ್ತೆಗಳು' ಎಂದು ಬಿಟ್ಟ. ಸಭೆಯಲ್ಲಿ ಕೋಲಾಹಲವೆದ್ದಿತು. ಷೆರಿಡನ್ ಆಡಿದ ಪದಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸಭಿಕರು ಆಗ್ರಹ ಪಡಿಸಿದರು. ಇಂತಹ ಪದಗಳನ್ನಾಡುವುದು ಯೋಗ್ಯವಲ್ಲವೆಂದು ಸಭಾಪತಿಗಳು ನಿರ್ಣಯ ಕೊಟ್ಟರು. ಆಗ ಷೆರಿಡನ್ ಶಾಂತ ಸ್ವರದಲ್ಲಿ, 'ನಾನು ಸಭಿಕರ ಕ್ಷಮೆ ಕೇಳುತ್ತೇನೆ. ಈ ಸಭಾಗೃಹದಲ್ಲಿಯ ಅರ್ಧದಷ್ಟು ಜನರು ಕತ್ತೆಗಳಲ್ಲ. ಆಡಿದ್ದನ್ನು ಹಿಂದಕ್ಕೆ ತೆಗೆದುಕೊಂಡೆ' ಎಂದ!

ಸ್ಥೂಲವಾಗಿ ನಗೆಯನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಮೆಚ್ಚುನಗೆ ಮತ್ತು ಚುಚ್ಚುನಗೆ. ಬುದ್ಧ ದೇವ ನಕ್ಕುದು ಮುಗುಳು ನಗೆ, ಶ್ರೀಕೃಷ್ಣನದು ಸರಸ ನಗೆ, ಪಂಪ ಕವಿ ಬೀರಿದುದು ರಸ ನಗೆ. ಈ ಬಗೆಯ ನಗೆಗಳಲ್ಲಿ ಮಾಧುರ್ಯವಿರುತ್ತದೆ. ಅದನ್ನು ಜನತೆ ಮೆಚ್ಚುತ್ತದೆ. ಮೆಚ್ಚುವ ನಗೆಯೇ ಮೆಚ್ಚು ನಗೆ. ಅನ್ಯರ ಮನಸ್ಸು ನೋವಾಗುವಂತಹುದು ಚುಚ್ಚು ನಗೆ. ನಯಸೇನನ ಮೂದಲಿಕೆ, ಬ್ರಹ್ಮಶಿವನ ಕಟಕಿ, ತೆನಾಲಿ ರಾಮಕೃಷ್ಣನ ಕುಚೇಷ್ಟೆ – ಈ ನಗೆಗಳಲ್ಲಿ ಒರಟುತನ ಹೆಚ್ಚು. ಮುಗ್ಧ ನಗೆ ನಮ್ಮನ್ನು ಕಾಯುತ್ತದೆ. ಅದರಿಂದ ಕಷ್ಟ ತುಂಬಿದ ನಮ್ಮ ಬಾಳು ಹಗುರಾಗುತ್ತದೆ. ಆದರೆ ಒರಟು ನಗೆ ಮಸೆದ ಚೂರಿ ಇದ್ದಂತೆ; ಅದು ಕೊಲ್ಲುವ ನಗೆ. ಸರ್ವಜ್ಞನ ಮಾತಿನಲ್ಲಿಯೂ ಈ ಧ್ವನಿಯೇ ಇದೆ.

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲದವನ ಬರಿ ಮಾತು ‖ ಕವಿಯೊಳ್ಕೂ
ರ್ದಸಿಯು ಬಡಿದಂತೆ ಸರ್ವಜ್ಞ ‖

ನಾವು ಮರೆಯಾಗಿ ನಕ್ಕುದು ಅನ್ಯರಿಗೆ ಕೇಳಿಸುತ್ತದೆ. ಆ ನಗೆ ಬರಿ ಒಂದು ಸದ್ದು, ಸಪ್ಪಳ. ನಗೆಯ ಧ್ವನಿ ವಿಚಿತ್ರ. ಆ ವಿಚಿತ್ರ ನಗೆಯಲ್ಲಿ ವಿವಿಧ ಸ್ವರಗಳನ್ನು ಗುರುತಿಸಬಹುದು. ಕೆಲವರು ನಗುವಾಗ ದಡಬಡ ಸಪ್ಪಳ ಕೇಳಿಬರುತ್ತದೆ. ಕೆಲವರು ನಗುವಾಗ ಕೋಳಿಯಂತೆ 'ಕ್ಲಕ್‌ಕ್ಲಕ್' ಎಂದು ನಿನಾದ ಮಾಡುವುದುಂಟು. ಹಲವರ ನಗೆಯಲ್ಲಿ ಹದ್ದಿನ ಸ್ವರ ಕೇಳಿ ಬರುತ್ತದೆ. ಬಂಡೆಗಲ್ಲಿನ ಮೇಲೆ ನೀರು ಹರಿದಂತೆ 'ಗುಳುಗುಳು' ಧ್ವಾನದೊಡನೆ ನಗುವವರೂ ಇದ್ದಾರೆ. ಕೆಲವರದು ಕುದುರೆ ಹೇಂಕರಿಸಿದಂತೆ, ಹಲವರದು ಹಂದಿ ಹೂಂಕರಿಸಿದಂತೆ. ಇನ್ನೂ ಕೆಲವರದು ದಮ್ಮು ರೋಗಿ ಉಸಿರಾಡಿದಂತೆ. ಅತ್ತಂತೆ ನಗುವವರೂ ಇದ್ದಾರೆ. ಸಾಮಾನ್ಯವಾಗಿ ಜಗತ್ತಿನಲ್ಲಿ ಕೇಳಿ ಬರುವ ಸರ್ವ ಸ್ವರಗಳೂ ನಗೆಯಲ್ಲಿ ವ್ಯಕ್ತವಾಗುತ್ತವೆ. ನಕ್ಕಾಗ ಮುಖ ಅರಳುತ್ತದೆ. ತುಟಿಯ ಕವಾಟ ತೆರೆಯುತ್ತದೆ. ದಾಳಿಂಬದ ಬೀಜದಂತಿರುವ ಹಲ್ಲುಗಳು ಶುಭ್ರ ಪ್ರಕಾಶ ಬೀರುತ್ತವೆ. ಹಲ್ಲು ಇಲ್ಲದವರ ಗತಿಯೇನು? ಹಲ್ಲಿಲ್ಲದ ಬಾಯಿ ಇಲಿಯ ಬಿಲದಂತೆ. ನಕ್ಕಾಗ ಗಲ್ಲಗಳೆರಡೂ ಉಬ್ಬಿ ಕಿತ್ತಳೆ ಹಣ್ಣಿನಂತಾಗುತ್ತವೆ. ಹೃದಯ ಉಕ್ಕಿ ಬಂದು ಸ್ವರ ಗದ್ಗದಿತವಾಗುವುದು. ಮೂಕ ದನಿ ಮುಗಿಲಿಗೇರುವುದು. ನಕ್ಕಷ್ಟೂ ನಗೆ ಹೆಚ್ಚಾಗುವುದು. ಹೆಚ್ಚು ನಗೆ ಒಮ್ಮೊಮ್ಮೆ ಹುಚ್ಚು ನಗೆಯಾಗುತ್ತದೆ. ನಗೆಯನ್ನು ನಿಲ್ಲಿಸಲು ಪ್ರಯತ್ನಿಸಿದರೂ ಅದು ನಿಲ್ಲುವುದಿಲ್ಲ. ಕೂತು ಎದ್ದು, ಎದ್ದು ಕೂತು ನಗುತ್ತೇವೆ. ಬಿದ್ದು ಬಿದ್ದು ನಗುವುದೂ ಉಂಟು. ನಕ್ಕುನಕ್ಕು ಹೊಟ್ಟೆ ಹುಣ್ಣಾಗುತ್ತದೆ. ಹೀಗೆ ನಗೆಯ ಸರಪಳಿ ತೊಡಕಿನದಾಗಿದ್ದು ಉದ್ದವಾಗಿದೆ. ಅದರಲ್ಲಿ ಅನಂತ ಕೊಂಡಿಗಳು. ಮುಗುಳುನಗೆ, ಮೆಲುನಗೆ, ನಸುನಗೆ, ಎಳೆನಗೆ, ತಣ್ಣಗೆ, ಬಿಸುನಗೆ, ಹುಸಿನಗೆ, ಹುಚ್ಚು ನಗೆ, ಗಹಗಹಿಸುವ ನಗೆ, ಕೊಂಕುನಗೆ, ರಸನಗೆ ಹೀಗೆ. ನಗೆಯನ್ನು ಈರುಳ್ಳಿಗೆ ಹೋಲಿಸಬಹುದು. ಉಳ್ಳಿಯ ಪದರು ಬಿಚ್ಚಿದಷ್ಟೂ ಹೆಚ್ಚಾಗುತ್ತದೆ. ಹಾಗೆಯೇ ನವಿರು ನವಿರಾಗಿ ಹೊರ ಬರುವವ ನಗೆಯ ಪದರು ಅಗಣಿತ. ಅನಂತ.

12th_Kannada_Reader_7.indd 147 22-05-2019 14:37:38

ನಗುವಾಗ ಗುಣಾವಗುಣಗಳ ವಿಚಾರ ನಾವು ಮಾಡುವುದಿಲ್ಲ. ನಕ್ಕು ಮುಗಿಸಿದ ಮೇಲೆ ಒಮ್ಮೊಮ್ಮೆ ಆ ವಿಚಾರಕ್ಕೆ ಕೈ ಹಾಕುತ್ತೇವೆ. ನಮ್ಮ ನಗೆಯಿಂದ ಅನ್ಯರಿಗೆ ನೋವಾದರೆ ನಾವೆಲ್ಲ ಮರುಗುತ್ತೇವೆ. ನಾವು ಇಂತಹುದ್ದೇ ಕಂಡು ನಗುತ್ತೇವೆಂದು ಹೇಳಲಿಕ್ಕಾಗದು. ಸಣ್ಣ ಮಕ್ಕಳಿಗೆ ನೀಗ್ರೋ ಮನುಷ್ಯರನ್ನು ನೋಡಿದರೆ ನಗೆ, ಕುಡುಕರನ್ನು ಕಂಡರಂತೂ ಗಹಗಹಿಸುವ ನಗೆ. ಪರಕೀಯರ ವೇಷಭೂಷಣ ನಮಗೆ ನಗೆ ತರುತ್ತದೆ. ವ್ಯಂಗ್ಯಚಿತ್ರದಲ್ಲಿ ಎದ್ದು ಕಾಣುವ ಡೊಣ್ಣೆ ಮೂಗು ನಗೆಗೆ ಕಾರಣ. ಜಾಣನಂತೆ ವರ್ತಿಸುವ ಎಬಡನನ್ನು ಕಂಡರೆ ನಗೆ. ಅಸಂಬದ್ಧವಾದುದು, ಅಸಂಗತವಾದುದು, ವಿದ್ರೂಪವಾದುದು ನಗೆಗೆ ಸಾಮಗ್ರಿ. ನಗೆಗೆ ಇಂತಹ ವಿಷಯವೇ ಇರಬೇಕೆಂಬ ನಿಯಮವಿಲ್ಲ. ಏನೂ ವಿಷಯವಿಲ್ಲದೆ ನಗುವ ಜನರೂ ಸಾಕಷ್ಟಿದ್ದಾರೆ. ತಿಳಿದು ನಗುವವರಿದ್ದಾರೆ, ತಿಳಿಯದೆ ನಗುವವರಿದ್ದಾರೆ.

ಕೂಸು ಆಡುವಾಗ ನಗುತ್ತದೆ, ಬೇಸರವಾದಾಗ ಅಳುತ್ತದೆ. ನಗು ಆನಂದದ ಕುರುಹು; ಅಳು ದುಃಖದ ಚಿಹ್ನೆ. ಸುಖ ದುಃಖಗಳಲ್ಲಿ ಏರಿಳಿತವಾದರೆ ನಗು–ಅಳು ಭಿನ್ನ ರೂಪ ತಾಳುತ್ತವೆ. ನಗು ಎಲ್ಲರಿಗೂ ಬೇಕು. ಅಳು ಯಾರಿಗೂ ಬೇಡ. ಆದರೆ ಅವು ಯಾವ ಹತೋಟಿಗೂ ಸಿಗದೆ ತಮ್ಮಷ್ಟಕ್ಕೆ ತಾವೇ ಸ್ವತಂತ್ರವಾಗಿವೆ. ನಗು ಬಂದಾಗ ನಾವು ನಗಬೇಕು. ಅಳು ಬಂದಾಗ ಅಳಬೇಕು. ನಗು, ಅಳು ಬಾರದೆ ನಾವು ನಗಲು ಅಳಲು ಪ್ರಯತ್ನಿಸಿದರೆ ಅದು ಕೃತಕವಾಗಿ ತೋರಿ ಅನ್ಯರನ್ನು ನಗಿಸುತ್ತವೆ. ಅಳು ಬಂದಾಗ ಮುಖ ಸೌತೆಕಾಯಿಯಂತಾಗುವುದು. ಕಣ್ಣುಗಳು ಸಣ್ಣದಾಗಿ ಕಳೆಗುಂದುತ್ತವೆ. ಹುಬ್ಬುಗಳು ಒಂದುಗೂಡಲು ಯತ್ನಿಸುತ್ತವೆ. ಆಗ ಮೂಗು ಮೇಲೆ ಕೆಳಗೆ ಸರಿಯುವುದು. ಕಣ್ಣಿನಿಂದ ನೀರು ಹೊರಟು ಗಲ್ಲದ ಮೇಲೆ ಹರಿದು, ಎದೆಯ ಮೇಲೆ ಜಿಗಿಯುತ್ತದೆ. ಕಣ್ಣೊರೆಸಿ, ಮೂಗೊರೆಸಿ ಕೈಗೆ ತುಂಬ ದಣಿವು. ಯಾರು ದಣಿದರೆ ಏನು? ಅತ್ತಷ್ಟೂ ದುಃಖ ಒತ್ತರಿಸಿ ಬರುತ್ತದೆ. ಅಳು ಮಿತಿ ಮೀರಿದರೆ ಅಳುವಿನ ಹುಚ್ಚು ಹೊಳೆಗೆ ಮಹಾಪೂರ ಬರುತ್ತದೆ. ಕೊನೆಗೆ ಅಳುವಿಕೆಗೆ ಹುಚ್ಚು ಹಿಡಿಯುತ್ತದೆ. ಆ ಅಳು ವಿಕೋಪಕ್ಕೇರಿದರೆ ಗತಿಗೆಟ್ಟು ನಗೆಯಾಗಿ ಪರಿಣಮಿಸುತ್ತದೆ.

ನಗು ಅಳುವಿಗೆ ಮನಸ್ಸೇ ಕಾರಣ. ಸೂರ್ಯ ಉದಯವಾಗುವ ಮೊದಲು ಅಸ್ತಮಾನದ ತರುವಾಯ ನಮಗೆ ಕಾಣುವುದಿಲ್ಲ. ಹಾಗೆಯೇ ಅಳು–ನಗುಗಳಿಗೆ ಮೂಲವಾದ ಮನಸ್ಸಿನ ವ್ಯಾಪಾರ ಸ್ಥಿತಿ ನಮಗೆ ಹೊಳೆಯುವುದಿಲ್ಲ. ಮನದಲ್ಲಿ ಭಾವಗಳು ಮೂಡಿ ನಿಂತಾಗ ನಗು–ಅಳು ಜನಿಸುತ್ತವೆ. ಚಿತ್ತವೃತ್ತಿಯಲ್ಲಿ ಹಾಸ್ಯಭಾವ ಮೂಡಿದರೆ ನಗು, ಕ್ಲೇಶಭಾವ ಮೂಡಿದರೆ ಅಳು. ಅಳುವಿನಿಂದ ನಗೆ, ನಗೆಯಿಂದ ಅಳು ಹುಟ್ಟಲಾರವು. ಅವೆರಡೂ ಪರಸ್ಪರ ವಿರುದ್ಧವಾದವು. ನಗು–ಅಳುವಿನ ಅಂತರ ಸೂಕ್ಷ್ಮವಾಗಿದೆ. ಜೀವನ ಒಂದು ರೀತಿ – ಇವೆರಡರ ಬೆರಕೆಯಾಗಿದೆ. ಅಳು–ನಗುವಿನ ಮಾಹಿತಿಯನ್ನು ಡಿ.ವಿ.ಗುಂಡಪ್ಪನವರು **ಹೀಗೆ ಹೇಳಿದ್ದಾರೆ :**

ನಗುವೊಂದು ರಸಪಾಕವಳುವೊಂದು ರಸಪಾಕ
ನಗುವಾತ್ಮ ಪರಿಮಳವ ಪಸರಿಸುವ ಕುಸುಮ
ದುಗುಡವಾತ್ಮವ ಕಡೆದು ಸತ್ವವೆತ್ತುವಮಂತು
ಬಗೆದೆರಡನುಂ ಭಜಿಸು – ಮಂಕುತಿಮ್ಮ ॥

ವರಕವಿ ಬೇಂದ್ರೆ ಅವರು ನಗು – ಅಳುವಿನ ಬಗ್ಗೆ ಹೀಗೆ ಹೇಳಿದ್ದಾರೆ :

ನನ್ನ ಬೆಲ್ಲದಚ್ಚಿನ ಬೊಂಬೆಯೆ
ನೀನು ನಕ್ಕರೊಂದು ರುಚಿ ನೀನು ಅತ್ತರೊಂದು ರುಚಿ
ನೀನು ನಗುತ್ತಲೆ ನಾನು ನಿನ್ನವಳೆಂದೆನಿಸುವುದು
ನೀನು ಅಳುತ್ತಲೆ ನೀನು ನನ್ನವನೆಂದೆನಿಸುವುದು
ನೀನು ನಕ್ಕರೊಂದು ರುಚಿ, ನೀನು ಅತ್ತರೊಂದು ರುಚಿ
ನಿನ್ನ ಬಾಡಿದ ಮೊಗ ನೋಡಿ
ನನ್ನ ಕಣ್ಣಲ್ಲಿ ನೀರು ನಿಲ್ಲುವುದು
ನನ್ನ ಅರಳಿದ ಮುಖ ನೋಡಿ
ನಿನ್ನ ತುಟಿಯಲ್ಲಿ ನಗೆಯಾಡುವುದು
ನೀನು ನಕ್ಕರೊಂದು ರುಚಿ ನೀನು ಅತ್ತರೊಂದು ರುಚಿ
ನೀನು ನಕ್ಕರೆ ಬೆಳಕಿನ ಬೆಳೆ
ನೀನು ಅತ್ತರೆ ಮುತ್ತಿನ ಮಳೆ
ನೀನು ನಕ್ಕರೊಂದು ರುಚಿ, ನೀನು ಅತ್ತರೊಂದು ರುಚಿ ॥

ನಗು ಅಳುವಿನ ವಿಷಯದಲ್ಲಿ ವಸ್ತುವನ್ನು ನೋಡುವ ದೃಷ್ಟಿ ಮಹತ್ವಪೂರ್ಣವಾದುದು. ಅವುಗಳ ಕಾರ್ಯಕ್ಕಾಗಿ ಒಂದೇ ವಸ್ತು ಕಾರಣವಾಗಲ್ಲುದೆಂದು ಹೇಳಿದರೆ ಆಶ್ಚರ್ಯವೆನಿಸಬಲ್ಲುದು. ಒಬ್ಬ ಮನುಷ್ಯ

12th_Kannada_Reader_7.indd 148 22-05-2019 14:37:38

ನಿಚ್ಚಣಿಕೆಯ ಮೇಲಿಂದ ಬೀಳುವುದನ್ನು ಕಂಡಾಗ ಕೆಲವರಿಗೆ ಆನಂದ. ಕೆಲವರಿಗೆ ದುಃಖ. ಆ ದೃಶ್ಯವನ್ನು ನೋಡುವ ವ್ಯಕ್ತಿಗಳಿಗೆ ಮೃದು ಹೃದಯವಿದ್ದರೆ, ನಾಜೂಕಾದ ಭಾವಗಳಿದ್ದರೆ ಕನಿಕರ ಉಂಟಾಗುತ್ತದೆ. ಮನ ಕರಗಿ ಕಣ್ಣಲ್ಲಿ ನೀರೂ ಬರಬಹುದು. ಆದರೆ ಹತ್ತದ ಹೊಂದದ ಭಾವಾವೇಷವುಳ್ಳವರು ಅದೇ ದೃಶ್ಯವನ್ನು ಕಂಡು ಗಟ್ಟಿಯಾಗಿ ನಗುತ್ತಾರೆ. ಇದರ ಮೇಲಿಂದ ಆ ವಸ್ತುವನ್ನು ನೋಡುವ ದೃಷ್ಟಿಕೋನವೇ ಅಳು–ನಗೆಗಳಿಗೆ ಕಾರಣವೆಂದು ವ್ಯಕ್ತವಾಗುತ್ತದೆ. ನಗುವಿಗೂ ಅಳುವಿಗೂ ಮೂಲ ಮನಸ್ಸೇ ಆಗಿದ್ದರೂ ಅವೆರಡೂ ಬೆಳೆದು ನಿಂತಾಗ ಭಿನ್ನಭಿನ್ನವಾಗಿ ತೋರುತ್ತವೆ. ನಗು ಬೆಳ್ಳಿಯಾದರೆ, ಅಳು ಕಳ್ಳಿ. ಒಂದರಿಂದ ಹಿತ, ಇನ್ನೊಂದರಿಂದ ಅಹಿತ ಎನ್ನಲಾಗದು. ಜೀವನದಲ್ಲಿ ಅವೆರಡರಿಂದಲೂ ಸುಖ ಸಿಗುತ್ತದೆ. ನಗು–ಅಳುವಿನ ಸಮನ್ವಯವೇ ಸರಿಯಾದ ಜೀವನ.

ಕೃತಿ–ಕರ್ತೃ ವಿಚಾರ



ಎಂ.ಎಸ್. ಸುಂಕಾಪುರ ಅವರು 1921ರಲ್ಲಿ ಗದಗ ಜಿಲ್ಲೆಯ ಮುಳಗುಂದದವರು. ಎಂ.ಎ., ಪಿ.ಎಚ್.ಡಿ., ಪದವೀಧರರಾದ ಬೆಳಗಾವಿ ಬಾಗಲಕೋಟೆಯಲ್ಲಿ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಹಾಸ್ಯ ಸಾಹಿತಿಯಾದ ಎಂ.ಎಸ್.ಸುಂಕಾಪುರ ಅವರ ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎನ್ನುವ ಪ್ರೌಢ ಪ್ರಬಂಧವನ್ನು ರಚಿಸಿದ್ದಾರೆ. ನಗೆ–ಹೊಗೆ, ಗಪ್–ಚಿಪ್, ತಲೆಹರಟೆಗಳು, ನಗೆಗಾರ ನಯಸೇನ, ಜೀವನದಲ್ಲಿ ಹಾಸ್ಯ ಮುಂತಾದ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ರೇಡಿಯೋ ನಾಟಕಗಳು, ನಮ್ಮ ನಾಟಕಗಳು, ದೃಶ್ಯ ಕಾವ್ಯಕ್ಕೆ ನಿದರ್ಶನ. ಪ್ರಭುಲಿಂಗ ಲೀಲೆ, ಗಿರಿಜಾ ಕಲ್ಯಾಣ, ಶಬರ ಶಂಕರ ವಿಳಾಸ, ಶ್ರೀಕೃಷ್ಣ ಪಾರಿಜಾತ, ಮೊದಲಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ.

ಬದುಕಿನಲ್ಲಿ ಸುಖ–ದುಃಖ ಸಹಜ ಪ್ರಕ್ರಿಯೆಗಳು. ಅದಕ್ಕೆ ಪ್ರತಿರೂಪ ಅಭಿವ್ಯಕ್ತಿ. ನಗು–ಅಳು. ಅದು ಕೂಡ ಯಾವುದೇ ಬೇಧವಿರದಷ್ಟು ವ್ಯಾಪಕವಾದುದು. ನಗು ಅಳುವಿನ ಮೂಲ ಮನಸ್ಸು ಎಂಬ ತಾತ್ವಿಕ ನಿಲುವನ್ನು ಇಲ್ಲಿ ಸಂಶೋಧನಾತ್ಮಕ ರೀತ್ಯಾ ಸಾದರ ಪಡಿಸಿದ್ದಾರೆ.

ಪ್ರಕೃತ ಗದ್ಯ ಭಾಗವನ್ನು ಸುಂಕಾಪುರ ಅವರ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎನ್ನುವ ಸಂಶೋಧನಾ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

ಪದಗಳ ಅರ್ಥ

ಆಗರ–ಆಧಾರ ಸ್ಥಳ, ಆಶ್ರಯ ಸ್ಥಾನ; ಬೆನಕ(ದ್ಭ)–ವಿನಾಯಕ(ಸಂ); ಕರಾರು–ಒಪ್ಪಂದ; ಚತುರೋಕ್ತಿ–ಜಾಣತನದ ಮಾತು; ಮಾಧುರ್ಯ–ಮನೋಹರತೆ; ಮೂದಲಿಕೆ–ಹೀಯಾಳಿಕೆ; ಕಟಕಿ–ಚುಚ್ಚುಮಾತು; ನಿನಾದ–ದನಿ, ಶಬ್ದ; ಗದ್ಗದಿತ–ದುಃಖದಿಂದ ಕೂಡಿದ; ಅಗಣಿತ–ಲೆಕ್ಕವಿಲ್ಲದ; ಎಬಡ–ದಡ್ಡ; ವಿದ್ರೂಪ–ವಿಕೃತ ರೂಪ; ಹತೋಟಿ–ನಿಯಂತ್ರಣ; ಕಳೆಗುಂದು–ಕಾಂತಿಯನ್ನು ಕಳೆದುಕೊಳ್ಳು; ಕ್ಲೇಷ–ದುಃಖ; ನಿಚ್ಚಣಿಕೆ–ಏಣಿ, ಶ್ರೇಣಿಕ(ಸಂ) ಸಮನ್ವಯ–ಹೊಂದಿಸು.

ಟಿಪ್ಪಣಿ

ಮುಕ್ತಜೀವಿ : ಸುಖ–ದುಃಖ ಎರಡನ್ನೂ ಮೀರಿದ ಜೀವಿ, ಸಂಸಾರ ಬಂಧನದಿಂದ ಬಿಡುಗಡೆ ಹೊಂದಿದವ.

ಮರ್ತ್ಯಲೋಕ : ಮಾನವ ಲೋಕ, ಭೂಲೋಕ

ಪಾತಾಳ ಲೋಕ : ಭೂಮಿಯ ಕೆಳಗಿನ ಲೋಕಗಳಲ್ಲಿ ಒಂದು, ಅಧೋಲೋಕ

ಅವರ್ಣನೀಯ : ವರ್ಣನೆ ಮಾಡಲು ಅಸಾಧ್ಯವಾದುದು.

ಹಿತೈಷಿ : ಹಿತವನ್ನು–ಒಳ್ಳೆಯುದನ್ನು ಬಯಸುವವ, ಹಿತಚಿಂತಕ.

ಮಹಾಪೂರ : ಅತಿವೃಷ್ಟಿಯಿಂದಾಗಿ ನದಿಯಲ್ಲಿ ಉಂಟಾಗುವ ಉಬ್ಬರ, ನೆರೆ, ಪ್ರವಾಹ, ದಂಡೆಯನ್ನು ಮೀರಿ ಹರಿಯುವ ಜಲಪ್ರವಾಹ.

12th_Kannada_Reader_7.indd 149 22-05-2019 14:37:38

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸುಖದುಃಖಗಳಿಗೆ ಮೂಲ ಯಾವುದು ?
2. ವಿಶ್ವವ್ಯಾಪಕ ನಗೆ ಎಲ್ಲೆಲ್ಲಿ ಹಬ್ಬಿಕೊಂಡಿದೆ ?
3. ನಗೆಯ ಮುಖ್ಯ ಪ್ರಕಾರಗಳು ಯಾವುವು ?
4. ಅಳು ಬಂದಾಗ ಮುಖ ಹೇಗೆ ಕಾಣಿಸುತ್ತದೆ ?
5. ಅಳು ಮತಿ ಮೀರಿದರೆ ಏನಾಗುತ್ತದೆ.
6. ನಗು ಮತ್ತು ಅಳು ಹೇಗೆ ಜನಿಸುತ್ತವೆ ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ನಗೆಯಿಂದ ಹೊರಡುವ ವಿವಿಧ ಸ್ವರಗಳಾವುವು ?
2. ನಕ್ಕಾಗ ಮುಖದಲ್ಲಿ ಆಗುವ ಬದಲಾವಣೆ ಏನು ?
3. ಅಳು ನಗು ಎರಡೂ ಪರಸ್ಪರ ವಿರುದ್ಧವಾದುವು. ಹೇಗೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಡಿ.ವಿ.ಜಿ.ಯವರು ನಗುವಿನ ಬಗ್ಗೆ ಹೇಳಿರುವುದೇನು ?
2. ನಗೆಗೆ ಇರುವ ವಿಷಯ ಅಥವಾ ಸಾಮಗ್ರಿಗಳನ್ನು ಕುರಿತು ಬರೆಯಿರಿ ?
3. ನಗು ಮತ್ತು ಅಳುಗಳನ್ನು ಸಮನ್ವಯ ದೃಷ್ಟಿಯಿಂದ ಸ್ವೀಕರಿಸುವುದು ಹೇಗೆ?

IV. ಸಂದರ್ಭ ಸಹಿತ ಉತ್ತರಿಸಿ.

1. 'ಸುಖದ ಹೇರಿಗಿಂತ ದುಃಖದ ಭಾರಕ್ಕೆ ಬಳುಕುತ್ತವೆ'
2. 'ಈ ಸಭಾಗೃಹದಲ್ಲಿಯ ಅರ್ಧದಷ್ಟು ಜನರು ಕತ್ತೆಗಳಲ್ಲ'
3. 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ'
4. 'ಹಲ್ಲಿಲ್ಲದ ಬಾಯಿ ಇಲಿಯ ಬಿಲದಂತೆ'

ಭಾಷಾಭ್ಯಾಸ

1. ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

ಸಿರಿಗನ್ನಡ, ಮೈದೊಳೆ, ಮನೆಯನ್ನು, ಊರೂರು, ಬೇರೊಬ್ಬ.

2. ಹತ್ತು ಜೋಡು ನುಡಿಗಳನ್ನು ಬರೆಯಿರಿ.

ಉದಾಹರಣೆ : ಸುಖ–ದುಃಖ, ನೋವು–ನಲಿವು.

3. ಕೊಟ್ಟಿರುವ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

ಅ. ಚಿಂತೆಯೇ ಮುಪ್ಪು, ಸಂತೋಷವೇ ಯೌವನ.

ಆ. ಕಟ್ಟುವುದು ಕಠಿಣ, ಕೆಡಿಸುವುದು ಸುಲಬ

4. ಹೊಂದಿಸಿ ಬರೆಯಿರಿ

ಅ	ಬ
1. ಬುದ್ಧದೇವನ ನಗು	ಎ. ಸರಸ ನಗೆ
2. ಶ್ರೀಕೃಷ್ಣನ ನಗು	ಬಿ. ಮೂದಲಿಕೆ
3. ಪಂಪ ಕವಿ ಬೀರಿದ ನಗು	ಸಿ. ಕಟಿಕಿ ನಗೆ
4. ನಯಸೇನನ ನಗು	ಡಿ. ಕುಚೇಷ್ಟೆಯ ನಗೆ
5. ಬ್ರಹ್ಮಶಿವನ ನಗು	ಎ. ಮುಗುಳು ನಗೆ
6. ತೆನಾಲಿ ರಾಮಕೃಷ್ಣನ ನಗೆ	ಏ. ರಸನಗೆ
	ಐ. ಮುಗ್ಧ ನಗೆ

ಚಟುವಟಿಕೆ

1. ಕೊಟ್ಟಿರುವ ಸಂಧಿ ಪ್ರಕ್ರಿಯಾ ರೂಪಗಳನ್ನು ಗಮನಿಸಿ.

ಉಸಿರು + ಆಡು = ಉಸಿರಾಡು > ಲೋಪಸಂಧಿ
(ಉ + ಆ – ಉ – ಲೋಪ)

ಕೈ + ಆಡಿಸು = ಕೈಯಾಡಿಸು > ಆಗಮ ಸಂಧಿ
–ಐ + ಆ – ಯ್ – ಆಗಮ

ತಲೆ + ತೂಗು = ತಲೆದೂಗು > ಆದೇಶ ಸಂಧಿ
–ಎ + ತ್ – ದ್ – ಆದೇಶ

ಕಣ್ + ಪನಿ = ಕಂಬನಿ > ಆದೇಶ ಸಂಧಿ
–ಣ್ + ಪ್ – ಬ್ – ಆದೇಶ

2. ಆಕಾಶಾ, ಮಾಲಾ, ಸಂಧ್ಯಾ – ಇವು ಸಂಸ್ಕೃತದಿಂದ ಬಂದ ಪದಗಳು. ಇವುಗಳ ಕನ್ನಡ ರೂಪ ಹೀಗಿದೆ : ಆಕಾಶ–ಆಗಸ; ಮಾಲಾ–ಮಾಲೆ; ಸಂಧ್ಯಾ–ಸಂಜೆ.

3. ಪತ್ರಿಕೆಯಲ್ಲಿ ಬಂದಿರುವ ನಗೆ ಹನಿಗಳನ್ನು ಬರೆದು ಎಲ್ಲರ ಮುಂದೆ ಓದಿ ನಕ್ಕು ನಗಿಸಿ.
4. ಬೀಚಿ ಮತ್ತು ರಾಶಿಯವರ ನಗೆ ಹನಿ ಸಂಕಲನಗಳನ್ನು ಓದಿರಿ.
5. ಪತ್ರಿಕೆಗಳಲ್ಲಿ ಪ್ರಕಟವಾಗುವ ಹಾಸ್ಯ ಲೇಖನಗಳನ್ನು ಓದಿ.

12th_Kannada_Reader_7.indd 150 22-05-2019 14:37:38

ಉಪಪಠ್ಯ

ಘಟಕ ಏಳು

ಸ್ವಾತಂತ್ರ್ಯದ ಬೆಲೆ

– ಕೆ.ಕುಮಾರ್ ಆಚಾರ್



ಕಾಯಕವೇ ಕೈಲಾಸವೆಂದು ಪ್ರಾಜ್ಞರು ಸಾರಿದ ನುಡಿಯನ್ನು ಅರ್ಥೈಸಿಕೊಂಡು ಸೇವೆಯನ್ನು ಸಲ್ಲಿಸುವುದು ಪ್ರಾಜ್ಞರ ಲಕ್ಷಣ. ಅಧಿಕಾರ ದೊರೆತಾಗ ತನಗಾಗಿ ತಾನು ಎಂದು ಭಾವಿಸದೆ ಪರರಿಗಾಗಿ ತಾನು ಎಂದು ಭಾವಿಸಿ ಜನಸೇವೆಯನ್ನು ಮಾಡಿದ ಶ್ರೇಷ್ಠ ಕನ್ನಡ ನಾಡ ದೊರೆ ಶ್ರೀಕೃಷ್ಣದೇವರಾಯ. ಅವನಿಗೆ ಬಲಗೈ ಭಂಟನಾಗಿ ಕಾರ್ಯಗೈದ ಬುದ್ಧಿಜೀವಿ ತೆನಾಲಿ ರಾಮಕೃಷ್ಣ. ಜನರ ಸ್ಥಿತಿಗತಿಗಳನ್ನು ಪ್ರತ್ಯಕ್ಷಿಸಿ ನೋಡಿ ಒಡನೇ ಸೂಕ್ತ ಪರಿಹಾರ ದೊರಕುವಂತೆ ಮಾಡುವ ಚಾಣಾಕ್ಷ ಅವಳಿ ಜವಳಿಗಳಿವರು. ಜನರ ಸೇವೆಯೇ ದೇವರ ಸೇವೆ ಎಂಬ ವೇದ ವಾಕ್ಯಕ್ಕೆ ಎಣೆಯಾಗಿ ಜನರ ಸುಖ ದುಃಖಗಳಿಗೆ ಸ್ಪಂದಿಸಿ ಸೇವೆಗೈದ ವಿಜಯ ನಗರ ಸಾಮ್ರಾಜ್ಯದ ನಕ್ಷತ್ರಗಳಿವರು. ಮಾನವೀಯತೆಗೆ ಸ್ಪಂದಿಸುವ ಶ್ರೀಕೃಷ್ಣದೇವರಾಯ, ತೆನಾಲಿ ರಾಮಕೃಷ್ಣರು ಕನ್ನಡ ನಾಡಿನ ಜನರ ಮನದಲ್ಲಿ ಹಾಸು ಹೊಕ್ಕಾಗಿ ನೆಲೆ ನಿಂತಿದ್ದಾರೆ. ಯಾತ್ರಿಕನೋರ್ವನ ಪ್ರಶ್ನೆಗೆ ಸೂಕ್ತ ಉತ್ತರವನ್ನು ನೀಡಿ ಸ್ವಾತಂತ್ರ್ಯದ ಮಹತ್ವವವನ್ನು ಲೋಕಕ್ಕೆ ತಿಳಿ ಹೇಳುವ ಒಂದು ಕಿರು ಪ್ರಸಂಗವೇ ನಾಟಕದ ಆಶಯ.



12th_Kannada_Reader_7.indd 151 22-05-2019 14:37:38

ಪಾತ್ರ ವರ್ಗ

ಶ್ರೀಕೃಷ್ಣದೇವರಾಯ
ಪ್ರಧಾನ ಮಂತ್ರಿ – ತಿಮ್ಮರಸ
ಮಂತ್ರಿಗಳ – ಅಲ್ಲಸಾನಿ ಪೆದ್ದನ, ನಂದಿ ತಿಮ್ಮಣ್ಣ, ಪಿಂಗಳಿ ಸೂರಣ್ಣ, ಹಾಗೂ ತೆನಾಲಿ ರಾಮಕೃಷ್ಣ.
ರಾಣಿಯರು – ತಿರುಮಲಾದೇವಿ, ಚಿನ್ನಮ್ಮದೇವಿ
ಯಾತ್ರಿಕ – ಉತ್ತರ ದೇಶದ ಪ್ರವಾಸಿ ದ್ವಾರ ಪಾಲಕರು

ದೃಶ್ಯ – 1

(ವಿಜಯನಗರ ಸಾಮ್ರಾಜ್ಯದ ಚಕ್ರಾಧಿಪತಿ ಶ್ರೀಕೃಷ್ಣದೇವರಾಯನ ಆಸ್ಥಾನ. ಅರಸನ ಅಕ್ಕಪಕ್ಕದಲ್ಲಿ ಕುಳಿತಿರುವರು. ಕೆಳಗೆ ಮಂತ್ರಿಗಳು ಆಸೀನರಾಗಿರುವರು

(ವೇದಿಕೆಯ ಹಿಂದಿನಿಂದ ಧ್ವನಿ ಕೇಳುವುದು)

ರಾಜಾಧಿರಾಜ! ರಾಜಮಹಾರಾಜ! ರಾಜ ಪರಮೇಶ್ವರ! ಶ್ರೀಕೃಷ್ಣದೇವರಾಯರಿಗೆ ಪರಾಕ್...ಪರಾಕ್...ಪರಾಕ್...

ಶ್ರೀಕೃಷ್ಣದೇವರಾಯ :

ಪ್ರಧಾನ ಮಂತ್ರಿಗಳೇ....ಇತರ ಮಂತ್ರಿಗಳೇ.... ಹಕ್ಕ ಬುಕ್ಕರು ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯ ಪಂಪಾಪತಿಯ ಅನುಗ್ರಹದಿಂದ ಬಲು ಚೆನ್ನಾಗಿ ಮೆರೆಯುತ್ತಿದೆ. ಹಿಂದೂ ಧರ್ಮದ ಶ್ರೀರಕ್ಷೆಗಾಗಿ ಉದಯಗೊಂಡ ವಿಜಯನಗರ ಸಾಮ್ರಾಜ್ಯ ಇಂದು ಶೈವ, ವೈಷ್ಣವ ಎಂಬ ಬೇಧವಿಲ್ಲದೆ ಹಿಂದೂ ಧರ್ಮವೊಂದೇ ಸನಾತನ ಧರ್ಮ ಎಂಬ ಹೆಗ್ಗುರಿಯನ್ನು ಹೊತ್ತು ಹಿಂದೂ ಸಾಮ್ರಾಜ್ಯದ ಕನಸನ್ನು ನನಸು ಮಾಡುತ್ತಿದೆ. ಅಲ್ಲವೇ ಪ್ರಧಾನಿಗಳೇ?

ತಿಮ್ಮರಸ :

ಖಂಡಿತ ಮಹಾರಾಜರೇ.... ಪಂಪಾಪತಿ, ಪಂಪಾದೇವಿಯರ ದಿವ್ಯ ಸಾನಿಧ್ಯದಲ್ಲಿ ಮೆರೆಯುತ್ತಿರುವ ಈ ಸಾಮ್ರಾಜ್ಯವನ್ನು ಕಂಡು ಅಕ್ಕಪಕ್ಕದ ರಾಜ್ಯಗಳು.... ಅಷ್ಟೇ ಏಕೆ? ವಿದೇಶಿಯರೂ ತಮ್ಮ ಆಡಳಿತದ ವೈಶಿಷ್ಟ್ಯಯವನ್ನು ಕೊಂಡಾಡುತ್ತಿರುವುದನ್ನು ನಾವೆಲ್ಲರೂ ಕಣ್ಣಾರೆ ಕಾಣುತ್ತಿಲ್ಲವೆ?

ಶ್ರೀಕೃಷ್ಣದೇವರಾಯ :

ಹೌದು ತಿಮ್ಮರಸರೇ....ಜಾತಿ, ಧರ್ಮ, ಭಾಷೆ ಎಲ್ಲವನ್ನು ಮರೆತು ಏಕೀಕೃತಗೊಂಡ ಹಿಂದೂ ಸಾಮ್ರಾಜ್ಯವೇ ನಮ್ಮೆಲ್ಲರ ಧ್ಯೇಯ. ಬಹುಮನಿಯ ಸುಲ್ತಾನರು ನಮ್ಮ ರಾಜ್ಯದ ಮೇಲೆ ಬೆನ್ನಟ್ಟಿ ಬಂದಾಗ ನಮ್ಮ ಸೇನೆ ತಾನೆ ಹೋರಾಡಿ....ದೂರ ಅಟ್ಟಿ ನಮ್ಮ ಮೇಲ್ಮೈಯನ್ನು ಮೆರೆದು ವಿಜಯನಗರ ಸಾಮ್ರಾಜ್ಯದ ಮಾನ ಮರ್ಯಾದೆಯನ್ನು ಉಳಿಸಿದ್ದು...

ಅಲ್ಲಸಾನಿ ಪೆದ್ದನ :

ಚೆನ್ನಾಗಿ ಹೇಳಿದಿರಿ..... ಮಹಾರಾಜ..... ಗುರು ವಿದ್ಯಾರಣ್ಯರ ಅಪೇಕ್ಷೆಯಂತೆ ಹಕ್ಕಬುಕ್ಕರು ಸ್ಥಾಪಿಸಿದ ಈ ಸಾಮ್ರಾಜ್ಯ ನಿಮ್ಮ ಆಡಳಿತ ವೈಖರಿಯಲ್ಲಿ ಮೆರೆಯುತ್ತಿರುವುದು ಎಲ್ಲರಿಗೂ ವೇದ್ಯ. ನಮ್ಮ ಸಾಮ್ರಾಜ್ಯದಲ್ಲಿ ಏನಿಲ್ಲ ಮಹಾಪ್ರಭು? ಗುರುತರವಾದ ಜವಾಬ್ದಾರಿಯಿಂದ ಆಳುತ್ತಿರುವ ತಾವು... ಅದರಿಂದಾಗಿ ಯಾವುದೇ ನೋವು ನರಳಾಟಗಳಿಲ್ಲದೆ ಸುಖಶಾಂತಿಯಿಂದ ಮೆರೆಯುತ್ತಿರುವ ಪ್ರಜೆಗಳು.

ಶ್ರೀಕೃಷ್ಣದೇವರಾಯ :

ಹಾಗೋ ಪೆದ್ದನರೇ.... ಈ ಎಲ್ಲಾ ಕಾರ್ಯಕಲಾಪಗಳು ನನ್ನಿಂದ ಮಾತ್ರ ಅಸಾಧ್ಯ.... ತಮ್ಮಂತಹ ವಿಚಾರವಂತ ಮಂತ್ರಿವರ್ಯರು, ಸೇನಾಧಿಪತಿಗಳು, ಸೇನಾನಿಗಳು, ಆಡಳಿತಗಾರರು ಇರುವುದರಿಂದಲೇ ಈ ಎಲ್ಲಾ ಹೊಗಳುವಿಕೆ. ಈ ಹೊಗಳುವಿಕೆಗೆ ನಾನು ಮಾತ್ರ ಪಾತ್ರನಲ್ಲ. ರಾಜ್ಯದ ಹಿತರಕ್ಷಣೆಯನ್ನು ಬಯಸುವ ಎಲ್ಲರಿಗೂ ಸೇರಿದ್ದು.

ನಂದಿ ತಿಮ್ಮಣ್ಣ :

ಮಹಾಪ್ರಭುಗಳೇ.... ನಮ್ಮ ಕೀರ್ತಿ ದೇಶ ವಿದೇಶಗಳಲ್ಲೆಲ್ಲಾ ಹರಡಿದೆ. ಬಿಜಾಪುರದ ಸುಲ್ತಾನರೋ, ಒರಿಸ್ಸಾದ ಗಜಪತಿಗಳೋ, ಪೋರ್ಚುಗೀಸರೋ ಎಲ್ಲರೂ ತಮ್ಮನ್ನು ಮೆಚ್ಚಿ ಪ್ರಪಂಚದಾದ್ಯಂತ ವಿಜಯ ದುಂದುಭಿಯನ್ನು ಮೊಳಗಿಸುತ್ತಿದ್ದಾರೆ.

ಶ್ರೀಕೃಷ್ಣದೇವರಾಯ :

ನಂದಿ ತಿಮ್ಮಣ್ಣರೆ.... ಪ್ರಜೆಗಳ ಸುಖಶಾಂತಿ, ಸಮೃದ್ಧಿಯೇ ನನ್ನ ಗುರಿ. ಹಾಗಿರುವಾಗ ವಿಶ್ವವು ನಮ್ಮನ್ನು ಮೆಚ್ಚದಿರಲು ಸಾಧ್ಯವೆ? ಪಂಪಾಪತಿಯ,

12th_Kannada_Reader_7.indd 152 22-05-2019 14:37:38

ಗುರುಗಳ ಆಶೀರ್ವಾದ ತಮ್ಮ ಮೇಲಿರುವವರೆಗೆ ಈ ಸಾಮ್ರಾಜ್ಯಕ್ಕೆ ಅಳಿವೇ ಇಲ್ಲ.....

(ಆಸ್ಥಾನಕ್ಕೆ ದ್ವಾರಪಾಲಕರ ಆಗಮನ)

ದ್ವಾರಪಾಲಕರು :

ರಾಜರೇ.... ಪ್ರಣಾಮಗಳು.... ತಮ್ಮ ದರ್ಶನಕ್ಕಾಗಿ ಹೊರ ದೇಶದಿಂದ ಪ್ರವಾಸಿಗನೊಬ್ಬ ಆಗಮಿಸಿದ್ದಾನೆ. ಬರ ಹೇಳಲೇ ಮಹಾಪ್ರಭು.....

ಶ್ರೀಕೃಷ್ಣದೇವರಾಯ :

ಹಾಗೋ ಸೇವಕರೇ..... ಬರಹೇಳಿ.

ದ್ವಾರಪಾಲಕರು :

ವೇದಿಕೆಯ ಪಕ್ಕಕ್ಕೆ ಹೋಗಿ ಯಾತ್ರಿಕನನ್ನು ಕರೆತರುವರು) ಹೀಗೆ ಬರಬೇಕು.....ಮಹಾಪ್ರಭುಗಳು ತಮ್ಮನ್ನು ಆಸ್ಥಾನಕ್ಕೆ ಆಹ್ವಾನಿಸುತ್ತಿದ್ದಾರೆ....

ಪಿಂಗಳಿ ಸೂರನ್ನ :

ರಾಜಾಧಿರಾಜ ಶ್ರೀಕೃಷ್ಣ ದೇವರಾಯರ ಆಸ್ಥಾನಕ್ಕೆ ಸುಸ್ವಾಗತ..... ಹೀಗೆ ಆಗಮಿಸಿ ಪ್ರವಾಸಿಗರೆ.

ಯಾತ್ರಿಕ:

ಮಹಾಪ್ರಭು ಶ್ರೀಕೃಷ್ಣ ದೇವರಾಯರಿಗೆ ಸಾಷ್ಟಾಂಗ ಪ್ರಣಾಮಗಳು..... ಹಲವಾರು ಪ್ರವಾಸಿಗರ ನೆಚ್ಚಿನ ತಾಣ ಈ ವಿಜಯನಗರ ಸಾಮ್ರಾಜ್ಯ. ವಿದೇಶೀ ಪ್ರವಾಸಿಗರಾದ ನಿಕೋಲೋ ಕೊಂಟಿ, ಅಬ್ದುಲ್ ರಜಾಕ್ ಮೊದಲಾದವರು ನಿಮ್ಮ ಸಾಮ್ರಾಜ್ಯದ ಹಿರಿಮೆ ಗರಿಮೆಗಳನ್ನು ಹೊಗಳಿ ಬರೆದ ಇತಿಹಾಸವನ್ನು ಓದಿ ತಿಳಿದುಕೊಂಡೆ. ಜೀವನದಲ್ಲಿ ಒಮ್ಮೆಯಾದರೂ ಈ ಪುಣ್ಯಭೂಮಿಯನ್ನು ಸಂದರ್ಶಿಸಬೇಕೆಂಬ ಅತ್ಯಾಸೆಯಿಂದ ಆಗಮಿಸಿದ್ದೇನೆ.

ಶ್ರೀಕೃಷ್ಣ ದೇವರಾಯ :

ಬಹಳ ಸಂತೋಷ..... ನಿಮ್ಮ ಪ್ರವಾಸದ ಅನುಭವವನ್ನು ತಿಳಿಸಿದ್ದೀರಿ..... ನಮ್ಮನ್ನು ಬಹಳವಾಗಿ ಹೊಗಳಿದ್ದೀರಿ.

ಯಾತ್ರಿಕ :

ರಾಜರೇ.... ದೇಶದಲ್ಲಿಯೇ ಸಮರ್ಥ ಆಡಳಿತಗಾರರೆಂದೂ, ಅಪ್ರತಿಮ ವೀರರೆಂದೂ, ಘನ ವಿದ್ವಾಂಸರೆಂದೂ, ಕಲಾಭಿಮಾನಿಯೆಂದೂ, ಕರ್ನಾಟಕದ ವೀರ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ರಾಜಾಧಿರಾಜರೆಂದೂ ಎಲ್ಲರಿಂದಲೂ ಪ್ರಶಂಸೆಗೆ ಪಾತ್ರರಾಗಿದ್ದೀರಿ. ಆದರೂ ಅಷ್ಟ ದಿಗ್ಗಜರಿರುವ ನಿಮ್ಮ ಈ ಮಹಾಸಭೆಯಲ್ಲಿ ಒಂದು ಪ್ರಶ್ನೆಯನ್ನು ಹಾಕಲು ಇಚ್ಛಿಸುತ್ತೇನೆ ಮಹಾಪ್ರಭು. ಆ ಪ್ರಶ್ನೆಗೆ ತಕ್ಕ ಉತ್ತರ ಈ ನಿಮ್ಮ ಆಸ್ಥಾನದಲ್ಲಿ ದೊರೆತರೆ ತಾನು ಬಹುಮಾನವಾಗಿ ಪಡೆದಿರುವ ಈ ಬೆಲೆಬಾಳುವ ರತ್ನಮಾಲೆಯನ್ನು ನೀಡಿ ಗೌರವಿಸಬೇಕೆಂಬ ಅಪೇಕ್ಷೆ ತನ್ನದು.

ಶ್ರೀಕೃಷ್ಣದೇವರಾಯ :

ಏನು ಯಾತ್ರಿಕರೆ? ಪ್ರಶ್ನೆಯೇ? ಘನವಾದ ಪ್ರಶ್ನೆಯೇ? ಉತ್ತರ ಸಿಕ್ಕಿದರೆ ಬಹುಮಾನವಾಗಿ ಆ ರತ್ನಮಾಲೆಯೇ? ಏನು? ಮಂತ್ರಿಗಳೇ..... ಕೇಳಲೇ ಪ್ರಶ್ನೆಯನ್ನು.....?

ಎಲ್ಲರೂ :

(ಒಂದೇ ಧ್ವನಿಯಲ್ಲಿ) ಕೇಳಲಿ ಮಹಾಪ್ರಭು. ತಕ್ಕ ಉತ್ತರವನ್ನು ನೀಡಲು ಹವಣಿಸುತ್ತಿದ್ದೇವೆ. ಪ್ರಶ್ನೆಗಾಗಿ ಬಹಳ ಕಾತರಿಸುತ್ತಿದ್ದೇವೆ

ಯಾತ್ರಿಕ :

ಸರಿ....ಸರಿ... ಮಂತ್ರಿಗಳೇ ಪ್ರಶ್ನೆಯನ್ನು ಚೆನ್ನಾಗಿ ಆಲಿಸಿರಿ.....ಈ ನಿಮ್ಮ ವಿಜಯನಗರ ಸಾಮ್ರಾಜ್ಯದಲ್ಲಿ ಬಹಳವಾಗಿ ಗೌರವದಿಂದ.... ಮರ್ಯಾದೆಯಿಂದ ಕಾಣುವುದು ಯಾವುದನ್ನು?

ತಿಮ್ಮರಸ :

ಮಹಾರಾಜ.... ತಮ್ಮ ಬೊಕ್ಕಸವೇ.... ಸರ್ವಶ್ರೇಷ್ಠ... ಹೌದು ತಾನೆ ಪ್ರಭು.....

ಅಲ್ಲಸಾನಿ ಪೆದ್ದನ :

ಅದು ಅಲ್ಲ ತಿಮ್ಮರಸರೇ.... ಖಂಡಿತವಾಗಿ ರಾಜ್ಯದ ರಕ್ಷಾಪಡೆಯೇ.....

ಪಿಂಗಳಿ ಸೂರನ್ನ :

ಏನು ಪೆದ್ದನರೇ....ರಾಜ್ಯದಲ್ಲಿ ಇಷ್ಟು ನೆಮ್ಮದಿಯ ವಾತಾವರಣವಿರುವಾಗ ಸೇನೆಯ ಅವಶ್ಯಕತೆಯೇನು? ಅಂತೂ ಸೇನಾಪಡೆ ಖಂಡಿತವಿಲ್ಲ....ಅರಸರ ರತ್ನಖಚಿತ ಸಿಂಹಾಸನವೇ.....ಏನು ಹೇಳುವಿರಿ? ನಂದಿ ತಿಮ್ಮಣ್ಣರೇ....

12th_Kannada_Reader_7.indd 153 22-05-2019 14:37:38

ನಂದಿತಿಮ್ಮಣ್ಣ :

ಛೇ.....ಛೇ..... ಸೂರನ್ನರೇ ಸಿಂಹಾಸನವು ರತ್ನಖಚಿತವಾಗಿದ್ದಿರಬಹುದು..... ಆದರೆ ಅದಕ್ಕಿಂತಲೂ ಬಲು ದುಬಾರಿಯಾದುದು..... ಗೌರವಯುತವಾದುದು ರಾಯರ ಕಿರೀಟ. ಖಂಡಿತ ಆ ಕಿರೀಟವೇ ಎಲ್ಲರಿಂದಲೂ ಬಲು ಗೌರವಕ್ಕೆ ಪಾತ್ರವಾದುದು.

ತೆನಾಲಿ ರಾಮಕೃಷ್ಣ :

ಯಾತ್ರಿಕರೆ..... ತಮ್ಮ ಪ್ರಶ್ನೆಯನ್ನು ಇನ್ನೊಮ್ಮೆ ಆಲಿಸಲು ಬಯಸುತ್ತೇನೆ. ಸವಿಸ್ತಾರವಾಗಿ ಮತ್ತೊಮ್ಮೆ ಪ್ರಶ್ನೆಯನ್ನು ಹೇಳಿ. ತಕ್ಕ ಉತ್ತರವನ್ನು ನಾನೂ ಬಲ್ಲೆ. ಆದರೂ ಪರಾಂಬರಿಸಿ ಹೇಳುವುದು ಮೇಲಲ್ಲವೆ?

ಯಾತ್ರಿಕ :

ತೆನಾಲಿ ರಾಮಕೃಷ್ಣರೆ.... ತಮ್ಮ ರಾಜರ ಸಾಮ್ರಾಜ್ಯದಲ್ಲಿ ಎಲ್ಲರೂ ಗೌರವದಿಂದ, ಮರ್ಯಾದೆಯಿಂದ ಕಾಣುವುದು ಯಾವುದನ್ನು? ಎಂಬುದೇ ನನ್ನ ಪ್ರಶ್ನೆ.

ತೆನಾಲಿ ರಾಮಕೃಷ್ಣ :

ನೋಡಿ ಯಾತ್ರಿಕರೆ..... ಇಂದು ಶ್ರೀಕೃಷ್ಣ ದೇವರಾಯರ ಸಾಮ್ರಾಜ್ಯದಲ್ಲಿ ಕಳ್ಳಕಾಕರ, ವೈರಿಗಳ ಭಯವಿಲ್ಲದೆ ನೆಮ್ಮದಿಯಿಂದ ಪ್ರಜೆಗಳು ಬಾಳುತ್ತಿದ್ದಾರೆ. ನೀವೇ ಅಂದಂತೆ ವಿದೇಶೀ ಪ್ರವಾಸಿಗರು ವರ್ಣಿಸಿದ ವಿಜೃಂಭಣೆಯ ಆಡಳಿತ ವೈಖರಿಯನ್ನು ತಾವು ಕಣ್ಣಾರೆ ಕಂಡಿದ್ದೀರಿ. ಹಾಗಿರುವಾಗ ಸ್ವತಂತ್ರವಾಗಿ ಪ್ರಜೆಗಳು ನೆಮ್ಮದಿಯಿಂದ ಬಾಳುವುದೇ, ಬಾಳುತ್ತಿರುವುದೇ ಬಹಳ ಬೆಲೆಯುತವಾದುದು. ಅಂದರೆ ಸ್ವಾತಂತ್ರ್ಯವೇ ಎಲ್ಲರಿಂದಲೂ ಗೌರವಿಸಲ್ಪಡುವ ವಿಚಾರ.

ಯಾತ್ರಿಕ :

ಸರಿ.... ಸರಿ..... ರಾಜರೇ..... ಮಂತ್ರಿಗಳು ಬೊಕ್ಕಸ, ಸಿಂಹಾಸನ, ಸೇನೆ, ಕಿರೀಟ, ಸ್ವಾತಂತ್ರ್ಯ ಹೀಗೆ ನಾನಾ ವಿಧದ ಉತ್ತರಗಳನ್ನು ನೀಡಿದ್ದಾರೆ. ಮಹಾರಾಜರೇ ತಾವು ಈ ಬಗ್ಗೆ ಏನು ಹೇಳುವಿರಿ?

ಶ್ರೀಕೃಷ್ಣದೇವರಾಯ :

ಯಾತ್ರಿಕರೆ..... ನಾವು ಯುದ್ಧದಲ್ಲಿ ಸೋತ ವೈರಿ ರಾಜ್ಯದಿಂದ ಹೊತ್ತು ತಂದ ಸಂಪತ್ತು, ಪ್ರಜೆಗಳಿಂದ ವಸೂಲಿ ಮಾಡುತ್ತಿರುವ ತೆರಿಗೆ ಇವುಗಳೆಲ್ಲಾ ಬೊಕ್ಕಸದಲ್ಲಿದೆ. ಕಷ್ಟ ಕಾಲಕ್ಕೆ ಆ ಸಂಪತ್ತು ಉಪಯೋಗಕ್ಕೆ ಬರುತ್ತದೆ. ಅದು ಬೆಲೆಯುತವಾದುದೇ.... ನಾನು ಕುಳಿತ ಸಿಂಹಾಸನ, ನನ್ನ ಕಿರೀಟ, ರಾಜ್ಯದ ರಕ್ಷಾಪಡೆ ಎಲ್ಲವೂ ಬಹಳ ಗೌರವಕ್ಕೆ ಪಾತ್ರವಾದುದೇ..... ಆದರೆ ತೆನಾಲಿ ರಾಮಕೃಷ್ಣರು ಏಕೆ ಸ್ವಾತಂತ್ರವೇ ಬೆಲೆಬಾಳುವ, ಗೌರವಕ್ಕೆ ಪಾತ್ರವಾದ ವಿಷಯವೆಂದು ಏಕೆ ಹೇಳಿದರೋ ನಾ ಕಾಣೆ. ಏಕೆ ಸ್ವಾತಂತ್ರ್ಯವನ್ನು ಹೆಚ್ಚು ಒತ್ತು ಕೊಟ್ಟು ಉತ್ತರಕೊಟ್ಟೆ ರಾಮಕೃಷ್ಣ?

ರಾಣಿಯರು : ಹೌದು..... ಹೌದು..... ಹೇಳು ರಾಮಕೃಷ್ಣ ಏಕೆ ಸ್ವಾತಂತ್ರ್ಯವೆಂದೆ?

ಯಾತ್ರಿಕ :

ಹೌದು ತೆನಾಲಿ ರಾಮಕೃಷ್ಣರೇ..... ಈ ಮಹಾಸಭೆಯಲ್ಲಿ ಅರಮನೆಗೆ ಸಂಬಂಧಿಸಿದ ವಿಚಾರಗಳನ್ನು ಎಲ್ಲರೂ ಮರ್ಯಾದೆಯಿಂದ, ಗೌರವದಿಂದ ಕಾಣುವ ವಿಷಯವೆಂದು ಪ್ರಸ್ತಾಪಿಸಿದರು. ಅವರು ಹೇಳಿದ್ದರಲ್ಲಿ ಅರ್ಥವಿದೆ ಎನಿಸುತ್ತದೆ. ಆದರೆ ತಾವು ಸ್ವಾತಂತ್ರ್ಯವೇ ಮೇಲೆಂದು ವಾದಿಸಿದ್ದೀರಿ. ಅದನ್ನು ತನಗೆ ಮನದಟ್ಟು ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ತೆನಾಲಿ ರಾಮಕೃಷ್ಣ :

ಛೆ.....ಛೆ... ಏನು ಪ್ರವಾಸಿಗರೆ.... ತನಗೆ ಇಷ್ಟೊಂದು ಮರ್ಯಾದೆಯ ಅವಶ್ಯಕತೆಯಿಲ್ಲ. ತನಗೆ ತೋಚಿದ್ದನ್ನು ಹೇಳಿದ್ದೇನೆ. ಅದನ್ನು ನಿರೂಪಿಸುವುದು ನನ್ನ ಕರ್ತವ್ಯ. ಯಾತ್ರಿಕರೆ..... ತಾವು ತಮ್ಮ ಸಾಮ್ರಾಜ್ಯಕ್ಕೆ ಅತಿಥಿಗಳಾಗಿ ಆಗಮಿಸಿದ್ದೀರಿ. ನೀವು ಕೆಲವು ದಿನ ನಮ್ಮ ಅತಿಥಿಗಳಾಗಿ ಹಂಪೆಯಲ್ಲಿರಿ. ಮಹಾರಾಜರೆ.... ಇವರು ನಮ್ಮ ಅತಿಥಿಗಳಾಗಿದ್ದು ಅವರಿಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಅರಮನೆಯ ವಠಾರದಲ್ಲಿ ಮಾಡಲು ಅನುಮತಿ ಕೋರುತ್ತೇನೆ. ಆ ಸಮಯದಲ್ಲಿ ನಿಮ್ಮ ಪ್ರಶ್ನೆಗೆ ತಕ್ಕ ಉತ್ತರವನ್ನು ನಾನು ನೀಡುತ್ತೇನೆ.

ಶ್ರೀಕೃಷ್ಣದೇವರಾಯ :

ಹಾಗೇ ಆಗಲಿ ತೆನಾಲಿ ರಾಮಕೃಷ್ಣ..... ಯಾರಲ್ಲಿ? ಹೊರ ದೇಶದಿಂದ ಆಗಮಿಸಿದ ಈ ಯಾತ್ರಿಕನಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿ. ಮುಂದಿನ ದಿನಗಳಲ್ಲಿ ಅವರು ಕೇಳಿದ ಪ್ರಶ್ನೆಗೆ ತಕ್ಕ ಉತ್ತರವನ್ನು ಕಂಡುಹಿಡಿದು ಪ್ರವಾಸಿ ನೀಡುವ ಬಹುಮಾನದ ಜತೆಗೆ ನಮ್ಮ ಸನ್ಮಾನವನ್ನೂ ನೀಡಲಾಗುತ್ತದೆ.

12th_Kannada_Reader_7.indd 154 22-05-2019 14:37:38

ಎಲ್ಲರೂ:

(ಮಂತ್ರಿಗಳು) ಆಗಬಹುದು ಮಹಾರಾಜ.....

(ಎಲ್ಲರೂ ಎದ್ದು ನಿಲ್ಲುವರು. ತೆರೆ ಹಾಕಲಾಗುವುದು)

ದೃಶ್ಯ–2

(9ರಾಯರ ಅರಮನೆಯ ಪಕ್ಕದಲ್ಲಿರುವ ಒಂದು ಪ್ರವಾಸಿ ಮಂದಿರ. ಯಾತ್ರಿಕನನ್ನು ಸರ್ವ ಉಪಚಾರದಿಂದ ಗೌರವಿಸುತ್ತಿದ್ದಾರೆ.)

(ತೆರೆ ಮೇಲೇಳುವುದು)

ಯಾತ್ರಿಕ :

(ಸ್ವಗತ) ವಿಜಯನಗರ ಸಾಮ್ರಾಜ್ಯದ ವೈಭವವನ್ನು ನೋಡಬೇಕೆಂಬ ಆಸೆಯಿಂದ, ಕಣ್ಣಾರೆ ಕಂಡು ಬರೆಯಬೇಕೆಂಬ ಅತ್ಯಾಸೆಯಿಂದ ಇಲ್ಲಿಗೆ ಆಗಮಿಸಿದರೆ ಹೀಗೆ ಮನೆಯೊಂದರಲ್ಲಿ ಕೂಡಿ ಹಾಕುವುದೆ? ಊರು ಸುತ್ತಿ ಜ್ಞಾನಿಯಾಗುವುದು ನನ್ನ ಹೆಬ್ಬಯಕೆ. ಆ ಉದ್ದೇಶದಿಂದ ನಾನಾ ರಾಜ್ಯಗಳನ್ನು ಸುತ್ತಾಡಿ ವಿಜಯನಗರಕ್ಕೆ ಬಂದರೆ ವಿಶೇಷ ಅತಿಥಿ ಎಂದು ನೆಪ ಒಡ್ಡಿ ಅತಿಥಿ ಗೃಹವೊಂದರಲ್ಲಿ ನನ್ನನ್ನು ಕೂಡಿಹಾಕಿದ್ದಾರೆ. ತೆನಾಲಿ ರಾಮಕೃಷ್ಣರು ನನಗೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನೆರವೇರಿಸಿದ್ದಾರೆ. ನನಗೆ ಏನು ಬೇಕಾದರೂ ಒಂದು ಆಜ್ಞೆ ನೀಡಿದರೆ ಸಾಕು.... ನೀಡಲು ಹಲವಾರು ಸೇವಕರು. ಬೆಳಗ್ಗಿನಿಂದ ಸಂಜೆಯವರೆಗೆ ಹತ್ತಾರು ದಿನಗಳಿಂದ ಈ ಅತಿಥಿಗೃಹದೊಳಗೇ ಬಂಧಿಯಾಗಿದ್ದೇನೆ. ತಿನ್ನುವುದು, ಮಲಗುವುದು, ಸುಖ ಸಂತೋಷ ಅನುಭವಿಸುವುದು..... ಇದೇ ಕೆಲಸ. ಒಟ್ಟಿನಲ್ಲಿ ಹೇಳಬೇಕೆಂದರೆ, ಅಬ್ಬಬ್ಬಾ..... ಸಾಕಾಗಿ ಹೋಗಿದೆ ಈ ಅತಿಥಿ ವಾಸ್ತವ್ಯ, ಪ್ರಾರಂಭದ ದಿನಗಳು ಈ ಆಡಂಬರದ ವಾಸ ತಂದುಕೊಟ್ಟಿತ್ತು. ಆದರೆ ಬರಬರುತ್ತಾ ಸೆರೆಮನೆ ವಾಸದಂತಾಗಿದೆ.... ಓ..... ಯಾರೋ ಬರುತ್ತಿದ್ದಾರೆ ಅಂತ ಕಾಣುತ್ತದೆ..... (ಸೇವಕರು ಆಗಮಿಸುವರು) ಬಾ....ಬಾ.... ಸೇವಕ.... ಕೋಣೆಯೊಳಗೆ ಕುಳಿತು ಹುಚ್ಚನಂತಾಗಿದ್ದೇನೆ. ಸ್ವಲ್ಪ ತುಂಗಭದ್ರಾ ನದೀ ತೀರದತ್ತ ಸುತ್ತಾಡಿ ಬರಲೇ....

ದ್ವಾರಪಾಲಕ 1 :

ಅಯ್ಯಾ..... ತಮ್ಮನ್ನು ಹೊರಗೆ ಹೋಗಲು ಅನುಮತಿ ನೀಡಬಾರದೆಂದು ತನಗೆ ನೀಡಿದ ಆಜ್ಞೆ. ಅದನ್ನು ಮೀರಿ ನಿಮ್ಮನ್ನು ಹೊರ ಬಿಟ್ಟರೆ ನಮ್ಮ ಕತ್ತು ನೇರ ಇರೋಲ್ಲ ಸಾಹೇಬರೆ....

ದ್ವಾರಪಾಲಕ 2 :

ಅದು ಮಾತ್ರವಲ್ಲ.... ಇದು ರಕ್ಷಣೆಗೆ ಸಂಬಂಧಪಟ್ಟ ವಿಷಯ. ನಿಮ್ಮನ್ನು ಎಲ್ಲಾದರೂ ಹೊರಗೆ ಕರೆದುಕೊಂಡು ಹೋದರೆ, ನಿಮಗೆ ಆಗದವರು ಏನಾದರೂ ಮಾಡಿಬಿಟ್ಟರೆ....ಆದ್ದರಿಂದ ಖಂಡಿತ.....ನಿಮಗೆ ಹೊರ ಹೋಗಲು ಅಪ್ಪಣೆಯಿಲ್ಲ....ಯಾತ್ರಿಕರೆ.

ಯಾತ್ರಿಕ :

ಸರಿ.... ಸರಿ.... ಏನು ಮಾಡುವುದು? ನನ್ನ ಹಣೆಬರಹ.... ಏನೋ ಬುದ್ಧಿವಂತನೆನಿಸಿಕೊಳ್ಳಬೇಕೆಂಬ ಹಂಬಲದಿಂದ ಪ್ರಶ್ನೆಯನ್ನೇನೋ ಕೇಳಿಬಿಟ್ಟೆ. ಅಬ್ಬಾ.... ಈ ಶ್ರೀಮಂತಿಕೆ, ಈ ವೈಭವದ ಜೀವನ.... ಅಬ್ಬಬ್ಬಾ..... ಯಾರಿಗೂ ಬೇಡ..... ಸಂತೋಷದಿಂದ ದೇಶವೆಲ್ಲಾ ಸುತ್ತಾಡುತ್ತಿದ್ದ ನನಗೆ ಇದೂ ಬೇಕು.... ಇನ್ನೂ ಬೇಕು.... ತೆನಾಲಿಯು ಹೇಳಿದ ಉತ್ತರವೇ ಶ್ರೇಷ್ಠ.... ಹೇಗಾದರೂ ಮಾಡಿ ಶ್ರೀಕೃಷ್ಣ ದೇವರಾಯರಿಗೆ ಹೇಳಿ ಕಳುಹಿಸಿ ಸಭೆ ಕರೆಯಲು ಹೇಳಬೇಕು.

(ತೆರೆ ಬೀಳುತ್ತದೆ)

ದೃಶ್ಯ–3

(ಮೊದಲ ದೃಶ್ಯದ ಅದೇ ವೇದಿಕೆ)

ಶ್ರೀಕೃಷ್ಣದೇವರಾಯ :

ಯಾತ್ರಿಕರೆ..... ಬನ್ನಿ ಆಸನವನ್ನು ಅಲಂಕರಿಸಿರಿ. ತಾವು ಕೇಳಿದ ಪ್ರಶ್ನೆಗೆ ಉತ್ತರ ದೊರಕಿತೆ? ತೆನಾಲಿ ರಾಮಕೃಷ್ಣರು ತಮಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ನೆರವೇರಿಸಿದರೆ.....? ಈ ಎರಡು ವಾರ ತಮ್ಮ ಅತಿಥಿಗಳಾಗಿದ್ದುದು ತಮಗೆ ಸುಖವನ್ನು ನೀಡಿತೆ.....? ಸಂತಸದಿಂದ ದಿನಗಳನ್ನು ಕಳೆದಿರಿ ತಾನೆ.....?

ಯಾತ್ರಿಕ :

ಮಹಾರಾಜ..... ಈ ನಿಮ್ಮ ವ್ಯವಸ್ಥೆಗಳು ಬಲು ಚೆನ್ನಾಗಿಯೇ ಇದ್ದುವು. ಆದರೆ ಅದನ್ನು ಅನುಭವಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ನಾನು ಒಬ್ಬ ಯಾತ್ರಿಕ. ದಿನನಿತ್ಯ ಊರೆಲ್ಲಾ ಸುತ್ತಾಡಿ ಜನರ ಸುಖ ದುಃಖಗಳನ್ನು ಕಂಡು ಆಯಾಯ ರಾಜ್ಯಗಳ ಸೋಲುಗಳನ್ನು ಬರೆದಿಡುವ ಪ್ರವಾಸಿ. ನಾನು ಅಸ್ವತಂತ್ರತೆಯಿಂದ ಆ ಅತಿಥಿಗೃಹದ ಸುಖವನ್ನು ಹೇಗೆ ಅನುಭವಿಸಲಿ?

12th_Kannada_Reader_7.indd 155 22-05-2019 14:37:38

ಶ್ರೀಕೃಷ್ಣದೇವರಾಯ :

ಏಕೆ ಯಾತ್ರಿಕರೆ?..... ಬಹಳ ದುಃಖದಿಂದ ಮಾತನಾಡುತ್ತಿರುವಿರಿ. ತಮ್ಮ ಅತಿಥಿಗಳಾಗಿ ಬಂದವರು ಯಾವುದೇ ವ್ಯಥೆಯಿಂದ ರಾಜ್ಯದಿಂದ ಹೊರಗೆ ಹೋಗಬಾರದು. ಏನೋ..... ರಾಮಕೃಷ್ಣ.... ಏಕೆ.....? ಅತಿಥಿಗಳಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಲಿಲ್ಲವೆ? ಏನಾಯಿತೋ ನಿನಗೆ....?

ಯಾತ್ರಿಕ :

ಮಹಾಪ್ರಭು..... ತೆನಾಲಿ ರಾಮಕೃಷ್ಣರನ್ನು ಏನೂ ಹೇಳಬೇಡಿ. ನೀವು ಆಜ್ಞೆ ಮಾಡಿದಕ್ಕಿಂತ ಹೆಚ್ಚೇ ಗಮನಿಸಿಕೊಂಡರು. ಊಟೋಪಚಾರವಾಗಲಿ..... ಮನೋರಂಜನೆಯಾಗಲೀ..... ಯಾವುದಕ್ಕೂ ಕೊರತೆಯಿರಲಿಲ್ಲ. ಆದರೆ ಖಂಡಿತ..... ಮನುಷ್ಯನಿಂದ ಈ ಎಲ್ಲಾ ಸುಖ ಸಂತೋಷವನ್ನು ಕೆಲವು ದಿನಗಳು ಮಾತ್ರ ಅನುಭವಿಸಲು ಸಾಧ್ಯ. ಮನುಷ್ಯನಿಗೆ ಮೊದಲು ಬೇಕಾದುದು ಸ್ವಾತಂತ್ರ್ಯ. ಮನ ಬಂದಾಗ ಯಾರ ಹಂಗೂ ಇಲ್ಲದೆ ಊರೆಲ್ಲಾ ಸುತ್ತಾಡುವ ಸ್ವಾತಂತ್ರ್ಯ..... ಸಾಕಪ್ಪಾ ಸಾಕು ಈ ವೈಭವದ ಜೀವನ..... ಸ್ವಾತಂತ್ರ್ಯದ ಜತೆಯಲ್ಲೇ ಈ ವೈಭವದ ಬಾಳು ಇದೆಯಾದರೆ ಅನುಭವಿಸಬಹುದೇನೋ..... ಆದರೆ ತನಗಂತೂ ಉಲ್ಲಾಸ ಜೀವನ ಬೇಡವೇ ಬೇಡ..... ಭಲೇ ತೆನಾಲಿ ರಾಮಕೃಷ್ಣ..... ತನಗೆ ತಕ್ಕ ಉತ್ತರ ದೊರಕಿತು. ಇದೋ ನಾನು ನೀಡುವ ಮುತ್ತಿನ ಹಾರ.....(ತೆನಾಲಿ ಮುತ್ತಿನ ಹಾರವನ್ನು ತೆಗೆದುಕೊಳ್ಳುವನು)

ಶ್ರೀಕೃಷ್ಣದೇವರಾಯ :

(ಸಿಂಹಾಸನದಿಂದ ಕೆಳಗಿಳಿದು ತೆನಾಲಿ ರಾಮಕೃಷ್ಣನ ಸಮೀಪಕ್ಕೆ ಬರುವನು) ಭಲೇ.....ಭಲೇ.... ತೆನಾಲಿ ರಾಮಕೃಷ್ಣ.... ಈ ಬಾರಿಯೂ ಬಹುಮಾನ ತಮ್ಮ ಪಾಲಿಗೇನೇ.... ಯಾತ್ರಿಕರೆ ನಮ್ಮ ಸಾಮ್ರಾಜ್ಯದ ವೈಭವವನ್ನು ಹೊಗಳಿ ವಿದೇಶಗಳಿಗೆ ಪಸರಿಸಿರಿ.... ಹಿಂದೂ ಸಾಮ್ರಾಜ್ಯದ ಘನತೆ ಗಗನಕ್ಕೇರ ಂದೆ ಹೇಳಿದಂತೆ ಇದೋ ನನ್ನ ಬಹುಮಾನ.... ತೆಗೆದುಕೋ ರಾಮಕೃಷ್ಣ

(ಬಹುಮಾನ ನೀಡಿ ತೆನಾಲಿಯನ್ನು ತಬ್ಬಿಕೊಳ್ಳುವನು)

(ಸಭೆ ಶ್ರೀಕೃಷ್ಣ ದೇವರಾಯನಿಗೆ ಜಯ ಘೋಷ ಹಾಕುವುದು)

(ತೆರೆ ಹಾಕಲಾಗುವುದು)

"ಮುಕ್ತಾಯ"

ಕೃತಿ–ಕರ್ತೃ ವಿಚಾರ

ಕೆ. ಕುಮಾರ್ ಆಚಾರ್ ಅವರು ಚೆನ್ನೈ ನಗರದ ತ್ಯಾಗರಾಯನಗರದಲ್ಲಿರುವ ಕರ್ನಾಟಕ ಸಂಘ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸುಮಾರು ಮುವ್ವತ್ತು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ಇವರ ಹುಟ್ಟೂರು. ಶೈಕ್ಷಣಿಕ ದೃಷ್ಟಿಯಿಂದ ಹುಟ್ಟೂರಿನಿಂದ ಚೆನ್ನೈಗೆ ಆಗಮಿಸಿ, ಮುಂದೆ ಚೆನ್ನೈ ನಗರವನ್ನೇ ಮುಂದೆ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ಚೆನ್ನೈನ ಕನ್ನಡ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಲೋಕಕ್ಕೂ ತಮ್ಮಿಂದಾದ ಕಿರು ಕೈಂಕರ್ಯವನ್ನು ಸಲ್ಲಿಸಿದ್ದಾರೆ. ಶಾಲೆ, ಸಂಘ–ಸಂಸ್ಥೆಗಳಲ್ಲಿ ನಡೆಯುವ ಸಮಾರಂಭಗಳಿಗಾಗಿ ನಾಟಕ, ಕಥೆ–ಕವನ, ಲೇಖನಗಳನ್ನು ರಚಿಸುತ್ತಾ ಕಿರು ಸಾಹಿತ್ಯ ಸೇವೆಗೈಯುತ್ತಿದ್ದಾರೆ.

ಪದಗಳ ಅರ್ಥ

ವೇದಿಕೆ–ಸಭಾಮಂಟಪ, ಹೆಗ್ಗುರಿ–ದೊಡ್ಡ ಗುರಿ, ಏಕೀಕೃತ–ಒಗ್ಗಟ್ಟು, ಅಪೇಕ್ಷೆ–ಆಸೆ; ದುಂದುಭಿ–ವಾದ್ಯ ಧ್ವನಿ; ತಾಣ–ಸ್ಥಳ; ಘನ–ದೊಡ್ಡ; ವ್ಯಥೆ–ದುಃಖ; ಘನತೆ–ಶ್ರೇಷ್ಠತೆ; ಗಗನ–ಆಕಾಶ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ವಿಜಯ ನಗರ ಸಾಮ್ರಾಜ್ಯದ ಮಹತ್ವವನ್ನು ಶ್ರೀಕೃಷ್ಣದೇವರಾಯನು ಹೇಗೆ ವಿವರಿಸಿದ್ದಾನೆ ?

12th_Kannada_Reader_7.indd 156 22-05-2019 14:37:38

2. ಅಲ್ಲಸಾನಿ ಪೆದ್ದನನು ರಾಜನನ್ನು ಏನೆಂದು ಹೊಗಳಿದನು ?
3. ಯಾವ ಯಾವ ರಾಜರು ವಿಜಯನಗರದ ವಿಜಯ ದುಂದುಭಿಯನ್ನು ಮೊಳಗಿಸುತ್ತಿದ್ದಾರೆ ?
4. ಯಾತ್ರಿಕನು ವಿಜಯನಗರ ಪುಣ್ಯ ಭೂಮಿಯನ್ನು ಒಂದು ಬಾರಿಯಾದರೂ ಸಂದರ್ಶಿಸಬೇಕೆನ್ನಲು ನೀಡುವ ಕಾರಣಗಳೇನು ?
5. ಯಾತ್ರಿಕನು ಕೇಳಿದ ಪ್ರಶ್ನೆಯೇನು ?
6. ತೆನಾಲಿ ರಾಮಕೃಷ್ಣನು ಯಾತ್ರಿಕನಿಗೆ ಮಾಡಿದ ಸವಲತ್ತುಗಳೇನು ?

II. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಪ್ರಶ್ನೆಗೆ ತಿಮ್ಮರಸ, ಅಲ್ಲಸಾನಿ ಪೆದ್ದನ, ಪಿಂಗಳಿ ಸೂರಣ್ಣ, ನಂದಿ ತಿಮ್ಮಣ್ಣ, ತೆನ್ನಾಲಿ ರಾಮಕೃಷ್ಣರು ನೀಡಿದ ಉತ್ತರಗಳೇನು ?
2. ಯಾತ್ರಿಕನ ಸ್ವಗತದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ ?
3. ಯಾತ್ರಿಕ ಹಾಗೂ ದ್ವಾರಪಾಲಕರ ನಡುವೆ ನಡೆದ ಸಂಭಾಷಣೆಯನ್ನು ಬರೆಯಿರಿ ?
4. ಯಾತ್ರಿಕನಿಗೆ ಸ್ವಾತಂತ್ರ್ಯದ ಬೆಲೆ ಏನೆಂದು ಹೇಗೆ ಅರಿವಾಯಿತು ?
5. ಉಲ್ಲಾಸ ಜೀವನ ಬೇಡ, ಸ್ವಾತಂತ್ರ್ಯವೇ ಬೇಕು ಎಂದು ಯಾತ್ರಿಕ ರಾಜನಿಗೆ ಏಕೆ ಹೇಳಿದನು ?

ಚಟುವಟಿಕೆ

1. ಈ ನಾಟಕವನ್ನು ನಿಮ್ಮ ತರಗತಿಯಲ್ಲಿ ಅಭಿನಯಿಸಿ.

ಮಂತ್ರಮಾಂಗಲ್ಯ



ಶ್ರೀ

"ಚಿತ್ರಕೂಟ",
ಗೋಣಿಬೀಡು ಅಂಚೆ,
ಚಿಕ್ಕಮಗಳೂರು ಜಿಲ್ಲೆ.

ದಿನಾಂಕ 27/11/1966

ಶ್ರೀಯುತ/ಶ್ರೀಮತಿ

ತಾವೆಲ್ಲರೂ ಕ್ಷೇಮ ಎಂದು ಹಾರೈಸುತ್ತೇವೆ.
ಈ ಕಾಗದ ಬರೆಯುತ್ತಿರುವ ವಿಶೇಷ ವಿಷಯವೆಂದರೆ:
ನಮ್ಮ ಜ್ಯೇಷ್ಠಪುತ್ರ ಚಿರಂಜೀವಿ ಕೆ. ವಿ. ಪುಟ್ಟಚಂದ್ರ ತೇಜಸ್ವಿ ಎಂ.ಎ., ಮತ್ತು ದಿವಂಗತ ಶ್ರೀ ರಂಗಪ್ಪಗವರ ಪುತ್ರಿ ಕುಮಾರಿ ಟಿ.ಕೆ. ರಾಜೇಶ್ವರಿ ಎಂ.ಎ., ಇವರಿಗೆ ದಿನಾಂಕ 27-11-1966 ರಂದು "ಚಿತ್ರಕೂಟ"ದಲ್ಲಿ ಮದುವೆ ನಡೆಯುತ್ತದೆ. ನಮ್ಮ ಕಾರ್ಯಕ್ರಮಗಳಾದ ತಾವು ತಮಗೆ ಅನುಕೂಲವಿರುವ ದೊರೆತಾಗ "ಚಿತ್ರಕೂಟ"ಕ್ಕೆ ಆಗಮಿಸಿ, ವಧೂವರರ ಆತಿಥ್ಯ ಸ್ವೀಕರಿಸಿ, ಅವರನ್ನು ಆಶೀರ್ವದಿಸಿ, ಅವರ ಶ್ರೇಯೋಭಿವೃದ್ಧಿ ಕೋರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ.

ಇತಿ
ಕುಟುಂಬ ದಂಪತಿ

12th_Kannada_Reader_7.indd 157 22-05-2019 14:37:38

ವ್ಯಾಕರಣ

ಘಟಕ ಏಳು

ಸಮಾಸಗಳು

ಎರಡು ಅಥವಾ ಹಲವು ಪದಗಳು ಅರ್ಥಕ್ಕೆ ಅನುಸಾರವಾಗಿ ಒಟ್ಟು ಸೇರಿ ಒಂದು ಪದವಾಗುವುದಕ್ಕೆ ಸಮಾಸವೆನ್ನುವರು. ಹೀಗೆ ಎರಡು ಪದಗಳು ಸೇರುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವು ಲೋಪವಾಗುತ್ತದೆ. ಸಮಾಸ ಪದಗಳನ್ನು ಅರ್ಥವಾಗುವಂತೆ ಬಿಡಿಸಿ ಹೇಳುವುದಕ್ಕೆ ವಿಗ್ರಹ ವಾಕ್ಯಗಳೆಂದು ಹೆಸರು. ವಿಗ್ರಹ ವಾಕ್ಯದ ಮೊದಲ ಪದವನ್ನು ಪೂರ್ವ ಪದವೆಂದೂ, ಅದರ ಮುಂದಿನ ಪದವನ್ನು ಉತ್ತರ ಪದವೆಂದೂ ಕರೆಯುತ್ತಾರೆ. ಉದಾಹರಣೆಗೆ,

ತಾಯಿಯ+ನುಡಿ=ತಾಯ್ನುಡಿ.

ಅರಸನ+ಮನೆ=ಅರಮನೆ

ಸಮಾಸದಲ್ಲಿ ಸೇರಿರುವ ಪದಗಳ ಅರ್ಥದ ಮುಖ್ಯತೆಯ ಮೇಲೆ ಸಮಾಸ ಭೇದಗಳಾಗುವುವು. ನಾವು ಹೇಳುವ ಮಾತಿನ ಅರ್ಥವು ಯಾವ ಪದಕ್ಕೆ ನೇರವಾಗಿ ಅನ್ವಯಿಸುವುದೋ ಆ ಪದದ ಅರ್ಥ ಮುಖ್ಯವೆಂದು ತಿಳಿಯಬೇಕು.

ಸಮಾಸಗಳಲ್ಲಿ ಮುಖ್ಯವಾಗಿ ತತ್ಪುರುಷ, ಕರ್ಮಧಾರಯ, ಅಂಶಿ, ಬಹುವ್ರೀಹಿ, ದ್ವಂದ್ವ, ಗಮಕ, ಕ್ರಿಯಾ ಮತ್ತು ದ್ವಿಗು ಸಮಾಸಗಳೆಂದು ಎಂಟು ವಿಧಗಳಿವೆ.

1. ತತ್ಪುರುಷ ಸಮಾಸ

ಎರಡು ನಾಮಪದಗಳು ಸೇರಿ ಸಮಾಸವಾದಾಗ ಉತ್ತರ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸವೆಂದು ಹೆಸರು. ತತ್ಪುರುಷ ಸಮಾಸದಲ್ಲಿ ದ್ವಿತೀಯಾ, ತೃತೀಯಾ, ಚತುರ್ಥಿ, ಪಂಚಮೀ, ಷಷ್ಠಿ ಹಾಗೂ ಸಪ್ತಮೀ ತತ್ಪುರುಷ ಎಂದು ಆರು ಭೇದಗಳಿವೆ. **ಉದಾಹರಣೆಗೆ**

ಹಣ್ಣನ್ನು ಮಾರುವವನು – ಹಣ್ಣು ಮಾರುವವನು(ದ್ವಿತೀಯಾ)
ವಯಸ್ಸಿನಿಂದ ವೃದ್ಧ–ವಯೋವೃದ್ಧ(ತೃತೀಯಾ)
ಭೂತಗಳಿಗೆ ತೃಪ್ತಿ–ಭೂತ ತೃಪ್ತಿ(ಚತುರ್ಥೀ)
ಚೋರನ ದೆಸೆಯಿಂದ ಭಯ–ಚೋರಭಯ(ಪಂಚಮೀ)
ಎಲೆಯ ಮನೆ–ಎಲೆವನೆ/ಎಲೆಮನೆ(ಷಷ್ಠೀ)
ವನದಲ್ಲಿ ವಾಸ–ವನವಾಸ(ಸಪ್ತಮೀ)

2. ಕರ್ಮಧಾರಯ ಸಮಾಸ

ಪೂರ್ವಪದದಲ್ಲಿ ವಿಶೇಷಣವಿದ್ದು, ಉತ್ತರ ಪದದ ಅರ್ಥ ಮುಖ್ಯವಾಗಿದ್ದು, ವಿಶೇಷಣ, ವಿಶೇಷ್ಯಗಳಿಗೆ ಸಂಬಂಧವಿದ್ದರೆ ಅದು ಕರ್ಮಧಾರಯ ಸಮಾಸವೆನ್ನಿಸುತ್ತದೆ. **ಉದಾಹರಣೆಗೆ,**

ಹೊಸದು+ಕನ್ನಡ=ಹೊಸಗನ್ನಡ
ಹಿರಿದು+ಬಾಗಿಲು=ಹೆಬ್ಬಾಗಿಲು

12th_Kannada_Reader_7.indd 158 22-05-2019 14:37:38

3. ದ್ವಿಗು ಸಮಾಸ

ಪೂರ್ವಪದವು ಸಂಖ್ಯಾವಾಚಕವಾಗಿದ್ದು, ಉತ್ತರದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸವೆನ್ನಿಸುತ್ತದೆ. **ಉದಾಹರಣೆಗೆ :**

ಒಂದು+ಕಟ್ಟು=ಒಗ್ಗಟ್ಟು
ಎರಡು+ಮಡಿ=ಇಮ್ಮಡಿ
ಮೂರು+ಪುರಿ=ಮುಪ್ಪುರಿ

4.ಅಂಶಿ ಸಮಾಸ

ಪೂರ್ವೋತ್ತರ ಪದಗಳು ಅಂಶಾಂಶಿ ಭಾವ ಸಂಬಂಧದಿಂದ ಸೇರಿ ಪೂರ್ವ ಪದದ ಅರ್ಥವು ಪ್ರಧಾನವಾಗಿ ಉಳ್ಳ ಸಮಾಸಕ್ಕೆ ಅಂಶಿ ಸಮಾಸವೆನ್ನುವರು. **ಉದಾಹರಣೆಗೆ :**

ತಲೆಯ+ಮುಂದು=ಮುಂದಲೆ
ಕೈಯ+ಅಡಿ=ಅಂಗೈ
ಕಾಲಿನ+ಮುಂದು=ಮುಂಗಾಲು

5. ದ್ವಂದ್ವ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿ ಉಳ್ಳ ಸಮಾಸಕ್ಕೆ ದ್ವಂದ್ವ ಸಮಾಸವೆಂದು ಹೆಸರು. **ಉದಾಹರಣೆಗೆ**

ಆನೆಯೂ ಕುದುರೆಯೂ ಒಂಟೆಯೂ–ಆನೆಕುದುರೆಒಂಟೆಗಳು
ಗಿಡವೂ ಮರವೂ ಬಳ್ಳಿಯೂ–ಗಿಡಮರಬಳ್ಳಿಗಳು

6. ಬಹುವ್ರೀಹಿ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಪೂರ್ವಪದ ಉತ್ತರ ಪದಗಳಲ್ಲಿ ಯಾವುದರ ಅರ್ಥವೂ ಮುಖ್ಯವಾಗಿರದೆ ಅನ್ಯ ಪದದ ಮುಖ್ಯವಾಗಿದ್ದರೆ ಅದಕ್ಕೆ ಬಹುವ್ರೀಹಿ ಸಮಾಸ ಎಂದು ಹೆಸರು. **ಉದಾಹರಣೆಗೆ**

ಮೂರು ಕಣ್ಣುಗಳು ಯಾರಿಗೆ ಇವೆಯೋ ಅವನು–ಮುಕ್ಕಣ್ಣ
ಕಮಲದಂತಹ ಮುಖವು ಯಾರಿಗೆ ಇದೆಯೋ ಅವಳು–ಕಮಲಮುಖಿ

7. ಕ್ರಿಯಾ ಸಮಾಸ

ಪೂರ್ವಪದವು ನಾಮಪದವಾಗಿದ್ದು ಉತ್ತರ ಪದವು ಕ್ರಿಯಾರೂಪವಾಗಿದ್ದರೆ ಕ್ರಿಯಾಸಮಾಸವಾಗುವುದು. **ಉದಾಹರಣೆಗೆ**

ಮೈಯನ್ನು+ತಡವು=ಮೈದಡವು
ಕಣ್ಣನ್ನು+ತೆರೆ=ಕಣ್ದೆರೆ

8. ಗಮಕ ಸಮಾಸ

ಪೂರ್ವಪದವು ಸರ್ವನಾಮ ಅಥವಾ ಕೃದಂತವಾಗಿದ್ದು, ಉತ್ತರಪದವು ನಾಮಪದವಾಗಿದ್ದರೆ ಗಮಕಸಮಾಸವಾಗುವುದು. **ಉದಾಹರಣೆಗೆ**

12th_Kannada_Reader_7.indd 159 22-05-2019 14:37:38

ಅವನು+ಹುಡುಗ=ಆ ಹುಡುಗ

ಅದು+ಕಲ್ಲು=ಆ ಕಲ್ಲು

ಮಾಡಿದುದು+ಅಡಿಗೆ=ಮಾಡಿದಡಿಗೆ

ಸಿಡಿಯುವುದು+ಮದ್ದು=ಸಿಡಿಮದ್ದು

ಹುರಿದ+ಕಡಲೆ=ಹುರಿಗಡಲೆ

9. ಅರಿ ಸಮಾಸ

ಕನ್ನಡ ಮತ್ತು ಸಂಸ್ಕೃತ ಶಬ್ದಗಳನ್ನು ಸೇರಿಸಿ ಮಾಡುವ ಸಮಾಸವನ್ನು ಅರಿಸಮಾಸವೆನ್ನುತ್ತಾರೆ. ಇದೊಂದು ದೋಷ. ರೂಢಿಯ ವ್ಯಾಕರಣದ ಪ್ರಕಾರ ಇದು ನಿಷಿದ್ಧ. ಆದರೆ ಭಾಷೆಯಲ್ಲಿ ಇಂತಹ ಪ್ರಯೋಗಗಳು ಕಂಡು ಬರುತ್ತವೆ. ಪೂರ್ವದ ಪ್ರಸಿದ್ಧ ಕವಿಗಳು ಮಾಡಿರುವ ಪ್ರಯೋಗಗಳಲ್ಲಿ ಬಿರುದಾವಳಿಗಳಲ್ಲಿ ಗಮಕ ಮತ್ತುಕ್ರಿಯಾ ಸಮಾಸಗಳಲ್ಲಿ ಅರಿಸಮಾಸವನ್ನು ದೋಷವೆಂದು ಪರಿಗನಿಸಬಾರದು. ಉದಾಹರಣೆಗೆ ಪೂರ್ವ ಕವಿ ಪ್ರಯೋಗಕ್ಕೆ – ತುರಗದಳ, ಮಂಗಳಾರತಿ

ಬಿರುದಾವಳಿಗೆ – ದಳಮುಖಾದಿತ್ಯ, ರಾಯಕೋಲಾಹಲ.

ಗಮಕಸಮಾಸಕ್ಕೆ – ಪೊಡೆವ ಭೇರಿ, ಆ ಕಾರ್ಯ.

ಕ್ರಿಯಾಸಮಾಸಕ್ಕೆ – ಧೈರ್ಯ ಹೊಂದು, ಧರ್ಮ ಮಾಡು.



12th_Kannada_Reader_7.indd 160 22-05-2019 14:37:38

ಘಟಕ ಎಂಟು

8. ಮಾನವೀಯತೆ



ಕಾವ್ಯ ಕಣಜ	:	ಮನದೊಳಗೊಳಗೆ ಸತ್ತು ಹುಟ್ಟುತಿರ್ಪಳು	–	ರಾಘವಾಂಕ
ಗದ್ಯ ವಿಹಾರ	:	ಸಾವಿತ್ರಿ	–	ಎ.ಆರ್.ಕೃಷ್ಣಶಾಸ್ತ್ರಿ
ಉಪಪಠ್ಯ	:	ಮಗುವಿನ ಕರೆ	–	ದ.ರಾ.ಬೇಂದ್ರೆ
ವ್ಯಾಕರಣ	:	ಛಂದಸ್ಸು, ಅಲಂಕಾರ, ಪತ್ರಲೇಖನ, ಪ್ರಬಂಧಗಳು.		

12th_Kannada_Reader_8.indd 161 22-05-2019 15:39:48

ಕಾವ್ಯ ಕಣಜ

ಘಟಕ ಎಂಟು

ಮನದೊಳಗೊಳಗೆ ಸತ್ತು ಹುಟ್ಟುತಿರ್ಪಳು

–ರಾಘವಾಂಕ



ತಾಯಿ–ಮಗುವಿನ ಆತ್ಮೀಯ ಸಂಬಂಧ ಒಂದು ಸಾರ್ವಕಾಲಿಕ ಮೌಲ್ಯ. ಮಗನಿಗಾಗಿ ಕಾಯುವ ತಾಯಿಯ ತುಡಿತ–ಮಿಡಿತಗಳು ಆತನ ಸಾವನ್ನು ತಿಳಿದು ಅವಳು ವಿಲಾಪಿಸುವ ರೀತಿ ಇಲ್ಲಿ ಹೃದಯವಿದ್ರಾವಕವಾಗಿ ಚಿತ್ರಣಗೊಂಡಿದೆ. ಜೊತೆಗೆ ಉಳ್ಳವರ ಅಮಾನವೀಯ ಧೋರಣೆ ಮತ್ತು ದುಡಿಯುವವರ ಕರ್ತವ್ಯ ನಿರ್ವಹಣೆಯ ನಿಷ್ಠೆ ಸಮರ್ಥವಾಗಿ ಮೂಡಿ ಬಂದಿವೆ. ವ್ಯಕ್ತಿ ಮೌಲ್ಯದ ಉತ್ತಮ ಪ್ರತಿನಿಧಿಯಾಗಿ ಚಂದ್ರಮತಿ ಮೂಡಿ ಬಂದಿದ್ದಾಳೆ.

'ಷಟ್ಪದಿಯ ಜನಕ' ಎಂದು ಪ್ರಸಿದ್ಧನಾದ ರಾಘವಾಂಕನು ವಾರ್ಧಕ ಷಟ್ಪದಿಯಲ್ಲಿ ಹರಿಶ್ಚಂದ್ರ ಕಾವ್ಯವನ್ನು ರಚಿಸಿದ್ದಾನೆ.



12th_Kannada_Reader_8.indd 162 22-05-2019 15:39:48

ಎಂದಿನಂತುದಯ ಕಾಲದೊಳೆದ್ದು ಹುಲುಹುಳ್ಳಿ
ಗೆಂದರಣ್ಯಕ್ಕೆ ನಡೆದಲ್ಲಲ್ಲಿ ಹೋಗಿ ಹಲ
ವಂದದಡುಗಬ್ಬನಾಯ್ದೊಟ್ಟಿ ಹೊರೆಗಟ್ಟಿ ಹೊತ್ತೋರಗೆಯ ಮಕ್ಕಳೊಡನೆ ।
ನಿಂದು ಮಧ್ಯಾಹ್ನದುರಿ ಬಿಸಿಲೊಳೆದೆ ಬಿರಿಯೆ ಜವ
ಗುಂದಿ ತಲೆ ಕುಸಿದು ನಡೆಗೆಟ್ಟು ಬಾಯಾರಿ ಹಣೆ
ಯಿಂದ ಬೆಮರುಗೆ ನೆತ್ತಿ ಹೊತ್ತಿ ತೇಂಕುತ್ತ ಹರಿತಪ್ಪಾಗಳೇವೊಗಳ್ವೆನು ‖1‖

ಕೆಲದ ಮೆಳೆಯೊತ್ತಿನೊಳಗಿರ್ದ ಹುತ್ತಿನೊಳು ನಳ
ನಳಿಸಿ ಕೋಮಲತೆಯಿಂ ಕೊಬ್ಬಿ ಕೊನೆವಾಯ್ದು ಕಂ
ಗಳವಟ್ಟು ಬೆಳೆದೆಳೆಯ ದರ್ಭೆಯಂ ಕಂಡು ಹಾರಯಿಸಿ ನಾನಿದನೆಲ್ಲವ ।
ಗಳಗಳನೆ ಕೊಯ್ದು ಕೊಂಡೊಯ್ದಿತ್ತಡೆನ್ನೊಡೆಯ
ಮುಳಿಯದಿಹನೆಂಬಾಸೆಯಿಂ ಹೊರೆಯನಿಳುಹಿ ಮ
ತ್ತೆಳಸಿ ಕುಡುಗೋಲ್ವಿಡಿದು ಸಾರ್ದನಸ್ತಾದ್ರಿಯಂ ಸಾರ್ದ ಮಾರ್ತಾಂಡನಂತೆ ‖2‖

ಹೊದೆಗಡಿದು ಹತ್ತಿ ಹುತ್ತನು ಸುತ್ತಿದೆಳಹುಲ್ಲ
ಹೊದರ ಹಿಡಿದಡಿಸಿ ಬಿಡದರಿದು ಸೆಳೆಯಲ್ ಕಯ್ಯ
ಹದರನೊಡೆಗಚ್ಚಿ ಜಡಿಯುತ್ತ ಭೋಂಕನೆ ಬಂದ ರೌದ್ರ ಸರ್ಪನನು ಕಂಡು ।
ಹೆದರಿ ಹವ್ವನೆ ಹಾರಿ ಹಾ ಎಂದು ಕೈಕಾಲ
ಕೆದರಿ ತಲೆಕೆಳಗಾಗಿ ಕೆಡೆದನಕಟಕಟ ಮದ
ಮುದಿತ ರಾಹುಗ್ರಸ್ತವಾದ ತರುಣೇಂದು ಬಿಂಬಂ ನೆಲಕೆ ಬೀಳ್ವಂದದೆ ‖3‖

ಹುತ್ತಿನಿಂ ಫಣಿವೆರಸಿ ಕೆಡೆಯೆ ಕಂಡೊಡನಿರ್ದ
ತತ್ತುಕಂಗಳು ಹೆದರಿ ಬಿಟ್ಟೋಡಿ ಹೋದ
ರತ್ತಲಿತ್ತಂ ತಾಯ್ಗೆ ಹಲುಬಿ ತಂದೆಯಂ ಕರೆದು ದೆಸೆದೆಸೆಗೆ ಬಾಯ್ಬಿಟ್ಟು ।
ನೆತ್ತಿಗೇರಿದ ವಿಷದ ಕೈಯಿಂದ ಮಡಿದನೀ
ಪೊತ್ತೆನ್ನ ಕುಲದ ಕುಡಿ ಮುರುಟಿತೆಂದುಮ್ಮಳಂ
ಬೆತ್ತು ಬೀಳದೆ ಮಾಣೆನೆಂಬಂತೆ ರವಿ ಬಿದ್ದನಂದು ಪಡುವಣ ಕಡಲೊಳು ‖4‖

12th_Kannada_Reader_8.indd 163 22-05-2019 15:39:48

ತನಯನೆಂದುಂ ಬಪ್ಪ ಹೊತ್ತಿಂಗೆ ಬಾರದಿರೆ
ಮನ ನೊಂದಿದೇಕೆ ತಳುವಿದನೆನ್ನ ಕಂದನೆಂ
ದೆನುತ ಸುಯ್ಯುತ್ತ ಮರುಗುತ್ತ ಬಸುರಂ ಹೊಸೆದು ಕೊನೆವೆರಳ ಮುರಿದುಕೊಳುತ।
ತನುವ ಮರೆದಡಿಗಡಿಗೆ ಹೊರಗನಾಲಿಸಿ ಮತ್ತೆ
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ
ವನಿತೆಗಾದಾಪತ್ತನಾಲಿಸದೆ ಕೆಟ್ಟು ದಟ್ಟಿಸುವರದನೇನೆಂಬೆನು ‖5‖

ಬಂದಿರನಲೇ ಎಂದು ಪೊರಮಟ್ಟಡೋಡಿದಪ
ಳೆಂದೆಂಬ ರೊಯ್ಯನಳುತಿರಲಮಂಗಳಗರೆದ
ಳೆಂದೆಂಬರೊಳಗೊಳಗೆ ಮಗನ ಗುಣಮಂ ಹಲುಬುತಿರಲು ಬೈದಪಳೆಂಬರು ।
ನಿಂದು ಬೆರಗಾಗಿ ಮರೆದಿರೆ ಕೆಲಸಗಳ್ಳೆಯಿವ
ಳೆಂದೆಂಬರೊಮ್ಮೊಮ್ಮೆ ಬಿಸುಸುಯ್ಯೆ ಬೇಸತ್ತ
ಳೆಂದೆಂಬರಂದು ಬೈವರು ಬೈದು ಬಡಿವರಾ ಮನೆಯವರು ಮಾನಿನಿಯನು ‖6‖

ಉರಿವ ಬಿಸಿಲೊಳು ಹಸಿದು ಬಳಲಿ ಬಸವಳಿದು ಕೆಡ
ದಿರುತಿಪ್ಪನೋ ಎಂದು ಕೀಳಿಲೊಳು ಮಿಗೆ ಕಟ್ಟು
ತಿರೆ ಹಸುಗಳಿರಿದು ಕೆಡೆದಿರುತಿಪ್ಪನೋ ಎಂದು ನೋಡುತ್ತ ಹುಲುಹುಳ್ಳಿಯು ।
ದೊರಕದಿರೆ ಮನೆಗೆ ಬರಲಂಜಿ ಹೊರಹೊರಗಾಡು
ತಿರುತಿಪ್ಪನೋ ಎಂದು ಬೀದಿಯೊಳು ನೋಡಿ ತಡ
ವರಿಸಿ ಕಾಣದೆ ಮರುಗುತಳಲಿಂದ ಮನದೊಳಗೊಳಗೆ ಸತ್ತು ಹುಟ್ಟುತ್ತಿರ್ಪಳು ‖7‖

ಅಡವಿಯೊಳು ಹೊಲಬುಗೆಟ್ಟನೋ ಗಿಡುವಿನೊಳಗೆ ಹುಲಿ
ಹಿಡಿದುದೋ ಕಳ್ಳರೊಯ್ದರೋ ಭೂತ ಸಂಕುಲಂ
ಹೊಡೆದುವೋ ನೀರೊಳದ್ದನೊ ಮರದ ಕೊಂಬೇರಿ ಬಿದ್ದನೋ ಫಣಿ ತಿಂದುದೋ।
ಕಡು ಹಸಿದು ನಡೆಗೆಟ್ಟು ನಿಂದನೋ ಎಂದಿಂತು
ಮಡದಿ ಹಲವಂ ಹಲುಬುತಂಗಣದೊಳಿರೆ ಹೊತ್ತಿ
ಹೊಡಕರಿಸಿದಳಲ ಕರ್ಬೊಗೆಯಂತೆ ಕವಿದ ಕತ್ತಲೆಯೊಳಗೆ ನಿಂದಿರ್ದಳು ‖8‖

12th_Kannada_Reader_8.indd 164 22-05-2019 15:39:48

ಬಂದರಂ ಲೋಹಿತಾಶ್ವಾ ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ಎಂದು ಗಾಳಿ ಗಿರಿ
ಕೆಂದಡಂ ಲೋಹಿತಾಶ್ವಾ ಎಂದು ಕರೆಕರೆದು ಬಿಡೆ ಬೀದಿಗರುವಿನಂತೆ ।
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬನೈ
ತಂದಿಂದು ಕೂಡೆ ಹೋಗಿರ್ದು ಕಂಡೆಂ ನಿನ್ನ
ಕಂದನನೊಂದುಗ್ರ ಫಣಿ ತಿಂದು ಜೀವಂಗಳೆದನೆಂದು ಹೇಳಿದನಾಗಳು ||9||

ಏಕೆ ಕಚ್ಚಿತ್ತಾವ ಕಡೆ ಯಾವ ಹೊಲನಕ್ಕ
ಟಾ ಕುಮಾರಂ ಮಡಿದ ಠಾವೆನಿತು ದೂರವೆನ
ಲೀ ಕಡೆಯೊಳೀ ಹೊಲದೊಳೀ ಮರದ ಕೆಲದ ಹುತ್ತಿನ ಹುಲ್ಲ ಕೊಯ್ಯೆ ಕೈಯ ।
ನೂಕಿ ಫಣಿಯಗಿಯೆ ಕೆಡೆದಂ ದೂರವಲ್ಲಲ್ಲ
ಬೇಕಾದಡೀಗ ಹೋಗಲ್ಲದಿರ್ದಡೆ ಬಳಿಕ
ನೇಕ ಭಲ್ಲುಕ ಜಂಬುಕಂ ಘೂಕ ವೃಕಗಳೆಳೆಯದೆ ಬಿಡವು ಕೇಳೆಂದನು ||10||

ನುಡಿಯಲರಿದೆನಿಸಿ ಮೇರೆಯ ಮೀರುವಳಲನಳ
ವಡಿಸಿ ಬಂದೊಡೆಯನಡಿಗಳ ಮೇಲೆ ಕೆಡೆದು ಬಾ
ಯ್ವಿಡುತರಣ್ಯದೊಳೆನ್ನ ಮಗನುಗ್ರ ಕಾಳೋರಗಂ ಕಚ್ಚಿ ಮಡಿದನೆಂದು ।
ನುಡಿಯೆ ಲೇಸಾಯ್ತು ಮಡಿದಡೆ ಮಡಿದನೆಂದು ಕೆಡೆ
ನುಡಿಯೆ ಬಂಟರನು ಕೊಟ್ಟರಸಿಸೈ ತಂದೆ ಎನೆ
ನಡುವಿರುಳು ಬಂಟರುಂಟೇ ನಿದ್ದೆಗೆಯ್ಯಬೇಕೇಳು ಕಾಡದಿರೆಂದನು ||11||

ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ
ಕರುಣಿಸೆನೆ ದುರ್ಮರಣವಟ್ಟ ಶೂದ್ರನನು ಸಂ
ಸ್ಕರಿಸುವವರಾವಲ್ಲವೆಂದೆನಲ್ಕಾನಾದಡಂ ಹೋಗಿ ಕಂಡು ಮಗನ ।
ಉರಿಗಿತ್ತು ಬಪ್ಪೆನೆನೆ ಕೆಲಸಮಂ ಬಿಟ್ಟು
ಹರಿಯದಿರ್ದುದನೆಯ್ದೆ ಗೆಯ್ದು ಹೋಗೆನಲು ಚ
ಚ್ಚರದಿ ಮಾಡುವ ಕಜ್ಜವೆಲ್ಲವಂ ಮಾಡಿ ಹೊರಹೊಂಟಳೊಯ್ಯನೆ ಮನೆಯನು ||12||

12th_Kannada_Reader_8.indd 165 22-05-2019 15:39:49

ಕವಿ ಕಾವ್ಯ ಪರಿಚಯ


ರಾಘವಾಂಕ

ರಾಘವಾಂಕ (ಕ್ರಿ.ಶ.1280). ಷಟ್ಪದಿ ಕಾವ್ಯ ಪ್ರವರ್ತಕ ಹಾಗೂ ನಡುಗನ್ನಡ ಕಾವ್ಯ ಪರಂಪರೆಯ ಪ್ರಮುಖ ಕವಿ ರಾಘವಾಂಕ. ಜನ ಬದುಕಬೇಕೆಂದು ಕಾವ್ಯ ರಚಿಸಿದ, ಕವಿ ಹರಿಹರನ ಸೋದರಳಿಯನೂ ಕವಿ ಶಿಷ್ಯನೂ ಆಗಿದ್ದ ಈತನು ಕನ್ನಡ ಸಂಸ್ಕೃತಗಳೆರಡರಲ್ಲೂ ಪರಿಣತಿ ಸಾಧಿಸಿ 'ಉಭಯ ಕವಿ ಕಮಲ ರವಿ' ಎಂಬ ಬಿರುದಿಗೆ ಪಾತ್ರನಾಗಿದ್ದಾನೆ. ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ, ಸೋಮನಾಥ ಚಾರಿತ್ರ್ಯ ಇವು ರಾಘವಾಂಕ ರಚಿಸಿದ ವಾರ್ಧಕ ಷಟ್ಪದಿ ರೂಪದ ಕೃತಿಗಳು. ಐದು ಮಾತ್ರೆಯ ನಾಲ್ಕು ಗಣದ ವಾರ್ಧಕ ಷಟ್ಪದಿಯನ್ನು ಈ ಕವಿ ಶಿವಭಕ್ತರಾದ ಉನ್ನತ ವ್ಯಕ್ತಿಗಳ ಚರಿತ್ರೆಯನ್ನು ಬಣ್ಣಿಸುವುದಕ್ಕಾಗಿ ಬಳಸಿಕೊಂಡದ್ದು ವಿಶೇಷ ಸಾಧನೆ. ಈತನ ವೀರೇಶ ಚರಿತೆಯ ಛಂದೋಬಂಧವನ್ನು 'ಉದ್ದಂಡ ಷಟ್ಪದಿ' ಎಂದು ಗುರುತಿಸಲಾಗಿದೆ. ರಾಘವಾಂಕನ ಕಾವ್ಯವು ಭಾವ, ಸನ್ನಿವೇಶಗಳನ್ನು ಕಣ್ಣಿಗೂ ಕಿವಿಗೂ ಕಟ್ಟಿಕೊಡುವಂತಹುದು. ನಿರೂಪಣೆಯ ನಡುವೆಯೇ ಪಾತ್ರಗಳ ಸಂಭಾಷಣೆಗಳನ್ನು ಹಾಗೂ ಪಾತ್ರದ ಒಳ ಮನಸ್ಸಿನ ತುಡಿತಗಳನ್ನು ಹೆಣೆಯುವಲ್ಲಿ ರಾಘವಾಂಕ ಪ್ರಕಟಿಸುವ ಶೈಲಿ ಮನೋಹರವಾದುದು. ಕರುಣಾ ರಸ ಪ್ರಧಾನವಾದ ಹರಿಶ್ಚಂದ್ರ ಕಾವ್ಯ, ರಾಘವಾಂಕನ ಕೃತಿಗಳಲ್ಲಿ ಹೆಚ್ಚು ಲೋಕಪ್ರಿಯವಾದುದು.

'ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು' ಎಂದು ಶ್ರುತಿ ಸಾರುವ ವಾಕ್ಯವನ್ನು ಮೂರು ಲೋಕಕ್ಕೆ ತೋರಿದ ಹರಿಶ್ಚಂದ್ರ ಭೂಪತಿಯ ಪುರಾಣ ಕಥೆ ಈ ಕಾವ್ಯದ ವಸ್ತು. ಆಡುವ ಮಾತು, ನಡೆಸುವ ಕ್ರಿಯೆ, ಸತ್ಯಕ್ಕೆ ಸದಾ ಬದ್ಧವಾಗಿರಬೇಕು ಎನ್ನುವ ಹರಿಶ್ಚಂದ್ರನನ್ನು ಪರೀಕ್ಷಿಸಬೇಕೆಂದು ವಿಶ್ವಾಮಿತ್ರ ಹೂಡುವ ನಾನಾ ತಂತ್ರಗಳು ಚಿತ್ತವೇದಕವಾಗಿವೆ. ಹರಿಶ್ಚಂದ್ರನನ್ನು ಮಾತಿನಲ್ಲಿ ಸಿಲುಕಿಸಿ ಅವನಿಂದ ರಾಜ್ಯವನ್ನೇ ಕಸಿದುಕೊಂಡ ವಿಶ್ವಾಮಿತ್ರ, ದಕ್ಷಿಣೆ ಹಣ ತರಲು ಆಗ್ರಹಿಸಿ ರಾಜ್ಯ ಭ್ರಷ್ಟಗೊಳಿಸುತ್ತಾನೆ. ಸತಿ–ಸುತರ ಸಮೇತ ಕಾಶೀಪುರಕ್ಕೆ ದೇಸಿಗನಾಗಿ ಬಂದ ಹರಿಶ್ಚಂದ್ರರಾಯ ಅವರನ್ನು ವಿಪ್ರನೊಬ್ಬನ ಮನೆಯ ಕೆಲಸಕ್ಕಾಗಿ ಮಾರಿ, ತಾನು ಸ್ಮಶಾನ ಕಾಯುವ ಆಳಾಗುತ್ತಾನೆ. ಸತ್ಯ ವಚನಕ್ಕೆ ವಿಮುಖನಾಗದಿರುವ ಪತಿಯ ವ್ರತವನ್ನು ರಾಣಿ ಚಂದ್ರಮತಿ ಹಾಗೂ ಸುತ ಲೋಹಿತಾಶ್ವ ತ್ರಿಕರಣ ಪೂರ್ವಕ ಒಪ್ಪಿಕೊಂಡು ಅನ್ಯರ ಆಳಾಗಿ, ತೊಂದರೆ ತಾಪತ್ರಯಗಳನ್ನೆದು–ರಿಸುತ್ತಾರೆ.

ಎಂದಿನಂತೆ ಹುಲ್ಲು, ಕಟ್ಟಿಗೆ ತರಲು ಕಾಡಿಗೆ ಬಂದ ಲೋಹಿತಾಶ್ವ, ಕೋಪಿಷ್ಟ ಮನೆಯೊಡೆಯನ ಮನಸ್ಸನ್ನು ಸುಪ್ರಸನ್ನಗೊಳಿಸಬೇಕೆಂಬಾಸೆಯಿಂದ ಹಾವಿನ ಹುತ್ತದ ಮೇಲೆ ಬೆಳೆದಿದ್ದ ದರ್ಭೆಯನ್ನು ಕೊಯ್ಯುವಾಗ ಸರ್ಪ ಕಚ್ಚಿ ಸಾಯುತ್ತಾನೆ. ಸಂಜೆ ಕವಿದರೂ ಮಗ ಹಿಂದಿರುಗದಿದ್ದಾಗ ಚಂದ್ರಮತಿ, ಕಾತರ, ಕಳವಳಗಳ ಕ್ಷಣಗಳನ್ನೆಣಿಸುತ್ತಲೇ ಕರ್ತವ್ಯ ಪ್ರಜ್ಞೆಯಿಂದ ಒಡೆಯನ ಮನೆಯ ಕೆಲಸ ನಿರ್ವಹಿಸುತ್ತಾಳೆ. ಮನೆಯವರಿಗಂಜಿ ಅಳುಕಿ ಕಾರ್ಯತತ್ಪರಳಾದ ತಾಯಿಗೆ, ಲೋಹಿತಾಶ್ವ ದುರ್ಮರಣಕ್ಕೆ ಈಡಾದ ಸುದ್ದಿ ತಲುಪಿದಾಗ ಆಕೆಯ ಸಂಕಟ, ಚಡಪಡಿಕೆ ತೀವ್ರವಾಗುತ್ತದೆ. ಅನುಕಂಪಕ್ಕೆ ವ್ಯತಿರಿಕ್ತವಾದ ಒಡೆಯನ ನಿರ್ದಯ ಪ್ರತಿಕ್ರಿಯೆ, ಸಹಾಯ, ಸಹಾನುಭೂತಿಗಳಿಲ್ಲದೆ ಕತ್ತಲಲ್ಲಿ ಕಾಡಿಗೆ ಧಾವಿಸುವುದು, ಶವ ಹುಡುಕುವ ಧಾವತಿ, ಶವ ಸಿಕ್ಕಾಗ ಏಕಾಂಗಿಯಾದ ತಾಯಿ ಹೃದಯ ವ್ಯಕ್ತ ಪಡಿಸುವ ಅನಾಥ ಪ್ರಜ್ಞೆಯ ಅಳಲು – ಹೀಗೆ ಸತ್ತು ಹುಟ್ಟುವ ದ್ವಂದ್ವಗಳು ಆಕೆಯನ್ನೊಳಗೊಂಡ ಹ–ರಿಶ್ಚಂದ್ರರಾಯನ ಸತ್ಯ ಧರ್ಮದ ಮೌಲ್ಯ ಪರೀಕ್ಷೆಯ ಪರಾಕಾಷ್ಠೆಯ ಸ್ಥಿತಿ. ರಾಘವಾಂಕನ ಮಾನವೀಯ ಪ್ರಜ್ಞೆ ಈ ಸನ್ನಿವೇಶದ ಚಿತ್ರಣದಲ್ಲಿ ತೊಡಗಿದ ಬಗೆ, ಸೂಕ್ಷ್ಮ ಮತ್ತು ಸಂವೇದನಾ ಶೀಲ. ಸತ್ಯದ ನಿಷ್ಠುರ ವ್ರತಾಚರಣೆಯ ಒಂದು ದಾರುಣ ಪ್ರಸಂಗ ಇಲ್ಲಿ ಚಿತ್ರಿತವಾಗಿದೆ.

ಪದಗಳ ಅರ್ಥ

1. ಹುಲುಹುಳ್ಳಿ–ಹುಲ್ಲು, ಪುರುಳೆ; ಅಡುಗಬ್ಬ–ಕಟ್ಟಿಗೆ, ಸೌದೆ; ಜವಗುಂದು–ಶಕ್ತಿ ಕುಂದು, ವೇಗ ಕಡಿಮೆಯಾಗು; ಬೆಮರುಗೆ–ಬೆವರು ಹೊಮ್ಮು, ಬೆವರು ಸುರಿ; ಹರಿತಪ್ಪು–ವೇಗವಾಗಿ ಬರು; ಹಲವಂದ–ಹಲವು ರೀತಿ.

12th_Kannada_Reader_8.indd 166 22-05-2019 15:39:49

2. ಕೆಲ–ಪಕ್ಕ; ಮೆಳೆ–ದಟ್ಟವಾಗಿ ಬೆಳೆದ ಗಿಡಗಳ ಗುಂಪು; ಕಂಗಳವಟ್ಟು–ಕಣ್ಣಿಗೆ ಕಾಣಿಸುವುದು; ಎಳಸು–ಬಯಸು; ಕೊನೆವಾಯ್ದ–ಚಿಗುರಿದ; ದರ್ಭೆ–ಹುಲ್ಲು, ಗರಿಕೆ ಹುಲ್ಲು; ಅಸ್ತಾದ್ರಿ–ಸೂರ್ಯ ಮುಳುಗುವ ಬೆಟ್ಟ, ಪಶ್ಚಿಮ ದಿಕ್ಕು; ಮಾರ್ತಾಂಡ–ಸೂರ್ಯ; ಸಾರ್ದ–ಸಮೀಪಿಸಿದ.

3. ಹೊದೆಗಡಿ–ಪೊದೆಯನ್ನು ಕಡಿ; ಹುಲ್ಲು ಹೊದರ–ಹುಲ್ಲಿನ ಹೊರೆ, ಪಿಂಡಿ; ಹರಿದು–ಕತ್ತರಿಸಿ; ಕೈಯ ಹದರ–ಮಣಿಕಟ್ಟು; ಮದಮುದಿತ ರಾಹುಗ್ರಸ್ತ–ಸೊಕ್ಕಿನಿಂದ ಬೀಗಿದ ರಾಹು ಹಿಡಿದ; ಒಡೆ–ಬಿರಿ, ಸೀಳು, ಒಡೆದು ಹೋಗು; ಕೆಡೆ–ಬೀಳು; ತರುಣೇಂದು–ಎಳೆಯ ಚಂದಿರ.

4. ಕೆಡೆ–ಬೀಳು; ಒಡನಿರ್ದ–ಜೊತೆಯಲ್ಲಿದ್ದ; ತತ್ತುಕಂಗಳು–ಹುಡುಗರು, ಜೊತೆಗಿದ್ದ ಗೆಳೆಯರು; ಬಾಯಬಿಟ್ಟು–ಕೂಗಿ, ಕರೆದು; ಮುರುಟು–ಮುದುಡು, ಬಾಡು; ಕುಲದ ಕುಡಿ–ಸೂರ್ಯ ಕುಲದವನು, ಪುತ್ರ, ಮಗ; ಉಮ್ಮಳಂಬೆತ್ತು–ದುಃಖಿತನಾಗಿ.

5. ತನಯ–ಮಗ; ಬಪ್ಪ–ಬರುವ; ತಳುವು–ತಡ ಮಾಡು; ಬಸುರಂ ಹೊಸೆದು–ಹೊಟ್ಟೆಯನ್ನು ಹೊಸೆಯುತ್ತಾ; ಸುಯ್ಯುತ್ತ–ನಿಟ್ಟುಸಿರು ಬಿಡುತ್ತ; ಕೆಟ್ಟು ದಟ್ಟಿಸು–ಬೈದು ಬೆದರಿಸು.

6. ಪೊರಮಟ್ಟಡೆ–ಹೊರಗೆ ಹೋದರೆ; ಒಯ್ಯನೆ–ಒಂದೇ ಸಮನೆ, ದೀರ್ಘವಾಗಿ, ಬೇಗಬೇಗ, ಶೀಘ್ರ; ಹಲುಬು–ಪ್ರಲಾಪಿಸು; ಮರೆದಿರೆ–ಮೈಮರೆತರೆ; ಬಿಸು ಸುಯ್ಯೆ–ನಿಟ್ಟುಸಿರು ಬಿಡಲು; ಮಾನಿನಿ–ಸ್ತ್ರೀ, ಮಹಿಳೆ.

7. ಬಸವಳಿದು–ಆಯಾಸಹೊಂದಿ, ಶಕ್ತಿಗುಂದಿ; ಕೆಡದಿರು–ಬಿದ್ದುಹೋಗು; ಕೀಳಿಲೊಳು–ಗೂಟಕ್ಕೆ.

8. ಹೊಲುಬುಗೆಡು–ದಾರಿತಪ್ಪು, ದಿಕ್ಕುತಪ್ಪು; ಗಿಡುವು–ಪೊದೆ; ಸಂಕುಲ–ಗುಂಪು; ಫಣಿ–ಫಣ(ಹೆಡೆ)ಉಳ್ಳದ್ದು, ನಾಗರಹಾವು; ಅಂಗಣ–ಅಂಗಳ, ಮನೆಯ ಮುಂಭಾಗ; ಹೊಡೆಕರಿಸಿದಳಲ ಕರ್ಬೊಗೆ–ಸಂಕಟದ ಉರಿ ತುಂಬಿದ ಕಪ್ಪು ಹೊಗೆ, ಕಪ್ಪಾದ ಹೊಗೆಯಂತೆ ಆವರಿಸಿದ ದುಃಖ; ಗಿಡು–ಗಿಡಗಳು; ಅದ್ದು–ಮುಳುಗು.

9. ಬಟ್ಟೆ–ದಾರಿ, ಹಾದಿ; ಗಿರಿಕ್–ಗಾಳಿಯಿಂದ ಎಲೆ ಅಲುಗುವ ಶಬ್ದ, ಅನುಕರಣ ಪದ; ಐತಂದು–ಬಂದು; ಉಗ್ರಫಣಿ–ಉಗ್ರವಾದ ಹಾವು, ಭಯಂಕರವಾದ ಹಾವು; ತಿಂದು–ಕಚ್ಚಿ.

10. ಅಕ್ಕಟಾ–ಅಯ್ಯೋ; ಠಾವು–ಸ್ಥಳ, ತಾವು, ಜಾಗ; ಅಗಿ–ಕಚ್ಚು; ಭಲ್ಲುಕ–ಕರಡಿ; ಜಂಬುಕ–ನರಿ; ಘೂಕ–ಗೂಗೆ, ಗೂಬೆ; ವೃಕ–ತೋಳ.

11. ಅಡಿ–ಪಾದ, ಕಾಲು; ಕೆಡೆದು–ಬಿದ್ದು; ಬಾಯ್ವಿಡುತ–ಜೋರಾಗಿ ಅಳುತ್ತಾ; ಕೆಡೆನುಡಿ–ಕೆಟ್ಟ ಮಾತಾಡು; ಬಂಟ–ನಿಷ್ಠಾವಂತ ಸೇವಕ; ಅರಿದು–ಅಸಾಧ್ಯ; ಅಳವಡಿಸಿ–ಹತ್ತಿಕ್ಕಿ; ಅರಸಿಸೈ–ಹುಡುಕಿಸು.

12. ದಹಿಸು–ಸುಡು, ಶವಸಂಸ್ಕಾರ; ದುರ್ಮರಣ–ಕೆಟ್ಟಮರಣ, ಅಸಹಜ ಸಾವು; ಆನಾದಡಂ–ನಾನಾದರೂ; ಹರಿಯದಿರ್ದುದ–ಇನ್ನೂ ಮಾಡಬೇಕಾದುದನ್ನು, ಉಳಿದಿರುವ ಕೆಲಸವನ್ನು; ಎಯ್ದೆಗೆಯ್ದು–ಸರಿಯಾಗಿ ಕೆಲಸ ಮುಗಿಸಿ; ಚಚ್ಚರ–ಕಾಳಜಿಯಿಂದ, ಬೇಗನೆ; ಕಜ್ಜ–ಕಾರ್ಯ, ಕೆಲಸ.

13. ಎಡಹಿದ–ಎಡವಿದ; ದರಿ–ಹಳ್ಳ; ಹುಲುವಟ್ಟೆ–ಹುಲ್ಲಿನ ಹಾದಿ, ಹುಳ್ಳಿಹೊರೆ–ತುಂಡು ಕಟ್ಟಿಗೆಯ ಹೊರೆ, ಚಕ್ಕೆ; ಮಡಿಲಿರಿದ–ವ್ಯಾಪಿಸಿದ; ಕಾಳ–ಕಪ್ಪು, ಕತ್ತಲೆ.

14. ಈಯೆಡೆ–ಈ ಸ್ಥಳ, ಈ ಜಾಗ; ಮಾಣನ್–ಬಿಡಲಾರ; ಎಡೆ–ಸ್ಥಳ; ಒರಲು–ಅಳು, ದುಃಖಿಸು.

15. ಸಿರಿ–ಸಂಪತ್ತು; ಮರುಕ–ದುಃಖ; ಅರಿಯದ–ತಿಳಿಯದ; ತೊತ್ತಾದ ಭಂಗ–ಸೇವಕತನದ ಅವಮಾನ; ಅಜ್ಞಾತ–ಎಲ್ಲಿರುವನೆಂಬುದೇ ತಿಳಿಯದ; ಕರಕರಿಪ ದುಃಖ–ಕಿರುಕುಳದಿಂದಾದ ನೋವು; ತರಳ–ಬಾಲಕ, ಹುಡುಗ; ಗೋಣಂ–ಕುತ್ತಿಗೆಯನ್ನು.

16. ಲಜ್ಜೆಗೆಟ್ಟು–ನಾಚಿಕೆಬಿಟ್ಟು, ನಾಚಿಕೆಯಿಲ್ಲದೆ; ಧಾವತಿಗೊಳ್ಳು–ಸಂಕಟಪಡು; ಆರ್ಜಿಸಿ–ಸಂಪಾದಿಸಿ; ಆರ್ತರ ಮೋಹ–ಕಷ್ಟಕ್ಕೆ ಗುರಿಯಾಗಿದ್ದರೂ ಉತ್ಕಟ ಇಚ್ಛೆ; ಉಗ್ರಾಹಿ–ಘೋರ ಸರ್ಪ; ಪೇಳ್ವೆನೆ–ಹೇಳುವೆನೇ?; ಇಂದುಮುಖಿ–ಚಂದ್ರನಂತಹ ಮುಖವುಳ್ಳವಳು.

12th_Kannada_Reader_8.indd 167 22-05-2019 15:39:49

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಲೋಹಿತಾಶ್ವ ಕಾಡಿಗೆ ಹೋದುದೇಕೆ ?
2. ದರ್ಭೆಯನ್ನು ಕೊಯ್ದು ಯಾರಿಗೆ ಕೊಡಬೇಕೆಂದು ಲೋಹಿತಾಶ್ವ ಯೋಚಿಸಿದನು?
3. ಲೋಹಿತಾಶ್ವನ ದುರ್ಮರಣಕ್ಕೆ ಜೊತೆಗಾರ ಹುಡುಗರು ಹೇಗೆ ಪ್ರತಿಕ್ರಿಯಿಸಿದರು?
4. ಕವಿದ ಕತ್ತಲೆಯೊಳಗೆ ಚಂದ್ರಮತಿ ಹೇಗೆ ನಿಂತಿದ್ದಳು?
5. ಕಾಡಿನಿಂದ ಬಂದ ಹುಡುಗ ಚಂದ್ರಮತಿಗೆ ಯಾವ ಸುದ್ದಿ ಕೊಟ್ಟನು?
6. ಮಗನನ್ನು ಏನಾಗುವ ಮುನ್ನ ದಹಿಸಬೇಕೆಂದು ತಾಯಿ ಒಡೆಯನಿಗೆ ಹೇಳಿದಳು?
7. ಚಂದ್ರಮತಿ ಮಗನ ಶವವನ್ನು ಗುರುತಿಸಿದ್ದು ಹೇಗೆ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಲೋಹಿತಾಶ್ವ ಕಾಡಿಗೆ ಹೇಗೆ ಬಂದನು?
2. ಲೋಹಿತಾಶ್ವ ದರ್ಭೆಯನ್ನು ಕಂಡಾಗ ಏನೆಂದುಕೊಂಡನು?
3. ಪಡುವಣ ಕಡಲೊಳು ರವಿ ಬಿದ್ದುದೇಕೆಂದು ಕವಿ ಹೇಳುತ್ತಾನೆ?
4. ಕಾಡಿನಿಂದ ಲೋಹಿತಾಶ್ವ ಬರದಿದ್ದಾಗ ಚಂದ್ರಮತಿ ಏನೆಂದು ಚಿಂತಿಸಿದಳು?
5. ಬೀದಿಗರುವಿನಂತಹ ಮನಸ್ಥಿತಿಯಲ್ಲಿ ಚಂದ್ರಮತಿ ಏನು ಮಾಡಿದಳು?
6. ಮಗನ ಸಾವಿನ ಸುದ್ದಿ ತಂದವನಿಗೆ ಚಂದ್ರಮತಿ ಏನೆಂದು ಕೇಳಿದಳು?
7. ಮಗನನ್ನು ಅರಸುತ್ತಾ ಚಂದ್ರಮತಿ ಕಾಡಿಗೆ ಬಂದುದು ಹೇಗೆ ?
8. ಚಂದ್ರಮತಿ ಕಾಡಿನಲ್ಲಿ ಮಗನನ್ನು ಹೇಗೆ ಕರೆದಳು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಲೋಹಿತಾಶ್ವನು ದುರ್ಮರಣ ಹೊಂದಿದ ಸಂದರ್ಭವನ್ನು ವಿವರಿಸಿ?
2. ಮನೆಯವರು ತನ್ನನ್ನು ಯಾವ ಯಾವ ರೀತಿಯಲ್ಲಿ ಆಕ್ಷೇಪಿಸುವರೆಂದು ಚಂದ್ರಮತಿ ಆತಂಕಪಟ್ಟಳು.
3. ಕಾಡಿನಲ್ಲಿ ಮಗನಿಗೆ ಏನಾಗಿರಬಹುದೆಂದು ಚಂದ್ರಮತಿ ಕಲ್ಪಿಸಿಕೊಂಡಳು?
4. ಲೋಹಿತಾಶ್ವನ ಮರಣದ ಸುದ್ದಿ ತಿಳಿದಾಗ ಚಂದ್ರಮತಿ ಒಡೆಯನಲ್ಲಿ ನಿವೇದಿಸಿದ್ದೇನು? ಅದಕ್ಕೆ ಅವನು ಏನು ಹೇಳಿದನು?
5. ಲೋಹಿತಾಶ್ವನ ಶವವನ್ನು ಕಂಡಾಗ ಚಂದ್ರಮತಿ ಹೇಗೆ ಪ್ರಲಾಪಿಸಿದಳು?
6. ತಾಯಿಯ ಆತಂಕ, ತಲ್ಲಣಗಳು ರಾಘವಾಂಕನ ಈ ಕಾವ್ಯ ಭಾಗದಲ್ಲಿ ಹೇಗೆ ಮೂಡಿದೆ. ವಿವರಿಸಿ.

ಭಾಷಾಭ್ಯಾಸ

1. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಅಡವಿ, ಭೂತ, ಕುಮಾರ, ನಿದ್ದೆ, ಕಜ್ಜ, ಘೂಕ, ರಾಯ, ಸಿರಿ.

2. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಹೊರೆಗಟ್ಟಿ, ನಡೆಗೆಟ್ಟು, ಬಾಯಾರಿ, ಬೆರಗಾಗಿ, ಕತ್ತಲೆಯೊಳಗೆ, ಬೀದಿಗರು, ಕಾಳೋರಗ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ತಂದೆ, ವಿಷ, ದುಃಖ, ರೌದ್ರ, ಚಿಂತೆ.

4. ಕೆಳಗಿನ ಪದಗಳ ವಿಗ್ರಹ ವಾಕ್ಯ ಮಾಡಿ, ಸಮಾಸದ ಹೆಸರನ್ನು ತಿಳಿಸಿ.

ಕೈಕಾಲು, ಕರ್ಬೊಗೆ, ನಡುವಿರುಳು, ಹೆಮ್ಮರ, ಇಂದುಮುಖಿ.

ಚಟುವಟಿಕೆ

1. ಚಂದ್ರಮತಿ ಮತ್ತು ಮನೆಯೊಡೆಯನ ನಡುವೆ ನಡೆದ ಸಂಭಾಷಣೆಯನ್ನು ಹೊಸಗನ್ನಡದಲ್ಲಿ ಬರೆಯಿರಿ.

12th_Kannada_Reader_8.indd 168 22-05-2019 15:39:49

ಘಟಕ ಎಂಟು

ಸಾವಿತ್ರಿ

– ಎ.ಆರ್.ಕೃಷ್ಣಶಾಸ್ತ್ರಿ



ರಾಮಾಯಣ, ಮಹಾಭಾರತ, ಪುರಾಣ ಕಥೆಗಳಲ್ಲಿ ಬರುವ ಮಹಾಪತಿವ್ರತೆಯರಾದ ಸೀತೆ, ದ್ರೌಪದಿ, ಅರುಂಧತಿ, ಮಂಡೋದರಿಯರು ಬಹಳ ಪ್ರಖ್ಯಾತರಾದವರು. ಅವರಲ್ಲಿ ಸತಿ ಸಾವಿತ್ರಿಯೂ ಸಹ ಬಹಳ ಮುಖ್ಯವಾದ ಪತಿವ್ರತೆಯಾಗಿದ್ದಾಳೆ. ಇವಳು ಮಧ್ಯದೇಶದ ದೊರೆ ಅಶ್ವಪತಿಯ ಮಗಳು. ಇವಳು ಸಾಳ್ವದೇಶದ ದ್ಯುಮತ್ಸೇನನ ಮಗ ಸತ್ಯವಂತನನ್ನು ವಿವಾಹವಾಗುತ್ತಾಳೆ. ಅವನು ಅಲ್ಪಾಯುಷಿಯಾಗಿದ್ದನು. ಪತಿ ಸಾಯಲು ನಾಲ್ಕು ದಿನಗಳಿರುವಾಗ ಅವಳು ಕಠಿಣ ವ್ರತ ಕೈಗೊಳ್ಳುತ್ತಾಳೆ. ಹೆಗಲ ಮೇಲೆ ಕೊಡಲಿ ಹಾಕಿಕೊಂಡು ಕಾಡಿಗೆ ಹೊರಟ ಪತಿಯನ್ನು ಅನುಸರಿಸುತ್ತಾಳೆ. ಅವರಿಬ್ಬರೂ ಕಾಡಿಗೆ ಹೊರಟಾಗ ಆಯಸ್ಸು ಮುಗಿದ ಕಾರಣ ಯಮನು ಸತ್ಯವಂತನನ್ನು ಕರೆದುಕೊಂಡು ಹೋಗುವಾಗ ಸಾವಿತ್ರಿಯೂ ಸಹ ಯಮನ ಜೊತೆಯಲ್ಲಿ ಹೊರಟು ತನ್ನ ಜಾಣತನದ ಮಾತುಗಳಿಂದ ಯಮನ ಮನಸ್ಸನ್ನು ಗೆದ್ದು ತನ್ನ ಪತಿಯನ್ನು ಜೀವಂತ ಪಡೆಯುತ್ತಾಳೆ.



12th_Kannada_Reader_8.indd 169 22-05-2019 15:39:49

ಅತ್ತೆ ಮಾವಂದಿರು ಅನುಮತಿ ಕೊಡಲು ಸಾವಿತ್ರಿಯು ಮೇಲೆ ಸಂತೋಷದಿಂದ ನಗುತ್ತಾ, ಒಳಗೆ ಹೃದಯದಲ್ಲಿ ನೋಯುತ್ತಾ ಗಂಡನೊಡನೆ ಹೊರಟಳು. ಎಲ್ಲೆಲ್ಲಿ ನೋಡಿದರೂ ಸುತ್ತಮುತ್ತ ಚಿತ್ರವಿಚಿತ್ರವಾದ ಸುಂದರವಾದ ಕಾಡು! ಅದರಲ್ಲಿ ನವಿಲುಗಳ ಕೂಗು; ಪುಣ್ಯನದಿಗಳು; ಹೂಬಿಟ್ಟ ಮರಗಳು. ಅವುಗಳನ್ನು ನೋಡೆಂದು ಸತ್ಯವಂತನು ಮಧುರವಾದ ಮಾತುಗಳಿಂದ ಹೇಳುತ್ತಾ, ತೋರಿಸುತ್ತಾ ಹೋಗುತ್ತಿದ್ದನು. ಅವಳು ಪ್ರತಿಕ್ಷಣವೂ ಅವನ ಸ್ಥಿತಿಯನ್ನೇ ನೋಡುತ್ತಾ ಅವನ ಹಿಂದೆ ಮೆಲ್ಲಮೆಲ್ಲಗೆ ಹೋಗುತ್ತ ನಾರದ ಮುನಿಯು ಹೇಳಿದ ಘಳಿಗೆ ಬಂದ ಕೂಡಲೇ ಇನ್ನೇನು ತನ್ನ ಪತಿಯು ಸತ್ತನೆಂದುಕೊಂಡಳು. ಹೃದಯವು ಎರಡು ಪಾಲಾದಂತಾಯಿತು. ಕಾಲನನ್ನು ಎದುರು ನೋಡುತ್ತಿದ್ದಳು.

ಗಂಡ–ಹೆಂಡಿರಿಬ್ಬರೂ ಹಣ್ಣುಗಳನ್ನು ಕುಯ್ದು ಕಟ್ಟಿದರು; ಸತ್ಯವಂತನು ಸೌದೆಯನ್ನು ಸೀಳುತ್ತಿರಲು ಮೈಯೆಲ್ಲಾ ಬೆವರಿತು. ತಲೆ ನೋಯುವುದಕ್ಕೆ ಮೊದಲಾಯಿತು. ಆದ್ದರಿಂದ ಅದನ್ನು ಬಿಟ್ಟು ಸಾವಿತ್ರಿಯ ಬಳಿಗೆ ಹೋಗಿ, 'ಸಾವಿತ್ರಿ! ತಲೆ ಮೈ ಕೈ ಎಲ್ಲ ನೋಯುತ್ತಿದೆ. ಎದೆಯಲ್ಲಿ ಏನೋ ಸಂಕಟವಾಗುತ್ತಿದೆ. ತಲೆಗೆ ಶೂಲ ಹಾಕಿ ಇರಿದಂತಾಗುತ್ತಿದೆ. ಮೈಗೆ ಸ್ವಸ್ಥವಿಲ್ಲ. ನಿಲ್ಲುವುದಕ್ಕಾಗುತ್ತಿಲ್ಲ. ಮಲಗಿಕೊಳ್ಳೋಣವೆನ್ನಿಸುತ್ತದೆ' ಎಂದನು. ಸಾವಿತ್ರಿಯು ಅವನನ್ನು ಒರಗಿಸಿ, ಕರೆದುಕೊಂಡು ಬಂದು ತನ್ನ ತೊಡೆಯ ಮೇಲೆ ತಲೆಯಿಟ್ಟು ಮಲಗಿಸಿದಳು. ನಾರದನ ಮಾತೂ ಅವನು ಹೇಳಿದ ಘಳಿಗೆಯೂ ಮನಸ್ಸಿಗೆ ಬಂತು. ಮತ್ತೊಂದು ಕ್ಷಣದಲ್ಲಿ ಸತ್ಯವಂತನ ಹತ್ತಿರ ಒಬ್ಬ ವ್ಯಕ್ತಿಯು ನಿಂತದ್ದು ಕಂಡಿತು. ಅವನು ಆಜಾನುಬಾಹುವಾಗಿ ಸೂರ್ಯನಂತೆ ತೇಜಸ್ವಿಯಾಗಿದ್ದನು. ತಲೆಯಲ್ಲಿ ಕಿರೀಟವೂ, ಕೈಯಲ್ಲಿ ಪಾಶವೂ ಇತ್ತು. ಮೈ ಕಪ್ಪಾಗಿಯೂ ಕಣ್ಣು ಕೆಂಪಾಗಿಯೂ, ನೋಡಿದರೆ ಹೆದರಿಕೆಯಾಗುತ್ತಿತ್ತು. ಸಾವಿತ್ರಿಯು ಅವನನ್ನು ನೋಡಿದ ಕೂಡಲೇ ಗಂಡನ ತಲೆಯನ್ನು ಮೆಲ್ಲಗೆ ನೆಲದ ಮೇಲಿರಿಸಿ, ಛಟ್ಟನೆದ್ದು ಹೃದಯವು ತಲ್ಲಣಿಸುತ್ತಿರಲು, ಕೈ ಮುಗಿದುಕೊಂಡು ಆರ್ತಳಾಗಿ, 'ಸ್ವಾಮಿ! ನೀನು ಯಾವುದೋ ದೇವತೆಯಾಗಿರಬೇಕು. ಇದು ಮನುಷ್ಯ ರೂಪವಲ್ಲ! ನೀನು ಯಾರು? ಏನು ಮಾಡಬೇಕೆಂದು ಬಂದಿದ್ದೀಯೆ ಹೇಳು?' ಎಂದು ಕೇಳಿದಳು. ಅವನು, 'ಸಾವಿತ್ರಿ! ನೀನು ಪತಿವ್ರತೆ ಮತ್ತು ತಪಸ್ವಿನಿ. ಆದ್ದರಿಂದ ನಿನಗೆ ಉತ್ತರ ಕೊಡುತ್ತೇನೆ. ನಾನು ಯಮ. ನಿನ್ನ ಗಂಡನ ಆಯಸ್ಸು ಮುಗಿಯಿತು. ಆದ್ದರಿಂದ ಅವನನ್ನು ಪಾಶದಿಂದ ಕಟ್ಟಿ ತೆಗೆದುಕೊಂಡು ಹೋಗುತ್ತೇನೆ. ಇದೇ ನಾನು ಬಂದ ಉದ್ದೇಶ. ಈತನು ಧರ್ಮವಂತ, ರೂಪವಂತ, ಗುಣವಂತ; ಆದ್ದರಿಂದ ನನ್ನ ದೂತರು ಕರೆತರುವುದು ತರವಲ್ಲವೆಂದು ನಾನೇ ಬಂದಿದ್ದೇನೆ! ಎಂದು ಸತ್ಯವಂತನ ದೇಹದಿಂದ ಹೆಬ್ಬೆರಳ ಗಾತ್ರದ ಜೀವವನ್ನು ಪಾಶದಲ್ಲಿ ಎಳೆದು ಕಟ್ಟಿದನು. ಸತ್ಯವಂತನ ಪ್ರಾಣ ಹೋಯಿತು; ಶ್ವಾಸ ನಿಂತಿತು; ಮುಖ ಕಳೆಗೆಟ್ಟಿತು. ಮೈ ಚಲಿಸುವುದು ನಿಂತು ನೋಡುವುದಕ್ಕೆ ವಿಕಾರವಾಯಿತು; ಅವನನ್ನು ಕಟ್ಟಿ ತೆಗೆದುಕೊಂಡು ಯಮನು ದಕ್ಷಿಣದ ಕಡೆಗೆ ಹೊರಟನು. ಸಾವಿತ್ರಿಯೂ ದುಃಖಾರ್ತಳಾಗಿ ಅವನ ಹಿಂದೆಯೇ ಹೊರಟಳು. ಅವಳು ಪತಿವ್ರತೆ, ಮಹಿಮಾವಂತೆ; ವ್ರತ ನಿಯಮಾದಿಗಳನ್ನು ನಡೆಸಿ ಸಿದ್ಧಿಪಡೆದವಳು. ಆದ್ದರಿಂದ ಅದು ಸಾಧ್ಯವಾಯಿತು. ಅವಳನ್ನು ನೋಡಿ ಯಮನು, 'ಹಿಂದಿರುಗಿ ಹೋಗು ಸಾವಿತ್ರಿ! ಅವನಿಗೆ ಉತ್ತರ ಕ್ರಿಯೆಗಳನ್ನು ಮಾಡು; ಎಷ್ಟು ದೂರ ನಿನ್ನ ಗಂಡನನ್ನು ಅನುಸರಿಸಬಹುದು, ಅಷ್ಟು ದೂರ ಅನುಸರಿಸಿದೆ. ಇನ್ನು ಅವನ ಋಣ ಹರಿಯಿತು!' ಎಂದನು.

ಸಾವಿತ್ರಿ: ನನ್ನ ಗಂಡನು ಎಲ್ಲಿ ಹೋಗುತ್ತಾನೋ, ಅಥವಾ ಎಲ್ಲಿಗೆ ಅವನನ್ನು ಕರೆದುಕೊಂಡು ಹೋಗುತ್ತಾರೋ ನಾನೂ ಅಲ್ಲಿಗೆ ಹೋಗಬೇಕಾದದ್ದು ನನ್ನ ಧರ್ಮ. ತಪಸ್ಸು, ಗುರು ಹಿರಿಯರ ಸೇವೆ, ಗಂಡನ ಪ್ರೀತಿ ಮತ್ತು ನಿನ್ನ ಅನುಗ್ರಹ ಇವುಗಳ ಬಲದಿಂದ ಹೋಗಲು ನನಗೆ ತಡೆಯೇನೂ ಇಲ್ಲ. ಅಲ್ಲದೆ ಏಳು ಹೆಜ್ಜೆ ಜೊತೆಯಾಗಿ ಹೋದರೆ ಅಂತಹವರು ಸ್ನೇಹಿತರಾಗುತ್ತಾರೆ ಎಂದು ತಿಳಿದವರು ಹೇಳುತ್ತಾರೆ; ನೀನು ಹೀಗೆ ಸ್ನೇಹಿತನಾದ್ದರಿಂದ ಒಂದೆರಡು ಮಾತನ್ನು ಹೇಳುತ್ತೇನೆ, ಆಲಿಸು! ಕಾಡಿನಲ್ಲಿದ್ದುಕೊಂಡು ಪಾಡು ಪಟ್ಟು ತಪಸ್ಸು ಮಾಡುವುದು ಆತ್ಮಜ್ಞಾನಕ್ಕಾಗಿ. ಆ ಜ್ಞಾನದಿಂದ ಬರುವುದು ಧರ್ಮ. ಆದ್ದರಿಂದಲೇ ಸಜ್ಜನರು ಧರ್ಮವೇ ದೊಡ್ಡದೆಂದು ಹೇಳುತ್ತಾರೆ. ಅವರ ಅಭಿಪ್ರಾಯದಲ್ಲಿ ಧರ್ಮ ಒಂದರಿಂದಲೇ ಎಲ್ಲರೂ ಉತ್ತಮ ಗತಿಯನ್ನು ಪಡೆದಿದ್ದಾರೆ. ಆದ್ದರಿಂದ ನನಗೂ ಅದನ್ನು ಬಿಟ್ಟು, ಮತ್ತೊಂದರ ಮೇಲೋ ಮೂರನೆಯದರ ಮೇಲೋ ಇಷ್ಟವಿಲ್ಲ.

12th_Kannada_Reader_8.indd 170 22-05-2019 15:39:49

ಯಮ: ಸಾವಿತ್ರಿ! ನಿನ್ನ ಮಾತನ್ನು ಕೇಳಿ ನನಗೆ ಸಂತೋಷವಾಯಿತು. ಅದರ ಒಂದೊಂದು ಅಕ್ಷರವೂ ನಿರೂಪಣೆಯೂ ಅಷ್ಟು ಚೆನ್ನಾಗಿದೆ. ಇವನ ಜೀವವೊಂದನ್ನು ಬಿಟ್ಟು ನಿನಗೆ ಮತ್ತೇನು ವರ ಬೇಕೋ ಕೇಳು ಕೊಡುತ್ತೇನೆ.

ಸಾವಿತ್ರಿ: ಹಾಗಾದರೆ ರಾಜ್ಯ ಭ್ರಷ್ಟನಾಗಿ ಕಣ್ಣು ಕಳೆದುಕೊಂಡು ಕಾಡಿಗೆ ಬಂದಿರುವ ನನ್ನ ಮಾವನಿಗೆ ಕಣ್ಣು ಬಂದು, ಬಲ ಪರಾಕ್ರಮಗಳುಂಟಾಗಲಿ.

ಯಮ: ಆಗಲಿ! ನಿನಗೆ ನಡೆದು ಆಯಾಸವಾಗಿರುವಂತೆ ಕಾಣುತ್ತಿದೆ; ಇನ್ನು ಹಿಂತಿರುಗು.

ಸಾವಿತ್ರಿ: ಗಂಡನ ಹತ್ತಿರವಿರುವಾಗ ಆಯಾಸವೆಲ್ಲಿ ಬಂತು? ಗಂಡನೆಲ್ಲಿದ್ದರೆ ಅಲ್ಲಿ ನಾನು ಇರಬೇಕಾದದ್ದು. ನನ್ನ ಗಂಡನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತೀಯೋ ನಾನೂ ಅಲ್ಲಿಗೆ ಬರುತ್ತೇನೆ, ದೇವಶ್ರೇಷ್ಠ! ನನ್ನ ಮತ್ತೊಂದು ಮಾತನ್ನು ಆಲಿಸು. ಸಜ್ಜನರ ಸಹವಾಸ ಒಂದು ಸಾರಿ ದೊರೆತರೆ ಸಾಕು, ಅಲ್ಲಿಂದ ಮುಂದೆ ಅವರು ಮಿತ್ರರಾಗುವರೆಂದು ಹೇಳುತ್ತಾರೆ ಮತ್ತು ಸತ್ಸಂಗವು ಎಂದಿಗೂ ಫಲ ಕೊಡದೆ ಹೋಗುವುದಿಲ್ಲ; ಆದ್ದರಿಂದ ಸತ್ಸಹವಾಸದಲ್ಲಿರಬೇಕು.

ಯಮ: ನೀನು ನನಗೆ ಹೇಳಿದ ಮಾತು, ಮನಸ್ಸಿಗೆ ಹಿತವಾಗಿಯೂ, ಬುದ್ಧಿಗೆ ಚೋದಕವಾಗಿಯೂ ಇದೆ. ಇನ್ನೊಂದು ಸಾರಿ, ನಿನ್ನ ಗಂಡನ ಜೀವವನ್ನು ಹೊರತು ಮತ್ತಾವುದಾದರೂ ವರವನ್ನು ಕೇಳು.

ಸಾವಿತ್ರಿ: ನನ್ನ ಮಾವನು ಕಳೆದುಕೊಂಡ ರಾಜ್ಯವನ್ನು ಪಡೆದು, ಧರ್ಮಾಚರಣೆ ಮಾಡಿಕೊಂಡಿರುವಂತಾಗಲಿ.

ಯಮ: ಆಗಲಿ! ಹೊರಡು, ನಿನಗೆ ಆಯಾಸವಾಗುತ್ತದೆ.

ಸಾವಿತ್ರಿ: ದೇವಾ! ಈ ಪ್ರಾಣಿಗಳನ್ನೆಲ್ಲ ನೀನು ಒಂದು ನಿಯಮದ ಕಟ್ಟಿನಲ್ಲಿ ಇಟ್ಟಿದ್ದೀಯೆ. ಆ ನಿಯಮವನ್ನು ಅನುಸರಿಸಿಯೇ ನೀನು ನಡೆದುಕೊಳ್ಳುತ್ತೀಯೆ, ಸ್ವೇಚ್ಛೆಯಿಂದಲ್ಲ. ಆದ್ದರಿಂದಲೇ ನಿನಗೆ 'ಯಮ'ನೆಂದು ಹೆಸರು. ನಾನು ಇನ್ನೂ ಒಂದು ಮಾತನ್ನು ಹೇಳುತ್ತೇನೆ ಆಲಿಸು; ಮನಸ್ಸಿನಲ್ಲಾಗಲೀ, ಮಾತಿನಲ್ಲಾಗಲೀ ಕಾರ್ಯದಲ್ಲಾಗಲೀ ಯಾರಿಗೂ ದ್ರೋಹ ಮಾಡಬಾರದು; ಉಪಕಾರ ಮಾಡಬೇಕು, ದಾನ ಮಾಡಬೇಕು. ಇದು ಸನಾತನ ಧರ್ಮ. ಪ್ರಾಯಶಃ ಲೋಕ ನಿಂತಿರುವುದು ಇದರಿಂದಲೇ. ಏಕೆಂದರೆ ಮನುಷ್ಯರು ದುರ್ಬಲರು. ಸಜ್ಜನರು ತಮ್ಮಲ್ಲಿಗೆ ಶರಣು ಬಂದ ಶತ್ರುಗಳಿಗೂ ದಯೆಯನ್ನು ತೋರುವರು.

ಯಮ: ಮಂಗಳೆ! ನೀನು ಆಡಿದ ಮಾತು ಬಾಯಾ–ರಿದವನಿಗೆ ಕೊಟ್ಟ ನೀರಿನಂತಿದೆ. ಸತ್ಯವಂತನ ಜೀವವೊಂದನ್ನು ಬಿಟ್ಟು ನಿನಗೆ ಬೇಕಾದ ಇನ್ನೊಂದು ವರವನ್ನು ಕೇಳು.

ಸಾವಿತ್ರಿ: ನನ್ನ ತಂದೆಗೆ ಗಂಡು ಮಕ್ಕಳಿಲ್ಲ. ಅವನಿಗೆ ನೂರು ಜನ ಗಂಡು ಮಕ್ಕಳಾಗಿ ಅವನ ವಂಶ ವೃದ್ಧಿಯಾಗಬೇಕು.

ಯಮ: ಆಗಲಿ! ನಿನ್ನ ತಂದೆಗೆ ವರ್ಚಸ್ವಿಗಳೂ, ಕುಲವರ್ಧಕರೂ ಆದ ನೂರು ಜನ ಗಂಡು ಮಕ್ಕಳಾಗುತ್ತಾರೆ. ನಿನ್ನ ಇಷ್ಟ ನೆರವೇರಿತಲ್ಲ, ಇನ್ನು ಹಿಂತಿರುಗು. ಬಹಳ ದೂರ ಬಂದು ಬಿಟ್ಟೆ.

ಸಾವಿತ್ರಿ: ಗಂಡನ ಹತ್ತಿರವಿರುವಾಗ ಇದೇನೂ ನನಗೆ ದೂರವಲ್ಲ. ನನ್ನ ಮನಸ್ಸು ಇದಕ್ಕಿಂತ ಇನ್ನೂ ದೂರ ದೂರಕ್ಕೆ ಓಡುತ್ತಿದೆ. ಹೀಗೆ ಹೋಗುತ್ತಾ ಹೋಗುತ್ತಲೇ ನನ್ನ ಇನ್ನೊಂದು ಮಾತನ್ನೂ ಕೇಳು. ನೀನು ವಿವಸ್ವತನ ಮಗ. ತುಂಬಾ ಪ್ರತಾಪಶಾಲಿ. ಆದ್ದರಿಂದ ವಿದ್ವಾಂಸರು ನಿನ್ನನ್ನು ವೈವಸ್ವತನೆಂದೂ ಕರೆಯುತ್ತಾರೆ. ಶಾಂತಿಯಿಂದಲೂ ಧರ್ಮದಿಂದಲೂ ಪ್ರಜೆಗಳನ್ನು ರಂಜಿಸುವುದರಿಂದ ನೀನು ಧರ್ಮರಾಜನಾಗಿದ್ದೀಯೆ. ಸಜ್ಜನರಲ್ಲಿ ಉಂಟಾಗುವ ನಂಬಿಕೆ ತನ್ನಲ್ಲಿಯೂ ಉಂಟಾಗುವುದಿಲ್ಲ; ಆದ್ದರಿಂದ ಎಲ್ಲರೂ ಸಜ್ಜನರ ಪ್ರೀತಿಯನ್ನು ಇಚ್ಛಿಸುತ್ತಾರೆ. ಯಾರಿಗಾದರೂ ಸ್ನೇಹದಿಂದ ನಂಬಿಕೆ ಹುಟ್ಟುತ್ತದೆ. ಆದ್ದರಿಂದ ಜನಕ್ಕೆ ಸಜ್ಜನರಲ್ಲಿ ಅಷ್ಟು ಹೆಚ್ಚು ನಂಬಿಕೆ ಉಂಟಾಗುತ್ತದೆ.

ಯಮ: ಅಮ್ಮಾ! ನಿನ್ನಿಂದಲ್ಲದೆ ಈ ಮಾತನ್ನು ಇದುವರೆಗೆ ಯಾರ ಬಾಯಲ್ಲೂ ಕೇಳಿರಲಿಲ್ಲ. ಇದ–ರಿಂದ ನನಗೆ ಸಂತೋಷವಾಗಿದೆ. ಇವನ ಜೀವ ಹೊರತು ಇನ್ನೇನಾದರೂ ಒಂದು ವರವನ್ನು ಕೇಳಿಬಿಟ್ಟು ಹೊರಟು ಹೋಗು.

ಸಾವಿತ್ರಿ: ಸತ್ಯವಂತನಿಂದ ನನ್ನ ಹೊಟ್ಟೆಯಲ್ಲಿ ಕುಲೋದ್ಧಾರಕರೂ, ಬಲವೀರ್ಯಶಾಲಿಗಳೂ ಆದ ನೂರು ಜನ ಗಂಡುಮಕ್ಕಳಾಗಲಿ!

ಯಮ: ಆಗಲಿ. ನಿನಗೆ ಆಯಾಸವಾಗುತ್ತದೆ, ಹಿಂತಿ–ರುಗು. ಬಹಳ ದೂರ ಬಂದುಬಿಟ್ಟೆ!

12th_Kannada_Reader_8.indd 171 22-05-2019 15:39:49

ಸಾವಿತ್ರಿ: ಸಜ್ಜನರು ಎಂದೆಂದಿಗೂ ಧರ್ಮದಿಂದಲೇ ನಡೆಯತಕ್ಕವರು. ಅವರು ಹಿಮ್ಮೆಟ್ಟುವುದಿಲ್ಲ. ಪಶ್ಚಾತ್ತಾಪ ಪಡುವುದಿಲ್ಲ. ಸಜ್ಜನರ ಸಹವಾಸ ಎಂದಿಗೂ ವಿಫಲವಾಗುವುದಿಲ್ಲ. ಅವರಿಗೆ ಒಳ್ಳೆಯವರಿಗೆ ಯಾವ ಭಯವೂ ಇರುವುದಿಲ್ಲ. ಸಜ್ಜನರೇ ಸೂರ್ಯನನ್ನು ತಮ್ಮ ಸತ್ಯದಿಂದ ನಡೆಸುತ್ತಿರುವವರು; ಹಿಂದೆ ಸಜ್ಜನರೇ ಭೂಮಿಯನ್ನು ತಮ್ಮ ತಪಸ್ಸಿನಿಂದ ಎತ್ತಿ ಹಿಡಿದಿರುವವರು. ಹಿಂದೆ ಆದದ್ದು, ಮುಂದೆ ಆಗಬೇಕಾದದ್ದು ಎಲ್ಲದಕ್ಕೂ ಸಜ್ಜನರೇ ಗತಿ; ಸಜ್ಜನರ ಮಧ್ಯೆ ಸಜ್ಜನರಿಗೆ ಯಾವ ಕೊರತೆಯೂ ಇರುವುದಿಲ್ಲ. ಸಜ್ಜನರು ಪ್ರತ್ಯುಪಕಾರವನ್ನು ನಿರೀಕ್ಷಿಸದೆ ಪರೋಪಕಾರ ಮಾಡುತ್ತಾರೆ. ಇದು ಎಂದೆಂದಿಗೂ ಆರ್ಯರು ಅನುಸರಿಸುತ್ತಿರುವ ಮಾರ್ಗ ಎಂಬುದನ್ನು ಅವರು ಬಲ್ಲರು. ಸತ್ಪುರುಷರ ಅನುಗ್ರಹ ವಿಫಲವಾಗುವುದಿಲ್ಲ. ಅದರಿಂದ ಅರ್ಥ ಹಾನಿಯಾಗುವುದಿಲ್ಲ. ಮಾನ ಹಾನಿಯಾಗುವುದಿಲ್ಲ. ಇದು ಖಂಡಿತ. ಆದ್ದರಿಂದ ಸಜ್ಜನರು ಪಾಲಕರಾಗುತ್ತಾರೆ.

ಯಮ: ಅಮ್ಮಾ! ಧರ್ಮಯುಕ್ತವಾಗಿಯೂ ಮನಸ್ಸಿಗೆ ಹಿತವಾಗಿಯೂ ಒಳ್ಳೆಯ ಶಬ್ದಗಳಿಂದ ಕೂಡಿಯೂ ಘನವಾದ ಅರ್ಥದಿಂದ ತುಂಬಿಯೂ ಇರುವ ನಿನ್ನ ಮಾತನ್ನು ಕೇಳುತ್ತಾ ಕೇಳುತ್ತಾ ನಿನ್ನಲ್ಲಿ ನನಗೆ ಅತಿಶಯವಾದ ಭಕ್ತಿ ಹುಟ್ಟುತ್ತಿದೆ. ಆದ್ದರಿಂದ ಎಣೆಯಿಲ್ಲದ ಒಂದು ವರವನ್ನು ಕೇಳು!

ಸಾವಿತ್ರಿ: ನೀನು ಕೊಟ್ಟ ವರಗಳು ಸನ್ಮಾರ್ಗದಲ್ಲಿ ಲಭಿಸಬೇಕು. ಆದ್ದರಿಂದ ಸತ್ಯವಂತನು ಜೀವಿಸಲಿ ಎಂಬ ವರವನ್ನು ಬೇಡುತ್ತೇನೆ. ಅವನಿಲ್ಲದೇ ಇದ್ದರೆ ನಾನು ಸತ್ತಂತೆಯೇ; ಗಂಡನಿಲ್ಲದ ಸುಖ ನನಗೆ ಬೇಡ. ಗಂಡನಿಲ್ಲದ ಸ್ವರ್ಗ ಬೇಡ. ಸಂಪತ್ತು ಬೇಡ. ಗಂಡನಿಲ್ಲದೇ ಬದುಕಿರುವುದಕ್ಕೆ ನನಗೆ ಇಷ್ಟವಿಲ್ಲ. ನನಗೆ ನೂರು ಮಕ್ಕಳ ವರವನ್ನು ಕೊಟ್ಟೆ. ಆದರೆ ನನ್ನ ಗಂಡನನ್ನು ಕರೆದುಕೊಂಡು ಹೋಗುತ್ತಿದ್ದೀಯೆ. ಅವನು ಬದುಕಲಿ. ಇದೇ ನಾನು ಕೇಳುವ ವರ. ಆಗ ನಿನ್ನ ಮಾತು ಸತ್ಯವಾಗುತ್ತದೆ.

ಈ ಮಾತನ್ನು ಕೇಳಿ ಯಮನು,

ಯಮ: ಆಗಲಿ! ಎಂದು ಪಾಶವನ್ನು ಕಳಚಿ ಸಂತೋಷದಿಂದ 'ಭದ್ರೆ! ಇಗೋ ನಿನ್ನ ಗಂಡನನ್ನು ಬಿಟ್ಟು ಕೊಟ್ಟಿದ್ದೇನೆ. ಅವನು ಆರೋಗ್ಯವಾಗುತ್ತಾನೆ. ಅವನನ್ನು ಕರೆದುಕೊಂಡು ಹೋಗು' ಎಂದನು

ಕೃತಿ–ಕರ್ತೃ ವಿಚಾರ



ಎ.ಆರ್.ಕೃಷ್ಣಶಾಸ್ತ್ರಿಗಳು ಚಿಕ್ಕಮಗಳೂರು ಜಿಲ್ಲೆಯ ಅಂಬಳೆಯಲ್ಲಿ 12.02.1980ರಲ್ಲಿ ಜನಿಸಿದರು. ಇವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಬಿ.ಎ., ಹಾಗೂ ಎಂ.ಎ., ಪದವಿಯನ್ನು ಪಡೆದ ಮೇಲೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮತ್ತು ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರು ಮತ್ತು ಪ್ರಾಧ್ಯಾಪಕರಾಗಿದ್ದು ಕನ್ನಡ ಬಾಷೆಯ ಏಳಿಗೆಗಾಗಿ ತುಂಬ ಶ್ರಮಿಸಿದ್ದಾರೆ. ಇವರು ಕನ್ನಡ ಕರ್ಮಯೋಗಿಗಳಲ್ಲಿ ಒಬ್ಬರು. ಕನ್ನಡ, ಸಂಸ್ಕೃತ, ಬಂಗಾಳಿ ಭಾಷೆಗಳಲ್ಲಿ ಪಂಡಿತರಾಗಿದ್ದರು. ಇವರು 'ಸಂಸ್ಕೃತ ನಾಟಕ', 'ಭಾಸ ಕವಿ', 'ಸರ್ವಜ್ಞ ಕವಿ' 'ನಾಗ ಮಹಾಶಯ', 'ಕಥಾಮೃತ', 'ಶ್ರೀಪತಿಯ ಕಥೆಗಳು' – ಇತ್ಯಾದಿ ಹಲವು ಕೃತಿಗಳನ್ನು ರಚಿಸಿದ್ದಾರೆ. 'ಪ್ರಬುದ್ಧ ಕರ್ನಾಟಕ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ನೆಟ್ಟು ಬೆಳೆಸಿದ ಕೀರ್ತಿ ಇವರದು. ಇವರ ಬರವಣಿಗೆ ಸರಳ, ಸ್ಪಷ್ಟ, ಸಂಗ್ರಹ, ಸರಸ ಹಾಗೂ ಸಾರಭೂತ. ಇವರ 'ಬಂಕಿಮ ಚಂದ್ರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಇವರು 1941ರಲ್ಲಿ ಹೈದರಾಬಾದಿನಲ್ಲಿ ನಡೆದ 26ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಈ ಕಥಾ ಭಾಗವನ್ನು ದಿವಂಗತ ಎ.ಆರ್. ಕೃಷ್ಣಶಾಸ್ತ್ರಿಗಳು ರಚಿಸಿರುವ 'ವಚನ ಭಾರತ'ದಿಂದ ಆರಿಸಿಕೊಳ್ಳಲಾಗಿದೆ.

ಕಠಿಣ ಪದಗಳ ಅರ್ಥ

ಕಾಲ–ಸಮಯ, ಯಮ, ಮೃತ್ಯು; ಪಾಶ–ಹಗ್ಗ; ತಲ್ಲಣಿಸು–ತವಕಿಸು, ಕಳವಳಗೊಳ್ಳು; ಆರ್ತಳಾಗಿ–ದುಃಖಿತಳಾಗಿ, ದೀನಳಾಗಿ; ದೂತ–

12th_Kannada_Reader_8.indd 172 22-05-2019 15:39:49

ಸೇವಕ; ತರವಲ್ಲ–ಯೋಗ್ಯವಲ್ಲ; ಕಳೆ–ಕಾಂತಿ, ಪ್ರಕಾಶ; ಶ್ವಾಸ–ಉಸಿರು, ಪ್ರಾಣ; ಉತ್ತರಕ್ರಿಯೆ–ಶವಸಂಸ್ಕಾರ; ಅನುಗ್ರಹ–ಕೃಪೆ; ಪಾಡು–ಅವಸ್ಥೆ; ನಿರೂಪಣೆ–ವಿವರವಾಗಿ ಹೇಳುವಿಕೆ; ಚೋದಕ–ಹುರಿದುಂಬಿಸುವ; ಸ್ವೇಚ್ಛೆ–ಮನ ಬಂದಂತೆ; ಸನಾತನ–ಪ್ರಾಚೀನ, ಹಳೆಯ; ವರ್ಚಸ್ವಿ–ತೇಜಸ್ವಿ; ಕುಲವರ್ಧಕ–ವಂಶವನ್ನು ಬೆಳೆಸುವಂತಹ; ಅತಿಶಯ–ಹೆಚ್ಚಿನ; ಎಣೆಯಿಲ್ಲದ–ಸಾಟಿಯಿಲ್ಲದ; ಸನ್ಮಾರ್ಗ–ಒಳ್ಳೆಯ ದಾರಿ; ಖ್ಯಾತಿ–ಕೀರ್ತಿ, ಪ್ರಸಿದ್ಧಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಸಾವಿತ್ರಿಯು ಗಂಡನೊಡನೆ ಎಲ್ಲಿಗೆ ಹೊರಟಳು ?
2. ಆಕೆಯ ಹೃದಯ ಪಾಲಾದಂತಾಗಲು ಕಾರಣವೇನು?
3. ಸತ್ಯವಂತನು ಸೌದೆಯನ್ನು ಸೀಳುವುದನ್ನು ಬಿಟ್ಟು ಸಾವಿತ್ರಿಯ ಬಳಿ ಬರಲು ಕಾರಣವೇನು?
4. ಯಮನನ್ನು ಲೇಖಕರು ಏನೆಂದು ಬಣ್ಣಿಸಿದ್ದಾರೆ?
5. ಸ್ವತಃ ಯಮನೇ ಸತ್ಯವಂತನ ಬಳಿಗೆ ಬರಲು ಕಾರಣವೇನು?
6. ಸಾವಿತ್ರಿಯು ಯಮನಿಂದ ಪಡೆದ ಮೊದಲ ವರ ಯಾವುದು?
7. ಸಾವಿತ್ರಿಯು ಯಮನಿಂದ ಪಡೆದ ಎರಡನೆಯ ವರ ಯಾವುದು?
8. ಯಮನಿಗೆ ವೈವಸ್ವತನೆಂದು ಹೆಸರು ಬರಲು ಕಾರಣವೇನು?
9. ಸಾವಿತ್ರಿ ಯಾರ ಮಗಳು?
10. ಸತ್ಯವಂತ ಯಾರು?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಸಾವಿತ್ರಿಯು ಧರ್ಮದ ಬಗ್ಗೆ ಯಮನೊಂದಿಗೆ ಆಡಿದ ಮಾತುಗಳಾವುವು?
2. ತಾನು ಪತಿವ್ರತೆ ಎಂಬುದನ್ನು ಸಾವಿತ್ರಿ ಹೇಗೆ ಸಮರ್ಥಿಸಿಕೊಂಡಳು ?
3. ಸಜ್ಜನರ ಬಗೆಗೆ ಸಾವಿತ್ರಿಯ ಅಭಿಪ್ರಾಯವೇನು ?
4. ಸತ್ಯವಂತನನ್ನು ಸಾವಿತ್ರಿಯು ಬದುಕಿಸಿಕೊಂಡದ್ದು ಹೇಗೆ ?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಸಾವಿತ್ರಿಯು ತನ್ನ ಮಧುರವಾದ ಮಾತುಗಳಿಂದ ಯಮನನ್ನು ಒಲಿಸಿಕೊಂಡ ಬಗೆಯನ್ನು ವಿವರಿಸಿರಿ?
2. ಧರ್ಮ, ಸಜ್ಜನರು ಹಾಗೂ ಸತ್ಸಂಗದ ಬಗ್ಗೆ ಸಾವಿತ್ರಿ ಆಡಿದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

ಭಾಷಾಭ್ಯಾಸ

1. ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿ.

ಅನುಗ್ರಹ, ವಿಫಲ, ಪಶ್ಚಾತ್ತಾಪ, ಕಳೆಗೆಡು, ಶೂಲದಿಂದ ಇರಿದಂತಾಗು.

2. ಕೆಳಗಿನ ಪದಗಳ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.

ಪತಿವ್ರತೆ, ಯಜ್ಞ, ಗಳಿಗೆ, ಚಿತ್ರ, ಕ್ಷಣ, ಸ್ವರ್ಗ, ಆಯುಷ್ಯ, ಯಮ, ಲೋಕ.

3. ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.

ಉಪಕಾರ, ದುರ್ಬಲ, ಫಲ. ಸಜ್ಜನ, ಸ್ವಸ್ಥ, ಸನ್ಮಾರ್ಗ.

4. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿ.

ಸಜ್ಜನ, ಸನ್ಮಾರ್ಗ, ಪ್ರತ್ಯುಪಕಾರ, ಎಲ್ಲೆಲ್ಲಿ, ಮೈಯೆಲ್ಲ.

ಚಟುವಟಿಕೆ

1. ಸೀತೆ, ದ್ರೌಪದಿ, ಅರುಂಧತಿ, ಅನಸೂಯೆ, ದಮಯಂತಿ, ಶಕುಂತಳೆ ಮೊದಲಾದ ಪುರಾಣ ಸ್ತ್ರೀಯರ ಕಥೆಗಳನ್ನು ಸಂಗ್ರಹಿಸಿ ಓದಿರಿ.

12th_Kannada_Reader_8.indd 173 22-05-2019 15:39:49

ಉಪಪಠ್ಯ

ಘಟಕ ಎಂಟು

ಮಗುವಿನ ಕರೆ

– ದ. ರಾ. ಬೇಂದ್ರೆ



ಮಾನವತೆಯ ಹಿರಿಮೆ, ಬಾಳಿನ ಮೌಲ್ಯ ಇತ್ಯಾದಿಗಳನ್ನು ಬೆಳಗಿಸಲು ಸಣ್ಣಕಥಾ ಮಾಧ್ಯಮವನ್ನು ಬಳಸಲಾಯಿತು. ಧ್ವನಿ, ಪ್ರತಿಮೆ ಮತ್ತು ಸಂಕೇತಗಳ ಮೂಲಕವೂ ಅನುಭವಕ್ಕೆ ಮಾತಿನ ಶರೀರ ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಸಣ್ಣಕಥೆಯ ವಸ್ತು ಮಾನವ ಸಮಾಜದಲ್ಲೇ ಇರುವಂಥದ್ದು ಹಾಗೂ ವಾಸ್ತವಕ್ಕೆ ಹತ್ತಿರವಾದುದು.

ಪಾಶ್ಚಾತ್ಯ ಸಾಹಿತ್ಯ ಪ್ರಭಾವಗಳಿಂದ ಸಣ್ಣ ಕಥೆಯು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಬೆಳೆಯಿತು.



ಮಟಮಟ ಮಧ್ಯಾಹ್ನ. ಅಂಥ ಬಿಸಿಲಿನಲ್ಲಿ ಆ ಹಳ್ಳಿಯಲ್ಲಿ ಕೂಡ ಯಾರೂ ಮನೆಯಿಂದ ಹೊರಬೀಳಲಾರರು. ಆದರೆ ಶಾಸ್ತ್ರಿಗಳ ಸೊಸೆಯು ಮಧ್ಯಾಹ್ನ ಕುಡಿಯುವ ನೀರು ತರಲು ಊರ ಹೊರಗಿನ ಬಾವಿಗೆ ಹೊರಟಳು. ಏನು ದಿವ್ಯ ಮಾಡಿದಳು? ಎಂದು ಯಾರಾದರೂ ಕೇಳಬಹುದು. ಬಾವಿಯಿಂದ ಹಳ್ಳಿಯ ಕೊನೆಯ ಮನೆ ಅರ್ಧ ಮೈಲು ದೂರವಿತ್ತು. ಆಲದ ಹಾಗೂ ಹುಣಸೆಯ ಎರಡು ದೆವ್ವದಂಥ ಮರಗಳ ಹೊರತು ಆ ಬಾವಿಯ ಸಮೀಪಕ್ಕೆ ಬೇರೆ ಉಲಿವು ಯಾವುದೂ ಇರಲಿಲ್ಲ. ಹಳೆಯ ಕೋಟೆಯ ಹಾಗೂ ಕಂದಕದೊಳಗಿಂದ ಹೊರ ಬೀಳುವ ಕಾಡುಮಿಕಗಳು ಹಳ್ಳಕ್ಕೆ ನೀರು ಕುಡಿಯಲು ಹೊರಟಿದ್ದವೇನೋ. ಅದೇ

12th_Kannada_Reader_8.indd 174 22-05-2019 15:39:49

ಸದ್ದು ಬಾವಿಯ ಬಳಿ ಕೇಳಿಸಿರಬೇಕು. ಆದರೆ ಆ ಸದ್ದು ಎಂಥ ಸದ್ದು! ಹೆದರಿಸುವ ಸದ್ದು. ಮರಗಳ ನೆರೆಯಾದರೂ ಆ ಬಾವಿಯ ಭಯಾನಕತೆಯನ್ನೇ ಹೆಚ್ಚಿಸುತ್ತಿದ್ದವು. ಕುಡಿಯುವ ನೀರಿನ ಬಾವಿಯು ಆ ಊರಿಗೆ ಅದೊಂದೇ. ಎಲ್ಲರಂತೆ ಶಾಸ್ತ್ರಿಗಳ ಮನೆಯವರೂ ಪ್ರಾತಃಕಾಲಕ್ಕೇ ತಮಗೆ ಬೇಕಾಗುವ ನೀರು–ನಿಡಿ ತಂದುಕೊಂಡಿದ್ದರು. ಆದರೆ ಮಡಿಯೊಳಗೆ ಇದ್ದ ಒಂದೇ ಒಂದು ಕೊಡವು ಶಾಸ್ತ್ರಿಗಳ ಮನೆಯ ಸಂಧಿಯ ಸಮಾರಾಧನೆಯಲ್ಲಿ ಉರುಳಿತು. ಅದರಿಂದ ಅಡುಗೆಯ ಮನೆಯಲ್ಲಿ ಆದ ತೊಂದರೆ ಇರಲಿ, ಶಾಸ್ತ್ರಿಗಳ ಸೊಸೆ ನೀರಿಗೆ ಹೊರಡಬೇಕಾಯಿತು.

ಶಾಸ್ತ್ರಿಗಳ ಮನೆಯ ತೊಂದರೆಯನ್ನು ಅದನ್ನು ನೋಡಿದವರೇ ತಿಳಿಯಬಲ್ಲರು. ಪುರಾತನ ಕಾಲದಲ್ಲಿ ಬಹಳ ದೊಡ್ಡ ಮನೆಯಂತೆ. ಈಗ ಅಣ್ಣ ತಮ್ಮಂದಿರಲ್ಲಿ ನಿಜವಾಗಿಯೂ ನೂರಾರು ಪಾಲಾಗಿ ಅವರ ಪಾಲಿಗೆ ಎರಡೂವರೆ ಗೇಣಿನ ತುಂಡೊಂದು ಬಂದಿತ್ತು. ಅಷ್ಟರಲ್ಲಿ ಅವರು, ಅವರ ಕುಟುಂಬ, ಹಿರಿಯ ಮಗ, ಸೊಸೆ, ವಿಧವೆಯಾಗಿ ಮನೆಗೆ ಬಂದ ತರುಣ ಮಗಳೊಬ್ಬಳು, ಇಷ್ಟು ಜನರು ಮಾನದಿಂದ ಬದುಕು ಮಾಡುತ್ತಿದ್ದರು. ಶಾಸ್ತ್ರಿಗಳ ದುರ್ದೈವದಿಂದ ಅವರ ಹಿರಿಯ ಮಗನು ವ್ಯಾಧಿಯಿಂದಲೋ ಬಾಧೆಯಿಂದಲೋ ಮನೆಯ ಒಂದು ಭಾಗವನ್ನು (ಇದ್ದ ಒಂದು ಅಡಕಲ ಕೋಣೆ) ಹಿಡಿದು ನರಳುತ್ತಿದ್ದ. ಚೊಚ್ಚಿಲ ಮೊಮ್ಮಗನು ಮೊನ್ನೆ ಮೊನ್ನೆ ಬಂದು ಅಡಿಗೆ ಮನೆಯ ಒಂದು ಭಾಗವನ್ನು ಕಟ್ಟಿಕೊಂಡಿದ್ದ. ಪಡಸಾಲೆಯೆಂಬ ಹೆಸರಿನ ಭಾಗವು(ಆ ಮನೆಗೆ ನಡುಮನೆಯೇ ಇರಲಿಲ್ಲ). ಶಾಸ್ತ್ರಿಗಳ ಅಧ್ಯಯನ – ಅಧ್ಯಾಪನ – ಶಯನ – ವಿಶ್ರಾಂತಿ ಇವೆಲ್ಲಕ್ಕೂ ಆಶ್ರಯವಾಗಿತ್ತು. ಮಡಿಯ ಸಾಮ್ರಾಜ್ಯವೆಲ್ಲ ಅಡಿಗೆ ಮನೆಯನ್ನು ಸೇರಿತ್ತು. ಅಲ್ಲಿಯೇ ಮೊಮ್ಮಗನು ಬಿಡಾರ ಬಿಟ್ಟಿದ್ದನು. ಅಡಿಗೆಯ ಒಲೆಯ ಉರಿಯನ್ನೇ ಧೂಪ ದೀಪವೆಂದೂ, ಅದೇ ಅಡಿಗೆಯನ್ನೇ ನೈವೇದ್ಯವೆಂದೂ ತೋರಿಸುವಷ್ಟು ಸಮೀಪ ದೇವರ ಸಾನ್ನಿಧ್ಯವಿತ್ತು. ಮೀಸಲು ನೀರು ಈ ಸಂಧಿಯಲ್ಲಿಯೇ ತನ್ನ ಪ್ರತ್ಯೇಕ ಪ್ರತಿಷ್ಠೆಯನ್ನು ಸಾರಿತ್ತು. ಶಾಸ್ತ್ರಿಗಳ ಸೊಸೆಯು ಮಡಿಯ ನುಸುಲಾಟದಲ್ಲಿ ಇಣಚಿಗಿಂತ ಹೆಚ್ಚಿನ ಚಪಲತೆಯನ್ನು ತೋರಿಸುತ್ತಿದ್ದಳು. ಆದರೂ ಅವಳ ಕಾಲು ತಾಕಿ ಕೊಡ ಉರುಳಿ ಅಗ್ನಿದೇವರು ಶಾಂತರಾಗಿ, ದೇವರು ಜಲಸಮಾಧಿ ಹೊಂದಿದರು. ಪೂಜೆಯೂ ಆಗಿ–ತ್ತು. ಅಡಿಗೆಯೂ ತೀರುತ್ತ ಬಂದಿತ್ತು. ಊಟಕ್ಕೆ ಕೂತ ಕಾಲಕ್ಕೆ ಕಳ್ಳ ಬಂದಂತೆ ಈ ಅನಾಹುತವಾಗಿ ಶಾಸ್ತ್ರಿಗಳ ಮುಖದಲ್ಲಿ ಬೆಂಕಿ ಕಾಣದಿದ್ದರೂ ಹೊಗೆ ಮುಸುಕಿತು. ಅವರು ತಮ್ಮ ಹೆಂಡತಿಯನ್ನೇ ಸಿಟ್ಟಿನ ಅಸಮಾಧಾನದಿಂದ ನೋಡಿದರು. ಶಾಸ್ತ್ರಿಗಳ ಪತ್ನಿ ಶಾಂತ ಸ್ವಭಾವದವರಾದರೂ 'ಮಹಾರಾಯ್ತಿ, ಏನು ಮಾಡಿಟ್ಟೆ! ಎಲ್ಲಿಯಾದರೂ ನೀರು ತಂದು ನಮ್ಮ ಇಲ್ಲಿಯ ಸೆರೆ ಬಿಡಿಸು. ಮುಂಜಾವಿನಿಂದ ಒಲೆ ಹಿಡಿದು ಕೂತಿದ್ದೇನೆ. ಹೊಗೆಯಾಗದೆ ಉರಿಯಾಗಬೇಕು. ಬಿಸಿ ಹತ್ತದೆ ಬೆಂಕಿ ಇರಬೇಕು. ಇಷ್ಟಾಗಿ ಎಲ್ಲರಿಗೂ ಬೇಗನೆ ಪ್ರಸಾದ ಸಿಗಬೇಕು. ನಾನಾದರೂ ಏನು ಸಾಯಲಿ!' ಎಂದು ತುಸು ರಂಪಾಟವನ್ನೇ ಮಾಡಿದರು. ಸೊಸೆ ಪಿಟ್ಟೆನ್ನದೆ ಕೂಡಲೇ ಕೊಡ, ಹಗ್ಗ ತಕ್ಕೊಂಡು ನೀರಿಗೆ ಹೊಂಟಳು.

ನಾದಿನಿ ಅತ್ತಿಗೆಯ ಕೂಡ ಹೊರಡಲಿಲ್ಲ. ಏನೋ ಮುಸುಗುಟ್ಟಿದಳು. ಶಾಸ್ತ್ರಿಗಳ ಸೊಸೆಗೆ ಮೊದಲು ತಾನು ಚೊಚ್ಚಲ ಗಂಡು ಹಡೆದು ಬಂದ ಸುಖ ಇರಲಿ, ಹಡದದ್ದೇ ಮಹಾಪರಾಧವಾಗಿದೆಯೇನೋ ಎನ್ನಿಸಿತ್ತು. ಅತ್ತೆಯ ಮನೆಗೆ ಬಂದಂದಿನಿಂದ ಹುಡುಗನ ಕಾಲಗುಣ ಕೆಟ್ಟ ಎಂದು ಯಾರೋ ಅಂದಿದ್ದರು ಬೇರೆ. ಯಾಕೆಂದರೆ, ಹುಡುಗನ ತಂದೆಗೆ ಭ್ರಮೆ ಹಿಡಿದಂತಾಗಿತ್ತು. ಎರಡು ತಿಂಗಳಿಂದ ಶಾಸ್ತ್ರಿಗಳ ಹೆಂಡತಿಗೆ ತಮ್ಮ ಮಗನ ಕಷ್ಟದಿದಿರು ಮೊಮ್ಮಗನ ಸುಖ ಮಸುಕಾಗಿತ್ತು. ಬಡವರ ಸೊಸೆಗೆ ನಾಲಿಗೆ ಸಡಿಲು ಬಿಡಬಲ್ಲವರೆಲ್ಲ ಅತ್ತೆಗಳೇ! ನೆರೆಮನೆಯ ಗುಬ್ಬೆಯೊಬ್ಬಳು, 'ಅವಳಿಗೆ ಹುಚ್ಚ ಗಂಡ ಬೇಕಾಗಿದ್ದನೆಲ್ಲಿ?' ಎಂದು ಇವಳ ಕಿವಿಗೇ ಬೀಳುವಂತೆ ಆಡಿದ್ದಳು. ಊರ ಅತ್ತೆಯೊಬ್ಬಳು, 'ಹುಡುಗನ ಮುಖ ಅತ್ತೆಯ ಮನೆಯವರಾರಂತೆಯೂ ಇಲ್ಲ. ಅಜ್ಜನಂತೆಯೂ ಇಲ್ಲ?' ಎಂದು ಪ್ರಕಟಣೆ ಹೊರಡಿಸಿದ್ದಳು. ಹಾಳುಗುಡಿಯ ಒಕ್ಕಣ್ಣ ಪೂಜಾರಿಯೊಬ್ಬ ಈಕೆಯನ್ನು ಕಂಡಾಗ ಪಿಸಿಪಿಸಿ ನಕ್ಕಿದ್ದ. ಯಾರಾರೋ ಏನೇನೋ ಅಂದಿದ್ದರು. ಮಟಮಟ ಮಧ್ಯಾಹ್ನದಲ್ಲಿ ಮಸಣದ ನಾಲ್ಕು ಭೂತಗಳು ಕವಕ್ಕೆಂದು ಬಂದಂತೆ ಅವಳ ಜೀವ ಹೆದ–ರಿಕೊಂಡಿತು. ನೆನೆಸಿಕೊಂಡದ್ದೇ ರೋಸಿಗಿಟ್ಟಿತು. ತಾನು ಯಾರಿಗೆ ಬೇಕಾಗಿದ್ದೇನೆ? ನನ್ನ ತಾಯಿಗೆ? ಅಯ್ಯೋ, ಪಾಪ! ಅವಳಿಗೆ ತಾನೊಂದು ಭಾರ. ಮದುವೆಯಾಗುವ ಮುಂಚೆ ಒಂದು ರೀತಿ; ಆದ ಮೇಲೆ ಇನ್ನೊಂದು ರೀತಿ; ತನ್ನ ತಾಯಿಗೆ ತಾನಲ್ಲದೆ ಯಾರಿದ್ದಾರೆ? ಹೌದು, ಅಂತೆಯೇ ತಾನು ಭಾರ. ಸಂಸಾರ ಸುಖವಾಗಿದ್ದರೆ ಅದೆಲ್ಲ ಸರಿಯಿತ್ತು. ಈಗ? ತಾನು ಅವಳೆದೆಗೆ ಹುಣ್ಣು.

12th_Kannada_Reader_8.indd 175 22-05-2019 15:39:49

ತನ್ನ ಗಂಡನಿಗೆ ತಾನು ಬೇಡವಾಗಿರುವೆನೇ, ಇಲ್ಲ. ಬೇಕಾಗಿರುವೆನೇ, ಅದೂ ಇಲ್ಲ. ಅವರಿಗೆ ಅವರ ಜೀವ ಸಾಕಾಗಿದೆ. ಕೂಸು ಬಂದು ತಿಂಗಳಾಗಿ, ಅವರು ಅದರ ಹೆಸರನ್ನೆತ್ತಿಲ್ಲ. ಕಣ್ಣೆತ್ತಿ ನೋಡಿರುವರೋ ಇಲ್ಲವೋ ಪಾಪ! ಅವರೆಚ್ಚರ ಅವರಿಗಿಲ್ಲ. ಹೌದು, ನಾನು ಹೆಂಗಸು. ಊರವರೂ, ಮನೆಯವರೂ ಕೂಡಿಯೇ ಹರಿದು ತಿಂದರೆ ನಾನೇನು ಮಾಡಬೇಕು? ಅತ್ತೆ ಮಾವಂದಿರಿಗೆ ನಾನಾರು? ಮಗ ಬೇಕಾದರೆ ಜಗ ಬೇಕು. ತಾನಾ–ರಿಗೂ ಬೇಕಾಗಿಲ್ಲ. ತನಗಾದರೂ ಕರುಣೆ ನೀಡುವರೆ? ಎಂದು ಆಕೆ ಸುತ್ತಮುತ್ತಲೂ ನೋಡಿದಳು. ಹುಣಸೆ ಮರ, ಹಾಳುಗೋಡೆ, ಬೀಳುಹೊಲ – ನೀನು ಹಾಳು ಬಾವಿ ಬಿದ್ದರೆ ನಮಗೇನು ಎನ್ನುವವರಂತೆ ತಟಸ್ಥ ಭಾವದಿಂದಿದ್ದವು. ಬಾವಿಯಲ್ಲಿ ಗೂಡು ಮಾಡಿದ ಹಕ್ಕಿಗಳು ಜಕ್ಕಣಿ ಕರೆದಂತೆ ಗುಬ್ಬಳಿಸಿದವು. 'ನೀರಿನ ತಳವೇ ನಿನಗೆ ತವರು. ಬಾ' ಎನ್ನುವಂತೆ ತಣ್ಣನೆಯ ನೀರು ಕಣ್ಣ ಸೆಳೆಯಿತು. ಈಕೆ ಬಾವಿಯನ್ನು ಹಣಕಿ ಹಾಕಿದಾಗ ಬಿದ್ದ ಕಣ್ಣೀರಿಗೆ ನೀರು ನಡುಗಿತು. ಈಗಾಗಲೇ ತನ್ನ ಜೀವ ನೀರಿನ ತಳಕ್ಕೆ ಹೋಗಿ ಕುಳಿತಂತೆ ತನ್ನ ಪ್ರತಿಬಿಂಬ ತೋರಿತು. ಹೌದು, ತಾನು ಅಲ್ಲಿಗೆ ಹೋಗಬೇಕು. ಅಲ್ಲಿ, 'ಬೈಯುವವರಿಲ್ಲ. ಬಾರಿಸುವವರಿಲ್ಲ. ಎಲ್ಲವೂ ತಣಿವು, ತಣ್ಣಗೆ; ಅವಳ ಪ್ರೇತವು ಅವಳನ್ನು ಈಗಲೇ ಪಾಣಿಗ್ರಹಣ ಮಾಡಿ ಸೆಳೆಯುತ್ತಿತ್ತು.

ತಾನು ನೀರಿಗೆ ಬಂದವಳು ಎಷ್ಟು ಹೊತ್ತಾಯಿತು, ಏನು ಮಾಡುತ್ತಿರುವಳೆಂಬ ಅರಿವು ಅವಳಿಗಿರಲಿಲ್ಲ. ಒಂದು ಲೋಕದ ಗುರುತ್ವಾಕರ್ಷಣದ ತೆಕ್ಕೆಯನ್ನು ತಪ್ಪಿಸಿಕೊಂಡ ಧೂಮಕೇತುವೊಂದು ಅಧೋಲೋಕಕ್ಕೆ ಧುಮುಕಲು ಹೊರಟಂತೆ ಅವಳ ಜೀವದ ಚುಕ್ಕೆಯು ತನ್ನ ಬಂಧುಗಳನ್ನೆಲ್ಲ ತಟತಟನೆ ಹರಿದುಕೊಂಡು ಬೇರೆ ಸೆಳವಿಗೆ ಬಿದ್ದಿತ್ತು. ಕೊಡಕ್ಕೆ ಕಟ್ಟಬೇಕಾದ ಉಕ್ಕಡವನ್ನು ಅವಳು ತನ್ನ ಕೊರಳಿಗೆ ಕಟ್ಟಿಕೊಂಡಳು. ನೆರೆಯ ಹುಣಸೆಯ ಮರದಿಂದ ಹಾಲಕ್ಕಿಗಳೆರಡು ಚಿಲಿಪಿಲಿಗುಟ್ಟಿದವು. ಈಕೆ ತಾನಿದೇನು ಮಾಡುತ್ತೇನೆಂದು ಕೊರಳಿನ ಕುಣಿಕೆಯನ್ನು ನಡುವಿಗೆ ಬಿಗಿದು ಸರಿ ಮಾಡಿದಳು. ಅವಳ ಕೆಲಸವೆಲ್ಲ ಮೈದುಂಬಿದಂತೆ ಆವೇಶದಿಂದ ಸಾಗಿತ್ತು. ಹಗ್ಗದ ಒಂದು ತುದಿಯನ್ನು ಅವಳು ಮೇಲಿನ ತೊಲೆಯ ಅಡ್ಡಗಂಬಕ್ಕೆ ಬಿಗಿದಳು. ಬಾವಿಗೆ ನಮಸ್ಕಾರ ಮಾಡಿದಳು. ಸೂರ್ಯನಿಗೆ ನಮಸ್ಕಾರ ಮಾಡಿದಳು. ತನ್ನ ಸೆರಗು, ಕೂದಲು ಸಾವ–ರಿಸಿಕೊಂಡಳು. ಬಾವಿಯ ತುದಿಗೆ ತನ್ನ ಪಾದ ಇಟ್ಟಳು.

ಹಿಂದೆ ಯಾರದೋ ಕಾಲ ಸಪ್ಪಳವಾಯಿತು. ಹಿಂದಿರುಗಿ ನೋಡಿದಳು. ಯಾರೂ ಇರಲಿಲ್ಲ. ಅವಳು ಹಗ್ಗವನ್ನು ಮೈಗೆ ಸುತ್ತಿಕೊಂಡಳು. ಬಾವಿಯಲ್ಲಿ ಇಳಿಯಲು ಸಿದ್ಧಳಾದಳು. ಯಾರೋ ಅತ್ತಂತಾಯಿತು. ಅದಾರು...? ಯಾರ ಗೊಡವೆ ಇವಳಿಗೇನು? ಇವಳಿಗಾರಿದ್ದಾರೆ? ಅವಳು ಹಗ್ಗವನ್ನು ನಮಸ್ಕ–ರಿಸಿದಳು. ಯಾರೋ ಕೂಗಿದರೇನು...? ಕೂಗಿದರೋ? ಅತ್ತರೋ...? ತನ್ನ ಕೂಸೇನು? ಕುಡಿದು ಮಲಗಿ ಬಹಳ ಹೊತ್ತಾಯಿತು. ಎದ್ದಿರಬಹುದು. ಹಸಿದಿದ್ದೀತು. ಏಕೆ ಅತ್ತಿರಲಾರದು?

ಅವಳು ತನ್ನ ಹಗ್ಗದ ಸುತ್ತನ್ನು ಬಿಡಿಸಿದಳು. ಉಕ್ಕಡವನ್ನು ಉಚ್ಚಿದಳು. ಬರಿಕೊಡವನ್ನು ಬಗಲಿಗೆತ್ತಿ ಹೊರಟಳು. ಎಲ್ಲಿಗೆ? ಎಲ್ಲಿ ಮನೆ? ಎಲ್ಲಿ ಬಾವಿ? ಕೂಗುವವರಾರು? ಕೇಳಿಸಿದ್ದೇನು? ಈಗಾರೂ ಅಳುತ್ತಿಲ್ಲ, ಕರೆಯುತ್ತಿಲ್ಲ. ತಾನು ಹುಚ್ಚಿ. ತನ್ನ ಭ್ರಮೆ ಇದು. ಆಕೆ ಮತ್ತೆ ಬಾವಿಯತ್ತ ಹೊರಳಿದಳು. ಅಗೋ, ಕಾಳ್ ಕಾಳ್ ಎಂದು ಮಗುವಿನ ಅಳುವು, ಕರೆ! ಆಕೆ ಮತ್ತೆ ಮನೆಯತ್ತ ಹೊರಳಿದಳು. ಅತ್ತ ನೋಡಿದಳು, ಇತ್ತ ನೋಡಿದಳು. ಮಟಮಟ ಮಧ್ಯಾಹ್ನ! ಬಾವಿಯಲ್ಲಿ ಗೂಡು ಮಾಡಿದ ಹಕ್ಕಿಗಳೆರಡು ಕೂಜಿಸುತ್ತಾ ಅತ್ತ ಹೋದವು. ತನ್ನ ಕೊಡ ಬರಿದು. ತಾನು ಬಂದು ಎಷ್ಟು ಹೊತ್ತಾಯಿತು. ಆಕಾಶವಾಣಿ ಬಂದಂತೆ ಇನ್ನೂ ಕೂಸು ಕರೆಯುತ್ತಿದೆ. ಪಾಪ! ಅದಕ್ಕೆ ತಾನಲ್ಲದೆ ಯಾರು? ಅತ್ತೆಯವರಿಗೆ ಮಾವನವ–ರಿದ್ದಾರೆ. ಮಾವನವರಿಗೆ ಅವರ ಮಗನಿದ್ದಾನೆ. ಅವ–ರಿಗೆ ತಾನಿಲ್ಲದಿದ್ದರೆ ಇನ್ನೊಬ್ಬಳು ಮಾಲೆ ಹಿಡಿದು ಕುಳಿತಿದ್ದಾಳು! ತನ್ನ ಮಗುವಿಗೆ ತಾನಲ್ಲದೆ ಯಾರು? ಹೌದು, ತನ್ನ ತಾಯಿಗೆ ತಾನಲ್ಲದೆ ಯಾರು? ಬರುವವಳು ಬಂದಾಗ ಬರಲಿ, ಭ್ರಮೆ ಹಿಡಿದವರ ಕೈ ಬಿಡುವುದೇ? ಅವರು ತನಗೆ ಏನೂ ಅಂದಿಲ್ಲವಲ್ಲ! ತನ್ನನ್ನು ಕಣ್ಣೀರು ತಂದು ನೋಡುತ್ತಾರೆ. ಹೌದು! ಅವರೂ ಹಸಿದಿದ್ದಾರೆ. ಮಾವನವರು ಏನೆಂದಾರು? ಅತ್ತೆಯವರು ಏನೆಂದುಕೊಂಡಿರಬಹುದು? ಏನು ನೊಂದುಕೊಂಡಿರಬಹುದು?

ವಾತ್ಸಲ್ಯ, ಪತಿಭಕ್ತಿ, ಕೃತಜ್ಞತೆ, ಆದರ, ಇವೆಲ್ಲ ನಾಲ್ಕೆಳೆಯ ಹಗ್ಗವಾಗಿ ಹೊಸೆದು ಹಗ್ಗವಾಗಿ ಆಕೆಯನ್ನು ಮನೆಯತ್ತ ಎಳೆಯ ಹತ್ತಿದವು. ಆಕೆ ಬಾವಿಗೆ ಬಂದು ಕೊಡ ಸೇದಿದಳು. ಬಿರಬಿರನೆ ಮನೆಗೆ ಹೊರಟಳು. ಕೂಸಿನ ದನಿ ಕಿವಿದುಂಬಿತ್ತು. ವಾತ್ಸಲ್ಯವು ಎದೆದುಂಬಿ ಬಂದಿತ್ತು.

12th_Kannada_Reader_8.indd 176 22-05-2019 15:39:49

ಹಾದಿಯಲ್ಲಿ ಒಬ್ಬ ಮುತ್ತೈದೆ, 'ಎಷ್ಟೊತ್ತಿಗವ್ವ, ನೀರಿಗೆ ಹೋಗೋದು?' ಎಂದಳು. ಗುಡಿಯ ಹತ್ತಿರ ಬೆಕ್ಕೊಂದು ಬಲಕ್ಕೆ ಹೋಯಿತು. ಈಕೆ ದೇವರಿಗೆ ತಲೆ ಬಾಗಿಸಿದಳು. ಕೈ ಜೋಡಿಸುವ ಸನ್ನೆ ಮಾಡಿದಳು. ಮನೆಗೆ ಬಂದಾಗ ಮಾವನವರು ತಾಂಬೂಲ ಮೆಲ್ಲುತ್ತಿದ್ದರು. ಕೂಸು ಯಜಮಾನರ ತೊಡೆಯ ಮೇಲಿತ್ತು. ಅತ್ತೆ, 'ಬಾ ತಾಯಿ, ಬಿಸಿಲಲ್ಲಿ ಹೋಗಿದ್ದಿ. ಬಾವಿಯ ಮೇಲೆ ಯಾರಿರ್ತಾರ? ನಾನೇ ಕಳಿಸಬಾರದಿತ್ತು!' ಎಂದು ಮರುಗಿದಳು.

ಕೊಡವನ್ನು ದೇವರ ಬದಿಗಿಟ್ಟು, ಮೈ ಮುಖದ ಬೆವರೊರೆಸುವಾಗ ನಾದಿನಿ ಮಗುವನ್ನು ತಂದು ಮಡಿಲಲ್ಲಿಟ್ಟಳು. ಅದು ಆಗ ಅಳಹತ್ತಿತು. ತನಗಾಗಿ ಒಂದು ಜೀವಂತ ಜಗತ್ತು ಅಳುತ್ತಿರುವಾಗ ಯಾರದೋ ಮಾತಿಗಾಗಿ, ಮಧ್ಯಾಹ್ನದ ಬೇಸರಕ್ಕೆ ತಾನು ಜೀವಕ್ಕೆರವಾಗುತ್ತಿದ್ದೆನಲ್ಲ ಎಂದು ಆಕೆಗೆ ಎನಿಸಿತು. ತಾಯಿಯ ನೆನಪಾಗಿ ಕಣ್ಣೀರು ಬಂತು. ಅದನ್ನೊರೆಸಿ ತಮ್ಮ ಕುಲದೇವರಿಗೆ ಮನದಲ್ಲಿಯೇ ಆಕೆ ಬಾಗಿದಳು.

ಅತ್ತೆ, ಅತ್ತಿಗೆ, ನಾದಿನಿಯರು ಊಟಕ್ಕೆ ಕುಳಿತಾಗ ಮಗುವೂ, ಮನೆಯೂ ನಲಿಯುತ್ತಿತ್ತು.

ಕೃತಿ–ಕರ್ತೃ ವಿಚಾರ



ಅಂಬಿಕಾತನಯದತ್ತ ಕಾವ್ಯನಾವ್ಯದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಧಾರವಾಡದ ಸಾಧನಕೇರಿಯವರು. ಶಾಲಾ ಶಿಕ್ಷಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಇವರು ಸೊಲ್ಲಾಪುರದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿಯೂ, ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯ ನವೋದಯದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಇವರು ನಾದಲೀಲೆ, ಗಂಗಾವತರಣ, ಸೂರ್ಯಪಾನ, ಸಖೀಗೀತ ಮುಂತಾದ ಕನವ ಸಂಕಲನಗಳನ್ನು ರಚಿಸಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಇವರ ಅರಳು–ಮರಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 'ನಾಕುತಂತಿ' ಎಂಬ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ದೊರೆತಿದೆ.

ಕೇಂದ್ರ ಸರ್ಕಾರದ ಪದ್ಮಶ್ರೀ ಪುರಸ್ಕಾರಕ್ಕೂ ಭಾಜನರಾದ ಇವರು ಶಿವಮೊಗ್ಗದಲ್ಲಿ ನಡೆದ ಇಪ್ಪತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಉತ್ತರ ಕರ್ನಾಟಕದ ಆಡುಭಾಷೆಯನ್ನು ಜಾನಪದ ಲಯ ಗೇಯಗಳೊಂದಿಗೆ ಸಮರ್ಥವಾಗಿ ಬಳಸಿ ಗಾರುಡಿಗ ಕವಿಯೆಂದೇ ಖ್ಯಾತರಾಗಿದ್ದಾರೆ.

ಪ್ರಸ್ತುತ ಕಥೆಯನ್ನು ಬೇಂದ್ರೆಯವರ 'ನಿರಾಭರಣ ಸುಂದರಿ' ಎನ್ನುವ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಕ್ಷುಲ್ಲಕ ಕಾರಣಗಳಿಗೆ ಕಿರಿಹಿರಿಯರೆನ್ನದೆ ಆತ್ಮಹತ್ಯೆಗೆ ಶರಣಾಗುತ್ತಿರುವ ಸನ್ನಿವೇಶವನ್ನು ಇಂದು ಕಾಣುತ್ತೇವೆ. ಆದರೆ ಎಂತಹ ಸಂದರ್ಭದಲ್ಲೂ ಬದುಕಿರುವವನು ಶುಭವನ್ನು ಕಾಣುತ್ತಾನೆ. ಅದಕ್ಕೆ ಜೀವನವನ್ನು ಕಾಣುವ ಕಣ್ಣು, ಮನಸ್ಸು ಬೇಕು ಎನ್ನುವುದನ್ನು ತಿಳಿಸುವುದರ ಜೊತೆಗೆ ತಾಯಿ–ಮಗುವಿನ ಆಕರ್ಷಣೆ ಎಷ್ಟು ಸಾಂದ್ರವಾದುದು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.

ಇಲ್ಲಿಯ ನಾಯಕಿ ಜೀವನದ ಒತ್ತಡಗಳಿಂದ ಬೇಸತ್ತು, ಆತ್ಮಹತ್ಯೆಗೆ ಮನಸ್ಸು ಕೊಟ್ಟು ಅದಕ್ಕಾಗಿ ಪ್ರಯತ್ನಿಸುತ್ತಿರುವಾಗ, ಅರ್ಧುತನ ಬಾಯಿಗೆ ಹೋಗುವ ಸಂದರ್ಭದಲ್ಲಿ ತನ್ನ ಕಂದನನ್ನು ನೆನೆದ ಪುಣ್ಯಕೋಟಿಯಂತೆ ತನ್ನ ಮಗುವಿನ ನೆನಪು ಆಕೆಯ ಮನದಲ್ಲಿ ಮೂಡುತ್ತದೆ, ಕರೆದಂತೆ ಭಾಸವಾಗುತ್ತದೆ. ಕ್ಷಣದ ಹಿಂದೆ ತಾನು ಒಂಟಿ ಎನಿಸಿದ್ದವಳಿಗೆ; ಜಗತ್ತಿನ ಜೊತೆ ಸಂಬಂಧ ಕಳೆದುಕೊಳ್ಳಬೇಕೆಂದು ನಿರ್ಧರಿಸಿದ್ದವಳಿಗೆ ಒಮ್ಮೆಲೇ ಕೊಂಡಿಯೊಂದು ಸಿಕ್ಕಂತಾಗುತ್ತದೆ. ತಾನು ಒಂಟಿಯಲ್ಲ ಎನಿಸುತ್ತದೆ. ಮಗು ಅವಳನ್ನು ಜಗತ್ತಿನೊಂದಿಗೆ ಮತ್ತೆ ಬೆಸೆಯುತ್ತದೆ. ಇಲ್ಲಿ ನಾಯಕಿಯ ಮನಸ್ಸಿನ ತುಮುಲ, ಏರಿಳಿತ, ತಿರುವುಗಳು, ಆಲೋಚನೆಯ ಲಯ ಇತ್ಯಾದಿಗಳನ್ನು ಈ ಕಥೆ ಸಮರ್ಥವಾಗಿ ಸೆರೆ ಹಿಡಿದಿದೆ. ಮಮತೆ, ವಾತ್ಸಲ್ಯ ಮತ್ತು ಜೀವನ ಪ್ರೀತಿಗಳು ಇಲ್ಲಿನ ಮುಖ್ಯ ಆಶಯಗಳಾಗಿವೆ.

12th_Kannada_Reader_8.indd 177 22-05-2019 15:39:49

ಪದಗಳ ಅರ್ಥ

ಉಲಿವು–ಸದ್ದು, ಮಾತು; ಕಾಡುಮಿಕ–ಕಾಡುಪ್ರಾಣಿ; ನೆರೆ–ಗುಂಪುಸೇರು; ಪ್ರಾತಃಕಾಲ–ಮುಂಜಾನೆ; ಕೊಡ–ಬಿಂದಿಗೆ; ಸಂದಿ–ಓಣಿ; ಕುಟುಂಬ–ಹೆಂಡತಿ, ಸಂಸಾರ; ವ್ಯಾಧಿ–ಕಾಯಿಲೆ, ರೋಗ; ಬಾಧೆ–ನೋವು; ಅಡಕಲ ಕೋಣೆ–ಅಡುಗೆಮನೆ; ಚೊಚ್ಚಿಲ–ಮೊದಲ; ಪಡಸಾಲೆ–ಜಗುಲಿ; ಶಯನ–ಮಲಗು; ಮಡಿ–ಶುಭ್ರ ಆಚಾರ; ಬಿಡಾರ–ತಂಗುವ ಸ್ಥಳ; ಸಾನ್ನಿಧ್ಯ–ಹತ್ತಿರ; ಮೀಸಲು ನೀರು–ಮಡಿ ನೀರು; ಪ್ರತಿಷ್ಠೆ–ಘನತೆ, ಸ್ಥಾಪನೆ; ಇಣಚಿ–ಅಣಿಲು; ಚಪಲತೆ–ಚಂಚಲತೆ; ಹಳ್ಳ–ಸಣ್ಣ ಹೊಳೆ; ಅನಾಹುತ–ತೊಂದರೆ; ಸೆರೆ–ಬಂಧನ; ರಂಬಾಟ–ಕೋಲಾಹಲ, ಗದ್ದಲ; ರೋಸು–ಅಸಹ್ಯಪಡು; ತಟಸ್ಥ–ಚಲಿಸದ; ಹಣಕು–ಇಣುಕಿ ನೋಡು, ಕದ್ದುನೋಡು; ಪಾಣಿಗ್ರಹಣ–ಮದುವೆ; ಸೆಳೆವು–ಸೆಳೆತ; ಅವೇಶ–ರೋಷ; ಸಾವರಿಸು–ಚೇತರಿಸಿಕೊಳ್ಳು; ಉಕ್ಕಡವನ್ನು ಉಚ್ಚು–ಕುಣಿಕೆಯನ್ನು ಬಿಚ್ಚು; ಕೂಜಿಸು–ಹಕ್ಕಿಗಳ ಕೂಗು; ಆಕಾಶವಾಣಿ–ಅಶರೀರವಾಣಿ; ಎರವಾಗು–ಹಾನಿಯಾಗು, ಮುಳುವಾಗು.

ಟಿಪ್ಪಣಿಗಳು

ದಿವ್ಯ: ಸರಿಯಾದ ಸಾಕ್ಷಿ ಆಧಾರಗಳು ದೊರೆಯದಿದ್ದಾಗ ಅಪರಾಧವನ್ನು ನಿರ್ಣಯಿಸಲು ಕೈಗೊಳ್ಳುತ್ತಿದ್ದ ಪ್ರಾಚೀನ ಕಾಲದ ಉಗ್ರ ಪರೀಕ್ಷೆ.

ಕಂದಕ: ಕೋಟೆಯ ಸುತ್ತಲಿನ ಅಗಳು, ಕೋಟೆಯ ಸುತ್ತಲೂ ನೀರಿರುವ ತೋಡುಗಾಲುವೆ.

ಗೇಣು: ಒಂಭತ್ತು ಅಂಗುಲಗಳ ಅಳತೆ; ರೂಢಿಯಲ್ಲಿ ಒಬ್ಬ ವ್ಯಕ್ತಿಯ ಹಸ್ತದ ಕಿರುಬೆರಳನ್ನು ವಿರುದ್ಧ ದಿಕ್ಕಿನಲ್ಲಿ ನೇರವಾಗಿ ಚಾಚಿದಾಗ ಕಿರುಬೆರಳಿನ ತುತ್ತತುದಿಯಿಂದ ಹೆಬ್ಬೆರಳಿನ ತುದಿಯವರೆಗಿನ ಉದ್ದ; ಪ್ರಸ್ತುತ ಪಾಠದಲ್ಲಿ ಎರಡೂವರೆ ಗೇಣಿನ ತುಂಡು ಎಂದರೆ ಕಡಿಮೆ ಭೂಮಿ ಎಂದರ್ಥ.

ಧೂಪ: ಸಾಂಬ್ರಾಣಿ ಮೊದಲಾದ ಸುವಾಸನೆಯ ವಸ್ತುಗಳನ್ನು ಕೆಂಡದ ಮೇಲೆ ಹಾಕಿದಾಗ ಹೊರಡುವ ಹೊಗೆ.

ನೈವೇದ್ಯ: ಭೋಜ್ಯ ಪದಾರ್ಥಗಳನ್ನು ದೇವರಿಗೆ ಅರ್ಪಿಸುವಿಕೆ, ನಿವೇದಿಸುವಿಕೆ.

ಅಗ್ನಿದೇವರು ಶಾಂತರಾಗಿ, ದೇವರು ಜಲಸಮಾಧಿ ಹೊಂದಿದರು: ಬೆಂಕಿ ನಂದಿತು, ವಿಗ್ರಹಗಳು ನೀರಿನಿಂದ ತೊಯ್ದವು.

ಬೀಳು ಹೊಲ: ಪಾಳುಬಿದ್ದ ಹೊಲ, ಬಂಜರು ಭೂಮಿ.

ಅಭ್ಯಾಸ

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ.

1. ಶಾಸ್ತ್ರಿಗಳ ಸೊಸೆ ಮಧ್ಯಾಹ್ನ ಎಲ್ಲಿಗೆ ಹೊರಟಳು?
2. ಬಾವಿಯ ಸಮೀಪವಿದ್ದ ಎರಡು ಮರಗಳಾವುವು?
3. ಕಾಡುಮಿಕಗಳು ಹಳ್ಳದ ಬಳಿ ಏಕೆ ಬಂದವು?
4. ಬಾವಿಯ ಭಯಾನಕತೆಯನ್ನು ಯಾವುದು ಹೆಚ್ಚಿಸಿತ್ತು?
5. ಪಡಸಾಲೆ ಯಾವುದಕ್ಕೆ ಆಶ್ರಯವಾಗಿತ್ತು ?
6. ಸೊಸೆಯನ್ನು ಮನೆಯತ್ತ ಸೆಳೆದ ಭಾವ ಯಾವುದು?
7. ಮನೆ ಯಾವಾಗ ನಲಿಯುತ್ತಿತ್ತು ?

II. ಕೆಳಗಿನ ಪ್ರಶ್ನೆಗಳಿಗೆ ಮೂರ್ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಶಾಸ್ತ್ರಿಗಳ ಸೊಸೆ ಏಕೆ ನೀರಿಗೆ ಹೊರಡಬೇಕಾಯಿತು?
2. ಅಡಿಗೆ ಮನೆ ಮತ್ತು ದೇವರ ಸಾನ್ನಿಧ್ಯ ಹೇಗಿತ್ತು ?
3. ಶಾಸ್ತ್ರಿಗಳ ಮುಖದಲ್ಲಿ ಹೊಗೆ ಮುಸುಕಲು ಕಾರಣವೇನು?
4. ಶಾಸ್ತ್ರಿಗಳ ಹೆಂಡತಿ ಏನು ರಂಬಾಟ ಮಾಡಿದರು?
5. ಶಾಸ್ತ್ರಿಗಳ ಹೆಂಡತಿಗೆ ಮೊಮ್ಮಗನ ಸುಖ ಮಸುಕಾಗಿ ಕಾಣಲು ಕಾರಣವೇನು?

III. ಕೆಳಗಿನ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.

1. ಬಾವಿಯ ಪರಿಸರ ಏಕೆ ಭಯಾನಕವಾಗಿತ್ತು ?
2. ಸೊಸೆಯ ಬಗ್ಗೆ ಊರವರು ಆಡಿದ ಮಾತುಗಳೇನು?

12th_Kannada_Reader_8.indd 178 22-05-2019 15:39:49

3. ಬಾವಿಯ ಬಳಿ ಸೊಸೆ ಸಾವಿಗೆ ಸಿದ್ಧಳಾದ ಬಗೆ ಹೇಗೆ?
4. ಸೊಸೆ ಹಿಂದಿರುಗಿದಾಗ ಮನೆಯವರು ಏನು ಮಾಡುತ್ತಿದ್ದರು ?
5. ಮಗುವಿನ ಕರೆ ತಾಯಿಯಲ್ಲಿ ಜೀವನ ಪ್ರೀತಿಯನ್ನು ಹೇಗೆ ಮೂಡಿಸಿತು ?

ಚಟುವಟಿಕೆ

1. 'ಆತ್ಮಹತ್ಯೆ ಮಹಾಪಾಪ' ಎಂಬ ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.
2. 'ಗೋವಿನ ಹಾಡು' ಕವಿತೆಯನ್ನು ಸಂಗ್ರಹಿಸಿ ಓದಿರಿ.

ಅಂತರಂಗದ ಮೃದಂಗ.. ದ ರಾ ಬೇಂದ್ರೆ

ಅಂತರಂಗದ ಮೃದಂಗ ಅಂತು ತೊಂ ತನಾನ
ಚಿತ್ತ ತಾಳ ಬಾರಿಸುತಲಿತ್ತು ಝಂ ಝಣಣ ನಾನಾ
ನೆನಪು ತಂತಿ ಮೀಟುತಿತ್ತು ತೊಂತನನ ತಾನ, ತೊಂತನನ ತಾನ,
ತೊಂತನನ ತಾನ [ಪ]

ಹಲವು ಜನ್ಮದಿಂದ ಬಂದ ಯಾವುದೋನೋ ಧ್ಯಾನ
ಏಕನಾದದಂದದೊಂದು ತಾನದ ವಿತಾನ
ತನಗೆ ತಾನೇ ಸೋಲುತಿಹುದು ನೂಲುತಿಹುದು ಗಾನ ॥೧]

ಕಲ್ಪದಾದಿಯಲ್ಲೆ ನನ್ನ ನಿನ್ನ ವಿರಹವಾಗಿ
ಎಲ್ಲೋ ಏನೋ ನಿನ್ನ ಹುಡುಕಿ ಕಾಂಬ ಕಣ್ಣೆ ಹೋಗಿ
ಮರೆವೆಗೊಂಡು ಬಿದ್ದೆ ನಾನು ನೆಲದ ಮಣ್ಣು ತಾಗಿ ॥ ೨]

ಕತ್ತಲಲ್ಲೆ ಬೆಳಕು ಮಿಂಚಿ ಪಡೆದೀತೇಳು ಬಣ್ಣ
ಮೂಕ ಮೌನ ತೂಕ ಮೀರಿ ದನಿಯು ಹುಟ್ಟಿ ಸಣ್ಣ
ಕಣ್ಣ ಮಣ್ಣ ಕೂಡಲಲ್ಲಿ ಹಾಡು ಕಟ್ಟಿತಣ್ಣ ॥೩]

12th_Kannada_Reader_8.indd 179 22-05-2019 15:39:49

ವ್ಯಾಕರಣ

ಘಟಕ ಎಂಟು

ಛಂದಸ್ಸು, ಅಲಂಕಾರ, ಪತ್ರಲೇಖನ, ಪ್ರಬಂಧಗಳು.

ವ್ಯಾಕರಣ ಶಾಸ್ತ್ರವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದ ಶಾಸ್ತ್ರವಾದರೆ ಛಂದಸ್ಸು ಕೇವಲ ಪದ್ಯಗಳಿಗೆ ಮಾತ್ರ ಸಂಬಂಧಿಸಿದ ಶಾಸ್ತ್ರವಾಗಿದೆ. ಪದ್ಯಗಳು ನಾನಾ ರೀತಿಯಲ್ಲಿರುತ್ತವೆ. ಕೆಲವು ಪದ್ಯಗಳು ನಾಲ್ಕು ಸಾಲಿನವು, ಕೆಲವು ಪದ್ಯಗಳು ಆರು ಸಾಲಿನವು, ಕೆಲವು ಮೂರು ಸಾಲಿನವು. ಪದ್ಯಗಳ ಸಾಲುಗಳಲ್ಲಿ ಕೆಲವು ಸಾಲುಗಳು ಉದ್ದ, ಕೆಲವು ಸಾಲುಗಳು ಚಿಕ್ಕವು – ಇಂತಹ ಪದ್ಯಗಳ ನಿಯಮಗಳನ್ನು ತಿಳಿಸುವ ಶಾಸ್ತ್ರವೇ ಛಂದಸ್ಸು.

ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ವ್ಯಾಕರಣದಂತೆ ಛಂದಸ್ಸಿನ ಅನುಭವವನ್ನು ಮಾಡಿಕೊಳ್ಳುವುದೂ ಅಗತ್ಯವಾಗಿದೆ. ಛಂದಸ್ಸು ಎಂದರೆ ಪದ್ಯದ ನಿಯಮವನ್ನು ತಿಳಿಸುವ ಶಾಸ್ತ್ರ. ವ್ಯಾಕರಣವು ಗದ್ಯ ಪದ್ಯಗಳೆರಡರ ಭಾಷಾನಿಯಮವನ್ನು ತಿಳಿಸುವುದು. ಛಂದಸ್ಸು ಪದ್ಯಗಳ ನಿಯಮವನ್ನು ಮಾತ್ರ ತಿಳಿಸುವುದು. ಮಹತ್ತಾದ ವಿಷಯಗಳನ್ನು ಸಂಗ್ರಹಿಸಿ ಹೇಳುವುದಕ್ಕೂ ರಸವತ್ತಾದ ಅಂಶಗಳನ್ನು ಮನೋಹರವಾಗಿ ಹೇಳುವುದಕ್ಕೂ ನೆನಪಿನಲ್ಲಿಟ್ಟುಕೊಳ್ಳುವುದಕ್ಕೂ ಪದ್ಯವು ಗದ್ಯಕ್ಕಿಂತ ಸುಲಭ. ಆದುದರಿಂದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳಲ್ಲಿ ಗದ್ಯಕ್ಕಿಂತ ಪದ್ಯವೇ ಅಧಿಕ. ವ್ಯಾಕರಣ, ಛಂದಸ್ಸು, ಅಲಂಕಾರಾದಿಗಳನ್ನು ತಿಳಿಸುವ ಗ್ರಂಥಗಳು ಹಿಂದಿನ ಕಾಲದಲ್ಲಿ ಪದ್ಯಮಯವಾಗಿಯೇ ರಚಿತವಾಗಿವೆ. ಆದುದರಿಂದ ಹಿಂದಿನ ಪದ್ಯಗಳನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೂ ಹೊಸದಾಗಿ ಪದ್ಯಗಳನ್ನು ಬರೆಯುವುದಕ್ಕೂ ಛಂದಸ್ಸಿನ ಅಭ್ಯಾಸವು ಅಗತ್ಯವಾಗಿದೆ.

ಛಂದಸ್ಸು ಎಂಬುದು ಮುಖ್ಯವಾಗಿ ಗುರು, ಲಘು, ಅಕ್ಷರಗಳ ವಿನ್ಯಾಸ, ಮಾತ್ರೆ, ಗಣ, ಪ್ರಾಸ, ಯತಿ ಮುಂತಾದವುಗಳನ್ನು ಒಳಗೊಂಡಿದೆ.

ಪದ್ಯ ಅಥವಾ ವೃತ್ತವು ಪಾದದಿಂದ ಕೂಡಿರುವುದು. ಪಾದಗಳು ಗಣ ಮತ್ತು ಪ್ರಾಸ ನಿಯಮವುಳ್ಳ ಶಬ್ದ ಸಂಘಟನೆಗಳು. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದಿಂದ ಬಂದಿರುವ ಛಂದಸ್ಸು ಹಾಗೂ ಅಚ್ಚಗನ್ನಡ ಛಂದಸ್ಸು ಎಂದು ಎರಡು ವಿಧಗಳಿವೆ. ಪದ್ಯಗಳ ಪಾದಗಳು ವರ್ಣಗಣ, ಮಾತ್ರಾಗಣ ಮತ್ತು ಅಂಶಗಣ ನಿಯಮಗಳಿಂದ ಕೂಡಿದವುಗಳಾಗಿರುತ್ತವೆ. ಸಂಸ್ಕೃತದಿಂದ ಬಂದಿರುವ ವೃತ್ತ ಜಾತಿಗಳು ವರ್ಣಗಣ ನಿಯಮವುಳ್ಳವು. ಕನ್ನಡದ ವೃತ್ತಗಳು ಮಾತ್ರಾಗಣ ಮತ್ತು ಅಂಶ ಗಣ ನಿಯಮದಿಂದ ಕೂಡಿದವುಗಳು.

ಮಾತ್ರೆ

ಮಾತ್ರೆಗಳಲ್ಲಿ ಲಘು, ಗುರು ಮತ್ತು ಪ್ಲುತವೆಂದು ಮೂರು ವಿಧಗಳಿವೆ.

ಲಘು:

ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲ ಪರಿಮಾಣಕ್ಕೆ 'ಮಾತ್ರೆ' ಎಂದು ಹೆಸರು. ಇದಕ್ಕೆ 'ಲಘು' ಎಂದು ಸಂಜ್ಞೆ.

ಉದಾಹರಣೆ:

ಲಘುವಿಗೆ: ∪ ∪ ∪

ಹರಕೆ ವಿಧಿ ಕೃಪೆ

∪ ∪ ∪

ಧವಳ ಗಿರಿ

12th_Kannada_Reader_8.indd 180 22-05-2019 15:39:49

ಗುರು:

ಒಂದು ದೀರ್ಘಾಕ್ಷರವನ್ನು ಉಚ್ಚರಿಸಲು ಎರಡು ಮಾತ್ರೆಯಷ್ಟು ಕಾಲಾವಧಿ ಬೇಕು. ಇದಕ್ಕೆ 'ಗುರು' ಎಂದು ಸಂಜ್ಞೆ.

ಉದಾಹರಣೆ:

– – – –

ಬಾ, ಇಂದಲ್ಲಾ

– – – – – –

ರಾಜಾ ಮೀರಾ ರಾಧಾ

ಎಲ್ಲಾ ಹ್ರಸ್ವಾಕ್ಷರಗಳು ಲಘುಗಳಾಗುತ್ತವೆ. ಅವನ್ನು ಗುರುತಿಸುವುದು ಸುಲಭ. ಪ್ಲುತಾಕ್ಷರಗಳು ಪದ್ಯಗಳಲ್ಲಿ ಬರುವುದು ಬಹು ವಿರಳ. ಅವನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಒಂದು ಅಕ್ಷರವು ಈ ಕೆಳಗಿನ ಆರು ಕಾರಣಗಳಿಂದ ಗುರುವಾಗಬಹುದು.

ಉದಾಹರಣೆ:

– – – – –

1. ದೀರ್ಘಸ್ವರಯುಕ್ತವಾದ ಅಕ್ಷರ : **ಆ**ಟ, **ಕಾಲಾ**ಳು, **ಮೇಲಾ**ಟ

– – –

2. ಅನುಸ್ವಾರಯುಕ್ತವಾದ ಅಕ್ಷರ : **ಅಂ**ದು, **ಇಂ**ದು, **ಚಂ**ದ

– –

3. ವಿಸರ್ಗದ ಹಿಂದಿನ ಅಕ್ಷರ : **ದುಃ**ಖ, ಅಂ**ತಃ**ಕರಣ

– – –

4. ಸಂಯುಕ್ತಾಕ್ಷರದ ಹಿಂದಿನ ಅಕ್ಷರ : **ಎ**ಲ್ಲ **ಬ**ಲ್ಲವರಿಲ್ಲ

– – –

5. ಸ್ವರ ರಹಿತ ವ್ಯಂಜನದ ಹಿಂದಿನ ಅಕ್ಷರ : **ನಿ**ಲ್ **ಕ**ಣ್ **ಪೆ**ಸರ್

6. ಮಾತ್ರಾಗಣ ನಿಯಮದ ಷಷ್ಠ್ಯರ್ಧದ ಕಡೆಯ ಅಕ್ಷರ ಹ್ರಸ್ವಾಕ್ಷರ. ಉದಾಹರಣೆ,

ಏನ ಕಲಿತರದೇನು ಯತ್ನದೊ

ಳೇನ ಮಾಡಿದರೇನು ಸರ್ವವು

–

ಕಾನನದ ಬೆಳದಿಂಗಳಂದದಿ ವ್ಯರ್ಥವಾಗಿಹು**ದು** ॥

ಒಂದು ಅಕ್ಷರವು ಎರಡು ಕಾರಣಗಳಿಂದ ಗುರುವಾದರೂ ಅದಕ್ಕೆ ಒಂದೇ ಸಂಜ್ಞೆ ಬರುತ್ತದೆ ಎಂಬುದನ್ನೂ ಶಿಥಿಲದ್ವಿತ್ವದ ಹಿಂದಿನ ಅಕ್ಷರಕ್ಕೆ ಗುರು ಸಂಜ್ಞೆಯಿಲ್ಲವೆಂಬುದನ್ನೂ ತಿಳಿಯಿರಿ.

ಪ್ಲುತ:

ಅದೇ ದೀರ್ಘಾಕ್ಷರವನ್ನು ಇನ್ನಷ್ಟು ಎಳೆದು ಉಚ್ಚರಿಸಿದಲ್ಲಿ ಅದಕ್ಕೆ ಮೂರು ಮಾತ್ರೆಗಳ ಕಾಲಾವಧಿ ಬೇಕು. ಇದಕ್ಕೆ 'ಪ್ಲುತ' ಎಂದು ಸಂಜ್ಞೆ. ಪ್ಲುತವನ್ನು ಸೂಚಿಸಲು 'ऽ' ಎಂಬ ಸಂಜ್ಞೆಯನ್ನೂ ಉಪಯೋಗಿಸುತ್ತಾರೆ.

ಉದಾಹರಣೆ:

ಹಾ ರಾಮಾ ರಾ**ಮಾ**ऽ ಎಂದು ಸೀತೆ ಬಾಯಳಿದಳ್ತಳ್

ಲಘುವನ್ನು ಸೂಚಿಸಲು 'ು' ಎಂಬ ಸಂಜ್ಞೆಯನ್ನೂ; ಗುರುವನ್ನು ಸೂಚಿಸಲು '–' ಎಂಬ ಸಂಜ್ಞೆಯನ್ನೂ; ಪ್ಲುತವನ್ನು ಸೂಚಿಸಲು 'ऽ' ಎಂಬ ಸಂಜ್ಞೆಯನ್ನೂ ಉಪಯೋಗಿಸುತ್ತಾರೆ.

12th_Kannada_Reader_8.indd 181 22-05-2019 15:39:49

ಗಣಗಳು

ಗಣವೆಂದರೆ ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಅಥವಾ ಮಾತ್ರೆಗಳ ಗುಂಪು. ಇದರಲ್ಲಿ ವರ್ಣಗಣ(ಅಕ್ಷರಗಣ), ಮಾತ್ರಾಗಣ ಮತ್ತು ಅಂಶಗಣವೆಂದು ಮೂರು ವಿಧಗಳಿವೆ. ವರ್ಣಗಣ ನಿಯಮಕ್ಕೆ ಒಳಪಟ್ಟ ಪದ್ಯಗಳನ್ನು ವರ್ಣವೃತ್ತಗಳೆಂದೂ; ಮಾತ್ರಾಗಣ ನಿಯಮಕ್ಕೆ ಒಳಪಟ್ಟವುಗಳನ್ನು ಮಾತ್ರಾವೃತ್ತಗಳೆಂದೂ; ಅಂಶಗಣಗಳುಳ್ಳ ವೃತ್ತಗಳನ್ನು ಅಂಶಗಣ ವೃತ್ತಗಳೆಂದೂ ಕರೆಯುವರು.

ವರ್ಣಗಣ (ಅಕ್ಷರ ಗಣ)

ವರ್ಣಗಣಗಳಿಂದ ಕೂಡಿದ ಪಾದವುಳ್ಳ ವೃತ್ತಗಳನ್ನು ಮೂರು ಮೂರು ಅಕ್ಷರಗಳ ಗುಂಪುಗಳನ್ನಾಗಿ ವಿಭಾಗಿಸುವರು. ಮೂರು ಮೂರು ಅಕ್ಷರಗಳು ಸೇರಿ ಒಂದು ಗಣವಾಗುವುದು. ಈ ವರ್ಣಗಣವನ್ನು ಮಗಣ, ನಗಣ, ಯಗಣ, ಜಗಣ, ರಗಣ, ಸಗಣ ಮತ್ತು ತಗಣವೆಂದು ಎಂಟು ವಿಧವಾಗಿ ವಿಂಗಡಿಸಿದ್ದಾರೆ. ಅವುಗಳ ಲಕ್ಷಣವನ್ನು ಈ ಪದ್ಯದಿಂದ ತಿಳಿಯಬಹುದು.

ಗುರು ಲಘು ಮೂರಿರೆ ಮ ನ ಗಣ
ಗುರು ಲಘು ನಡುವಿರೆ ಜ ರ ಗಣ
ಗುರು ಲಘು ಕಡೆಯಲ್ಲಿ ಬರಲು ಸ ತ ಗಣಮಕ್ಕುಂ ॥

ಗುರು ಮೂರಿದ್ದರೆ ಮಗಣ, ಲಘು ಮೂರಿದ್ದರೆ ನಗಣ; ಗುರು ನಡುವಿದ್ದರೆ ಜಗಣ, ಲಘು ನಡುವಿದ್ದರೆ ರಗಣ; ಗುರು ಕಡೆಯಲ್ಲಿ ಬರಲು ಸಗಣ, ಲಘು ಕಡೆಯಲ್ಲಿ ಬರಲು ತಗಣವಾಗುತ್ತದೆ.

ಉದಾಹರಣೆ:

ಗುರು ಮೂರಿದ್ದರೆ	– – –	ಮಗಣ	ಮಾರ್ತಾಂಡಂ
ಲಘು ಮೂರಿದ್ದರೆ	ᴗ ᴗ ᴗ	ನಗಣ	ಕನಕ
ಗುರು ಮೊದಲಿದ್ದರೆ	– ᴗ ᴗ	ಭಗಣ	ಚಾಮರ
ಲಘು ಮೊದಲಿದ್ದರೆ	ᴗ – –	ಯಗಣ	ಸುಧಾಮಂ
ಗುರು ನಡುವಿದ್ದರೆ	ᴗ – ᴗ	ಜಗಣ	ಸಮಾಜ
ಲಘು ನಡುವಿದ್ದರೆ	– ᴗ –	ರಗಣ	ರಾಜಸಂ
ಗುರು ಕಡೆಯಲ್ಲಿದ್ದರೆ	ᴗ ᴗ –	ಸಗಣ	ವನಜಂ
ಲಘು ಕಡೆಯಲ್ಲಿದ್ದರೆ	– – ᴗ	ತಗಣ	ಸಂತೋಷ

12th_Kannada_Reader_8.indd 182 22-05-2019 15:39:50

ಇದನ್ನು ಸುಲಭವಾಗಿ ನೆನಪಿಲ್ಲಿಟ್ಟುಕೊಳ್ಳಲು 'ಯ ಮಾ ತಾ ರಾ ಜ ಭಾ ನ ಸ ಲ ಗಂ' ಎಂಬ ಸೂತ್ರವನ್ನು ಮಾಡಿಕೊಂಡಿರುವರು. ಈ ಸೂತ್ರದಲ್ಲಿ ಮೊದಲಿನಿಂದ ಕ್ರಮವಾಗಿ ಮೂರು ಅಕ್ಷರಗಳನ್ನು ತೆಗೆದುಕೊಂಡಾಗ ಪ್ರತಿ ಗುಂಪಿನ ಮೊದಲನೆಯ ಅಕ್ಷರವು ಗಣದ ಹೆಸರನ್ನು ಸೂಚಿಸುತ್ತದೆ.

ಉದಾಹರಣೆ:

ಯ ಮಾ ತಾ	ಲ – –
ಮಾ ತಾ ರಾ	– – –
ತಾ ರಾ ಜ	– – ಲ
ರಾ ಜ ಭಾ	– ಲ –
ಜ ಭಾ ನ	ಲ – ಲ
ಭಾ ನ ಸ	– ಲ ಲ
ನ ಸ ಲ	ಲ ಲ ಲ
ಸ ಲ ಗಂ	ಲ ಲ –

ಮಾತ್ರಾಗಣ

ನಿರ್ದಿಷ್ಟವಾದ ಮಾತ್ರೆಗಳ ಸಮೂಹವನ್ನು 'ಮಾತ್ರಾಗಣಗಳು' ಎನ್ನುತ್ತೇವೆ. ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣ ಎಂದು ಇವುಗಳಲ್ಲಿ ಮೂರು ವಿಧಗಳಿವೆ.

ಕನ್ನಡ ಛಂದೋನಿಯಮಕ್ಕೆ ಒಳಪಟ್ಟ ವೃತ್ತಗಳಲ್ಲಿ ಹೆಚ್ಚಿನವು ಮಾತ್ರಾಗಣ ನಿಯಮದಿಂದ ಕೂಡಿದವುಗಳಾಗಿವೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಕಂದಪದ್ಯ, ರಗಳೆ ಮುಂತಾದವು ಮಾತ್ರಾಗಣ ನಿಯಮಕ್ಕೆ ಒಳಪಟ್ಟವುಗಳಾಗಿವೆ. ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಮೊದಲಾದವು ಕೂಡ ಮಾತ್ರಾ ನಿಯಮದಿಂದಲೇ ಉಂಟಾದವುಗಳಲ್ಲದೆ ಅಕ್ಷರ ಗಣ ನಿಯಮವುಳ್ಳವುಗಳಲ್ಲ. ಕಂದಪದ್ಯ ಮಾತ್ರಾಗಣ ಮತ್ತು ಅಕ್ಷರಗಣ ನಿಯಮವೆಂಬ ಎರಡು ನಿಯಮಗಳ ಮಿಲನದಿಂದ ಉಂಟಾದಂತೆ ಕಂಡು ಬರುತ್ತದೆ.

ಮಾತ್ರಾಗಣಗಳಲ್ಲಿ ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣಗಳೆಂದು ಮುಖ್ಯವಾಗಿ ಮೂರು ವಿಧಗಳಿವೆ. ಇವುಗಳಲ್ಲಿ ಮೂರು ಮಾತ್ರೆಯ ಗಣಗಳಲ್ಲಿ ಮೂರು ವಿಧಗಳಿವೆ. ನಾಲ್ಕು ಮಾತ್ರೆಯ ಗಣಗಳಲ್ಲಿ ಐದು ವಿಧಗಳಿವೆ. ಐದು ಮಾತ್ರೆಯ ಗಣಗಳಲ್ಲಿ ಎಂಟು ವಿಧಗಳಿವೆ.

ಉದಾಹರಣೆ:

1. ಮೂರು ಮಾತ್ರೆಯ ಗಣಗಳು ಮೂರು ವಿಧ

ಲ ಲ ಲ
– ಲ
ಲ –

2. ನಾಲ್ಕು ಮಾತ್ರೆಯ ಗಣಗಳು ಐದು ವಿಧ

ಲ ಲ ಲ ಲ
– –
ಲ ಲ –
– ಲ ಲ
ಲ – ಲ

3. ಐದು ಮಾತ್ರೆಯ ಗಣಗಳು ಎಂಟು ವಿಧ

ಲ ಲ ಲ ಲ ಲ
– ಲ ಲ ಲ
ಲ ಲ – ಲ
– – ಲ
– ಲ –
ಲ ಲ ಲ –
ಲ – ಲ ಲ

12th_Kannada_Reader_8.indd 183 22-05-2019 15:39:50

ಅಂಶಗಣ

ಈ ಗಣದಲ್ಲಿ ನಿರ್ದಿಷ್ಟ ಅಂಶಗಳಿರುತ್ತವೆ. ಗಣದ ಆದಿಯಲ್ಲಿ ಬರುವ ಅಂಶವನ್ನು ಮೂಲಾಂಶವೆನ್ನುತ್ತಾರೆ. ಅಂಶಗಣವನ್ನು ಅವುಗಳ ಅಂಶಗಳಿಂದ ನಿಶ್ಚಯಿಸಬೇಕು. ಗಣದ ಆದಿಯಲ್ಲಿ ಬರುವ ಅಂಶವನ್ನು ಮೂಲಾಂಶವೆಂದು ಕರೆಯುತ್ತಾರೆ. ಇದರಲ್ಲಿ ಒಂದು ಗುರು ಅಥವಾ ಎರಡು ಲಘುಗಳು ಇರಬೇಕು. ಮುಂದೆ ಬರುವ ಒಂದು ಗುರು ಅಥವಾ ಒಂದು ಲಘುವನ್ನು ಒಂದು ಅಂಶವೆಂದು ಪರಿಗಣಿಸಲಾಗುತ್ತದೆ. ಅಂಶಗಣದಲ್ಲಿ ಬ್ರಹ್ಮಗಣ, ವಿಷ್ಣುಗಣ ಮತ್ತು ರುದ್ರಗಣವೆಂದು ಮೂರು ವಿಧಗಳಿವೆ. ಬ್ರಹ್ಮಗಣದಲ್ಲಿ ಎರಡು ಅಂಶಗಳೂ ವಿಷ್ಣುಗಣದಲ್ಲಿ ಮೂರು ಅಂಶಗಳೂ ರುದ್ರಗಣದಲ್ಲಿ ನಾಲ್ಕು ಅಂಶಗಳೂ ಇರುತ್ತವೆ. ಬ್ರಹ್ಮಗಣಗಳು ನಾಲ್ಕು ವಿಧವಾಗಿಯೂ ವಿಷ್ಣುಗಣಗಳು ಎಂಟು ವಿಧವಾಗಿಯೂ, ರುದ್ರಗಣಗಳು ಹದಿನಾರು ವಿಧವಾಗಿಯೂ ಬರುತ್ತವೆ. ಅಚ್ಚಗನ್ನಡ ಛಂದಸ್ಸುಗಳು ಅಂಶಗಣಗಳಿಂದ ರಚಿತವಾಗಿವೆ.

ಉದಾಹರಣೆ:

ಬ್ರಹ್ಮಗಣಗಳು 4 ವಿಧವಾಗಿವೆ:

– –	ಬ್ರಹ್ಮಂ
∪ ∪ –	ಸುರಪಂ
– ∪	ಧಾತೃ
∪ ∪ ∪	ಅಜನು

ವಿಷ್ಣುಗಣಗಳು 8 ವಿಧವಾಗಿವೆ:

– – –	ಗೋವಿಂದಂ
– – ∪	ಕಂಸಾರಿ
– ∪ –	ಶ್ರೀಪತೀ
∪ ∪ ∪ –	ಪರಹಿತಂ
∪ ∪ – ∪	ತರಕಾರಿ
∪ ∪ – –	ಹೃಷಿಕೇಶಂ
– ∪ –	ಮಾಧವಂ
∪ ∪ ∪ ∪	ನರಹರಿ

ರುದ್ರಗಣಗಳು 16 ವಿಧವಾಗಿವೆ:

– – – –	ಗಂಗಾಧೀಶಂ
– – – ∪	ಕಂದರ್ಪಾರಿ
– – ∪ ∪	ಭೂತಾಗ್ರಣಿ
– ∪ ∪ ∪	ಕಾಮರಿಪು
– ∪ – –	ನೀಲಕಂಠಂ
– – ∪ –	ಕಾಮಾಂತಕಂ
∪ ∪ – – –	ಗಿರಿಜಾನಾಥಂ
∪ ∪ ∪ – –	ವೃಷಭಲಕ್ಷ್ಯಂ
– ∪ ∪ –	ಶೂಲಧರಂ
∪ ∪ ∪ ∪ –	ಪುರಮಥನಂ
∪ ∪ – – ∪	ಮದನಧ್ವಂಸಿ
– ∪ – ∪	ಚಂದ್ರಮೌಳಿ
∪ ∪ ∪ – ∪	ಭುಜಗಧಾರಿ
∪ ∪ – ∪ ∪	ತ್ರಿಜಗದ್ಗುರು
∪ ∪ ∪ ∪ ∪	ಮದನರಿಪು

ವರ್ಣ ಗಣ (ಅಕ್ಷರ ಗಣ) ವೃತ್ತಗಳು

ಕನ್ನಡದಲ್ಲಿ ಬಳಕೆಯಲ್ಲಿರುವ ವರ್ಣವೃತ್ತಗಳು ಸಂಸ್ಕೃತ ಛಂದಸ್ಸಿನಿಂದ ಬಂದವುಗಳು. ಅವುಗಳಲ್ಲಿ ಸಮ, ಅರ್ಧ ಸಮ ಮತ್ತು ವಿಷಮ ಎಂಬ ಮೂರು ಜಾತಿಯ ವೃತ್ತಗಳಿವೆ. ಇವುಗಳಿಗೆ ನಾಲ್ಕೇ ಪಾದಗಳಿರುತ್ತವೆ. ನಾಲ್ಕು ಪಾದಗಳಲ್ಲಿಯೂ ಒಂದೇ ಲಕ್ಷಣವಿರುವುದು ಸಮವೃತ್ತ. ಒಂದು ಮೂರನೆಯ ಪಾದಗಳೂ ಎರಡು ನಾಲ್ಕನೆಯ ಪಾದಗಳೂ ಸಮಾನವಾಗಿರುವುದು ಅರ್ಧ ಸಮವೃತ್ತ. ನಾಲ್ಕು ಪಾದಗಳೂ ಬೇರೆ ಬೇರೆ ಲಕ್ಷಣದಿಂದ ಕೂಡಿರುವುದು ವಿಷಮವೃತ್ತ. ಇದು ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಸಮವೃತ್ತಗಳಲ್ಲಿ ಒಂದರಿಂದ ಇಪ್ಪತ್ತಾರರವರೆಗೆ ಅಕ್ಷರಗಳಿರುವ ವೃತ್ತಗಳಿವೆ. ಕನ್ನಡಿಗರು ಸಂಸ್ಕೃತ ಛಂದಸ್ಸಿನಿಂದ ಹೆಚ್ಚಾಗಿ ಆರಿಸಿಕೊಂಡ ಛಂದಸ್ಸುಗಳೆಂದೆ ಶಾರ್ದೂಲ ವಿಕ್ರೀಡಿತ, ಮತ್ತೇಭ ವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ. ಇವುಗಳನ್ನು ಖ್ಯಾತ ಕರ್ನಾಟಕಗಳೆಂದು ಹೇಳುವರು.

12th_Kannada_Reader_8.indd 184 22-05-2019 15:39:50

ಕನ್ನಡದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಈ ಆರು ವರ್ಣ ವೃತ್ತಗಳನ್ನು ನಾಗವರ್ಮನ ಈ ಕೆಳಗಿನ ಪದ್ಯದ ಆಧಾರದಿಂದ ಗುರುತಿಸಿಕೊಳ್ಳಬಹುದು.

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತು ಸ್ರಗ್ಧರೆ, ಲಘುದ್ವಂದ್ವಂ ಗುರುದ್ವಂದ್ವಮಾ ।
ಗಿರೆ ಮತ್ತೇಭ, ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಂ
ಹರಿಣಾಕ್ಷೀ ಲಘು ನಾಲ್ಕು ಚಂಪಕಮಿವಾರುಂ ಖ್ಯಾತ ಕರ್ನಾಟಕಂ ॥

೧. ಶಾರ್ದೂಲ ವಿಕ್ರೀಡಿತ ವೃತ್ತ (೧೯ ಅಕ್ಷರಗಳ ಛಂದಸ್ಸು)

ಮ	ಸ	ಜ	ಸ	ತ	ತ	ಗು
– – –	∪ ∪ –	∪ – ∪	∪ ∪ –	– ∪ –	– – ∪	–

ಶ್ರೀದೇವೇಂ|ದ್ರ ಮುನೀಂ|ದ್ರ ವಂದಿ|ತ ಗುಣ|ವ್ರಾತಂ ಜ|ಗತ್ಸ್ವಾಮಿ|ಸಂ
ದಾದಿ ಬ್ರಹ್ಮನಗಾಧ ಬೋಧ ನಿಳಯಂ ದುರ್ವಾರ ಸಂಸಾರ ವಿ
ಚ್ಛೇದೋಪಾಯನಿಯುಕ್ತ ಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪ ಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀ ಸುಖಾವ್ಯಾಪ್ತಿಯಂ

ಮೇಲಿನ ಪದ್ಯವು ಶಾರ್ದೂಲ ವಿಕ್ರೀಡಿತ ವೃತ್ತವಾಗಿದೆ. ಇದು ಸಮಪಾದ ವೃತ್ತವಾಗಿದ್ದು, ನಾಲ್ಕು ಪಾದಗಳೂ ಒಂದಕ್ಕೊಂದು ಸಮಾನವಾಗಿವೆ. ಇದರ ಪ್ರತಿಪಾದದಲ್ಲಿ **ಮ, ಸ, ಜ, ಸ, ತ, ತ** ಎಂಬ ಆರು ಗಣಗಳೂ, ಕೊನೆಯಲ್ಲಿ ಒಂದು ಗುರುವೂ ಇದ್ದು ಒಟ್ಟು ಹತ್ತೊಂಬತ್ತು ಅಕ್ಷರಗಳಿವೆ. ಶಾರ್ದೂಲ ವಿಕ್ರೀಡಿತ ವೃತ್ತದ ಲಕ್ಷಣವನ್ನು ಸೂತ್ರ ರೂಪವಾಗಿ **'ಕಣ್ಮೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ'** ಎನ್ನುತ್ತಾರೆ.

೨. ಮತ್ತೇಭ ವಿಕ್ರೀಡಿತ ವೃತ್ತ (೨೦ ಅಕ್ಷರಗಳ ಛಂದಸ್ಸು)

ಸ	ಭ	ರ	ನ	ಮ	ಯ	ಲಗು
∪ ∪ –	– ∪ ∪	– ∪ –	∪ ∪ ∪	– – –	∪ –	∪ –

ಕುಲದೊಳ್|ಕೂಡರು|ಕೂಸನೀ|ಯರುನೃ|ಪರ್ ನಿಷ್ಕಾ|ರಣಂ ದಂ|ಡಿಪರ್
ಪೊಳಲೊಳ್ ಸೇರಲು ಪೋರುಗೈದು ಸತಿ ತಾಂಪೋಗಟ್ಟುವಳ್ ಸಾಲಿಗರ್
ಕಲುಗುಂಡಂ ಗಡಪೇಱುವರ್ ತೊಲಗಿರಲ್ ಲಕ್ಷ್ಮೀ ಕಟಾಕ್ಷಂ ಕ್ಷಣಂ
ನೆಲಮುಟ್ಟಲ್ ಮುನಿದಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥

ಇದು 'ಮತ್ತೇಭ ವಿಕ್ರೀಡಿತ'ವೆಂಬ ಸಮಪಾದ ವೃತ್ತವಾಗಿದೆ. ಇದರ ಪ್ರತಿಪಾದದಲ್ಲಿ ಇಪ್ಪತ್ತು ಅಕ್ಷರಗಳಿದ್ದು **ಸ, ಭ, ರ, ನ, ಮ, ಯ** – ಎಂಬ ಆರು ಗಣಗಳೂ, ಒಂದು ಲಘುವೂ, ಒಂದು ಗುರುವೂ ಬಂದಿವೆ. ಮತ್ತೇಭ ವಿಕ್ರೀಡಿತ ವೃತ್ತದ ಲಕ್ಷಣವನ್ನು ಸೂತ್ರ ರೂಪವಾಗಿ **'ಸ ಭ ರಂ ನಂ ಮಯಲಂಗಮುಂ ಬಗೆಗೊಳಲ್ ಮತ್ತೇಭ ವಿಕ್ರೀಡಿತಂ'** ಎನ್ನುತ್ತಾರೆ.

12th_Kannada_Reader_8.indd 185 22-05-2019 15:39:50

೩. **ಉತ್ಪಲಮಾಲಾ ವೃತ್ತ (೨೦ ಅಕ್ಷರಗಳ ಛಂದಸ್ಸು)**

ಸ	ಭ	ರ	ನ	ಮ	ಯ	ಲಗು
– ᴗ ᴗ	– ᴗ ᴗ	ᴗ – ᴗ	ᴗ ᴗ –	– ᴗ ᴗ	– ᴗ –	ᴗ –

ಕುಲದೊಳ್ |ಕೂಡರು |ಕೂಸನೀ |ಯರುನ್ಯಾ |ಪರ್ ನಿಷ್ಕಾ |ರಣಂ ದಂ |ಡಿಪರ್ ॥

ಈ ಪದ್ಯವು **'ಉತ್ಪಲಮಾಲೆ'** ಯೆಂಬ ವೃತ್ತವಾಗಿದೆ. ಇದರಲ್ಲಿ **ಸಭರನಮಯ** ಎಂಬ ಗಣಗಳೂ, ಕೊನೆಯಲ್ಲಿ ಒಂದು ಲಘುವೂ, ಇನ್ನೊಂದು ಗುರುವೂ ಬರುತ್ತದೆ.

ಮಾತ್ರಾಗಣ ವೃತ್ತಗಳು

ಕನ್ನಡ ಛಂದಸ್ಸಿನ ಪದ್ಯಗಳೆಲ್ಲ ಮಾತ್ರಾಗಣ ವೃತ್ತಗಳೇ ಆಗಿವೆ. ದ್ವಿಪದಿ, ಚೌಪದಿ, ಷಟ್ಪದಿ, ರಗಳೆ ಮೊದಲಾದವುಗಳು ಕನ್ನಡ ಭಾಷೆಯ ಛಂದಸ್ಸುಗಳಾಗಿವೆ. ಬ್ರಹ್ಮಗಣ, ವಿಷ್ಣುಗಣ, ರುದ್ರಗಣಗಳೆಂಬ ಕನ್ನಡದ ಅಂಶಗಣಗಳೇ ರೂಪಾಂತರ ಹೊಂದಿ ಈ ಮಾತ್ರಾಗಣ ನಿಯಮವನ್ನು ಪಡೆದುವು. ತ್ರಿಪದಿ, ಸಾಂಗತ್ಯ, ಪಿರಿಯಕ್ಕರ ಮೊದಲಾದವು ಅಂಶಗಣ ವೃತ್ತಗಳಾಗಿಯೇ ಉಳಿದಿವೆ. ಇವುಗಳನ್ನು ಕೂಡ ಕೆಲವರು ಮಾತ್ರಾಗಣ ನಿಯಮದ ಪದ್ಯಗಳೆಂದು ತಿಳಿಯುವರು.

ಷಟ್ಪದಿಗಳು

ಷಟ್ಪದಿಗಳು ಆರು ಪಾದಗಳುಳ್ಳ ಮಾತ್ರಾ ವೃತ್ತಗಳು. ಇವುಗಳ ಒಂದು, ಎರಡು, ನಾಲ್ಕು, ಐದನೆಯ ಪಾದಗಳು ಒಂದು ಸಮವಾಗಿಯೂ; ಮೂರನೆಯ ಮತ್ತು ಆರನೆಯ ಪಾದಗಳು ಒಂದು ಸಮವಾಗಿಯೂ ಇರುತ್ತವೆ. ಮೂರನೆಯ ಮತ್ತು ಆರನೆಯ ಪಾದಗಳಲ್ಲಿ ಒಂದೆರಡನೆಯ ಪಾದಗಳ ಒಂದೂವರೆ ಪಾಲಷ್ಟು ಗಣಗಳೂ, ಜೊತೆಗೆ ಒಂದು ಗುರುವೂ ಇರುತ್ತವೆ. ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮತ್ತು ವಾರ್ಧಕಗಳೆಂದು ಆರು ವಿಧಗಳಿವೆ. ಛಂದೋಂಬುಧಿಕಾರನು ಒಂದು ಕಂದ ಪದ್ಯದಲ್ಲಿ ಈ ಆರು ಷಟ್ಪದಿಗಳ ಹೆಸರುಗಳನ್ನು ಅವುಗಳ ಪ್ರಥಮ ಪಾದದ ಮಾತ್ರೆಗಳ ಸಂಖ್ಯೆಯನ್ನೂ ನಿರೂಪಿಸಿರುವನು.

ಉದಾಹರಣೆ:

ಶರ, ಕುಸುಮ, ಭೋಗ, ಭಾಮಿನಿ
ಪರಿವರ್ಧಿನಿ, ವಾರ್ಧಕಂಗಳೆಂದಾರು ತೆರಂ

೮ ೧೦ ೧೨ ೧೪ ೧೬
ಕರಿ, ದಶ, ರವಿ, ಮನು, ರಾಜರ್

೨೦
ಬರೆ, ವಿಂಶತಿ ಮಾತ್ರೆಯಿಂದೆ ಷಟ್ಪದಿ ನಡೆಗುಂ

ನಾಗವರ್ಮನ ಪ್ರಕಾರ ಷಟ್ಪದಿಯ ಲಕ್ಷಣ ಈ ರೀತಿಯಿದೆ:

ಮಂದರ ಧರ ಗಣ
ಬಂದಿರ್ಕಾಱಿಂತ್ಯದೊಳ್
ಕುಂದದೆ ನೆಲಸುಗೆ ಮದನಹರಂ ॥
ಇಂದು ನಿಭಾನನೆ
ಮುಂದಣ ತೆಱನುಮೀ
ಯಂದಮೆಯಾಗಲೆ ಷಟ್ಪದಿ ಕೇಳ್ ॥

ಇದು ಅಂಶಗಣ ಸಹಿತವಾಗಿದೆ.

12th_Kannada_Reader_8.indd 186 22-05-2019 15:39:50

ಶರ ಷಟ್ಪದಿ

ನಾಲ್ಕು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಮೂರು ಮತ್ತು ಒಂದು ಗುರುವೂ ಇರಲು ಶರಷಟ್ಪದಿಯೆನಿಸುವುದು. ಇದರಲ್ಲಿ ನಡುವೆ ಎಲ್ಲೂ ಜಗಣ (– ᴗ –) ವು ಬರಬಾರದು.

ಉದಾಹರಣೆ:

– ᴗᴗ ᴗ ᴗ ᴗ ᴗ
ಈಶನ|ಕರುಣೆಯ

– ᴗᴗ ᴗᴗ ᴗ ᴗ
ನಾಶಿಸು|ವಿನಯದಿ

– ᴗᴗ – ᴗ ᴗ – ᴗ ᴗ –
ದಾಸನ|ಹಾಗೆಯೆ|ನೀ ಮನ|ವೇ ॥

ಕ್ಲೇಶದ ವಿಧ ವಿಧ
ಪಾಶವ ಹರಿದು ವಿ
ಲಾಸದಿ ಸತ್ಯವ ತಿಳಿ ಮನವೇ ॥

ಕುಸುಮ ಷಟ್ಪದಿ

ಐದು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಐದು ಮಾತ್ರೆಯ ಗಣಗಳು ಮೂರು ಮೂರೂ ಮತ್ತು ಒಂದು ಗುರುವೂ ಇರಲು ಕುಸುಮ ಷಟ್ಪದಿಯೆನಿಸುವುದು. ಇದರಲ್ಲಿ ನಡುವೆ ಎಲ್ಲೂ ಜಗಣ(–ᴗ–) ಮತ್ತು ಯಗಣ(ᴗ – –)ಗಳು ಬರಬಾರದು.

ಉದಾಹರಣೆ:

– ᴗ ᴗ ᴗ ᴗᴗ ᴗ ᴗᴗ
ನಾಡು ಮನ|ಸಿಜನೊಲವಿ

– ᴗ ᴗ ᴗ – ᴗ –
ನಾಡುವೆಡೆ|ಸಂತತಂ

– ᴗ ᴗᴗ ᴗᴗᴗ ᴗᴗ ᴗ ᴗ–ᴗ –
ಬೀಡು ರತಿ|ಪತಿಗೆ ಸತ|ತ ನಿಧಾನ|ವು ॥

ನೋಡಿದನಿಮಿಷಪತಿಗೆ
ಮಾಡುವುದು ವಿನಯವನು
ನಾಡಾಡಿಯವರ್ಗೆ ಬಣ್ಣಿಸಲು ಮೊಗ್ಗೇ ॥

ಭೋಗ ಷಟ್ಪದಿ

ಮೂರು ಮಾತ್ರೆಯ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು; ಮೂರು, ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಬರಲು ಭೋಗಷಟ್ಪದಿಯೆನಿಸುವುದು. ಇದರಲ್ಲಿ ಜಗಣ(ᴗ–)ವು ಬರಬಾರದು.

ಉದಾಹರಣೆ:

ᴗ ᴗ ᴗ – ᴗ – ᴗ – ᴗ
ಮೆರೆಯು|ತಿದ್ದ|ಭಾಗ್ಯ |ವೆಲ್ಲ

ᴗ ᴗ ᴗ – ᴗ ᴗᴗᴗ ᴗᴗᴗ
ಹಜಿದು|ಹೋಯಿ|ತೆನುತ|ತಿರುಕ

– ᴗ ᴗᴗ ᴗ ᴗ ᴗ ᴗᴗ ᴗ ᴗ–ᴗ –
ಮರಳಿ|ನಾಚಿ|ಪೋಗು|ತಿದ್ದ|ಮರುಳ|ನಂತೆ|ಯೇ ॥

ಧರೆಯ ಭೋಗವನ್ನು ಮೆಚ್ಚಿ
ಪರವ ಮಱೆತು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವಾ ॥

12th_Kannada_Reader_8.indd 187 22-05-2019 15:39:50

ಭಾಮಿನೀ ಷಟ್ಪದಿ

ಮೂರು ಮಾತ್ರೆಯ ಗಣದ ಮುಂದೆ ನಾಲ್ಕು ಮಾತ್ರೆಯ ಗಣವು ಬರುವಂತೆ ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ಈ ಗಣಗಳು ಎರಡೆರಡೂ; ಮೂರು, ಆರನೆಯ ಪಾದಗಳಲ್ಲಿ ಮೂರು ಮೂರೂ ಮತ್ತು ಒಂದು ಗುರುವೂ ಇದ್ದಲ್ಲಿ ಭಾಮಿನೀ ಷಟ್ಪದಿಯೆನಿಸುವುದು. ಇದರಲ್ಲಿ ಈ ∪–∪ ಗಣವು ಬರಬಾರದು.

ಉದಾಹರಣೆ:

∪ ∪ ∪ ∪ ∪ – ∪ – ∪ ∪ –
ವರುಷ|ಹದಿನಾ|ರಾಯ್ತು |ಧರಣೀ

∪ ∪ ∪ ∪ ∪ ∪ – ∪ – ∪ ∪
ಶ್ವರನ|ಹಿರಿಯ ಮ|ಗಂಗೆ|ಭೀಮಗೆ

∪ ∪ ∪ ∪ ∪ – – ∪ ∪ ∪ ∪ – ∪ ∪ ∪ –
ವರುಷ|ಹದಿನೈ|ದರ್ಜು|ನಗೆ ಹದಿ|ನಾಲ್ಕು|ಹದಿಮೂ|ರು ॥

ಕಿರಿಯರಿಬ್ಬರಿಗೆ ನಿಬರಾ ಮುನಿ
ವರರಿನಧ್ಯಯನಾದಿ ವಿದ್ಯಾ
ನಿರತರಾದರು ಬಂದುದೊಂದು ವಸಂತಮಯ ಸಮಯ ॥

ಪರಿವರ್ಧಿನೀ ಷಟ್ಪದಿ

ಚತುರ್ಮಾತ್ರಾ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು, ಮೂರು; ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಇದ್ದಲ್ಲಿ ಅದು ಪರಿವರ್ಧಿನೀ ಷಟ್ಪದಿಯೆನಿಸುವುದು. ಇದರಲ್ಲಿ ಈ ∪–∪ ಗಣವು ಬರಬಾರದು.

ಉದಾಹರಣೆ:

∪ ∪∪∪ –∪ ∪ ∪ ∪ ∪ ∪ – ∪ ∪
ದುರಿತವ|ನಂಬೆಳೆ|ವುದಕೆ ಪೊ|ಲಂ ಕೊಲೆ

∪∪∪∪ ∪∪ ∪ ∪ – ∪ ∪ ∪ ∪ –
ಪರಕಲಿ|ಸಿದ ನವ|ದೋಹಳ|ಮನೃತಂ

∪∪ – ∪ ∪∪∪ ∪∪∪∪ – – – – ∪ ∪ – –
ಪರಿಕಾ|ಲುದಕಮ|ದಕೆಕಳ|ವನ್ಯ|ಸ್ತ್ರೀ ಸಂ|ಗಮೆ ಗೆ|ಯ್ಮೆ ॥

ಪರಿರಕ್ಷಣೆಯತಿಕಾಂಕ್ಷೆಯದಜಿನವು
ನಿರುತಂ ಪೊರ್ದದೊಡಿಲ್ಲಂ ಸಂಸ್ಕೃತಿ
ಯುರುಕಿಲ್ಬಿಷಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ ॥

12th_Kannada_Reader_8.indd 188 22-05-2019 15:39:50

ವಾರ್ಧಕ ಷಟ್ಪದಿ

ಪಂಚಮಾತ್ರಾ ಗಣವು ಒಂದು, ಎರಡು, ನಾಲ್ಕು, ಐದನೆಯ ಪಾದಗಳಲ್ಲಿ ನಾಲ್ಕು ನಾಲ್ಕು ಮಾತ್ರೆಯ ಗಣಗಳು ಮೂರು; ಆರನೆಯ ಪಾದಗಳಲ್ಲಿ ಆರಾರು ಮತ್ತು ಒಂದು ಗುರುವೂ ಇದ್ದಲ್ಲಿ ಅದು ವಾರ್ಧಕ ಷಟ್ಪದಿಯೆನಿಸುವುದು. ಇದರಲ್ಲಿ ಈ ∪–∪∪, ∪ – – ಗಣವು ಬರಬಾರದು.

ಉದಾಹರಣೆ:

∪∪ – ∪ – ∪ – – ∪ ∪ ∪ – ∪ –
ಜನನಾಥ|ಕೇಳ್ ಮಯೂ|ರ ಧ್ವಜ ಮ|ಹೀಶ್ವರಂ

∪∪ – ∪ ∪ ∪ ∪ – ∪ ∪ ∪ – – ∪ ∪ ∪
ದಿನನಾಥ|ನುದಯದೊಳ್|ವಿಮಲ ಸಂ|ಧ್ಯಾ ವಿಧಿಯ

∪∪∪∪ ∪–∪ ∪∪∪ – – ∪ – ∪∪ – ∪ –∪ ∪ ∪ –
ನನುಕರಿಸಿ|ಕೃಷ್ಣನಿ|ದ್ದೆಡೆಗೆ ತಾಂ|ಪೋಗಿ ಕಂ|ಡಪೆನೆಂಬ|ಕಾರಿಯವ|ನು ॥

ಮನದೊಳಗೆ ನಿಶ್ಚೈಸಿ ಪೊರಮೊಡುವನಾಗಿ ನಿಜ
ತನುಜನಂ ಕರೆಸಿ ಮಂತ್ರಿಗಳೆಲ್ಲರಂ ಬರಿಸಿ
ವಿನುತ ಭೂಸುರ ನೃಪಾಲ ಸ್ತೋಮ ದೊಡಗೂಡಿ ಕುಳ್ಳಿರ್ದನೋಲಗದೊಳು ॥

ದ್ವಿಪದಿ

ದ್ವಿಪದಿ ಎಂದರೆ ಎರಡು ಪಾದಗಳುಳ್ಳ ಪದ್ಯ. ದ್ವಿಪದಿ, ತ್ರಿಪದಿ, ಚೌಪದಿ, ಸಾಂಗತ್ಯ ಮೊದಲಾದವುಗಳು ಹಾಡಿನ ರೂಪದಲ್ಲಿರುವುದರಿಂದ ಇವನ್ನು ಹಾಡಿನ ವೃತ್ತಗಳು ಎನ್ನುವುದುಂಟು. ದ್ವಿಪದಿಗಳಲ್ಲಿ ಎರಡು ವಿಧಗಳಿವೆ. ಮೊದಲನೆಯ ರೀತಿಯ ದ್ವಿಪದಿಯ ಪ್ರತಿಪಾದದಲ್ಲಿ ಐದು ಮಾತ್ರೆಯ ಒಂದು ಗಣ ಇದ್ದು, ಒಟ್ಟು ಹತ್ತೊಂಬತ್ತು ಮಾತ್ರೆಗಳಿರುತ್ತವೆ.

ಉದಾಹರಣೆ:

∪∪– ∪ – – ∪ ∪∪∪ ∪ ∪ ∪ –
ಪರಮಾತ್ಮ|ನಾರೆಂದು|ಚಿರವಗೊಳಿ|ಸುವೆಯಾ — ೫x೩+೪=೧೯

∪ ∪ ∪∪∪ –∪ – ∪∪ ∪ ∪∪ ∪ ∪ –
ಇರುವನವ|ನೆತ್ತಲೆಂ|ದರಿಯಲೆಳ|ಸುವೆಯಾ ॥ — ೫x೩+೪=೧೯

ಎರಡನೆಯ ವಿಧದ ದ್ವಿಪದಿಯ ಪ್ರತಿಪಾದದಲ್ಲಿ ೩+೪+೩+೪+೪+೩+೨ ಹಾಗೂ ಒಂದು ಗುರು ಎಂಬಂತೆ ಗಣಗಳಿದ್ದು, ಒಟ್ಟು ೨೬ ಮಾತ್ರೆಗಳಿರುತ್ತವೆ.

ಉದಾಹರಣೆ:

∪ ∪∪ – – ∪∪∪ –∪∪ – ∪ – – ∪ –
ಮಗನೆ|ನೀನಿಂ|ತಳಿಯೆ|ಸೈರಿಪೆ|ನೆಂತೊ|ಪೇಳ್ವೈ|ಶಂಕ|ರಾ

∪ ∪∪ ∪∪ – – ∪ ∪ ∪∪∪ – ∪ – – ∪ –
ಸುಗುಣ|ನಿಧಿ ನೀ|ನೆಮ್ಮ|ಮೊರೆಗಳ|ನೊಮ್ಮೆ|ಕೇಳ್ವೈ|ಶಂಕ|ರಾ| ॥

12th_Kannada_Reader_8.indd 189 22-05-2019 15:39:50

ಚೌಪದಿ

ಚೌಪದಿಯೆಂದರೆ ನಾಲ್ಕು ಪಾದವುಳ್ಳ ಪದ್ಯ. ಇದರಲ್ಲಿ ನಾಲ್ಕು ವಿಧದ ಚೌಪದಿಗಳಿವೆ. ಅವು, ೧. ಮೊದಲನೆಯದು: ದ್ವಿಪದಿಯ ಇಮ್ಮಡಿ ಪಾದಗಳಿದ್ದು ಪ್ರತಿಪಾದದಲ್ಲಿ ಅದರಷ್ಟೇ ಮಾತ್ರೆಗಳುಳ್ಳ ಚೌಪದಿ.

ಉದಾಹರಣೆ:

– ∪ ∪ ∪ – ∪ – – – ∪ – –
ನಾಳೆಯೆನ|ಬೇಡ ನೀ|ಕೇಳೆನ್ನ|ಬಾಲಾ ೫x೩+೪=೧೯

– ∪ – ∪ ∪ – ∪ – – ∪ – –
ನಾಳೆಯೆಂ|ಬುದು ಕಷ್ಟ|ಜಾಲಾ ವಿ|ಶಾಲಾ ॥ ೫x೩+೪=೧೯

– ∪ – ∪ ∪ – ∪ – – ∪ – –
ಹಾಳು ಮಾ|ಳ್ಪುದು ನಿನ್ನ|ನಾ ದುಷ್ಟ|ಜಾಲಾ| ೫x೩+೪=೧೯

– – ∪ – ∪ – – ∪ ∪ ∪ – –
ಕೇಳೆನ್ನ|ಮಾತನೀ|ಮನ್ನಿಸು ಸು|ಶೀಲಾ ॥ ೫x೩+೪=೧೯

=೭೬

ಮೇಲಿನ ಚೌಪದಿಯ ಎಲ್ಲ ಪಾದಗಳೂ ಒಂದಕ್ಕೊಂದು ಸಮಾನವಾಗಿದೆ. ಪ್ರತಿಪಾದದಲ್ಲಿ ಐದೈದು ಮಾತ್ರೆಯ ಮೂರು ಗಣಗಳೂ, ನಾಲ್ಕು ಮಾತ್ರೆಯ ಒಂದು ಗಣವೂ ಇದ್ದು ಇಡೀ ಪದ್ಯದಲ್ಲಿ ಒಟ್ಟ ೭೬ ಮಾತ್ರೆಗಳಿವೆ. ೨. ಚೌಪದಿಯ ಎರಡನೇ ವಿಧ (ದಾಸರ ಪದ್ಯಗಳ ಮಟ್ಟು)

ಉದಾಹರಣೆ:

– ∪ – ∪∪∪∪∪ ∪∪∪– ∪∪∪∪∪
ಕೊಂಡ ಸಾ|ಲಗಳ ಪರಿ|ಹರಿಸದಾ|ತನೆ ಹೊಲೆಯ ೫x೪=೨೦

– ∪∪∪ ∪∪∪∪∪ ∪∪–∪ ∪∪ –
ಲಂಡತನ|ದಲಿ ನಡೆವ|ನರಭಂಡ|ಹೊಲೆಯಾ ॥ ೫x೩+೪=೨೦

– ∪ ∪ ∪ ∪– ∪ ∪∪–∪ – ∪∪∪
ಉಂಡ ಮನೆ|ಗೆರಡನ್ನು|ಬಗೆವಾತ|ನೇ ಹೊಲೆಯ| ೫x೪=೨೦

– ∪∪∪ – ∪∪∪ ∪∪ – ∪ ∪∪ –
ಹೆಂಡತಿಯ|ಇಚ್ಛೆಯವ|ನತಿ ಹೇಡಿ|ಹೊಲೆಯಾ ॥ ೫x೩+೪=೨೦

ಮೇಲಿನ ಚೌಪದಿಯಲ್ಲಿ ಮೊದಲನೆಯ ಮತ್ತು ಮೂರನೆಯ ಪಾದಗಳು ಸಮಾನವಾಗಿವೆ. ಈ ಪಾದಗಳಲ್ಲಿ ೫ ಮಾತ್ರೆಯ ನಾಲ್ಕು ಗಣಗಳು ಇದ್ದು ೨೦ ಮಾತ್ರೆಗಳಿವೆ. ಎರಡನೇ ಮತ್ತು ನಾಲ್ಕನೇ ಪಾದಗಳು ಸಮಾನವಾಗಿವೆ. ಇವುಗಳಲ್ಲಿ ಐದು ಮಾತ್ರೆಯ ಮೂರು ಗಣಗಳೂ, ನಾಲ್ಕು ಮಾತ್ರೆಯ ಒಂದು ಗಣವೂ ಇದ್ದು ೧೯ ಮಾತ್ರೆಗಳಿವೆ. ಇಡೀ ಪದ್ಯದಲ್ಲಿ ಒಟ್ಟು ೭೮ ಮಾತ್ರೆಗಳಿವೆ. ಇದು ಅರ್ಧ ಸಮ ಚೌಪದಿ.

12th_Kannada_Reader_8.indd 190 22-05-2019 15:39:50

೩. ಚೌಪದಿಯ ಮೂರನೇ ವಿಧ (ಗೋವಿನ ಕತೆಯ ಮಟ್ಟು)
ಉದಾಹರಣೆ:

– ∪ – ∪ ∪ _ ∪ – –
ಸತ್ಯ|ವೆಂಬುದೆ|ತಾಯಿ|ತಂದೇ ೩+೪+೩+೪=೧೪

– ∪ – ∪ ∪ – ∪ ∪∪∪∪
ಸತ್ಯ|ವೆಂಬುದೆ|ಬಂಧು|ಬಳಗವು ॥ ೩+೪+೩+೪=೧೪

– ∪ – ∪∪ –∪ ∪∪∪∪
ಸತ್ಯ|ವಾಕ್ಯಕೆ|ತಪ್ಪಿ|ನಡೆದರೆ| ೩+೪+೩+೪=೧೪

–∪ – ∪ ∪ – ∪ –
ಮೆಚ್ಚ|ನಾ ಪರ|ಮಾತ್ಮ|ನೂ ॥ ೩+೪+೩+೩=೧೨ = ೫೪

ಮೇಲಿನ ಚೌಪದಿಯಲ್ಲಿ ಒಂದು, ಎರಡು, ಮೂರನೆಯ ಪಾದಗಳಲ್ಲಿ ೩+೪+೩+೪ ಮಾತ್ರೆಯ ಗಣಗಳಿದ್ದು ಹದಿನಾಲ್ಕು ಮಾತ್ರೆಗಳಿವೆ. ನಾಲ್ಕನೆಯ ಪಾದದಲ್ಲಿ ೩+೪+೩+೨ ಮಾತ್ರೆಯ ಗಣಗಳಿದ್ದು ಹನ್ನೆರಡು ಮಾತ್ರೆಗಳಿವೆ. ಇಡೀ ಪದ್ಯದಲ್ಲಿ ಒಟ್ಟು ೫೪ ಮಾತ್ರೆಗಳಿವೆ.

೩. ಚೌಪದಿಯ ನಾಲ್ಕನೇ ವಿಧ
ಉದಾಹರಣೆ:

–∪∪∪ – ∪∪∪ ∪∪∪ ∪∪ ∪∪ – ∪
ಲೆಕ್ಕಗಮಿ|ತಾಕ್ಷರರು|ಬಳೆದು ಮೆರೆ|ದಿಹ ನಾಡು ೫x೪=೨೦

–∪∪∪ –∪∪∪ –∪∪∪ ∪∪–∪
ಜಕ್ಕಣನ|ಶಿಲ್ಪಕಲೆ|ಯಚ್ಚರಿಯ|ಕರುನಾಡು ॥ ೫x೪=೨೦

– ∪∪∪ ∪∪ – ∪∪∪∪∪ ∪∪–∪
ಚೊಕ್ಕಮತ|ಗಳ ಸಾರಿ|ದವರಿಗಿದು|ನೆಲೆವೀಡು| ೫x೪=೨೦

–∪∪∪ ∪∪∪∪∪ ∪∪∪∪∪ ∪∪–∪
ಬೊಕ್ಕಸದ|ಕಣಜಜಯ|ಸಿರಿಯು ನಲಿ|ಯುವನಾಡು ॥ ೫x೪=೨೦=೮೦

ಮೇಲಿನ ಪದ್ಯದ ಎಲ್ಲ ಪಾದಗಳೂ ಸಮಾನವಾಗಿವೆ. ಪ್ರತಿ ಪಾದದಲ್ಲಿ ಐದು ಮಾತ್ರೆಯ ನಾಲ್ಕು ಗಣಗಳಿದ್ದು ಒಟ್ಟು ೨೦ ಮಾತ್ರೆಗಳಿವೆ. ಇಡೀ ಪದ್ಯದಲ್ಲಿ ಒಟ್ಟು ೮೦ ಮಾತ್ರೆಗಳಿವೆ.

ರಗಳೆಗಳು

ಸಮಾನವಾದ ಮಾತ್ರಾಗಣಗಳುಳ್ಳ ಬಹುಪಾದಗಳಿಂದ ಕೂಡಿದ ವೃತ್ತವು ರಗಳೆಯೆನಿಸುವುದು. ಇದರಲ್ಲಿ ಪ್ರಾಸವು ಇತರ ವೃತ್ತಗಳಲ್ಲಿರುವಂತೆ ನಿಯತವಾದ ಸ್ಥಾನದಲ್ಲಿರುವುದಿಲ್ಲ. ಪಾದದ ಆದಿಯಲ್ಲಾಗಲಿ, ಮಧ್ಯದಲ್ಲಾಗಲಿ, ಅಂತ್ಯದಲ್ಲಾಗಲಿ, ಆದಿಮಧ್ಯಾಂತಗಳಲ್ಲಾಗಲಿ ಪ್ರಾಸಗಳಿರುತ್ತವೆ. ಮಂದಾನಿಲ, ಲಲಿತ ಮತ್ತು ಉತ್ಸಾಹಗಳೆಂಬ ಮೂರು ವಿಧದ ರಗಳೆಗಳು ಹಳೆಯ ಕಾವ್ಯಗಳಲ್ಲಿ ಪ್ರಸಿದ್ಧವಾಗಿವೆ.

12th_Kannada_Reader_8.indd 191 22-05-2019 15:39:50

ಮಂದಾನಿಲ ರಗಳೆ

ಉದಾಹರಣೆ:

–ᴗᴗ ᴗᴗᴗ – – ᴗᴗ – –
ಹಾವು ಕ|ಡಿ ಯೆ ಹಾ|ಎಂದೆಯೊ|ಕಂದಾ

– – – – – ᴗ ᴗ – –
ಸಾವಾ|ಗವ್ವಾ|ಎಂದೆಯೊ|ಕಂದಾ ॥
ಹಾಡುವ ಬಾಯೊಳು ಸುಣ್ಣವ ಹೊಯ್ದೇ
ನೋಡುವ ಕಣ್ಣೊಳು ಸುಣ್ಣವ ಹೊಯ್ದೇ ॥

ಮಂದಾನಿಲ ರಗಳೆಯಲ್ಲಿ ನಾಲ್ಕು ನಾಲ್ಕು ಮಾತ್ರೆಗಳಿರುವ ನಾಲ್ಕು ಗಣಗಳಿದ್ದು ಒಟ್ಟು ಹದಿನಾರು ಮಾತ್ರೆಗಳಿವೆ. ಈ ಪದ್ಯದಲ್ಲಿ ಆದಿ ಮಧ್ಯಾಂತ್ಯ ಪ್ರಾಸ ನಿಯಮವನ್ನು ಮೀರಿಲ್ಲ. ಇದರಲ್ಲಿ ಇಂತಿಷ್ಟೇ ಪಾದಗಳಿರಬೇಕೆಂಬ ನಿಯಮವಿಲ್ಲ. ಪ್ರಾಸಕ್ಕಾಗಿ ಎರಡೆರಡು ಪಾದಗಳನ್ನು ಒಂದು ಅಂಶವಾಗಿ ಗಮನಿಸಲಾಗುತ್ತದೆ.

ಲಲಿತ ರಗಳೆ

ಉದಾಹರಣೆ:

ᴗᴗ – ᴗ – ᴗ – – ᴗ – ᴗᴗ–ᴗ
ಶಿವನೂರು|ದಂಡದಿಂ|ದಾದ ಬಾ|ಳೆಗಳಿಲ್ಲಿ

ᴗᴗᴗᴗᴗ ᴗᴗ–ᴗᴗ – ᴗ – ᴗᴗ–ᴗ
ಶಿವನಕರ|ನಖದಿಂದ|ಲಾದ ಕೇ|ತಕಿಯಿಲ್ಲಿ ॥

ಹರನ ಚರಣಂಗಂಡು ಬೆಳೆದಸರಜದದಿಲ್ಲಿ
ಹರ ಕಾಂತಿಯಿಂದಾದ ವಿಮಳ ಸರಸಿಗಳಿಲ್ಲಿ ॥

ಲಲಿತ ರಗಳೆಯಲ್ಲಿಯೂ ಇಂತಿಷ್ಟೇ ಚರಣಗಳಿರಬೇಕೆಂಬ ನಿಯಮವಿಲ್ಲ. ಇದರ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳು ಇದ್ದು ಒಟ್ಟು ಇಪ್ಪತ್ತು ಮಾತ್ರೆಗಳಿರುತ್ತವೆ.

ಉತ್ಸಾಹ ರಗಳೆ

ನಾಗವರ್ಮನು ಛಂದೋಂಬುಧಿಯಲ್ಲಿ ಉತ್ಸಾಹ ರಗಳೆಗೆ ಪ್ರತಿಪಾದದಲ್ಲಿ ಮೂರು ಮಾತ್ರೆಯ ಎಂಟು ಗಣಗಳಿದ್ದು ೨೪ ಮಾತ್ರೆಗಳಿವೆಯೆಂದು ಹೇಳಿರುವನು.

ಉದಾಹರಣೆ:

–ᴗ –ᴗ –ᴗ ᴗᴗᴗ –ᴗ –ᴗ ᴗ– ᴗᴗᴗ
ಅಟ್ಟ|ಅನ್ನ|ವುಣ್ಣ|ಬಿಡನು|ಕೊಟ್ಟ|ಸಾಲ|ಕೇಳ|ಬಿಡನು|

–ᴗ ᴗᴗᴗ – ᴗ ᴗᴗᴗ –ᴗ ᴗᴗᴗ ᴗᴗᴗ ᴗᴗᴗ
ಪೆಟ್ಟಿ|ಯೊಳಿಹ|ಚಿನ್ನ|ದೊಡವೆ|ತೊಟ್ಟೆ|ನೆನಲು|ಯಮನು|ಬಿಡನು ॥

ಆದರೆ ಇದು ಮೂರು ಮಾತ್ರೆಯ ನಾಲ್ಕು ಗಣಗಳಿರುವ ಪಾದಗಳಿಂದ ಕೂಡಿದೆಯೆಂದು ಆಧುನಿಕರು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಅವರು ಈ ಕೆಳಗಿನ ಪದ್ಯವನ್ನು ಉದಾಹರಿಸುತ್ತಾರೆ.

12th_Kannada_Reader_8.indd 192 22-05-2019 15:39:50

ಉದಾಹರಣೆ:

ಽ ಽ ಽ – ಽ – ಽ – ಽ
ಕುಳಿರ್ವ|ಪೂಗೊ|ಳಂಗ|ಳಲ್ಲಿ

ಽಽಽ – ಽ – ಽ – ಽ
ತಳಿರ|ಕಾವ|ಣಂ ಗ|ಳಲ್ಲಿ ॥

ತುಂಬಿವಿಂಡಿನಂತೆ ಪಾಡಿ
ಜಕ್ಕ ವಕ್ಕಿ ಯಂತೆ ಕೂಡಿ ॥

ಸರಳ ರಗಳೆ

– – ಽ ಽಽಽಽಽ – – ಽ ಽಽ–ಽ
ಬಾ ಕಂದ|ಹಿರಿಗುವರ|ಬಾರೆನ್ನ|ಬಿಗಿದಪ್ಪು

– – ಽ –ಽಽಽ –ಽಽಽ ಽಽ ಽಽಽ
ಉಪ್ಪನ್ನ|ವಿತ್ತವಗೆ|ತಪ್ಪೆಣಿಸ|ದಿರು ಮಗನೆ ॥

ಹೇಡಿಯೆನೆ ಹಿಂದುಳಿಯದಿರು ರಣದಿ ಬೇಡುವೆಂ
ಚಂದ್ರವಂಶದ ಕುಡಿಯ ಕಾಪಾಡು, ತೊಟ್ಟ ಶರ
ಮಂ ಬರಳಿ ಮರೆತು ಬಿಡು, ನಿನಗಕ್ಕೆ ಮಂಗಳಂ ॥

ಇದು ಸರಳ ರಗಳೆ. ಇದರ ಪ್ರತಿಪಾದದಲ್ಲಿ ಐದೈದು ಮಾತ್ರೆಗಳ ನಾಲ್ಕು ಗಣಗಳಿವೆ. ಪಾದ ಮತ್ತು ಪ್ರಾಸದ ನಿಯಮಗಳು ಇಲ್ಲಿಲ್ಲ. ಆಧುನಿಕ ಕನ್ನಡ ಕಾವ್ಯದಲ್ಲಿ ಸರಳ ರಗಳೆ ತುಂಬ ಪ್ರಸಿದ್ಧವಾಗಿದೆ.

ಕಂದ ಪದ್ಯ

ಯಾವ ಹಳೆಯ ಕಾವ್ಯವನ್ನು ತೆಗೆದು ನೋಡಿದರೂ ಅದರಲ್ಲಿ ಕಂದಗಳ ಸಂಖ್ಯೆ ಇತರ ವೃತ್ತಗಳಿಗಿಂತ ಅಧಿಕ. ಹಾಗೆಯೇ ಅದೊಂದು ಹಾಡುಗಳ ಸಾಲಿಗೆ ಸೇರಿದ ಬಂಧ. ಇದು ಮಾತ್ರಾ ವೃತ್ತಗಳ ಮತ್ತು ವರ್ಣ ವೃತ್ತಗಳ ಮಿಲನದಿಂದಾದ ಬಂಧವಾಗಿದೆ.

ಕಂದದಲ್ಲಿ ನಾಲ್ಕು ಪಾದಗಳಿವೆ. ಚತುರ್ಮಾತ್ರಾ ಗಣವು ಒಂದು, ಮೂರನೆಯ ಪಾದಗಳಲ್ಲಿ ಮೂರು ಮೂರು(ಹನ್ನೆರಡು ಮಾತ್ರೆಗಳು); ಎರಡು, ನಾಲ್ಕನೆಯ ಪಾದಗಳಲ್ಲಿ ಐದೈದು (ಇಪ್ಪತ್ತು ಮಾತ್ರೆಗಳು) ಇರಬೇಕು. ಪೂರ್ವೋತ್ತರಾರ್ಧಗಳ ವಿಷಮ ಸ್ಥಾನಗಳಲ್ಲಿ ಮಧ್ಯೆ ಗುರುವುಳ್ಳ ಗಣಗಳು ಬರಕೂಡದು. ಆರನೆಯ ಸ್ಥಾನದಲ್ಲಿ ಜಗಣ(ಽ–ಽ)ವಾಗಲೀ ನಾಲ್ಕು ಲಘುವುಳ್ಳ ಗಣ(ಽಽಽ)ವಾಗಲೀ ಬಂದು ಮೊದಲಿನ ಹ್ರಸ್ವದ ಮುಂದೆ ಯತಿ ಇರಬೇಕು. ಎಂಟನೆಯ ಸ್ಥಾನಗಳಲ್ಲಿ ಅಂತ್ಯ ಗುರುವುಳ್ಳ ಗಣ (ಽ ಽ _ _ _)ಗಳೇ ಬರಬೇಕು.

ಉದಾಹರಣೆ:

ಽಽಽಽ ಽ ಽ – ಽಽ –
ಪುಸಿಯೆನೆ|ರಥಮಂ|ಹರಿ ಚೋ

ಽ ಽ– ಽ ಽ – ಽ – ಽ ಽಽ– ಽಽ–
ದಿಸುವಂ|ತೆ ವೊಲಿ|ರ್ದ ದೆಂತು|ನರನಂ|ಗೆಲಿಪಂ ॥

ಽಽಽಽ ಽ – ಽ – –
ವಿಸಸನ|ದೊಳಂತೆ|ನೀ ಮುಂ

ಽ ಽ– – – ಽ – ಽ – – – –
ಪೆಸರಂ|ಕರ್ಣಂ|ಗೆ ಮಾಡಿ|ಗೆಲ್ಲಂ|ಗೊಳ್ಳಿಂ ॥

12th_Kannada_Reader_8.indd 193 22-05-2019 15:39:50

ಅಂಶ ಗಣ ವೃತ್ತಗಳು

ಅಂಶ ಗಣಗಳ ಆಧಾರದಲ್ಲಿ ರಚಿತವಾದ ವೃತ್ತಗಳೇ ಅಂಶ ಗಣ ವೃತ್ತಗಳು. ಇವು ದೇಶೀ ವೃತ್ತಗಳಾಗಿವೆ. ತ್ರಿಪದಿ, ಸಾಂಗತ್ಯ, ಅಕ್ಕರ, ಮದನವತಿ, ಅಕ್ಕರಿಕೆ, ಛಂದೋವತಂಸ ಮೊದಲಾದುವು ಅಂಶಗಣ ವೃತ್ತಗಳು.

ತ್ರಿಪದಿ

ತ್ರಿಪದಿಗಳಲ್ಲಿ ಸರ್ವಜ್ಞನ ತ್ರಿಪದಿಗಳು ಪ್ರಖ್ಯಾತವಾಗಿವೆ. ತ್ರಿಪದಿಯಲ್ಲಿ ಮೂರು ಪಾದಗಳಿರುತ್ತವೆ. ಇದು ಹನ್ನೊಂದು ಅಂಶಗಣಗಳನ್ನು ಒಳಗೊಂಡ ಮೂರು ಸಾಲುಗಳ ಪದ್ಯ. ಇದರ ೬ನೆಯ ಮತ್ತು ೧೦ನೆಯ ಸ್ಥಾನಗಳಲ್ಲಿ ಬ್ರಹ್ಮಗಣಗಳೂ ಉಳಿದೆಡೆಗಳಲ್ಲಿ ವಿಷ್ಣುಗಣಗಳೂ ಇರುತ್ತವೆ. ತ್ರಿಪದಿಯ ಲಕ್ಷಣವನ್ನು ನಾಗವರ್ಮನು ಹೀಗೆ ಹೇಳಿರುವನು.

ವಿ ವಿ ವಿ ವಿ
ಬಿಸರು ಹೋ|ದ್ಭವಗಣಂ|ರಸ ದಶ|ಸ್ಥಾನದೊಳ್

ವಿ ಬ್ರ ವಿ ವಿ
ಬಿಸರುಹ|ನೇತ್ರ|ಗಣಮೇ ಬ|ರ್ಕುಳಿದುವು ॥

ವಿ ಬ್ರ ವಿ
ಬಿಸರುಹ|ನೇತ್ರ|ತ್ರಿಪದಿಗೆ ॥

ಈ ತ್ರಿಪದಿಯಲ್ಲಿ ಪ್ರಥಮ ಪಾದದಲ್ಲಿ ನಾಲ್ಕು ವಿಷ್ಣು ಗಣಗಳೂ ಎರಡನೆಯ ಪಾದದ ಎರಡನೆಯ ಸ್ಥಾನದಲ್ಲಿ ಒಂದು ಬ್ರಹ್ಮ ಗಣವೂ ಮೂರನೆಯ ಪಾದದ ಎರಡನೆಯ ಸ್ಥಾನದಲ್ಲಿ ಒಂದು ಬ್ರಹ್ಮ ಗಣವೂ ಬಂದು ಉಳಿದ ಎಲ್ಲ ಸ್ಥಾನಗಳಲ್ಲಿ ವಿಷ್ಣುಗಣಗಳೂ ಬಂದಿವೆ.

ಒಂದನೇ ಪಾದ	ವಿ	ವಿ	ವಿ	ವಿ
ಎರಡನೇ ಪಾದ	ವಿ	ಬ್ರ	ವಿ	ವಿ
ಮೂರನೇ ಪಾದ	ವಿ	ಬ್ರ	ವಿ	

ಸಾಂಗತ್ಯ

ಸಾಂಗತ್ಯವು ಅರ್ಧ ಸಮ ವೃತ್ತವಾಗಿದೆ. ಇದಕ್ಕೆ ನಾಲ್ಕು ಪಾದಗಳಿವೆ. ಪೂರ್ವಾರ್ಧವು ಉತ್ತರಾರ್ಧಕ್ಕೆ ಸಮಾನವಾಗಿದೆ. ಮೊದಲನೆಯ ಪಾದದಲ್ಲಿ ೪ ಗಣಗಳೂ ಎರಡನೆಯ ಪಾದದಲ್ಲಿ ೩ ಗಣಗಳೂ ಇವೆ. ಇದರಲ್ಲಿ ಒಟ್ಟು ೨೪ ಗಣಗಳಿರುತ್ತವೆ. ಮೊದಲ ಪಾದದಲ್ಲಿ ನಾಲ್ಕು ವಿಷ್ಣು ಗಣಗಳು ಹಾಗೂ ಕೊನೆಯಲ್ಲಿ ಒಂದು ಬ್ರಹ್ಮಗಣ ಬರುತ್ತದೆ.

ಉದಾಹರಣೆಗೆ,

ವಿ ವಿ ವಿ ವಿ
ᴗᴗᴗ– ᴗᴗᴗ– –ᴗ – – ᴗᴗ
ಕುಲಿಶ ದೇ|ಹಿಗಳು ನೀ|ವಿಬ್ಬರಿ|ನ್ನಂ ಕದ

ವಿ ವಿ ಬ್ರ
ᴗᴗ–ᴗ – –ᴗ –ᴗ
ತಲದಲ್ಲಿ|ಕಾಲಿಕ್ಕು|ವಾಗ ।

ವಿ ವಿ ವಿ ವಿ
ᴗᴗ–ᴗ ᴗᴗᴗᴗᴗ ᴗᴗ–ᴗ – ᴗ –
ಬಳೆಗಾರ|ವಸರದೊ|ಳೆರಡಾನೆ|ವೊಕ್ಕು ಹೋ

ವಿ ವಿ ಬ್ರ
ᴗᴗᴗ– ᴗ ᴗ – ᴗ ᴗᴗᴗ
ಕುಳಿಸಿದಂ|ತಹುದೆಂದ|ರವರು ॥

12th_Kannada_Reader_8.indd 194 22-05-2019 15:39:50

ಇದರ ಒಂದನೆಯ ಪಾದದಲ್ಲಿ ೪ ವಿಷ್ಣುಗಣಗಳಿವೆ. ಎರಡನೆಯ ಪಾದದಲ್ಲಿ ೨ ವಿಷ್ಣುಗಣಗಳೂ, ೧ ಬ್ರಹ್ಮಗಣವೂ ಇವೆ. ವಿಷ್ಣುಗಣಕ್ಕೆ ಬದಲಾಗಿ ಬ್ರಹ್ಮ ಗಣವೂ ಬರಬಹುದು. ಇದು ಹಾಡಿನ ವೃತ್ತ.

ಅಲಂಕಾರ

ಮನುಷ್ಯರು, ತಾವು ಸುಂದರವಾಗಿ ಕಾಣಿಸಿಕೊಳ್ಳುವುದಕ್ಕಾಗಿ ವಿವಿಧ ಬಗೆಯ ಬಟ್ಟೆ ಬರೆ ಮತ್ತು ಆಭರಣಗಳಿಂದ ಅಲಂಕಾರ ಮಾಡಿಕೊಳ್ಳುತ್ತಾರೆ. ಹಾಗೆಯೇ ಮಾತನಾಡುವಾಗ ತಾವು ಆಡುವ ಮಾತು ಕೇಳುವವರಿಗೆ ಹಿತವಾಗುವಂತೆ, ಆಕರ್ಷಕವಾಗಿ ಕಾಣುವಂತೆ, ಮನಮುಟ್ಟುವಂತಿರುವುದಕ್ಕಾಗಿ ಚಮತ್ಕಾರದಿಂದ ಹೇಳುವುದುಂಟು. ಉದಾಹರಣೆಗೆ : 'ಸೂರ್ಯನು ಉದಯಿಸಿದನು' ಎಂಬ ವಾಕ್ಯದ ಬದಲಿಗೆ 'ಉದಯಿಸಿದ ಸೂರ್ಯನು, ಧರೆ ಸುಮಂಗಲಿಯ ಹಣೆಯ ಕುಂಕುಮದ ಬೊಟ್ಟಿನಂತೆ' – ಎಂದು ಹೇಳುವಲ್ಲಿ ಒಂದು ರೀತಿಯ ಚಮತ್ಕಾರ ಕಾಣುತ್ತದೆ. ಹೀಗೆ ಚಮತ್ಕಾರದ ಮಾತುಗಳಿಂದ ವರ್ಣಿಸುವುದನ್ನು ಅಲಂಕಾರ ಎನ್ನಲಾಗುವುದು. ಹೀಗೆ ಕವಿಗಳು ಬರೆದ ಕಾವ್ಯಮಯ ಭಾಷೆಯಲ್ಲಿ ಬರುವ ಶಬ್ದ, ಅರ್ಥ ವೈಚಿತ್ರ್ಯದಿಂದ ಉಂಟಾಗುವ ಕಾವ್ಯ ಸೌಂದರ್ಯಕ್ಕೆ ಅಲಂಕಾರ ಎಂದು ಹೆಸರು. ಅಲಂಕಾರ, ಕಾವ್ಯ ಸೌಂದರ್ಯವನ್ನು ಹೆಚ್ಚಿಸುವಂತಹುದು.

ಅಲಂಕಾರಗಳನ್ನು ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂದು ಎರಡು ವಿಭಾಗ ಮಾಡಲಾಗಿದೆ.

ಶಬ್ದಾಲಂಕಾರಗಳು

ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯ ಸೌಂದರ್ಯವನ್ನು ಹೆಚ್ಚಿಸಿದರೆ ಅದನ್ನು ಶಬ್ದಾಲಂಕಾರ ಎಂದು ಕರೆಯುತ್ತಾರೆ. ಶಬ್ದಾಲಂಕಾರದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಅವು :

1. ಅನುಪ್ರಾಸ 2. ಯಮಕ 3. ಚಿತ್ರಕವಿತ್ವ.

1. ಅನುಪ್ರಾಸ

ಅನುಪ್ರಾಸದಲ್ಲಿ ವೃತ್ತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ಎರಡು ವಿಧಗಳಿವೆ.

ಅ) ವೃತ್ತ್ಯನುಪ್ರಾಸ: ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತಿತವಾಗಿದ್ದರೆ ಅದನ್ನು ವೃತ್ಯನುಪ್ರಾಸ ಎನ್ನುವರು.

ಉದಾಹರಣೆ 1 :

ಎಳೆಗಿಳಿಗಳ ಬಳಗಂ ಗಳ
ಗಳನಿಳಿತಂದೆಳಸಿ ಬಳಸಿ
ಸುಳಿದೊಳವುಗುತಂ
ನಳನಳಿಸಿ ಬೆಳೆದು ಕಳಿಯದ
ಕಳವೆಯ ಕಳಶಂಗಳಂ ಕರಂ
ಖಂಡಿಸುಗುಂ

ಈ ಪದ್ಯದಲ್ಲಿ ಗ, ಳ, ಕ ಅಕ್ಷರಗಳು ಮತ್ತೆ ಮತ್ತೆ ಪುನರಾವರ್ತಿತವಾಗಿರುವುದನ್ನು ಕಾಣಬಹುದು.

ಉದಾಹರಣೆ 2 :

'ಬಲ್ಲವನೇ ಬಲ್ಲ ಬೆಲ್ಲದ ಸವಿಯ'

ಇಲ್ಲಿ ಲ ಮತ್ತು ಬ ಅಕ್ಷರಗಳು ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಅ) ಛೇಕಾನುಪ್ರಾಸ : ಎರಡೆರಡು ವ್ಯಂಜನಾಕ್ಷರಗಳು ಜೋಡಿಯಾಗಿ ಪದ್ಯದ ಸಾಲುಗಳಲ್ಲಿ ಹಲವೆಡೆ ಪುನರಾವರ್ತಿತವಾಗಿದ್ದರೆ ಅದನ್ನು ಛೇಕಾನುಪ್ರಾಸ ಎನ್ನುವರು.

ಉದಾಹರಣೆ 1 :

ಕೆಲದೊಳ್ ಪುಳಿಂದಿಯಿರೆ ಪೆ
ರ್ಬುಲಿ ಬಂದೊಡಮಂಜನಳ್ಕನೋಡಂ
ನೋಡಂ

12th_Kannada_Reader_8.indd 195 22-05-2019 15:39:50

ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮರೆದು ತಣಿದು ಬೇಡಂ ಬೇಡಂ

ಈ ಪದ್ಯದಲ್ಲಿ ನೋಡಂ ನೋಡಂ, ಕಾಡಂ ಕಾಡಂ, ಬೇಡಂ ಬೇಡಂ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದಿರುವುದನ್ನು ಕಾಣಬಹುದು.

ಉದಾಹರಣೆ 2 :

ತರತರದ ಕಲ್ಲೋಲ ಮಾಲೆಗಳ ಲೀಲೆಗಳ
ಬೆರೆಬೆರೆವ ರಾಜ ಹಂಸಾಳಿಗಳ ಕೇಳಿಗಳ
ಪರಿಪರಿವನೇರ್ವನಿಗಳಾ ಕರದ ಶೀಕರದ
ನೋರೆಯ ಬೊಬ್ಬುಳಿಯ ಸುಳಿಯ
ಮೊರೆಮೊರೆದು ಘೂರ್ಮಿಸುವ
ಪರಿವುಗಳ ಮುರಿವುಗಳ
ತಿರುತಿರುಗಿ ಸುಳಿವ
ಜಲಜಂತುಗಳಗೊಂತುಗಳ
ನೆರೆನೆರೆದು ಮುನಿಜಂ ಸೇವಿಸುವ
ಭಾವಿಸುವ ಗಂಗೆಗವನಿಜೆ ಬಂದಳು

ಈ ಪದ್ಯದಲ್ಲಿ ತರತರ, ಬೆರೆಬೆರೆ, ಪರಿಪರಿ, ಮೊರೆಮೊರೆ, ತಿರುತಿರುಗಿ, ನೆರೆನೆರೆದು ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿ ಬಂದು ಕಾವ್ಯ ಸೌಂದರ್ಯವನ್ನು ಹೆಚ್ಚಿಸಿವೆ.

ಉದಾಹರಣೆ 3 :

ಉಗುಳಿ ಉಗುಳಿ ರೋಗ
ಹಾಡಿ ಹಾಡಿ ರಾಗ

ಮಾಡಿ ಮಾಡಿ ಕೆಟ್ಟರು
ನೀಡಿ ನೀಡಿ ಕೆಟ್ಟರು

ಇಲ್ಲಿ ಉಗುಳಿ ಉಗುಳಿ, ಹಾಡಿ ಹಾಡಿ, ನೀಡಿ ನೀಡಿ, ಮಾಡಿ ಮಾಡಿ ಎಂಬ ಎರಡೆರಡು ಅಕ್ಷರಗಳು ಜೋಡಿಯಾಗಿ ಪುನರಾವರ್ತಿತವಾಗಿವೆ.

2. ಯಮಕಾಲಂಕಾರ

ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದಗಳು ಒಂದು ಪದ್ಯದ ಆದಿ, ಮಧ್ಯ ಅಥವಾ ಅಂತ್ಯ ಸ್ಥಾನಗಳಲ್ಲಿ ನಿಯತವಾಗಿ ಮತ್ತೆ ಮತ್ತೆ ಬರುವುದನ್ನು ಯಮಕಾಲಂಕಾರ ಎನ್ನುವರು.

ಅ) ವೃತ್ತ್ಯನುಪ್ರಾಸ : ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತಿತವಾಗಿದ್ದರೆ ಅದನ್ನು ವೃತ್ಯನುಪ್ರಾಸ ಎನ್ನುವರು.

ಉದಾಹರಣೆ 1 :

ಅಲ್ಲಿಗಲ್ಲಿಗೆ ಬೆಳೆದ ಬೆಳಿಗಳಿಂ ಮೆಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಲಗಳಿಂ ಕೊಳಗಳಿಂ
ದಲ್ಲಿಗಲ್ಲಿಗೆ ರನ್ನದೆರೆಗಳಿಂ ಕೆರೆಗಳಿಂ ಪರಿವ
ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ
ದಲ್ಲಿಗಲ್ಲಿಗೆ ನರೆದ ಶುಕಗಳಿಂ ಪಿಕಗಳಿಂ
ದಲ್ಲಿಗಲ್ಲಿಗೆ ಗವಾಸ್ವದಗಳಿಂ
ನದಿಗಳಿಂದಾದೇಶಮೊಪ್ಪಿರ್ದುದು

ಈ ಪದ್ಯದಲ್ಲಿ ಪ್ರತಿಸಾಲಿನ ಆದಿಯಲ್ಲಿ 'ಅಲ್ಲಗಲ್ಲಿಗೆ' ಎಂಬ ಪದ ನಿಯತವಾಗಿ ಮತ್ತೆ ಮತ್ತೆ ಬಂದಿದೆ. ಹೀಗೆ ಒಂದು ಪದವೇ ಮತ್ತೆ ಮತ್ತೆ ಪುನರಾವರ್ತಿತವಾದರೆ ಅದನ್ನು ವೃತ್ಯನುಪ್ರಾಸ ಎಂದು ಕರೆಯಲಾಗುವುದು.

ಉದಾಹರಣೆ 2 :

ಎಳೆವಾಸೆ ತೊಡರ್ದುದೆನೆ ಮಿಸು
ಪೆಳೆವಾಸೆಯ ದೆಸೆಯೆ ನಿಂದಳಂ
ಕೈವಿಡಿದೊ
ಲ್ದೆಳೆವಾಸೆಯಾಂತನಂಬುಜ
ದೆಳೆವಾಸೆಡೆಗೊಂಡ ಪುಳಿನದೆಡೆಗವನೀಶಂ

ಈ ಪದ್ಯದಲ್ಲಿ ಎಳವಾಸೆ ಎನ್ನುವ ಪದವು ನಿಯತವಾಗಿ ಮತ್ತೆ ಮತ್ತೆ ಬಂದಿರುವುದನ್ನು ಕಾಣಬಹುದು.

12th_Kannada_Reader_8.indd 196 22-05-2019 15:39:50

3. ಚಿತ್ರಕವಿತ್ವ

ಅಕ್ಷರ ಅಥವಾ ಪದಗಳ ಚಮತ್ಕಾರ ಹುಟ್ಟಿಸಿ ರಚಿಸಿದ ಪದ್ಯಗಳೇ ಚಿತ್ರಕವಿತ್ವ

ಉದಾಹರಣೆ 1 :

ನನ್ದನ ನನ್ದನ ನಿನ್ನೊ
ನ್ದನ್ದದ ಮೈ ಮುನ್ದೆ ನಿನ್ದುದೆನ್ದೆನೆ ಮುದದಿ
ನ್ದನ್ದಿನ್ದುನ್ದೆನ್ನದೆ ನೀ
ನೆನ್ದುಂ ಮನ್ಮನದೆ ನಿಮ್ಮಿನಿನ್ದೀ ಮುದಮಂ

ಅರ್ಥಾಲಂಕಾರಗಳು

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಸೌಂದರ್ಯ ಹೆಚ್ಚಿದರೆ ಅದನ್ನು ಅರ್ಥಾಲಂಕಾರ ಎನ್ನುವರು. ಅರ್ಥಾಲಂಕಾರದಲ್ಲಿ ನೂರಕ್ಕೂ ಹೆಚ್ಚು ವಿಧಗಳಿವೆ. ಅವುಗಳಲ್ಲಿ ಪ್ರಮುಖವಾದ ಕೆಲವು ಅರ್ಥಾಲಂಕಾರಗಳನ್ನು ಇಲ್ಲಿ ಪರಿಚಯ ಮಾಡಿಕೊಳ್ಳೋಣ.

1. ಉಪಮಾಲಂಕಾರ

ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಸಾದೃಶ್ಯ ಸಂಪತ್ತನ್ನು ಹೋಲಿಸಿ ಹೇಳುವುದಕ್ಕೆ ಉಪಮಾಲಂಕಾರ ಎಂದು ಹೆಸರು. ಹೋಲಿಸಲ್ಪಡುವ ಮತ್ತು ಹೋಲಿಸುವ ವಸ್ತುಗಳು ಸಮಾನ ಧರ್ಮವನ್ನು ಹೊಂದಿರಬೇಕು.

ಎರಡು ವಸ್ತುಗಳನ್ನು ಪರಸ್ಪರ ಹೋಲಿಸಿ ಉಪಮಾಲಂಕಾರವನ್ನು ಮಾಡುವಾಗ ಅದರಲ್ಲಿ ಈ ಸಂಗತಿಗಳಿರಬೇಕು.

ಅ. **ಉಪಮೇಯ** : ಯಾವ ವಸ್ತುವನ್ನು ಹೋಲಿಸುತ್ತೇವೆಯೋ ಅದು.

ಆ. **ಉಪಮಾನ** : ಯಾವುದಕ್ಕೆ ಹೋಲಿಸುತ್ತೇವೆಯೋ ಅದು.

ಇ. **ಉಪಮಾವಾಚಕ** : **'ಅಂತೆ', 'ವೋಲ್'** ಮುಂತಾದ ಶಬ್ದಗಳು ಉಪಮಾನ ಮತ್ತು ಉಪಮೇಯಕ್ಕೆ ಹೋಲಿಕೆ ತರುವುದರಿಂದ ಅವು ಉಪಮಾವಾಚಕಗಳು.

ಈ. ಸಮಾನ ಧರ್ಮ : ಉಪಮಾನ – ಉಪಮೇಯಗಳಲ್ಲಿರುವ ಸಮಾನ ಗುಣಗಳು.

ಉದಾಹರಣೆಗೆ : ಶಕುಂತಲಳ ಮುಖ ಕಮಲದಂತೆ ಅರಳಿತು. ಎನ್ನುವಾಗ ಇಲ್ಲಿ,

ಉಪಮೇಯ : ಶಕುಂತಲಳ ಮುಖ
ಉಪಮಾನ : ಕಮಲ
ಉಪಮಾವಾಚಕ : ಅಂತೆ
ಸಮಾನ ಧರ್ಮ : ಅರಳುವುದು.

ಇಲ್ಲಿ ಉಪಯಮೇಯವಾದ ಶಕುಂತಲಾಳ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಲಾಗಿದೆ.

2. ರೂಪಕಾಲಂಕಾರ

ಎರಡೂ ಒಂದೆ ಎಂದು ಅಭೇದ(ಭೇದವಿಲ್ಲದೆ) ಕಲ್ಪಿಸಿ ಹೇಳಿದರೆ ಅದನ್ನು ರೂಪಕಾಲಂಕಾರ ಎನ್ನುವರು.

ಉದಾಹರಣೆಗೆ : ದ್ರೌಪದಿಯ ಮುಖ ಕಮಲ ಅರಳಿತು.

ಇಲ್ಲಿ ಮುಖ ಎಂಬುದು ಉಪಮೇಯ, ಕಮಲ ಎಂಬುದು ಉಪಮಾನ. ಮುಖವೇ ಕಮಲವಾಗಿರುವುದರಿಂದ ಅದು ಮುಖ ಕಮಲ. ಆದ್ದರಿಂದ ಇದು ರೂಪಕಾಲಂಕಾರ.

3. ಉತ್ಪ್ರೇಕ್ಷಾಲಂಕಾರ

ಒಂದು ಪದಾರ್ಥವನ್ನಾಗಲೀ ಸನ್ನಿವೇಶವನ್ನಾಗಲೀ ಮತ್ತೊಂದನ್ನಾಗಿ ಸಂಭಾವಿಸಿ(ಕಲ್ಪಿಸಿ) ವರ್ಣಿಸಿದರೆ ಅದನ್ನು ಉತ್ಪ್ರೇಕ್ಷಾಲಂಕಾರ ಎನ್ನುವರು. ಅಂದರೆ ಉಪಮೇಯವನ್ನು ಉಪಮಾನವನ್ನಾಗಿ ಕಲ್ಪಿಸಿ ವರ್ಣಿಸುವುದು.

ಉದಾಹರಣೆ :

ತ್ರೈಲೋಕ್ಯ ಸುಂದರಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಅಚ್ಛೋದ ಸರೋವರವು ಕಂಗೊಳಿಸುತ್ತಿತ್ತು.

ಉಪಮೇಯ : ಅಚ್ಛೋದ ಸರೋವರ
ಉಪಮಾನ : ರನ್ನಗನ್ನಡಿ

ಇಲ್ಲಿ ಉಪಮೇಯವಾದ ಅಚ್ಛೋದ ಸರೋವರವು ಉಪಮಾನವಾದ ರನ್ನದ ಕನ್ನಡಿ ಎಂದು ಸಂಭಾವಿಸ(ಕಲ್ಪಿಸಿ)ಲಾಗಿದೆ. ಆದುದರಿಂದ ಇದು ಉತ್ಪ್ರೇಕ್ಷಾಲಂಕಾರ.

12th_Kannada_Reader_8.indd 197 22-05-2019 15:39:50

4. ದೃಷ್ಟತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು ದೃಷ್ಟತಾಲಂಕಾರ ಎನ್ನುವರು.

ಉದಾಹರಣೆ : 'ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ಕಾವ್ಯವನ್ನು ರಚಿಸದಿರುವನೆ ? ಕತ್ತಲೆಯ ಭಯದಿಂದ ಸೂರ್ಯನು ತನ್ನ ಕಿರಣಗಳನ್ನು ಪ್ರಸರಿಸದಿರುವನೆ ?'

ಇಲ್ಲಿ ಉಪಮಾನವಾದ ಸೂರ್ಯನು ಕತ್ತಲೆಗೆ ಹೆದರದೆ ತನ್ನ ಕಿರಣಗಳನ್ನು ಪಸರಿಸಿಯೇ ತೀರುತ್ತಾನೆಂದೂ, ಉಪಮೇಯವಾದ ಸತ್ಕವಿಯಾದವನು ದುರ್ಜನರು ತನ್ನನ್ನು ನಿಂದಿಸುವರೆಂದು ಹೆದರದೆ ಕಾವ್ಯವನ್ನು ರಚಿಸಿಯೇ ತೀರುತ್ತಾನೆಂದೂ ಹೇಳಲಾಗಿದೆ. ಉಪಮೇಯ ಉಪಮಾನಗಳಲ್ಲಿ ಬಿಂಬ ಪ್ರತಿಬಿಂಬ ಭಾವ ಇರುವುದನ್ನು ಕಾಣಬಹುದು.

5. ಅರ್ಥಾಂತರ ನ್ಯಾಸಾಲಂಕಾರ

ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯದಿಂದಾಗಲೀ ಅಥವಾ ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದಾಗಲೀ ಸಮರ್ಥನೆ ಮಾಡುವುದೇ ಅರ್ಥಾಂತರ ನ್ಯಾಸಾಲಂಕಾರ.

ಉದಾಹರಣೆ 1 :

ಆತ ಉಂಡ ಮನೆಗೆ ಕೇಡು ಬಗೆದ. ಕೃತಜ್ಞರು ಏನನ್ನು ತಾನೇ ಮಾಡರು ?

ಉಪಮೇಯ : (ವಿಶೇಷ ವಾಕ್ಯ) ಆತ ಉಂಡ ಮನೆಗೆ ಕೇಡು ಬಗೆದ.

ಉಪಮಾನ : (ಸಾಮಾನ್ಯ ವಾಕ್ಯ) ಕೃತಜ್ಞರು ಏನನ್ನು ತಾನೇ ಮಾಡರು ?

ಸಮರ್ಥನ : (ಸಮನ್ವಯ) ಇಲ್ಲಿ ಉಪಮಾನವಾದ 'ಕೃತಜ್ಞರು ಏನನ್ನು ತಾನೇ ಮಾಡರು' ಎಂಬ ಲೋಕ ರೂಢಿಯ ಮಾತನ್ನು ಆಧರಿಸಿ ಉಪಮೇಯವಾದ 'ಆತ ಉಂಡ ಮನೆಗೆ ಕೇಡು ಬಗೆದ' ಎಂಬ ವಿಶೇಷ ವಾಕ್ಯವನ್ನು ಸಮರ್ಥಿಸಲಾಗಿದೆ.

ಉದಾಹರಣೆ 2 :

ಪ್ರಕಾಶನು ಹನ್ನೆರಡನೇ ತರಗತಿ ಪರೀಕ್ಷೆಯಲ್ಲಿ ರಾಜ್ಯದಲ್ಲೇ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣವಾದನು. ಪ್ರತಿಭಾವಂತರಿಗೆ ಯಾವುದು ತಾನೇ ಅಸಾಧ್ಯ?

6. ಶ್ಲೇಷಾಲಂಕಾರ

ಅನೇಕ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದನ್ನು ಶ್ಲೇಷಾಲಂಕಾರ ಎನ್ನುವರು.

ಉದಾಹರಣೆಗೆ : ಆ ವಿವಾಹ ಮಂಟಪ ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧ ಮಿಳಿತವಾಗಿತ್ತು.

ಇಲ್ಲಿ ವಿವಾಹ ಮಂಟಪವೊಂದರ ವರ್ಣನೆ ಮಾಡಲಾಗಿದೆ. ಪುರಂದರಪುರವೆಂದರೆ ದೇವೇಂದ್ರನ ಪಟ್ಟಣ ಅದು. ಎಂದರೆ ಸ್ವರ್ಗ. ರಂಭಾನ್ವಿತ ಮತ್ತು ವಿಬುಧ ಮಿಳಿತ ಎರಡು ಪದಗಳು ಉಪಮೇಯ ಉಪಮಾನಗಳಿಗೆ ಬೇರೆ ಬೇರೆ ಅರ್ಥ ನೀಡುತ್ತವೆ.

ಪದ	ವಿವಾಹ ಮಂಟಪದ ಪರವಾಗಿ	ಸ್ವರ್ಗದ ಪರವಾಗಿ
ರಂಭಾನ್ವಿತ	ಬಾಳೆಯ ಗಿಡಗಳಿಂದ ಕೂಡಿತ್ತು	ರಂಭೆಯೆಂಬ ಅಪ್ಸರೆಯಿಂದ ಕೂಡಿತ್ತು
ವಿಬುಧ ಮಿಳಿತ	ಬ್ರಾಹ್ಮಣರಿಂದ ಕೂಡಿತ್ತು	ದೇವತೆಗಳಿಂದ ಕೂಡಿತ್ತು.

ಪತ್ರಲೇಖನ, ಪ್ರಬಂಧಗಳು.

ಒಬ್ಬರು ಮತ್ತೊಬ್ಬರೊಂದಿಗೆ ಬರಹದ ಮೂಲಕ ಕುಶಲೋಪರಿ ಅಥವಾ ವ್ಯವಹಾರಕ್ಕಾಗಿ ಸಂಪರ್ಕ ಮಾಡುವುದನ್ನು ಪತ್ರಲೇಖನ ಎನ್ನುತ್ತೇವೆ. ಇದೊಂದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಬರಹದ ಪದ್ಧತಿಯಾಗಿದೆ. ಪ್ರಾಚೀನ ಕಾಲದಲ್ಲಿ ಎಲೆಯ(ಪತ್ರದ) ಮೇಲೆ, ಬಟ್ಟೆಯ ಮೇಲೆ, ತಾಳೆಗರಿಗಳ ಮೇಲೆ ಪತ್ರಗಳನ್ನು ಬರೆದು ಕಳಿಸುತ್ತಿದ್ದರು. ಈಗ ಕಾಗದದ ಮೇಲೆ ಬರೆಯುತ್ತಿದ್ದರೂ ಪತ್ರ ಬರೆಯುವ ಅದೇ ಪದ್ಧತಿ ಮುಂದುವರೆಯುತ್ತಿದೆ. ಇಂದು ದೂರವಾಣಿ, ಮೊಬೈಲ್‌ಫೋನ್, ಕಂಪ್ಯೂಟರ್ ಮುಂತಾದ ಸಂಪರ್ಕ ಮಾಧ್ಯಮಗಳು ಪ್ರಚಾರದಲ್ಲಿವೆ. ಇವುಗಳ ಮೂಲಕ ಎಸ್.ಎಂ.ಎಸ್, ಇ–ಮೆಯಿಲ್, ಮುಂತಾದವುಗಳ ಮೂಲಕ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಕ್ಷಣ ಮಾತ್ರದಲ್ಲಿ

12th_Kannada_Reader_8.indd 198 22-05-2019 15:39:50

ಯಾರನ್ನು ಬೇಕಾದರೂ ಸಂಪರ್ಕಿಸಬಹುದು. ಹಾಗಿದ್ದೂ ಸಹ ಪತ್ರಗಳು ಮನುಷ್ಯನು ಅಕ್ಷರ ಜ್ಞಾನ ಪಡೆದಂದಿನಿಂದಲೂ ಮಹತ್ವವನ್ನು ಪಡೆದುಕೊಂಡು ಬಂದಿದೆ. ಅವು ಸಾರ್ವಕಾಲಿಕ ದಾಖಲೆಗಳು. ಪತ್ರಗಳಿಗೆ ಅದರದ್ದೇ ಆದ ವಿಶಿಷ್ಟತೆ ಇದೆ.

ಪತ್ರಗಳಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ.

1. ವೈಯಕ್ತಿಕ ಪತ್ರ.
2. ವ್ಯಾವಹಾರಿಕ ಪತ್ರ.

1. ವೈಯಕ್ತಿಕ ಪತ್ರ

ಬಂಧು–ಮಿತ್ರರು ಪರಸ್ಪರ ಬರೆಯುವ ಪತ್ರಗಳನ್ನು ವೈಯಕ್ತಿಕ ಪತ್ರಗಳೆಂದು ಕರೆಯಲಾಗುವುದು.

2. ವ್ಯಾವಹಾರಿಕ ಪತ್ರ

ಬೇರೆ ಬೇರೆ ಕಾರಣಗಳಿಗಾಗಿ ವ್ಯಕ್ತಿಯು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಬರೆಯುವ ಪತ್ರಗಳನ್ನು ವ್ಯಾವಹಾರಿಕ ಪತ್ರಗಳೆಂದು ಕರೆಯುವರು.

ಪತ್ರದ ಅಂಗಗಳು/ಪತ್ರದಲ್ಲಿರಬೇಕಾದ ಅಂಶಗಳು :

1. ಪತ್ರದ ಪ್ರಾರಂಭ (ವಿಳಾಸ ಮತ್ತು ದಿನಾಂಕ)

ಪತ್ರವನ್ನು ಬರೆಯುವವರು, ಸ್ಥಳ ಮತ್ತು ದಿನಾಂಕವನ್ನು ಪತ್ರದ ಬಲಭಾಗದ ಮೇಲಿನ ಮೂಲೆಯಲ್ಲಿ ಬರೆಯಬೇಕು. ಎಡಬದಿಯ ಮೇಲ್ಭಾಗದಲ್ಲಿ ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸವನ್ನು ಕ್ರಮವಾಗಿ ಬರೆಯಬೇಕು. ನಂತರ ಯಾರಿಗೆ ಪತ್ರ ಬರೆಯುತ್ತಿದ್ದೇವೆಯೋ ಅವರನ್ನು ಗೌರವಯುತವಾಗಿ ಸಂಬೋಧಿಸಿ, ನಂತರ ವಿಷಯವನ್ನು ವಿವರಿಸಬೇಕು.

2. ಆರಂಭದ ಸಂಬೋಧನೆ

ಪತ್ರವನ್ನು ಆರಂಭಿಸುವ ಮುನ್ನ ನಾವು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರನ್ನು ಉಚಿತ ಪದಗಳಿಂದ ಸಂಬೋಧಿಸಬೇಕು. ಯಾರನ್ನು ಹೇಗೆ ಸಂಬೋಧಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ

ತಂದೆಯನ್ನು – ತೀರ್ಥರೂಪ;
ತಾಯಿಯನ್ನು – ಮಾತೃಶ್ರೀ;
ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಣ್ಣ ಇತ್ಯಾದಿ ಹಿರಿಯ ಪುರುಷರನ್ನು–ತೀರ್ಥರೂಪು ಸಮಾನರಾದ(ತಂದೆಯ ಸಮಾನರಾದ ಎಂದು ಅರ್ಥ);
ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ, ಅತ್ತೆ ಇತ್ಯಾದಿ ಹಿರಿಯ ಮಹಿಳೆಯನ್ನು–ಮಾತೃಶ್ರೀ ಸಮಾನರಾದ(ತಾಯಿಯ ಸಮಾನರಾದ ಎಂದು ಅರ್ಥ);
ತಂಗಿ ಮತ್ತು ಇತರ ಕಿರಿಯ ಸ್ತ್ರೀಯರನ್ನು – ಚಿರಂಜೀವಿ ಸೌಭಾಗ್ಯವತಿ;
ತಮ್ಮ ಮತ್ತು ಇತರ ಕಿರಿಯ ಪುರುಷರನ್ನು – ಚಿರಂಜೀವಿ;
ಗೆಳೆಯ/ಗೆಳತಿಯರನ್ನು – ಪ್ರೀತಿಯ, ನಲ್ಮೆಯ, ಆತ್ಮೀಯ, ಒಲವಿನ, ನಚ್ಚಿನ... ಇತ್ಯಾದಿ;
ಅಧಿಕಾರಿಗಳನ್ನು – ಮಾನ್ಯರೇ ಅಥವಾ ಸ್ವಾಮೀ –

ಹೀಗೆ ಪತ್ರದ ಆರಂಭದಲ್ಲಿ ಯಾರಿಗೆ ಬರೆಯುತ್ತಿದ್ದೇವೆಯೋ ಅವರನ್ನು ಸಂಬೋಧಿಸಬೇಕು. ಗೌರವ ಸೂಚಕವಾಗಿ ಹಿರಿಯರಿಗಾದಲ್ಲಿ 'ಬೇಡುವ ಆಶೀರ್ವಾದಗಳು' ಎಂದೂ; ಕಿರಿಯರಿಗಾದಲ್ಲಿ, 'ಆಶೀರ್ವಾದಗಳು' ಎಂದೂ; ಸ್ನೇಹಿತರಿಗೆ, ಅಧಿಕಾರಿಗಳಿಗೆ– 'ವಂದನೆಗಳು' ಎಂದೂ ಬರೆಯಬೇಕು.

3. ಪತ್ರದ ವಿಷಯ

ಪತ್ರದ ಅತ್ಯಂತ ಮಹತ್ವದ ಭಾಗವೆಂದರೆ ಪತ್ರದ ಆಂತರಿಕ ವಿಷಯವಾಗಿದೆ. ವಿಷಯಕ್ಕೆ ತಕ್ಕಂತೆ ವಾಕ್ಯಗಳಿರಬೇಕು. ಸ್ಪಷ್ಟವಾಗಿರಬೇಕು. ಪತ್ರ ಲೇಖನದ ಉದ್ದೇಶವನ್ನು ನಿರೂಪಣೆ ಮಾಡಬೇಕು. ಬಳಿಕ ಒಕ್ಕಣೆಯನ್ನು ಸ್ಪಷ್ಟವಾಗಿ ಸಮಾಪ್ತಿಗೊಳಿಸಬೇಕು.

4. ಮುಕ್ತಾಯ

ತಂದೆ, ತಾಯಿ, ಹಿರಿಯರಿಗೆ– 'ಇತಿ ಸಾಷ್ಟಾಂಗ ನಮಸ್ಕಾರಗಳು', 'ಇತಿ ಪ್ರಣಾಮಗಳು' ಎಂದೂ; ಅಧಿಕಾರಿಗಳಿಗೆ – 'ಇತಿ ತಮ್ಮ ವಿಶ್ವಾಸಿ' ಎಂದೂ ಗೌರವಪೂರ್ವಕ/ವಂದನಾಪೂರ್ವಕ ಪದಗಳನ್ನು ಬಳಸಿ ಪತ್ರವನ್ನು ಮುಕ್ತಾಯ ಮಾಡಬೇಕು.

5. ಸಹಿ

ಗೌರವಪೂರ್ವಕ/ವಂದನಾಪೂರ್ವಕ ಮುಕ್ತಾಯದ ನಂತರ ಅದರ ಕೆಳಗೆ ಬಲಭಾಗದಲ್ಲಿ ಸಹಿ ಹಾಕಬೇಕು. ಸಹಿಯ ಕೆಳಗೆ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು.

ಹೀಗೆ ಪತ್ರವನ್ನು ಕ್ರಮಬದ್ಧವಾಗಿ ಬರೆಯಬೇಕು. ಕೆಲವು ಮಾದರಿ ಪತ್ರಗಳನ್ನು ಇನ್ನು ಮುಂದೆ ನೋಡೋಣ.

12th_Kannada_Reader_8.indd 199 22-05-2019 15:39:50

ವೈಯಕ್ತಿಕ ಪತ್ರದ ಮಾದರಿ

ಶಾಲಾ ವಾರ್ಷಿಕೋತ್ಸವ ನಡೆದ ಬಗ್ಗೆ ಗೆಳೆಯನಿಗೊಂದು ಪತ್ರ :

ದಿನಾಂಕ : 01.06.2018
ತಾಳವಾಡಿ

ಭಾನುಪ್ರಕಾಶ್
11ನೇ ತರಗತಿ, ಎ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ತಾಳವಾಡಿ, ತಮಿಳುನಾಡು.

ಪ್ರೀತಿಯ ಗೆಳೆಯ ಸುಧಾಕರನಿಗೆ,

ನಿನ್ನ ಗೆಳೆಯನ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನಿನ್ನ ಕ್ಷೇಮ ಸಮಾಚಾರಕ್ಕೆ ಪತ್ರ ಬರೆ.

ಕಾಗದ ಬರೆದ ವಿಷಯವೇನೆಂದರೆ ಕಳೆದ ತಿಂಗಳು ನಿನಗೆ ಪತ್ರ ಬರೆದಿದ್ದಾಗ ನಿನಗೆ ನಮ್ಮ ಶಾಲಾ ವಾರ್ಷಿಕೋತ್ಸವ ನಡೆಯುವ ಬಗ್ಗೆ ತಿಳಿಸಿದ್ದೆ. ಈಗ ಅದು ನಡೆದ ಬಗ್ಗೆ ನಿನಗೆ ತಿಳಿಸೋಣವೆಂದು ಈ ಪತ್ರ ಬರೆಯುತ್ತಿದ್ದೇನೆ. ದಿನಾಂಕ 20.01.2018ರಂದು ನಮ್ಮ ಶಾಲೆಯ ವಾರ್ಷಿಕೋತ್ಸವ ಬಹಳ ವಿಜೃಂಭಣೆಯಿಂದ ನಡೆಯಿತು. ಮಾನ್ಯ ಶಿಕ್ಷಣ ಸಚಿವರು ಮುಖ್ಯ ಅತಿಥಿಗಳಾಗಿ ನಮ್ಮ ಕಾಲೇಜಿಗೆ ಆಗಮಿಸಿದ್ದರು. ಅವರೊಂದಿಗೆ ಹೆಸರಾಂತ ಕವಿಗಳಾದ ಶ್ರೀ.ಶಿವಲಿಂಗಯ್ಯನವರೂ ಮತ್ತೊಬ್ಬ ಅತಿಥಿಗಳಾಗಿ ಆಗಮಿಸಿದ್ದರು. ಕಾರ್ಯಕ್ರಮ ಆರಂಭವಾದ ಕೂಡಲೇ ಕುಮಾರಿ ಕೌಶಲ್ಯರವರು ತಮ್ಮ ಮಧುರ ಕಂಠದಿಂದ ಸೊಗಸಾಗಿ ಪ್ರಾರ್ಥನೆಯನ್ನು ಹಾಡಿದರು. ನಂತರ ಮುಖ್ಯೋಪಾಧ್ಯಾಯರು ಸ್ವಾಗತ ಭಾಷಣದೊಂದಿಗೆ ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಹಿಂದಿನ ವರ್ಷ 12ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ನಮ್ಮ ಶಾಲೆಯು ಸಾಧಿಸಿರುವ ಪ್ರಗತಿಯ ಬಗ್ಗೆ ಬಹಳ ಕೊಂಡಾಡಿದರು. ವಾರ್ಷಿಕ ಸಾಹಿತ್ಯ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನವನ್ನು ವಿತರಿಸಿದರು. ಆಶುಭಾಷಣ ಸ್ಪರ್ಧೆಯಲ್ಲಿ ನನಗೆ ಮೊದಲ ಬಹುಮಾನ ದೊರಕಿತು. ನಮ್ಮ ಶಾಲೆಯ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಮೂಹಿಕ ಗಾಯನ, ನೃತ್ಯ, ಕಿರುನಾಟಕ ಮುಂತಾದ ವಿವಿಧ ಮನರಂಜನಾ ಕಾರ್ಯಕ್ರಮಗಳು ಅದ್ಭುತವಾಗಿ ಮೂಡಿ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಹಿರಿಯ ಉಪಾಧ್ಯಾಯರು ವಂದನಾರ್ಪಣೆಯನ್ನು ಸಲ್ಲಿಸಿದರು. ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮ ಮುಕ್ತಾಯವಾಯಿತು. ಒಟ್ಟಿನಲ್ಲಿ ನಮ್ಮ ಶಾಲೆಯ ವಾರ್ಷಿಕೋತ್ಸವ ನಾನು ಮರೆಯಲಾಗದ ಸಮಾರಂಭವಾಗಿದ್ದು ಮತ್ತೆ ಮತ್ತೆ ನೆನಪು ಮಾಡಿಕೊಳ್ಳುವಂತಿತ್ತು. ನೀನೂ ನಿಮ್ಮ ಶಾಲೆಯ ವಾರ್ಷಿಕೋತ್ಸವವನ್ನು ಹೇಗೆ ಆಚರಿಸಿದಿರಿ ಎಂಬುದನ್ನು ಪತ್ರದಲ್ಲಿ ಬರೆದು ತಿಳಿಸು.

ಮನೆಯಲ್ಲಿ ಎಲ್ಲರೂ ಕ್ಷೇಮವೇ? ನಿನ್ನ ತಂದೆತಾಯಿಗಳಿಗೆ ನನ್ನ ನಮಸ್ಕಾರಗಳನ್ನು ತಿಳಿಸು.

ವಂದನೆಗಳೊಂದಿಗೆ

ಇಂತಿ ನಿನ್ನ ಗೆಳೆಯ

ಭಾನುಪ್ರಕಾಶ್

ಗೆ,

ಸುಧಾಕರ
ಹನ್ನೊಂದನೇ ತರಗತಿ, ಬಿ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ಹೊಸೂರು.



12th_Kannada_Reader_8.indd 200 22-05-2019 15:39:50

ವ್ಯಾವಹಾರಿಕ ಪತ್ರದ ಮಾದರಿ

ಕುಡಿಯುವ ನೀರಿನ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ಒಂದು ಮನವಿ ಪತ್ರ :

ದಿನಾಂಕ : 25.03.2018
ಗುಮಟಾಪುರಂ

ಇಂದ

ಶ್ರೀ.ಸುರೇಶ್
ನಂ. 210, ಗುಮಟಾಪುರಂ
ತಾಳವಾಡಿ ತಾಲೂಕು
ತಮಿಳುನಾಡು.

ಇವರಿಗೆ

ಅಧ್ಯಕ್ಷರು
ತಾಳವಾಡಿ ಪಂಚಾಯಿತಿ
ತಾಳವಾಡಿ.

ಮಾನ್ಯರೇ,

ವಿಷಯ : ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಮಾಡಿಕೊಡುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ತಾಳವಾಡಿ ಪಂಚಾಯಿತಿಗೆ ಸೇರುವ ಗುಮಟಾಪುರ ಗ್ರಾಮದಲ್ಲಿ ಸುಮಾರು 2000ಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ಇಲ್ಲಿ ದಿನನಿತ್ಯದ ಬಳಕೆಗೆ ಅವಶ್ಯಕವಾದ ನೀರು ಸರಬರಾಜು ಸರಿಯಾಗಿ ಆಗದಿರುವ ಕಾರಣ ನಮ್ಮ ಗ್ರಾಮದ ನಿವಾಸಿಗಳಿಗೆಲ್ಲಾ ಬಹಳ ತೊಂದರೆಯಾಗಿದೆ. ಇದು ಪ್ರತಿನಿತ್ಯದ ಸಮಸ್ಯೆಯಾಗಿದ್ದು, ನೀರಿಗಾಗಿ ಪಡುತ್ತಿರುವ ಬವಣೆ ಹೇಳತೀರದು. ಆದ್ದರಿಂದ ತಾವು ದಯವಿಟ್ಟು ಈ ಮನವಿ ಪತ್ರವನ್ನು ಪರಿಗಣಿಸಿ, ಆದಷ್ಟು ಬೇಗೆ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಮಾಡಿಕೊಡಬೇಕೆಂದು ನಮ್ಮ ಗ್ರಾಮದ ನಿವಾಸಿಗ ಪರವಾಗಿ ತಮ್ಮಲ್ಲಿ ಮತ್ತೊಮ್ಮೆ ವಿಜ್ಞಾಪಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ
ಸುರೇಶ್

ರಜೆ ಕೋರಿ ತರಗತಿಯ ಅಧ್ಯಾಪಕರಿಗೊಂದು ಪತ್ರ

ದಿನಾಂಕ : 17.09.2016
ಹೊಸೂರು

ಇಂದ,

ಎಸ್.ಆರ್.ಮಾನ್ಯ.
11ನೇ ತರಗತಿ, ಸಿ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ಹೊಸೂರು, ತಮಿಳುನಾಡು.

ಗೆ,

ತರಗತಿಯ ಅಧ್ಯಾಪಕರು
11ನೇ ತರಗತಿ, ಸಿ ವಿಭಾಗ
ಸರ್ಕಾರಿ ಹಿರಿಯ ಪ್ರೌಢಶಾಲೆ
ಹೊಸೂರು, ತಮಿಳುನಾಡು.

ಮಾನ್ಯರೇ,

ನಿಮ್ಮ ಶಾಲೆಯಲ್ಲಿ 11ನೇ ತರಗತಿಯ ಸಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಆರ್.ಮಾನ್ಯ ಎಂಬ ನಾನು, ಈ ಪತ್ರದ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, 18.09.2016ರಂದು ನನ್ನ ಅಕ್ಕನ ವಿವಾಹ ನಿಶ್ಚಿತಾರ್ಥ ಕಾರ್ಯಕ್ರಮವಿರುವ ಕಾರಣದಿಂದ ನಾನು ಶಾಲೆಗೆ ಬರಲಾಗುವುದಿಲ್ಲ.

ಆದುದರಿಂದ ತಾವು ದಯವಿಟ್ಟು ನನಗೆ ಒಂದು ದಿನದ ರಜೆಯನ್ನು ನೀಡಬೇಕೆಂದು ತಮ್ಮಲ್ಲಿ ಸವಿನಯಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ಇಂತಿ ತಮ್ಮ ವಿಧೇಯ ವಿದ್ಯಾರ್ಥಿನಿ

ಎಸ್.ಆರ್.ಮಾನ್ಯ

ಪೋಷಕರ ಸಹಿ :



12th_Kannada_Reader_8.indd 201 22-05-2019 15:39:50

ಪ್ರಬಂಧ ರಚನೆ

ಆಧುನಿಕ ಸಾಹಿತ್ಯದ ಒಂದು ಪ್ರಕಾರವಾಗಿರುವ ಪ್ರಬಂಧವು ಭಾಷೆಯ ರಚನೆ ಮತ್ತು ಪ್ರಯೋಗ ಸಾಮರ್ಥ್ಯ ಬೆಳೆಸುವ ಬಹುಮುಖ್ಯ ಸಾಧನವಾಗಿದೆ. ಪ್ರಬಂಧಗಳ ವಾಚನ ಮತ್ತು ಬರಹಗಳ ಮೂಲಕ ಭಾಷೆ, ವಿಷಯಜ್ಞಾನ ಮತ್ತು ಸಾಹಿತ್ಯಾಭಿರುಚಿ ಬೆಳೆಸಲು ಸಾಧ್ಯ. ಪ್ರಬಂಧಗಳ ರಚನೆ ಮತ್ತು ಓದುವಿಕೆಯಿಂದ ಭಾಷಾ ಸಾಮರ್ಥ್ಯ ಮತ್ತು ವಿಷಯ ಜ್ಞಾನ ಏಕಕಾಲದಲ್ಲಿ ಲಭ್ಯವಾಗುತ್ತದೆ.

ಪ್ರಬಂಧದ ಅರ್ಥ ಮತ್ತು ಸ್ವರೂಪ

ಒಂದು ವಿಷಯ ಅಥವಾ ಆಲೋಚನೆಯ ಬಗ್ಗೆ ಸುಸಂಬದ್ಧ, ತರ್ಕಬದ್ಧ ವಾಕ್ಯಗಳು ಮತ್ತು ವಾಕ್ಯವೃಂದಗಳಲ್ಲಿ ಕ್ರಮಬದ್ಧವಾಗಿ ಮತ್ತು ಅರ್ಥಪೂರ್ಣವಾಗಿ ಬರೆದಿರುವ ಪಠ್ಯವನ್ನು ಪ್ರಬಂಧ ಎನ್ನುತ್ತಾರೆ.

ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟಿನ ಪ್ರಕಾರ, 'ಯಾವುದೇ ಒಂದು ವಿಶಿಷ್ಟ ವಸ್ತುವಿನ ಮೇಲಿನ ಸಾಧಾರಣ ಅಳತೆಯ ಬರವಣಿಗೆಯೇ ಪ್ರಬಂಧ'. ಒಂದು ವಸ್ತು ವಿಷಯದ ಬಗೆಗೆ ಸರಳವಾಗಿ ಸುಸಂಬದ್ಧತೆ ಮತ್ತು ಅರ್ಥಬದ್ಧವಾಗಿ ಬರೆದಿರುವ ಪಠ್ಯವೇ ಪ್ರಬಂಧ.

ಪ್ರಬಂಧವು ಗದ್ಯ ಸಾಹಿತ್ಯವಾಗಿದ್ದು, ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ವಿವರಣಾತ್ಮಕವಾಗಿ, ನಿರೂಪಣಾತ್ಮಕವಾಗಿ ಕಲ್ಪನಾತ್ಮಕವಾಗಿ ಅಥವಾ ಚಿಂತನಾತ್ಮಕವಾಗಿ, ಕ್ರಮಬದ್ಧವಾಗಿ, ಸುಸಂಬದ್ಧವಾಗಿ ಬರೆದಿರುವ ಬರವಣಿಗೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತಂತೆ ಮಾಹಿತಿಯನ್ನು ಸಂಗ್ರಹಿಸಿ ಅಥವಾ ತನ್ನ ಅನುಭವದಿಂದ ಕಲ್ಪನೆಯಿಂದ ವಿಷಯವನ್ನು ರೂಪಿಸಿ ಸಂಘಟಿಸಿ ಸುಸಂಬದ್ಧವಾಗಿ, ಶುದ್ಧ ಭಾಷೆಯಲ್ಲಿ ಬರೆಯಲಾಗಿರುತ್ತದೆ. ಪ್ರಬಂಧದಲ್ಲಿ ಒಂದು ನಿರ್ದಿಷ್ಟ ವಿಷಯ, ಆ ವಿಷಯದ ಕ್ರಮಬದ್ಧ ಜೋಡಣೆ ಇರುತ್ತದೆ. ವಿಷಯವೊಂದರ ಬಗ್ಗೆ ಅರ್ಥ ಮತ್ತು ಸುಸಂಬದ್ಧ ವಾಕ್ಯಗಳು. ವಾಕ್ಯ ವೃಂದಗಳನ್ನು ಒಂದು ಚೌಕಟ್ಟಿನಲ್ಲಿ ಬರೆಯಲಾಗುತ್ತದೆ. ಓದುಗರಿಗೆ ವಿಷಯದ ಸಮಗ್ರ ಚಿತ್ರಣವನ್ನು ಆಕರ್ಷಕವಾಗಿ ಸುಲಭವಾಗಿ ನೇರವಾಗಿ ಸಂವಹಿಸಲು ಅನುಕೂಲವಾಗುವಂತೆ ಪ್ರಬಂಧ ರಚಿಸಲಾಗುತ್ತದೆ.

ಪ್ರಬಂಧ ರಚನೆ ಮತ್ತು ಅಧ್ಯಯನದ ಪ್ರಾಮುಖ್ಯತೆ

ಭಾಷಾ ಕೌಶಲಗಳ ರಚನೆ ಮತ್ತು ಪ್ರಯೋಗ ಸಾಮರ್ಥ್ಯ ಬೆಳೆಸಿಕೊಳ್ಳಲು ಪ್ರಬಂಧ ರಚನೆಯು ಸರಳ ಮತ್ತು ಉಪಯುಕ್ತ ಸಾಧನ. ಭಾಷೆ, ವಿಷಯ ಸಾಹಿತ್ಯ ಹಾಗೂ ಒಟ್ಟಾರೆ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುವ ಪ್ರಬಂಧ ಸಾಹಿತ್ಯವು ಒಂದು ಉತ್ತಮ ಸಾಧನ.

1. ಸುಸಂಬದ್ಧ ವಾಕ್ಯಗಳು, ವಾಕ್ಯ ವೃಂದಗಳ ರಚನೆಯ ಸಾಮರ್ಥ್ಯ ಗಳಿಸಿಕೊಳ್ಳಲು
2. ಸ್ವಯಂ ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಗಳಿಸಿಕೊಳ್ಳಲು
3. ಓದುಗಾರಿಕೆಯ ಹವ್ಯಾಸ ಮತ್ತು ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳಲು
4. ಒಂದು ವಿಷಯದ ಬಗ್ಗೆ ಸ್ವತಂತ್ರವಾಗಿ ಯೋಚನೆ ಮಾಡಲು
5. ವಿಷಯವನ್ನು ಒಂದು ಚೌಕಟ್ಟಿನಲ್ಲಿ ಅಡಕ ಮಾಡಿ ಬರೆಯುವ ಸಾಮರ್ಥ್ಯ ಗಳಿಸಲು.
6. ತರ್ಕಬದ್ಧ ಬರವಣಿಗೆಯ ಕೌಶಲಗಳಲ್ಲಿ ಸಾಮರ್ಥ್ಯ ಗಳಿಸಲು.
7. ಸೃಜನ ಶೀಲ ಚಿಂತನೆ ಹಾಗೂ ಅಭಿವ್ಯಕ್ತಿ ಕೌಶಲ ಬೆಳೆಸಿಕೊಳ್ಳಲು
8. ವಿಷಯ ಗ್ರಹಿಕೆ ಮತ್ತು ಜ್ಞಾನಾರ್ಜನೆ ಬೆಳೆಸಿಕೊಳ್ಳಲು
9. ಮಾನವೀಯ ಮೌಲ್ಯಗಳೊಂದಿಗೆ ವ್ಯಕ್ತಿತ್ವ ವಿಕಾಸಕ್ಕೆ
10. ವಿಷಯ ಸಂಗ್ರಹ ಮತ್ತು ವಿವರಣಾತ್ಮಕ ಕೌಶಲ ಬೆಳೆಸಿಕೊಳ್ಳಲು

– ಪ್ರಬಂಧ ರಚನೆ ಸಹಕಾರಿಯಾಗಿರುತ್ತದೆ.

ಪ್ರಬಂಧದ ಪ್ರಕಾರಗಳು

1. ನಿರೂಪಣಾತ್ಮಕ ಪ್ರಬಂಧ
2. ವಿವರಣಾತ್ಮಕ ಪ್ರಬಂಧ
3. ಚಿಂತನ ಪ್ರಬಂಧ

ಅ. ಪ್ರತಿಪಾದನಾತ್ಮಕ
ಆ. ವಾದಾತ್ಮಕ ಮತ್ತು
ಇ. ಕಲ್ಪನಾತ್ಮಕ ಪ್ರಬಂಧ ಇತ್ಯಾದಿ.

ಪ್ರಬಂಧಗಳು ಬಹಳ ಸ್ವಾರಸ್ಯವಾಗಿರಬೇಕು. ಇಲ್ಲದಿದ್ದರೆ ಅವು ಓದುಗರಿಗೆ ಬೇಸರ ತರುತ್ತವೆ. ಪ್ರಬಂಧದ ವಸ್ತು ಯಾವುದೇ ಆಗಬಹುದು. ವಿಷಯ

12th_Kannada_Reader_8.indd 202 22-05-2019 15:39:50

ನಿರೂಪಣೆ, ಭಾಷೆಯ ನಿಯಂತ್ರಣ ಇಷ್ಟಿದ್ದರೆ ಸಾಕು. ಒಳ್ಳೆಯ ಪ್ರಬಂಧ ಸೃಷ್ಟಿಯಾಗುತ್ತದೆ.

ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ, ಕ್ರೀಡೆ, ಪ್ರಚಲಿತ ವಿದ್ಯಮಾನಗಳು ಹೀಗೆ ಯಾವುದೇ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯುವಂತೆ ಕೇಳಬಹುದು. ಉದಾಹರಣೆಗೆ, ಕೆಳಗಿನ ವಿಷಯಗಳನ್ನು ಗಮನಿಸಿ:

೧.ನನ್ನ ಮೆಚ್ಚಿನ ಕವಿ, ೨.ವೃತ್ತಪತ್ರಿಕೆಗಳು, ೩.ಪರಿಸರ ಮಾಲಿನ್ಯ, ೪.ಸಿನಿಮಾ, ೫.ವಾಯುಮಾಲಿನ್ಯ, ೬.ಮೈಸೂರು ದಸರಾ, ೭.ನದಿಗಳ ರಾಷ್ಟ್ರೀಕರಣ ಇತ್ಯಾದಿ.

ಹೀಗೆ ಜಗತ್ತಿನ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಯಾವುದೇ ವಿಷಯವನ್ನಾದರೂ ನೀಡಿ ಅದರ ಬಗ್ಗೆ ಪ್ರಬಂಧ ಬರೆಯಲು ಕೇಳಬಹುದು. ಯಾವ ವಿಷಯದ ಬಗ್ಗೆ ಕೇಳಿದರೂ ಪ್ರಬಂಧ ಬರೆಯಬೇಕಾದರೆ ಆ ವಿಷಯದ ಬಗ್ಗೆ ತಿಳುವಳಿಕೆ ಇರಬೇಕು. ಅದಕ್ಕಾಗಿ ಪ್ರತಿನಿತ್ಯ ದಿನಪತ್ರಿಕೆಗಳನ್ನು ಓದಿ ಅಂದಂದಿನ ವಿದ್ಯಮಾನಗಳನ್ನು ಅರಿತುಕೊಳ್ಳಬೇಕು. ಲೋಕಜ್ಞಾನವನ್ನು ವಿಸ್ತರಿಸುವಂತಹ ಹಲವಾರು ಪುಸ್ತಕಗಳನ್ನು ಆಗಾಗ ಓದುತ್ತಿರಬೇಕು.

ಸಾಮಾನ್ಯವಾಗಿ ಪ್ರಬಂಧ ಬರೆಯುವಾಗ ಮುಖ್ಯವಾಗಿ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದು: ಅದನ್ನು ಪ್ರಾರಂಭಿಸುವ ವಿಧಾನ ಅಥವಾ ಪೀಠಿಕೆ; ಎರಡು: ವಿಷಯದ ವಿವರಣೆ; ಮೂರು: ಮುಕ್ತಾಯ.

ಯಾವುದೇ ಪ್ರಬಂಧವನ್ನಾದರೂ ಪ್ರಾರಂಭಿಸುವುದಕ್ಕೆ ಮುನ್ನ ಆ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ವ ಪೀಠಿಕೆಯನ್ನು ಬರೆಯಬೇಕು. ಇದು ತುಂಬ ಮುಖ್ಯವಾದ ಅಂಶ. ವಿಷಯ ವಿವರಣೆಯಲ್ಲಿ ಆಯಾ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ನಿರೂಪಿಸಬೇಕು. ಅಗತ್ಯವಿದ್ದಲ್ಲಿ ಕೊಟ್ಟಿರುವ ವಿಷಯದ ಸಾಧಕ–ಬಾಧಕಗಳನ್ನು ಚರ್ಚಿಸಬೇಕು. ವಿಷಯವನ್ನು ವೈಚಾರಿಕವಾಗಿ ವಿಶ್ಲೇಷಿಸಬೇಕಾದ್ದು ಅಗತ್ಯ. ಪ್ರಬಂಧದ ಕಡೆಯಲ್ಲಿ ಮೇಲೆ ಹೇಳಿದ ವಿಷಯಗಳೆಲ್ಲವನ್ನೂ ಕ್ರೋಡೀಕರಿಸಿ ಮುಕ್ತಾಯದ ಮಾತುಗಳನ್ನು ಹೇಳಬೇಕು. ಇಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಬೇಕು.

ಪ್ರಬಂಧವು ಸರಳವಾದ ಗ್ರಾಂಥಿಕ ಭಾಷೆಯಲ್ಲಿರಬೇಕು. ಪದಗಳ ರಚನೆ ಹಾಗೂ ಭಾಷಾಪ್ರಯೋಗದ ಕಡೆ ಗಮನವಿರಬೇಕು. ಅಂದವಾಗಿ ತಪ್ಪಿಲ್ಲದಂತೆ ಬರೆಯಬೇಕಾದ್ದು ಮುಖ್ಯ.

ತಿಳಿದಿರಲಿ

೧. **ಅಭಿನವ ಕಾಳಿದಾಸ**	ಬಸವಪ್ಪಶಾಸ್ತ್ರೀ
೨. **ಅಭಿನವ ಪಂಪ**	ನಾಗಚಂದ್ರ
೩. **ಉಪಮಾಲೋಲ**	ಲಕ್ಷ್ಮೀಶ
೪. **ಕನ್ನಡದ ಕಣ್ವ**	ಬಿ.ಎಂ.ಶ್ರೀ.
೫. **ಕನ್ನಡದ ಕಾಳಿದಾಸ**	ಎಸ್.ವಿ.ಪರಮೇಶ್ವರ ಭಟ್ಟ
೬. **ಕನ್ನಡ ಕುಲಪುರೋಹಿತ**	ಆಲೂರು ವೆಂಕಟರಾಯರು
೭. **ಕಡಲ ತೀರದ ಭಾರ್ಗವ**	ಶಿವರಾಮ ಕಾರಂತ
೮. **ಕನ್ನಡ ರಮಾರಮಣ**	ಕೃಷ್ಣದೇವರಾಯ
೯. **ಚುಟುಕು ಬ್ರಹ್ಮ**	ದಿನಕರ ದೇಸಾಯಿ

12th_Kannada_Reader_8.indd 203 22-05-2019 15:39:50

೧೦. ದಾನ ಚಿಂತಾಮಣಿ	ಅತ್ತಿಮಬ್ಬೆ
೧೧. ರಾಷ್ಟ್ರಕವಿಗಳು	ಗೋವಿಂದಪೈ,ಕುವೆಂಪು,ಜಿ.ಎಸ್.ಶಿವರುದ್ರಪ್ಪ
೧೨. ನವ್ಯಕವಿ	ಗೋಪಾಲಕೃಷ್ಣ ಅಡಿಗ
೧೩. ನಾಟ್ಯರಾಣಿ	ಶಾಂತಲಾ
೧೪. ರಗಳೆಯ ಕವಿ	ಹರಿಹರ
೧೫. ರೂಪಕ ಚಕ್ರವರ್ತಿ	ಕುಮಾರವ್ಯಾಸ
೧೬. ವಚನಶಾಸ್ತ್ರ ಪಿತಾಮಹ	ಫ.ಗು.ಹಳಕಟ್ಟಿ
೧೭. ಷಟ್ಪದಿ ಬ್ರಹ್ಮ	ರಾಘವಾಂಕ
೧೮. ವರಕವಿ	ದ.ರಾ.ಬೇಂದ್ರೆ
೧೯. ಸಣ್ಣಕಥೆಗಳ ಜನಕ, ಕನ್ನಡದ ಆಸ್ತಿ	ಮಾಸ್ತಿ ವೆಂಕಟೇಶ ಅಯ್ಯಂಗಾರ್
೨೦. ಮೊದಲ ಜ್ಞಾನಪೀಠ ಪ್ರಶಸ್ತಿ ವಿಜೇತ	ಕುವೆಂಪು
೨೧. ಕನ್ನಡದ ಮೊದಲ ಶಾಸನ	ಹಲ್ಮಿಡಿ ಶಾಸನ
೨೨. ಕನ್ನಡದ ಮೊದಲ ಉಪಲಬ್ಧ ಗ್ರಂಥ	ಕವಿರಾಜ ಮಾರ್ಗ
೨೩. ಕನ್ನಡದ ಮೊದಲ ಗದ್ಯ ಗ್ರಂಥ	ವಡ್ಡಾರಾಧನೆ
೨೪. ಕನ್ನಡದ ಮೊದಲ ಕಾವ್ಯ	ಆದಿಪುರಾಣ
೨೫. ಕನ್ನಡದ ಮೊದಲ ವ್ಯಾಕರಣ ಗ್ರಂಥ	ಶಬ್ದಮಣಿದರ್ಪಣ
೨೬. ಕನ್ನಡದ ಮೊದಲ ನಾಟಕ	ಮಿತ್ರವಿಂದಾ ಗೋವಿಂದ
೨೭. ಹೊಸಗನ್ನಡದ ಮೊದಲ ವ್ಯಾಕರಣ	ಮಧ್ಯಮ ವ್ಯಾಕರಣ
೨೮. ಕನ್ನಡದ ಮೊದಲ ಕಾದಂಬರಿ	ಇಂದಿರಾಬಾಯಿ
೨೯. ಕನ್ನಡದ ಆದಿ ಕವಿ	ಪಂಪ
೩೦. ಕನ್ನಡದ ಮೊದಲ ಕವಯಿತ್ರಿ	ಅಕ್ಕಮಹಾದೇವಿ
೩೧. ಕನ್ನಡದ ಮೊದಲ ಮಹಮ್ಮದೀಯ ಕವಿ	ಸಂತ ಶಿಶುನಾಳ ಶರೀಫ
೩೨. ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ ಅಧ್ಯಕ್ಷೆ	ಜಯದೇವಿತಾಯಿ ಲಿಗಾಡೆ
೩೩. ಕನ್ನಡದಲ್ಲಿ ಮೊದಲು ಬೆರಳಚ್ಚು ಯಂತ್ರ	ಅನಂತಸುಬ್ಬರಾವ್ ತಯಾರಿಸಿದ ಕನ್ನಡಿಗ
೩೪. ಪದ್ಮಶ್ರೀ ಪ್ರಶಸ್ತಿ ಪಡೆದ ಮೊದಲ ಕನ್ನಡಿಗ	ಜಿ.ಬಿ.ಜೋಷಿ.

* * * *

12th_Kannada_Reader_8.indd 204 22-05-2019 15:39:50

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಕನ್ನಡ ಕವಿ/ಸಾಹಿತಿಗಳ ಕಾವ್ಯನಾಮಗಳು

ಕವಿ/ಸಾಹಿತಿಯ ಹೆಸರು - ಕಾವ್ಯನಾಮ

1. ಅಜ್ಜಂಪುರ ಸೀತಾರಾಂ - ಆನಂದ
2. ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ - ಅ.ನ.ಕೃ
3. ಅರಗದ ಲಕ್ಷ್ಮಣರಾವ್ - ಹೊಯ್ಸಳ
4. ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ - ಅ.ರಾ.ಮಿತ್ರ
5. ಆದ್ಯರಂಗಾಚಾರ್ಯ - ಶ್ರೀರಂಗ
6. ಕಿಕ್ಕೇರಿ ಸುಬ್ಬರಾವ್ ನರಸಿಂಹಸ್ವಾಮಿ - ಕೆ.ಎಸ್.ಎನ್
7. ಕೆ.ವಿ.ಪುಟ್ಟಪ್ಪ - ಕುವೆಂಪು
8. ಕುಂಬಾರ ವೀರಭದ್ರಪ್ಪ - ಕುಂವೀ
9. ಕಯ್ಯಾರ ಕಿಞ್ಞಣ್ಣರೈ - ದುರ್ಗಾದಾಸ
10. ಕಸ್ತೂರಿ ರಘುನಾಥಚಾರ ರಂಗಾಚಾರ - ರಘುಸುತ
11. ಕುಳಕುಂದ ಶಿವರಾಯ - ನಿರಂಜನ
12. ಕೆ.ಪಿ.ಪೂರ್ಣಚಂದ್ರ ತೇಜಸ್ವಿ - ಪೂಚಂತೇ

12th_Kannada_Reader_8.indd 205 22-05-2019 15:39:50

Kannada Reader – Class XII

Text Book Development Team

Academic Advisor

Dr. P. Kumar
Joint Director (Syllabus),
State Council of Education Research and Training Tamilnadu,
Chennai 600 006,

Reviewer

DR. TAMIL SELVI
Professor and Head,
Department of Kannada
University of Madras, Marina,
Chennai – 600 005.

Co-ordinator

K.CHANDRASEKARAN
Lecturer, DIET, Chennai

Art and Design Team

Layout
Rajesh Thangappan
Gopinath Ragupathi
Madhan
Adison

QC
P. Arun Kamaraj
Jerald Wilson

Cover Design
Kathir Arumugam

Coordination
Ramesh Munisamy

Authors

Mr. K. KUMAR ACHAR
P.G. Asst. in Kannada
Karnataka Sangha Hr. Sec. School
T.Nagar, Chennai - 600 017.

Mr. C. SADASHIVAMURTHY
P.G. Asst. in Kannada
Govt. Hr. Sec. School
Thalavadi, Erode Dt. 638461.

Mr. N. BASAVARAJU
B.T. Asst. in Kannada
Govt. Hr. Sec. School
Thalavadi, Erode Dt. 638461

Mr. JOHNSON SUKUMAR
B.T. Asst. in Kannada
Govt. Hr. Sec. School
Panakahalli Thalavadi, Erode Dt. 638461

Mr. T.R. KANNAN
B.T. Asst. in Kannada
Govt. Hr. Sec. School
Madhagondapalli, Krishnagiri Dt. 635114

Mr. K. ANTHONY MUTHU
B.T. Asst. in Kannada
Govt. Hr. Sec. School
Thalavadi, Erode Dt. 638461

This book has been printed on 80 G.S.M.
Elegant Maplitho paper.

Printed by offset at:

12th_Kannada_Reader_8.indd 206 22-05-2019 15:39:50